ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ದೇಶದ ಮೊದಲ ಸ್ವದೇಶಿ ಹೈಡ್ರೋಜನ್ ರೈಲು ಸಂಚಾರಕ್ಕೆ ಅನುಮತಿ

೦೨

ರಾಜ್ಯದಲ್ಲಿ ಇಂದು ಪಲ್ಸ್ ಪೋಲಿಯೊ ಹನಿ ನೀಡಿಕೆ



೦೪

ಮಂಗಳೂರು

ಭಾನುವಾರ, 28 ಜೂನ್ 2026

ಸಂಪುಟ 48, ಸಂಚಿಕೆ 101 ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ : ಚತುರ್ದಶಿ, ನಕ್ಷತ್ರ: ಜ್ಯೇಷ್ಠೆ

ದಿನದ ಮಾತು

ಅನೇಕರು ತಮ್ಮ ಜೀವನದಲ್ಲಿ ಮುಂದೆ ಸಾಗದಿರುವುದಕ್ಕೆ ಕಾರಣ ಅವರು ಮಾತನಾಡುತ್ತಲೇ ಕಾಲವನ್ನು ವ್ಯಯ ಮಾಡಿದ್ದು.

▲ ರಾಮಕೃಷ್ಣ ಪರಮಹಂಸ

ಸೀನುವಿನ ಗಾನಾರ್ಥಮಂಜರಿ (ಗಾನಾರ್ಥಮಂ ಜರಿ!)

ವಕ್ರದೃಷ್ಟಿ

• ಎನ್. ರಾಮನಾಥ್

• ಪುಟ ೬

ಕಿರುಸುದ್ದಿ

ಕೊಪ್ಪಳದಲ್ಲಿ ರಸ್ತೆ ಅಪಘಾತ ಐವರು ಬಲಿ, ಇಬ್ಬರು ಗಂಭೀರ

• ಕೊಪ್ಪಳ: ಜಿಲ್ಲೆಯ ಕುಕನೂರು ತಾಲೂಕಿನ ಭಾನಾಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಶನಿವಾರ ಬೆಳಗಿನ ಜಾವ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಐವರು ಮೃತಪಟ್ಟಿದ್ದು, ಇಬ್ಬರ ಸ್ಥಿತಿ ಗಂಭೀರವಾಗಿದೆ. ಆರು ಮಂದಿ ಗಾಯಗೊಂಡಿದ್ದಾರೆ.

• ಪುಟ ೫

ಪಾರದರ್ಶಕ ತನಿಖೆ ಖಚಿತಪಡಿಸಲು ಬದ್ಧ

• ಅಯೋಧ್ಯೆ: ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಶನಿವಾರ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಟ್ರಸ್ಟ್ ಸದಸ್ಯ ಅನಿಲ್ ಮಿಶ್ರಾ ಅವರ ರಾಜೀನಾಮೆ ಸಲ್ಲಿಸಿರುವುದನ್ನು ದೃಢೀಕರಿಸಿದ್ದು, ಶ್ರೀರಾಮ ಮಂದಿರ ದೇಣಿಗೆ ದುರುಪಯೋಗ ಆರೋಪಗಳ ಬಗ್ಗೆ ಪಾರದರ್ಶಕ ತನಿಖೆಯನ್ನು ಖಚಿತಪಡಿಸಲು ನಾವು ಬದ್ಧರಾಗಿದ್ದೇವೆ ಎಂದು ಭರವಸೆ ನೀಡಿದೆ.

• ಪುಟ ೨

ಅಯೋಧ್ಯೆ : ಬೆಳ್ಳಿಗಟ್ಟಿ ಕಳವಾಗಿಲ್ಲ , ಸುರಕ್ಷಿತವಾಗಿವೆ:ಎಸ್ಐಟಿ

• ಅಯೋಧ್ಯೆ : ಅಯೋಧ್ಯಾ ಶ್ರೀರಾಮ ಮಂದಿರಕ್ಕೆ ನೀಡಲಾಗಿದ್ದ ದೇಣಿಗೆಗಳು ಮತ್ತು 200ಕಿಲೋ ಬೆಳ್ಳಿ ಗಟ್ಟಿಗಳು ಮತ್ತು ಇತರ ಅಮೂಲ್ಯ ವಸ್ತುಗಳು ಕಳವಾಗಿವೆ ಎಂಬುದಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಬರುತ್ತಿರುವ ಮಾಹಿತಿಗಳು ಆಧಾರರಹಿತವಾದುದು ಮತ್ತು ತಪ್ಪುದಾರಿಗೆಳೆಯುವಂಥದ್ದಾಗಿದೆ ಎಂದು ವಿಶೇಷ ತನಿಖಾ ತಂಡ ಸ್ಪಷ್ಟಪಡಿಸಿದ್ದು, ಅವೆಲ್ಲ ಸುರಕ್ಷಿತವಾಗಿವೆ ಎಂದು ಸ್ಪಷ್ಟಪಡಿಸಿದೆ.

ನೂರಾರು ಕೋ.ರೂ.ಗಳ ದೇಣಿಗೆ ಲೂಟಿಯಾಗಿದೆ, ಅಮೂಲ್ಯ ವಸ್ತುಗಳನ್ನೂ ಲೂಟಿಗೈಯ್ಯಲಾಗಿದೆ ,ಸಿಂಧಿ ಸಮುದಾಯದಿಂದ ನೀಡಲಾಗಿದ್ದ ಬೆಳ್ಳಿಗಟ್ಟಿಗಳು ಕಳವಾಗಿವೆ ಎಂದೆಲ್ಲ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚಾರ ನಡೆಯುತ್ತಿರುವುದನ್ನಿಲ್ಲಿ ಸ್ಮರಿಸಬಹುದು.

➡ ಪುಟ ೫



ಭಾರತ ವಿಶ್ವ ಸಂಜೀವಿನಿ

• ಪುಟ ೨

ಸುದ್ದಿ ಸಮಗ್ರ

ಸ್ಮರಣಾ ಫಲಕದಲ್ಲಿ ಜಾಗ ಕೊಡುವವರ ಹೆಸರು: ಸಿಎಂ

ಭೂದಾನಿಗಳ ಸ್ಮರಣೆ

• ಬೆಂಗಳೂರು: ಕೈಗಾರಿಕಾ ಪ್ರದೇಶ, ಶಾಲೆಗಳು, ಕೆರೆ, ರಸ್ತೆ ನಿರ್ಮಾಣ ಸೇರಿದಂತೆ ಜನಪರ ಯೋಜನೆಗಳಿಗೆ ಯಾವುದೇ ತಕರಾರು ಮಾಡದೆ ಜಾಗ ನೀಡುವ ಭೂ ಮಾಲೀಕರ ಹೆಸರನ್ನು ವಾಲ್ ಆಫ್ ಗ್ರಾಟಿಟ್ಯೂಡ್ (ಕೃತಜ್ಞತಾ ಫಲಕ)ನಲ್ಲಿ ಸೇರಿಸಲು ಸರ್ಕಾರ ತೀರ್ಮಾನಿಸಿದೆ. ಆ ಮೂಲಕ ಭೂ ಮಾಲೀಕರ ತ್ಯಾಗ ಸ್ಮರಿಸಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಘೋಷಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೂತನವಾಗಿ ನಿರ್ಮಿಸುತ್ತಿರುವ ಕೆಂಪೇಗೌಡ ಬಡಾವಣೆಯಲ್ಲಿ ಶನಿವಾರ ನಡೆದ 517ನೇ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವು ದಿ.ಎಸ್.ಎಂ. ಕೃಷ್ಣ ಅವರ ಹೆಸರಿನಲ್ಲಿ 10 ಪಥಗಳ ರಸ್ತೆಗೆ ಚಾಲನೆ ನೀಡಿದ್ದೇವೆ. ಈ ರಸ್ತೆ 11 ಕಿ.ಮೀ.ಗೆ ನಿಲ್ಲುವುದಿಲ್ಲ. ಮುಂದೆ ಇದು 123 ಕಿ.ಮೀ. ರಸ್ತೆಯಾಗಿ ವಿಸ್ತರಣೆಯಾಗಲಿದೆ. ಈ ರಸ್ತೆಯಲ್ಲಿ ವಾಲ್ ಆಫ್ ಗ್ರಾಟಿಟ್ಯೂಡ್ (ಉಪಕಾರ ಸ್ಮರಣೆ) ನಿರ್ಮಿಸಲು ಮುಂದಾಗಿದ್ದೇವೆ. ಆ ಮೂಲಕ ಈ ರಸ್ತೆಗಾಗಿ ಜಮೀನು ನೀಡಿದವರ ಹೆಸರನ್ನು ಶಾಶ್ವತವಾಗಿ ಉಳಿಸುವ ಕೆಲಸವನ್ನು ನಮ್ಮ ಸರ್ಕಾರ ಮುಂದಿನ ದಿನಗಳಲ್ಲಿ ಮಾಡಲಿದೆ. ಇದನ್ನು ಎಲ್ಲಾ ಕಡೆಗಳಲ್ಲೂ ಮಾಡಲಾಗುವುದು ಎಂದು ತಿಳಿಸಿದರು. ಎಲ್ಲಿ ಶ್ರಮ ಇದೆಯೋ ಅಲ್ಲಿ ಫಲವಿದೆ. ಯಾವುದೇ ಜಮೀನು ಉಳುಮೆ ಮಾಡದೆ ಮಟ್ಟ ಮಾಡಲು ಸಾಧ್ಯವಿಲ್ಲ.

➡ ಪುಟ ೪



ಹೆಬ್ಬಾಳದ ಬಳಿ ಕಡಿಮೆ ಅಂತರದ ಟನಲ್ ರಸ್ತೆ ನಿರ್ಮಾಣ ಕೆಲಸವನ್ನು ಕೆಲವೇ ದಿನಗಳಲ್ಲಿ ಆರಂಭ ಮಾಡಲಾಗುವುದು. ಸಂಚಾರ ದಟ್ಟಣೆ ನಿವಾರಣೆಗೆ ಅನೇಕ ಯೋಜನೆ ರೂಪಿಸಲಾಗಿದೆ. ನೀವು ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಂಡು ಹೋಗುತ್ತೇನೆ.

■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

3 ಕೆ ನೆನಪಿಟ್ಟುಕೊಳ್ಳಬೇಕು

ಬೆಂಗಳೂರಿಗರು ಮೂರು ಕೆ ಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಬೆಂಗಳೂರು ಕಟ್ಟಿದ ಕೆಂಪೇಗೌಡರು, ವಿಧಾನಸೌಧ ಕಟ್ಟಿದ ಕೆಂಗಲ್ ಹನುಮಂತಯ್ಯ, ಹಾಗೂ ಬೆಂಗಳೂರನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಎಸ್.ಎಂ. ಕೃಷ್ಣ ಅವರು. ಶ್ರೀ ನಿರ್ಮಲಾನಂದ ಸ್ವಾಮೀಜಿ ಹಾಗೂ ಶ್ರೀ ನಂಜಾವಧೂತ ಸ್ವಾಮೀಜಿಗಳು ಸೇರಿ ಜೂ. 27ರಂದು ಕೆಂಪೇಗೌಡ ಜಯಂತಿ ಆಚರಣೆ ಮಾಡಬೇಕು ಎಂದು ತೀರ್ಮಾನ ಮಾಡಿದ ಬಳಿಕ ನಾವು ಕೆಂಪೇಗೌಡ ಜಯಂತಿ ಆಚರಿಸಿಕೊಂಡು ಬರುತ್ತಿದ್ದೇವೆ. ಆ ಸಮಯದಲ್ಲಿ ನನಗೆ ಬೆಂಬಲವಾಗಿ ನಿಂತ ರೇವಣ್ಣ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

123 ಕಿ.ಮೀ. ಬೆಂಗಳೂರು ಬಿಸಿನೆಸ್ ಕಾರಿಡಾರ್

123 ಕಿ.ಮೀ ಉದ್ದದ ಬೆಂಗಳೂರು ಬಿಸಿನೆಸ್ ಕಾರಿಡಾರ್ ರಸ್ತೆ ನಿರ್ಮಾಣ ಪ್ರಕ್ರಿಯೆ ಚಾಲನೆಯಲ್ಲಿದ್ದು, ಟೆಂಡರ್ ಕರೆಯಲಾಗಿದೆ. ಎಲೆಕ್ಟ್ರಾನಿಕ್ ಸಿಟಿಯಿಂದ ಮೈಸೂರು ರಸ್ತೆ ಸೇರುವ ಹಂತಕ್ಕೂ ಅಂತಿಮ ಅಧಿಸೂಚನೆ ಸದ್ಯದಲ್ಲೇ ಹೊರಡಿಸುತ್ತೇವೆ. ಈ ರಸ್ತೆ ಇಲ್ಲವಾದರೆ ಬೆಂಗಳೂರು ಉಳಿಯಲು ಸಾಧ್ಯವಿಲ್ಲ. ಹೀಗಾಗಿ ನಾನು ದಿಟ್ಟ ತೀರ್ಮಾನ ಮಾಡಲಿದ್ದೇನೆ. ಭೂಮಿ ಕಳೆದುಕೊಳ್ಳುವ ಜಮೀನು ಮಾಲೀಕರಿಗೆ 35% ವಾಣಿಜ್ಯ ಭೂಮಿ, 40% ವಸತಿ ಪ್ರದೇಶ ಭೂಮಿ, ಟಿಡಿಆರ್ ನೀಡಲು ಸರ್ಕಾರ ಮುಂದಾಗಿದೆ. ಭೂ ಮಾಲೀಕರು ತಮಗೆ ಯಾವ ಆಯ್ಕೆ ಬೇಕೋ ಅದನ್ನು ತೆಗೆದುಕೊಳ್ಳಬಹುದು ಎಂದು ವಿವರಿಸಿದರು.

ಜಿಕೆವಿಕೆ, ಎಂಜಿನಿಯರ್ ಎಸ್.ವಿಶ್ವನಾಥ್, ರಾಹುಲ್ ದ್ರಾವಿಡ್‌ಗೆ ಕೆಂಪೇಗೌಡ ಪ್ರಶಸ್ತಿ

ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಆಧುನಿಕ ಕೃಷಿ ಹಾಗೂ ನವೀನ ತಂತ್ರಜ್ಞಾನವನ್ನು ರೈತರಿಗೆ ಪರಿಚಯಿಸುವ ಮೂಲಕ ಹೆಸರು ಮಾಡಿರುವ ಜಿಕೆವಿಕೆ, ನಗರ ಯೋಜನಾ ತಜ್ಞರಾಗಿ ಪ್ರಸಿದ್ಧಿ ಹೊಂದಿರುವ ಎಂಜಿನಿಯರ್ ಎಸ್. ವಿಶ್ವನಾಥ್ ಹಾಗೂ ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ರಾಹುಲ್ ದ್ರಾವಿಡ್ ಅವರು ವಿದೇಶದಲ್ಲಿದ್ದ ಕಾರಣಕ್ಕೆ ಅವರು ಪ್ರಶಸ್ತಿ ಸ್ವೀಕರಿಸಲು ಸಾಧ್ಯವಾಗಲಿಲ್ಲ. ಜಿಕೆವಿಕೆ ಸಂಸ್ಥೆಯ ಪರವಾಗಿ ಉಪಕುಲಪತಿಗಳಾದ ಎಸ್.ವಿ.ಸುರೇಶ್ ಅವರು ಪಡೆದುಕೊಂಡರು.

ರೈತರ ಹಿತ ಪರಿಗಣಿಸಿ ಸಮಸ್ಯೆ ಬಗೆಹರಿಸಿ: ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್

ಕಾವೇರಿ ವಿವಾದ ಇತ್ಯರ್ಥಕ್ಕೆ ಸಲಹೆ



• ಬೆಂಗಳೂರು: ಕಾವೇರಿ ಜಲವಿವಾದದಲ್ಲಿ ರೈತರ ಹಿತ ಪರಿಗಣಿಸಿ ಸಮಸ್ಯೆ ಬಗೆಹರಿಸುವುದು ಏಕೈಕ ಪರಿಹಾರ, ರೈತರ ವಿಚಾರದಲ್ಲಿ ಕಾಳಜಿ ತೋರುವುದು ಮುಖ್ಯ ಎಂದು ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅಭಿಪ್ರಾಯಪಟ್ಟರು.

ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನವು ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಜನ್ಮದಿನೋತ್ಸವದಲ್ಲಿ ಭಾಗವಹಿಸಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಗಣ್ಯರಿಗೆ ಪ್ರಶಸ್ತಿ ಪ್ರದಾನಿಸಿದರು.

ತಮಿಳುನಾಡು ಮತ್ತು ಕರ್ನಾಟಕದ ಮಧ್ಯೆ ಕಾವೇರಿ ಜಲವಿವಾದಕ್ಕೆ ನಾವು ಒಂದು ಪರಿಹಾರ ಕಂಡುಕೊಳ್ಳಬೇಕು. ಈ ಸಮಸ್ಯೆ ಬಹಳ ವರ್ಷ ಮುಂದುವರಿಯಲು ಬಿಡಬಾರದು. ರೈತರು ಯಾರೇ ಆದರೂ ರೈತರೇ. ಇಲ್ಲಿ ಭಾಷೆ, ಪ್ರಾಂತದ ವಿಚಾರ ಬರುವುದಿಲ್ಲ. ರೈತರು ನಮಗೆ ಅನ್ನದಾತರು. ಎರಡೂ ರಾಜ್ಯಗಳ ರೈತರ ಹಿತ ನೋಡಿಕೊಳ್ಳಬೇಕು. ರಾಜಕೀಯವಾಗಿ ನೋಡುವ ಬದಲು ರೈತರ ಹಿತಾಸಕ್ತಿ ಗಮನಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಸಲಹೆ ನೀಡಿದರು. ಇದೇ ವೇಳೆ ತಮ್ಮ ಮನೆಯಲ್ಲಿ ಕರ್ನಾಟಕ ಪೊನ್ನಿ ಎಂಬ ತಳಿಯ ಅಕ್ಕಿಯನ್ನು ಪ್ರತಿದಿನ ಬಳಸುವುದಾಗಿ ತಿಳಿಸಿದರು.

➡ ಪುಟ ೪

ರಾಜ್ಯದ ಪರವಾಗಿ ಧ್ವನಿಗೂಡಿಸಿ: ಎಚ್‌ಡಿಕೆ

ಕೆಂಪೇಗೌಡ ಅಂದಾಕ್ಷಣ ಬೆಂಗಳೂರು ನಗರದ ಏಳಿಗೆ ಮತ್ತು ಅವರ ದೂರದೃಷ್ಟಿ ನೆನಪಾಗುತ್ತದೆ. ಅವರು ಸಾವಿರಾರು ಕೆರೆಗಳನ್ನು ಕಟ್ಟಿದ್ದರು. ನಾವೀಗ ಬೆಂಗಳೂರು ನಗರ ಅಭಿವೃದ್ಧಿ ಹೆಸರಲ್ಲಿ ಹಲವಾರು ಕೆರೆಗಳನ್ನು ಮುಚ್ಚಿದ್ದೇವೆ. ಬೆಂಗಳೂರು ನಗರ ಬೆಳೆಯುತ್ತಿರುವುದನ್ನು ನೋಡಿದರೆ ನೀರಿನ ಸಮಸ್ಯೆ ಎದುರಿಸುವ ಆತಂಕ ಇದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು. ಉಪರಾಷ್ಟ್ರಪತಿಗಳಿಗೆ ನೀರಿನ ಹಂಚಿಕೆ ವಿಚಾರದಲ್ಲಿರುವ ಸಮಸ್ಯೆ ಸಂಪೂರ್ಣ ಅರಿವಿದೆ. ಬೆಂಗಳೂರು ನಗರಕ್ಕೆ ಭವಿಷ್ಯದಲ್ಲಿ ನೀರಿನ ಅಭಾವ ಉಂಟಾಗಲಿದೆ. ಆದ್ದರಿಂದ ಜಲ ವಿವಾದದ ವಿಷಯದಲ್ಲಿ ಉಪರಾಷ್ಟ್ರಪತಿಗಳು ನಮ್ಮ ರಾಜ್ಯದ ಪರವಾಗಿ ಧ್ವನಿಗೂಡಿಸಬೇಕು. ಇದರಿಂದ ದೊಡ್ಡ ಶಕ್ತಿ ಬರುತ್ತದೆ ಎಂದು ಮನವಿ ಮಾಡಿದರು.

ಎಚ್‌ಡಿಕೆ, ಸುಧಾಕರ್ ಬೆಂಬಲಿಗರಿಂದ ಪ್ರತಿಭಟನೆ, ಗದ್ದಲ

ಪ್ರದೀಪ್ ಈಶ್ವರ್ ವಿರುದ್ಧ ಆಕ್ರೋಶ

• ಚಿಕ್ಕಬಳ್ಳಾಪುರ: ನಗರದ ಕನ್ನಡ ಭವನದಲ್ಲಿ ನಡೆದ ಕೆಂಪೇಗೌಡ ಜಯಂತಿ ಆಚರಣೆ ವೇಳೆ ಶಾಸಕ ಪ್ರದೀಪ್ ಈಶ್ವರ್ ಅವರನ್ನು ವೇದಿಕೆಯಿಂದ ಆಚೆ ಕಳುಹಿಸುವಂತೆ ಕುಮಾರಸ್ವಾಮಿ, ಸಂಸದ ಡಾ.ಕೆ. ಸುಧಾಕರ್ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದ್ದರಿಂದ ಗದ್ದಲ ಗಲಾಟೆ ಕಾರಣವಾಯಿತು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಚಿಕ್ಕಬಳ್ಳಾಪುರ ಆದಿಚುಂಚನಗಿರಿ ಶಾಖಾ ಮಠದ ಸ್ವಾಮೀಜಿ ಮತ್ತು ಜಿಲ್ಲಾಧಿಕಾರಿ ಆಕ್ರೋಶಿತರನ್ನು ಸಮಾಧಾನಪಡಿಸುವ ಪ್ರಯತ್ನಿಸಿದರೂ ಪರಿಸ್ಥಿತಿ ಹತೋಟಿಗೆ ತರಲು ಸಾಧ್ಯವಾಗಲಿಲ್ಲ. ಕಾರ್ಯಕ್ರಮದಿಂದ ತಮ್ಮ ಬೆಂಬಲಿಗರೊಂದಿಗೆ ಹೊರನಡೆದ ಪ್ರದೀಪ್ ಈಶ್ವರ್ ವಿರೋಧಿಗಳಿಗೆ ತೊಡೆ ತಟ್ಟಿ ಪಂಥಾಹ್ವಾನ ನೀಡಿದ ಘಟನೆ ನಡೆಯಿತು.

ಇದರಿಂದ ಕನ್ನಡ ಭವನದ ಮುಂದೆ ದೊಡ್ಡ ಹೈಡ್ರಾಮಾ ಸೃಷ್ಟಿಯಾಯಾಯಿತು. ಪ್ರದೀಪ್ ಈಶ್ವರ್ ತೋಳು ತಟ್ಟಿದ್ದರಿಂದ ಒಕ್ಕಲಿಗ ಯುವಕರು ಮತ್ತು ಪ್ರದೀಪ್ ಈಶ್ವರ್ ಬೆಂಬಲಿಗರ ನಡುವೆ ಗಲಾಟೆ ತಾರಕಕ್ಕೇರಿತು. ಜನರನ್ನು ನಿಯಂತ್ರಿಸಲು ಪೊಲೀಸರು ಲಘು ಲಾಠಿ ಪ್ರಹಾರ ಕೂಡ ನಡೆಸಿದರು. ಶಾಸಕ ಪ್ರದೀಪ್ ಈಶ್ವರ್ ಕುಮಾರಸ್ವಾಮಿ ವಿರುದ್ಧ ಕಿಡಿಕಾರಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಪ್ರದೀಪ್ ಈಶ್ವರ್, ನಾನು ಜಿಲ್ಲೆಯ ಶೋಷಿತ ಸಮುದಾಯದ ಶಾಸಕ. ಕಾರ್ಯಕ್ರಮಕ್ಕೆ ಕರೆದು ಅವಮಾನ ಮಾಡೋದು ಸರಿನಾ? ಜಿಲ್ಲೆಯಲ್ಲಿ ಶೋಷಿತರು, ಅಲ್ಪಸಂಖ್ಯಾತರು ಬದುಕಬಾರದೇ ಎಂದು ಪ್ರಶ್ನಿಸಿದರು.

ಕುಮಾರಣ್ಣ ನೀವು ಓಬಿಸಿ ಹುಡುಗನ್ನು ಟಾರ್ಗೆಟ್ ಮಾಡಿದ್ದೀರಾ? ನಾನು ಒಬ್ಬನೇ ಒಕ್ಕಲಿಗ ನಾಯಕ ಡಿಕೆಶಿ ಪರವಾಗಿ ನಿಂತಿರೋದು. ನಿಮಗೆ ಕ್ಷೇತ್ರದಲ್ಲಿ ಒಕ್ಕಲಿಗರೂ ಬೆಳೀಬಾರದೂ, ಬೇರೆಯವರೂ ಬೆಳೆಯಬಾರದು. ಖಬರ್ ದಾರ್ ಕುಮಾರಣ್ಣ ನಿಮ್ಮ ಚೇಲಾಗಳಿಗೆ ಹೆದರಲ್ಲ ಎಂದು ಎಚ್ಚರಿಕೆ ನೀಡಿದರು.

ಅಧ್ಯಕ್ಷ ಪ್ಯಾಟ್ರಿಕ್ ಹರ್ಮೀನ್‌ರಿಂದ ಗೌರವ ರಕ್ಷೆ ಸ್ವೀಕರಿಸಿದ ಪ್ರಧಾನಿ

ಸೀಶೆಲ್ಸ್: ಮೋದಿಗೆ ಅದ್ಧೂರಿ ಸ್ವಾಗತ

• ವಿಕ್ಟೋರಿಯಾ (ಸೀಶೆಲ್ಸ್): ಮೂರು ದಿನಗಳ ಪ್ರವಾಸದಂಗವಾಗಿ ಶನಿವಾರ ಸೀಶೆಲ್ಸ್ ಗೆ ಬಂದಿಳಿದ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಇಲ್ಲಿನ ಭಾರತೀಯ ಸಮುದಾಯ ಅತ್ಯಂತ ಆತ್ಮೀಯವಾಗಿ ಸ್ವಾಗತಿಸಿತು.

ಗುಜರಾತ್‌ನ ಕಥ್‌ನ ಸಾಂಪ್ರದಾಯಿಕ ನೃತ್ಯ, ಭರತನಾಟ್ಯಸಹಿತ ಭಾರತದ ಹಲವು ನೃತ್ಯ ಪ್ರಕಾರಗಳ ಪ್ರದರ್ಶನದೊಂದಿಗೆ ಪ್ರಧಾನಿ ಮೋದಿ ಅವರನ್ನು ಪ್ರೀತಿಯಿಂದ ಬರಮಾಡಿಕೊಂಡರು. ಭಾರತೀಯ ನೃತ್ಯ ಪ್ರದರ್ಶನ ಕಂಡು ಸಂತುಷ್ಟ ಪ್ರಧಾನಿ ಮೋದಿ, ಅದ್ಭುತ ಸಾಂಸ್ಕೃತಿಕ ಬಾಂಧವ್ಯವಿದು ಎಂದು ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಖುಷಿ ವ್ಯಕ್ತಪಡಿಸಿದ್ದಾರೆ. ಇಲ್ಲಿನ ಭಾರತೀಯ ಸಮುದಾಯ ಭಾರತದ ವಿವಿಧ ಪ್ರದೇಶಗಳ ಸಂಸ್ಕೃತಿಯನ್ನು ಸಂರಕ್ಷಿಸಿ, ಸಂಭ್ರಮಿಸುತ್ತಿರುವ ರೀತಿ ನಿಜಕ್ಕೂ ಪ್ರಶಂಸಾರ್ಹ ಎಂದು ಪೋಸ್ಟ್‌ನಲ್ಲಿ ಪ್ರಧಾನಿ ಬಣ್ಣಿಸಿದ್ದಾರೆ.


➡ ಪುಟ ೪



ಜಗತ್ತಿನ ಅತ್ಯಂತ ಹಿರಿಯ ಆಮೆಯೆಂದೇ ಪರಿಗಣಿತ 194 ವರ್ಷದ ಜೋನಾಥನ್ ಸಹಿತ ಹಲವು ಬೃಹತ್ ಆಮೆಗಳಿಗೆ ಪ್ರಧಾನಿ ಮೋದಿ ಆಹಾರ ನೀಡಿದರು.

ಮುಂದಿನ ವರ್ಷಾರಂಭಕ್ಕೆ ಅಧ್ಯಕ್ಷ ಟ್ರಂಪ್ ಭಾರತ ಭೇಟಿ

• ನ್ಯೂಯಾರ್ಕ್: ಭಾರತ-ಅಮೆರಿಕದ ಅತ್ಯಂತ ಆಪ್ತ ಪಾಲುದಾರ ಮತ್ತು ಮಿತ್ರ ರಾಷ್ಟ್ರವಾಗಿದೆ. ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಟ್ರಂಪ್ ನಡುವಿನ ಸಂಬಂಧ



ಅತ್ಯುತ್ತಮವಾಗಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ತಿಳಿಸಿದ್ದಾರೆ. ಟ್ರಂಪ್ ಅವರು ಮುಂದಿನ ವರ್ಷದ ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಸುದ್ದಿ ಸಂಸ್ಥೆಯೊಂದರ ಜತೆಗೆ ಮಾತನಾಡಿರುವ ರುಬಿಯೋ, ಈ ಭೇಟಿ, ಅಧ್ಯಕ್ಷ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ನಡುವಿನ ಬಲವಾದ ವೈಯಕ್ತಿಕ ಸಂಬಂಧವನ್ನು ಎತ್ತಿ ತೋರಿಸುತ್ತದೆ ಎಂದು ತಿಳಿಸಿದ್ದಾರೆ.

• ವಿವರ ಪುಟ ೨

ಸಿಎಂ ಸುವೇಂದು ಅಧಿಕಾರಿ ಘೋಷಣೆ

ಭೂ, ಲವ್ ಜಿಹಾದ್ ತಡೆಗೆ ಕಠಿಣ ಕ್ರಮ

• ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಸಮಾನ ನಾಗರಿಕ ಸಂಹಿತೆ(ಏನಾಸಂ) ಜಾರಿಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ತ್ವರಿತ ಹೆಜ್ಜೆಯಿಡಲಿದೆ. ಇದರ ಬೆನ್ನಲ್ಲೇ ಭೂ ಜಿಹಾದ್, ಲವ್ ಜಿಹಾದ್ ಮತ್ತು ಬಲವಂತದ ಮತೀಯ ಮತಾಂತರ ಪಿಡುಗಿಗೆ



ಕಡಿವಾಣ ಹಾಕಲು ಕಠಿಣ ಕಾಯಿದೆಗಳ ಅನುಷ್ಠಾನಿಸಲಿದೆ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಘೋಷಿಸಿದ್ದಾರೆ.

ತಾಳ್ಮೆ ಕಾಯ್ದುಕೊಳ್ಳಿ, ಸರಕಾರದಲ್ಲಿ ನಂಬಿಕೆ ಇಡಿ ಮತ್ತು ಇವುಗಳ ಅನುಷ್ಠಾನಕ್ಕೆ ನಮಗೆ ಸ್ವಲ್ಪ ಸಮಯ ಕೊಡಿ ಎಂದು ಸಿಎಂ ಅಧಿಕಾರಿ ಜನರನ್ನು ಕೋರಿದ್ದಾರೆ.

ಶೈಕ್ಷಣಿಕ ಸಂಸ್ಥೆಗಳಲ್ಲಿ ವಂದೇಮಾತರಂ ಗಾಯನ ಕಡ್ಡಾಯಗೊಳಿಸುವ ನಿರ್ಧಾರವನ್ನು ಉಲ್ಲೇಖಿಸಿ, ಪ್ರಸಕ್ತ ಹೆಚ್ಚಿನವರು ವಂದೇಮಾತರಂ ಹಾಡುವಾಗ ಎದ್ದು ನಿಲ್ಲುತ್ತಾರೆ. ಪ್ರತಿಯೊಬ್ಬರೂ ವಂದೇಮಾತರಂ ಹಾಡುತ್ತಿಲ್ಲ ಎಂದ ಅವರು, ಋಷಿ ಅರವಿಂದೊ, ನೇತಾಜಿ, ಶ್ಯಾಮ್ ಪ್ರಸಾದ್ ಮುಖರ್ಜಿಯವರು ಜನಿಸಿದ ಈ ಪುಣ್ಯಭೂಮಿಯಲ್ಲಿ ಯಾವುದೇ ರಾಷ್ಟ್ರ ವಿರೋಧಿ ಚಟುವಟಿಕೆಗಳಿಗೆ ಅವಕಾಶ ಕೊಡುವುದಿಲ್ಲ ಎಂದು ಘೋಷಿಸಿದರು.

➡ ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,29,500 (2,28,000)	ಅಪರಂಜಿ ಚಿನ್ನ 14,350 (14,110)	ಆಭರಣ ಚಿನ್ನ 13,195 (12,980)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)	$1 = ₹94.36

ಮುಂದಿನ ವರ್ಷದ ಆರಂಭದಲ್ಲಿ ಭಾರತಕ್ಕೆ ಟ್ರಂಪ್

ಭಾರತ ಅಮೆರಿಕದ ಆಪ್ತ ಪಾಲುದಾರ

ನ್ಯೂಯಾರ್ಕ್: ಭಾರತ-ಅಮೆರಿಕದ ಅತ್ಯಂತ ಆಪ್ತ ಪಾಲುದಾರ ಮತ್ತು ಮಿತ್ರ ರಾಷ್ಟ್ರವಾಗಿದೆ. ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಟ್ರಂಪ್ ನಡುವಿನ ಸಂಬಂಧ ಅತ್ಯುತ್ತಮವಾಗಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ತಿಳಿಸಿದ್ದಾರೆ. ಮುಖ್ಯವಾಗಿ ಟ್ರಂಪ್ ಅವರು ಮುಂದಿನ ವರ್ಷದ ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಸುದ್ದಿ ಸಂಸ್ಥೆಯೊಂದರ ಜತೆಗೆ ಮಾತನಾಡಿರುವ ರುಬಿಯೋ, ಈ ಭೇಟಿ, ಅಧ್ಯಕ್ಷ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ನಡುವಿನ ಬಲವಾದ ವೈಯಕ್ತಿಕ ಸಂಬಂಧವನ್ನು ಎತ್ತಿ ತೋರಿಸುತ್ತದೆ ಎಂದು ತಿಳಿಸಿದ್ದಾರೆ.ಅಧ್ಯಕ್ಷರ ಭೇಟಿಯ ಸಿದ್ಧತೆಗಳನ್ನು ಅಂತಿಮಗೊಳಿಸಲು ಈ ವರ್ಷದ ಅಂತ್ಯದೊಳಗೆ ತಾನು ಭಾರತಕ್ಕೆ ಪ್ರಯಾಣಿಸುವ ಸಾಧ್ಯತೆಯಿದೆ ಎಂದು ರುಬಿಯೋ ಸುಳಿವು ನೀಡಿದ್ದಾರೆ. ಈ ಪ್ರವಾಸ, ಫೆಬ್ರವರಿ 2020 ರ ನಂತರ ಟ್ರಂಪ್ ಅವರ ಮೊದಲ ಭಾರತ ಭೇಟಿಯಾಗಲಿದ್ದು, ಅವರು ಎರಡನೇ ಬಾರಿಗೆ ಶ್ವೇತಭವನಕ್ಕೆ ಮರಳಿದ ನಂತರದ ಮೊದಲ ಪ್ರವಾಸವಾಗಲಿದೆ.

ಉಭಯ ನಾಯಕರು ಇತ್ತೀಚೆಗೆ ಫ್ರಾನ್ಸ್ ನ ಇವಿಯಾನ್‌ನಲ್ಲಿ ನಡೆದ ಜಿ7 ಶೃಂಗಸಭೆಯ ಸಂದರ್ಭದಲ್ಲಿ ಭೇಟಿಯಾಗಿದ್ದರು. ಇದು 16 ತಿಂಗಳುಗಳಲ್ಲಿ ಅವರ ಮೊದಲ ದ್ವಿಪಕ್ಷೀಯ ಸಭೆಯಾಗಿತ್ತು. ಭಾರತ ಮತ್ತು ಅಮೆರಿಕ ಪ್ರಸ್ತುತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ನಡೆಸುತ್ತಿದ್ದು, ಇದು ಪೂರ್ಣಗೊಳ್ಳುವ ಹಂತದಲ್ಲಿದೆ ಎಂದು ರುಬಿಯೊ ಹೇಳಿದ್ದಾರೆ.

ಜತೆಗೆ, ಎರಡೂ ರಾಷ್ಟ್ರಗಳು ಕ್ವಾಡ್ ಒಕ್ಕೂಟದ ಮತ್ತೊಂದು ಸಭೆಯನ್ನು ಎದುರು ನೋಡುತ್ತಿವೆ.



ಪ್ರಧಾನಿಯನ್ನು ಕೊಂಡಾಡಿದ ರುಬಿಯೊ!

ವಿಶ್ವದ ಅತ್ಯಂತ ಹಳೆಯ ಮತ್ತು ದೊಡ್ಡ ಪ್ರಜಾಪ್ರಭುತ್ವ ದೇಶಗಳಾಗಿ ಅಮೆರಿಕ ಮತ್ತು ಭಾರತ ಸಮಾನ ಮೌಲ್ಯಗಳನ್ನು ಹಂಚಿಕೊಂಡಿವೆ. ಉಭಯ ರಾಷ್ಟ್ರಗಳು ವಿವಿಧ ಕ್ಷೇತ್ರಗಳಲ್ಲಿ ಕಾರ್ಯತಂತ್ರವನ್ನು ಬಲಪಡಿಸುತ್ತಿವೆ. ಇದಲ್ಲದೆ, ಭಾರತೀಯ ಅಮೆರಿಕದ ಸಮುದಾಯ ಅಮೆರಿಕವನ್ನು ಸಮೃದ್ಧಗೊಳಿಸುತ್ತಿದೆ ಮತ್ತು ಎರಡೂ ದೇಶಗಳ ನಡುವೆ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಧಾನಿ ಮೋದಿ ನಾಯಕತ್ವದಲ್ಲಿ ಭಾರತ ಅದ್ಭುತ ಆರ್ಥಿಕ ಪ್ರಗತಿ ಸಾಧಿಸುತ್ತಿದೆ, ಪ್ರಭಾವಿ ಜಾಗತಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ ಎಂದಿದ್ದಾರೆ.

ಇಂಧನ ಪೂರೈಕೆಯನ್ನು ಹೆಚ್ಚಿಸಲು ನಿಕಟವಾಗಿ ಕಾರ್ಯನಿರ್ವಹಿಸುತ್ತಿವೆ ಎಂದೂ ವಿದೇಶಾಂಗ ಕಾರ್ಯದರ್ಶಿ ಹೇಳಿದ್ದಾರೆ.

ಜಾಗತಿಕ ಸಮಸ್ಯೆಗಳಿಗೆ ತಕ್ಷಣವೇ ಸಹಾಯಹಸ್ತ ಚಾಚುವ ದೇಶ

ಭಾರತ ವಿಶ್ವ ಸಂಜೀವಿನಿ

ಜಗತ್ತಿನಾದ್ಯಂತ ಯಾರೇ ಕಷ್ಟದಲ್ಲಿದ್ದರೂ ಭಾರತ ತನ್ನ ಸಹಾಯಹಸ್ತಚಾಚುತ್ತದೆ. ಪಾಕೃತಿಕ ವಿಕೋಪ, ಸಾಂಕ್ರಾಮಿಕ ರೋಗ ಮತ್ತು ಇತರ ಆಂತರಿಕ ಸಮಸ್ಯೆಗಳಿಂದ ದೇಶವು ತತ್ತರಿಸಿ ಹೋಗಿರುವಾಗ ಭಾರತ ತಕ್ಷಣವೇ ತನ್ನ ಕೈಲಾಗುವ ಸಹಾಯ ಮಾಡುತ್ತದೆ. ಇದಕ್ಕೆ ಹಲವು ಉದಾಹರಣೆಗಳು ಸಹ ಇವೆ. ಇತ್ತಿಚೆಗಷ್ಟೇ ಸವವೆನೆಜುವೆಲಾದಲ್ಲಿ ಸಂಭವಿಸಿದ ಅವಳಿ ಭೂಕಂಪಗಳಿಂದಾಗಿ ಸುಮಾರು ಸಾವಿರಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಇನ್ನು ಅನೇಕರು ನಾಪತ್ತೆಯಾಗಿದ್ದಾರೆ. ಕೂಡಲೇ ಭಾರತ ಸರ್ಕಾರ 41 ಸದಸ್ಯರ ವೈದ್ಯಕೀಯ ತಂಡವನ್ನು ಅಲ್ಲಿಗೆ ನಿಯೋಜಿಸಿದೆ. '60 ಪ್ಯಾರಾಚೂಟ್ ಫೀಲ್ಡ್ ಆಂಬ್ಯುಲೆನ್ಸ್' ಪಡೆಗೆ ಸೇರಿದ ಈ ತಂಡ 'ಆಪರೇಷನ್ ಅಮಿಸ್ತಾದ್' ಕಾರ್ಯಾಚರಣೆಯ ಭಾಗವಾಗಿ ಭಾರತೀಯ ವಾಯುಪಡೆಯ ಸಿ-17 ಯುದ್ಧ ವಿಮಾನದ ಮೂಲಕ ಪ್ರಯಾಣ ಬೆಳೆಸಿದೆ.



ಪ್ರಮುಖಾಂಶಗಳು

- ಆಪರೇಷನ್ ಅಮಿಸ್ತಾದ್ ಅನ್ವಯದಲ್ಲಿ 41 ಸದಸ್ಯರ ತಂಡ ಕಳುಹಿಸಿದ ಭಾರತ
- ಫೀಲ್ಡ್ ಆಸ್ಪತ್ರೆ, 35 ಟನ್ ಸಹಾಯ ಸಾಮಗ್ರಿ ಹೊತ್ತ ಎರಡು ಸಿ-17 ವಿಮಾನಗಳು
- ನೇಪಾಳ, ಯೆಮೆನ್, ದಕ್ಷಿಣ ಸುಡಾನ್, ಮ್ಯಾನ್ಮಾರ್ ಶ್ರೀಲಂಕಾದಲ್ಲೂ ಮಾದರಿಯಾಗಿದ್ದ ಭಾರತ
- ಗಡಿ ರಕ್ಷಣೆಯನ್ನು ಮೀರಿ ವಿಸ್ತರಿಸಿರುವ ಸಶಸ್ತ್ರ ಪಡೆಗಳ ವ್ಯಾಪ್ತಿ

ಸುದ್ದಿ ಸಮಗ್ರ

ರಕ್ಷಣಾ ಕಾರ್ಯಾಚರಣೆ (ದಿ ಮಿಷನ್)

ಒಂದು ಫೀಲ್ಡ್ ಆಸ್ಪತ್ರೆ, 35 ಟನ್ ಪರಿಹಾರ ಸಾಮಗ್ರಿಗಳು ಮತ್ತು 41 ಸದಸ್ಯರ ರಕ್ಷಣಾ ತಂಡವನ್ನು ಹೊತ್ತ ಎರಡು ಸಿ-17 ವಿಮಾನಗಳನ್ನು ಕಳುಹಿಸಲಾಗಿದೆ. ತೈಲ ಸಂಪದ್ಭರಿತ ದಕ್ಷಿಣ ಅಮೆರಿಕ ದೇಶವಾದ ವೆನೆಜುವೆಲಾದಲ್ಲಿ ಸದ್ಯ ರಕ್ಷಣಾ ಕಾರ್ಯಗಳು ಬಿರುಸಿನಿಂದ ನಡೆಯುತ್ತಿದ್ದು, ನಾಪತ್ತೆಯಾದವರಿಗಾಗಿ ಅಧಿಕಾರಿಗಳು ಹುಡುಕಾಟ ನಡೆಸುತ್ತಿದ್ದಾರೆ. ಸಂತ್ರಸ್ತರಿಗೆ ನೆರವು ನೀಡುವುದು ಈ ನಿಯೋಜನೆಯ ಮುಖ್ಯ ಉದ್ದೇಶವಾಗಿದೆ.

ಜಾಗತಿಕ ಸ್ಪಂದನೆಯಲ್ಲಿ ಭಾರತವೇ ಮಾದರಿ

ಭಾರತದ ಸಶಸ್ತ್ರ ಪಡೆಗಳು ದೇಶದ ಗಡಿಗಳನ್ನು ದಾಟಿ ಒದಗಿಸುವ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ (ಹೆಚ್‌ಎಡಿಆರ್) ಕಾರ್ಯಾಚರಣೆಗಳ ಸುದೀರ್ಘ ಪಟ್ಟಿಗೆ 'ಆಪರೇಷನ್ ಅಮಿಸ್ತಾದ್' ಇತ್ತೀಚಿನ ಸೇರ್ಪಡೆ. ಕಳೆದ ಒಂದು ದಶಕದಲ್ಲಿ ಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ಪ್ರಕೃತಿ ವಿಕೋಪಗಳಿಗೆ ಸ್ಪಂದಿಸುವುದರಿಂದ ಹಿಡಿದು ಯುದ್ಧ ಪೀಡಿತ ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸುವವರೆಗೆ ವಿದೇಶಗಳಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಗಳನ್ನು ನಡೆಸುತ್ತಲೇ ಬಂದಿವೆ. ದೂರ ಅಥವಾ ಭೂಪ್ರದೇಶದ ಸವಾಲುಗಳನ್ನು ಲೆಕ್ಕಿಸದೆ, ತುರ್ತು ಸಂದರ್ಭಗಳಲ್ಲಿ ಅತ್ಯಂತ ವೇಗವಾಗಿ ಸ್ಪಂದಿಸುವ ಭಾರತದ ಸಾಮರ್ಥ್ಯವನ್ನು ಈ ಕಾರ್ಯಾಚರಣೆಗಳು ಪ್ರತಿಬಿಂಬಿಸಿವೆ.

ನೇಪಾಳ ಮತ್ತು ಯೆಮೆನ್ 2015

2015ರಲ್ಲಿ ನೇಪಾಳದಲ್ಲಿ ಸಂಭವಿಸಿದ ಭೀಕರ ಭೂಕಂಪದ ನಂತರ 'ಆಪರೇಷನ್ ಮೈತ್ರಿ' ಎಂಬ ಕಾರ್ಯಾಚರಣೆಯಲ್ಲಿ ನೆರವು ಕಳುಹಿಸಿದ ಮೊದಲ ದೇಶ ಭಾರತ. ಸೇನೆ ಮತ್ತು ವಾಯುಪಡೆಯು ಸಾವಿರಾರು ಜನರನ್ನು ರಕ್ಷಿಸಿ, ಫೀಲ್ಡ್ ಆಸ್ಪತ್ರೆಗಳನ್ನು ಸ್ಥಾಪಿಸಿತಲ್ಲದೆ ಭೂಕಂಪ ಪೀಡಿತ ಪ್ರದೇಶಗಳಿಗೆ ಅಗತ್ಯ ಪರಿಹಾರ ಸಾಮಗ್ರಿಗಳನ್ನು ತಲುಪಿಸಿತು. ಅದೇ ವರ್ಷ, ಯೆಮೆನ್ ಆಂತರ್ ಯುದ್ಧದ ವೇಳೆ, ಭಾರತೀಯ ನೌಕಾಪಡೆ ಮತ್ತು ವಾಯುಪಡೆಯು 'ಆಪರೇಷನ್ ರಾಹತ್' ನಡೆಸಿ ಏಡನ್ ಬಂದರು ನಗರದಿಂದ 4,700 ಕ್ಕೂ ಹೆಚ್ಚು ಭಾರತೀಯರನ್ನು ಮತ್ತು ಸುಮಾರು 2,000 ವಿದೇಶಿ ನಾಗರಿಕರನ್ನು ಸ್ಥಳಾಂತರಿಸಿತು. ಈ ಕಾರ್ಯಾಚರಣೆ 40ಕ್ಕೂ ಹೆಚ್ಚು ದೇಶಗಳ ನಾಗರಿಕರನ್ನು ರಕ್ಷಿಸಿದ್ದು, ಇದು ಇಂದಿಗೂ ಭಾರತದ ಅತಿದೊಡ್ಡ ಸ್ಥಳಾಂತರ ಕಾರ್ಯಾಚರಣೆಗಳಲ್ಲಿ ಒಂದೆನಿಸಿದೆ.

ಗಡಿ ರಕ್ಷಣೆ ಮೀರಿ

ಒಟ್ಟಾರೆಯಾಗಿ, ಈ ಕಾರ್ಯಾಚರಣೆಗಳು ಭಾರತೀಯ ಸಶಸ್ತ್ರ ಪಡೆಗಳ ಪಾತ್ರ ದೇಶದ ಗಡಿಗಳನ್ನು ಕಾಯುವುದನ್ನು ಮೀರಿ ವಿಸ್ತರಿಸಿದೆ ಎಂಬುದನ್ನು ತೋರಿಸುತ್ತದೆ. ಭಾರತೀಯ ವಾಯುಪಡೆ ಭಾರತದ ಒಳಗಡೆ ಮತ್ತು ವಿದೇಶಗಳಲ್ಲಿ ವಿಪತ್ತು ಪೀಡಿತ ಪ್ರದೇಶಗಳಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್ ಎಫ್) ಸಿಬ್ಬಂದಿಯನ್ನು ನಿಯಮಿತವಾಗಿ ವಿಮಾನಗಳ ಮೂಲಕ ತಲುಪಿಸುತ್ತಿದೆ. ಸ್ವದೇಶದಲ್ಲಾಗಲಿ ಅಥವಾ ಸಾವಿರಾರು ಕಿಲೋಮೀಟರ್ ದೂರದಲ್ಲಾಗಲಿ, ಮಾನವೀಯ ಬಿಕ್ಕಟ್ಟುಗಳು ಎದುರಾದಾಗ ತಕ್ಷಣವೇ ಸ್ಪಂದಿಸುವ ದೇಶದ ಸಾಮರ್ಥ್ಯವನ್ನು ಈ ದಾಖಲೆಗಳೇ ಸಾರಿ ಹೇಳುತ್ತವೆ ಎಂದು ಸೇನಾಪಡೆಯ ಅಧಿಕಾರಿಯೊಬ್ಬರು ಹೆಮ್ಮೆಯಿಂದ ಹೇಳುತ್ತಾರೆ

ದಕ್ಷಿಣ ಸುಡಾನ್, ಸಾಂಕ್ರಾಮಿಕ ರೋಗ

2016ರಲ್ಲಿ ದಕ್ಷಿಣ ಸುಡಾನ್‌ನ ಜುಬಾದಲ್ಲಿ ಹಿಂಸಾಚಾರ ಭುಗಿಲೆದ್ದಾಗ, ಭಾರತ 'ಆಪರೇಷನ್ ಸಂಕಟ್ ಮೋಚನ್' ನಡೆಸಿ, ನೆಲದ ಮೇಲಿನ ಕಠಿಣ ಮತ್ತು ಅಸ್ಥಿರ ಸುರಕ್ಷತಾ ಪರಿಸ್ಥಿತಿಯ ಹೊರತಾಗಿಯೂ ತನ್ನ 156 ನಾಗರಿಕರನ್ನು ವಿಮಾನದ ಮೂಲಕ ಸುರಕ್ಷಿತವಾಗಿ ಏರ್ ಲಿಫ್ಟ್ ಮಾಡಿತು. 2020ರ ಕೋರೊನಾ ಸಾಂಕ್ರಾಮಿಕ ಅವಧಿಯಲ್ಲಿ, ಭಾರತೀಯ ನೌಕಾಪಡೆ 'ಆಪರೇಷನ್ ಸಮುದ್ರ ಸೇತು' ಎಂಬ ಪ್ರಮುಖ ಸ್ವದೇಶ ವಾಪಸಾತಿ ಕಾರ್ಯಾಚರಣೆ ಪ್ರಾರಂಭಿಸಿತು. ಇದು ಗಲ್ಫ್ ದೇಶಗಳಿಂದ ಮತ್ತು ಪ್ರಪಂಚದ ಇತರ ಪ್ರದೇಶಗಳಲ್ಲಿ ಸಿಲುಕಿಕೊಂಡಿದ್ದ ಸಾವಿರಾರು ಭಾರತೀಯರನ್ನು ಸಮುದ್ರ ಮಾರ್ಗದ ಮೂಲಕ ಸುರಕ್ಷಿತವಾಗಿ ತಾಯ್ನಾಡಿಗೆ ಕರೆತಂದಿತು.



ಮ್ಯಾನ್ಮಾರ್ ಮತ್ತು ಶ್ರೀಲಂಕಾ 2025

2025ರಲ್ಲಿ ಮ್ಯಾನ್ಮಾರ್‌ನಲ್ಲಿ ಪ್ರಬಲ ಭೂಕಂಪ ಸಂಭವಿಸಿದಾಗ, ಭಾರತೀಯ ಸೇನೆ 'ಆಪರೇಷನ್ ಬ್ರಹ್ಮ' ಹೆಸರಲ್ಲಿ 60 ಹಾಸಿಗೆಗಳ ಫೀಲ್ಡ್ ಆಸ್ಪತ್ರೆಯನ್ನು ಸ್ಥಾಪಿಸಿತು. ಚೇತರಿಕೆ ಪ್ರಯತ್ನಗಳನ್ನು ಬೆಂಬಲಿಸಲು ನೌಕಾಪಡೆ ಮತ್ತು ವಾಯುಪಡೆಯು ನೂರಾರು ಟನ್ ಪರಿಹಾರ ಸಾಮಗ್ರಿಗಳನ್ನು ಆ ದೇಶಕ್ಕೆ ಸಾಗಿಸಿತು. ಅದೇ ವರ್ಷದ ಕೊನೆಯಲ್ಲಿ, ಶ್ರೀಲಂಕಾದಲ್ಲಿ 'ದಿತ್ವಾ' ಚಂಡಮಾರುತದ ನಂತರ, ಭಾರತ 'ಆಪರೇಷನ್ ಸಾಗರ್ ಬಂಧು' ಕಾರ್ಯಾಚರಣೆ ಪ್ರಾರಂಭಿಸಿತು. ಈ ಕಾರ್ಯಾಚರಣೆ, ಸಂಪರ್ಕ ಜಾಲಗಳನ್ನು ಮರುಸ್ಥಾಪಿಸಲು ಸಹಾಯ ಮಾಡಿತು, 2,500 ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸಿತು ಮತ್ತು ಪೀಡಿತ ಸಮುದಾಯಗಳಿಗೆ 1,000 ಟನ್ ಗಿಂತಲೂ ಹೆಚ್ಚು ಪರಿಹಾರ ಸಾಮಗ್ರಿ ವಿತರಿಸಿತು.

ಮತಾಂತರವಾಗಿದ್ದರೆ ಹಿಂದುಳಿದ ಜಾತಿ ಮುಸ್ಲಿಂ ಸ್ಥಾನಮಾನ ನೀಡಲಾಗದು

ಚೆನ್ನೈ: ಇಸ್ಲಾಂಗೆ ಮತಾಂತರಗೊಂಡ ವ್ಯಕ್ತಿಗಳಿಗೆ ಹಿಂದುಳಿದ ಜಾತಿಯ ಮುಸಲ್ಮಾನನೆಂಬ ಸ್ಥಾನಮಾನ ನೀಡಲಾಗದು ಎಂದು ಮದ್ರಾಸ್ ಹೈಕೋರ್ಟ್ ಮಹತ್ವದ ತೀರ್ಪಿತ್ತಿದೆ ಮತ್ತು ಈ ವಿಷಯದಲ್ಲಿ ತಮಿಳುನಾಡು ಸರಕಾರದ 2024ರ ಆದೇಶವನ್ನು ನ್ಯಾಯಾಲಯ ತಳ್ಳಿಹಾಕಿದೆ.

ಹಿಂದುಳಿದ ಜಾತಿ , ತೀರಾ ಹಿಂದುಳಿದ ಜಾತಿಗಳು, ಅಧಿಸೂಚಿತ ಸಮುದಾಯಗಳು ಮತ್ತು ಪರಿಶಿಷ್ಟ ಜಾತಿ ಸಹಿತ ಸುಮಾರು ಏಳು ಜಾತಿ ವರ್ಗಗಳ ಜನರು ಇಸ್ಲಾಂಗೆ ಮತಾಂತರಗೊಂಡ ಬಳಿಕ, ಮುಸ್ಲಿಂ ಸಮುದಾಯದ ಹಿಂದುಳಿದ ಜಾತಿ - ವರ್ಗ ಸ್ಥಾನಮಾನ ಹೊಂದಬಹುದೆಂಬ ತಮಿಳುನಾಡು ಸರಕಾರದ ಆದೇಶ ತೀರಾ ಅಸಾಂವಿಧಾನಿಕ ಎಂದು ಹೈಕೋರ್ಟ್ ಹೇಳಿದೆ. ಮತಾಂತರಗೊಂಡ ವ್ಯಕ್ತಿ ಮುಸ್ಲಿಂ ಸಮುದಾಯದ ಹಿಂದುಳಿದ ಜಾತಿ ಸ್ಥಾನಮಾನಕ್ಕೆ ಆಗ್ರಹಿಸುವಂತಿಲ್ಲಳು. ಆತ ಮುಸಲ್ಮಾನ ಅಷ್ಟೆ ಎಂದು ನ್ಯಾಯಮೂರ್ತಿಗಳಾದ ಜಿ.ಆರ್.ಸ್ವಾಮಿನಾಥನ್ ಮತ್ತು ಪಿ.ಬಿ.ಬಾಲಾಜಿ ಅವರನ್ನು ಒಳಗೊಂಡ ನ್ಯಾಯಪೀಠ ತೀರ್ಪಿತ್ತಿದೆ.

ತಮಿಳುನಾಡಿನ ತೂತುಕುಡಿ ಜಿಲ್ಲೆ ಮೂಲ ವಾಸಿ, ಮೂಲತಃ ಹಿಂದುವಾಗಿದ್ದು ಇಸ್ಲಾಂಗೆ ಮತಾಂತರಗೊಂಡಿರುವ 33ರ ಯುವಕನೋರ್ವನ ಅರ್ಜಿ ವಿಚಾರಣೆ ಸಂದರ್ಭ ಉಚ್ಚ ನ್ಯಾಯಾಲಯ ಪ್ರಸ್ತುತ ಮಹತ್ವದ ತೀರ್ಪು ನೀಡಿದೆ. ಈ ಯುವಕ 2015ರಲ್ಲಿ ಇಸ್ಲಾಂಗೆ ಮತಾಂತರಗೊಂಡಿದ್ದು ಬೆನ್ನಲ್ಲೇ ತನ್ನ ಹೆಸರು ಬದಲಿಸಿದ್ದ ಮತ್ತು ಇಸ್ಲಾಮಿಕ್ ಸಂಪ್ರದಾಯಗಳ ಪ್ರಕಾರ ವಿವಾಹವಾಗಿದ್ದ ನಂತರ ತಮಿಳುನಾಡು ಸರಕಾರದ 2024ರ ಆದೇಶದಂತೆ, ತಮಿಳುನಾಡಿನಲ್ಲಿ ಹಿಂದುಳಿದ ಜಾತಿಗಳಿಗೆ ಸೇರಿದ ಮುಸಲ್ಮಾನರೆಂದು ಗುರುತಿಸಲಾಗುವ ಏಳು ಜಾತಿಗಳ ಪೈಕಿ ಒಂದಾಗಿರುವ , ಮುಸ್ಲಿಂ ಲೆಬ್ಬಾಯ್ ಜಾತಿಗೆ ಸೇರಿದವ ತಾನೆಂಬುದಾಗಿ ತನಗೆ ಮಾನ್ಯತೆ ಪ್ರಮಾಣಪತ್ರ ನೀಡಬೇಕೆಂದು ಈ ಯುವಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ.

ಕಿರುಸುದ್ದಿ

ಕ್ರಿಕೆಟಿಗ ಅಖ್ತರ್ ಸೋದರನ ಅಂತ್ಯಕ್ರಿಯೆಯಲ್ಲಿ ಉಗ್ರರು!

ಇಸ್ಲಾಮಾಬಾದ್: ಪಾಕಿಸ್ತಾನಿ ಕ್ರಿಕೆಟಿಗ ಶೋಯೆಬ್ ಅಖ್ತರ್ ಹಿರಿಯ ಸಹೋದರ ಶಾಹಿದ್ ಅಂತ್ಯಕ್ರಿಯೆಯಲ್ಲಿ ಲಷ್ಕರ್ ಉಗ್ರರು ಪಾಲ್ಗೊಂಡಿದ್ದು, ಭಾರತೀಯ ಮತ್ತು ಅಂತಾರಾಷ್ಟ್ರೀಯ ಭದ್ರತಾ ಸಂಸ್ಥೆಗಳ ಗಮನಸೆಳೆದಿದೆ. ಇತ್ತೀಚೆಗೆ ಇಸ್ಲಾಮಾಬಾದ್‌ನಲ್ಲಿ ಶೋಯೆಬ್ ಹಿರಿಯ ಸಹೋದರ ಶಾಹಿದ್ ಅಂತ್ಯಕ್ರಿಯೆಯಲ್ಲಿ ಲಷ್ಕರ್ ಎ ತೈಬಾ (ಎಲ್‌ಇಟಿ) ಉಪ ಮುಖ್ಯಸ್ಥ ಸೈಫುಲ್ಲಾ ಕಸೂರಿ ಭಾಗವಹಿಸಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಯೋತ್ಪಾದಕ ರಾಷ್ಟ್ರ ದ ಬಣ್ಣ ಬಯಲಾಗಿದೆ. ಭಾರತದಲ್ಲಿ ಅತ್ಯಂತ ಭೀಕರ 26/11 ಮುಂಬೈ ಮತ್ತು ಪಹಲ್ಗಾಮ್ ದಾಳಿಗಳನ್ನು ಮಾಡಿದ ಲಷ್ಕರ್ ಉಗ್ರ ಸಂಘಟನೆಯ ಭಯೋತ್ಪಾದಕರು ಅಂತ್ಯಕ್ರಿಯೆಯಲ್ಲಿ ಹಾಜರಿದ್ದರು. ಕಸೂರಿ ಮಾತ್ರವಲ್ಲದೆ, ಎಲ್‌ಇಟಿ ನಿಯಂತ್ರಣದ ಪಾಕಿಸ್ತಾನ ಮರ್ಕಾಜಿ ಮುಸ್ಲಿಮ್ ಲೀಗ್(ಪಿಎಂಎಂಎಲ್) ಮುಖ್ಯಸ್ಥ ಇನಾಮ್ ಉರ್ ರೆಹ್ಮಾನ್ ಸಹ ಸ್ಥಳದಲ್ಲಿದ್ದ.

ಕೆಂಪು ಕೋಟೆ: ಮೂವರ ವಿರುದ್ಧ ದೋಷಾರೋಪ

ಹೊಸದಿಲ್ಲಿ: ಕಳೆದ ವರ್ಷ ದಿಲ್ಲಿಯ ಕೆಂಪುಕೋಟೆಯ ಬಳಿ ನಡೆದಿದ್ದ ಕಾರ್ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ಭಯೋತ್ಪಾದಕರಾದ ಜಮ್ಮು-ಕಾಶ್ಮೀರದ ಜಮೀರ್ ಅಹ್ಮದ್ ಅಹಾಂಗರ್, ತುಫೈಲ್ ಅಹ್ಮದ್ ಭಟ್ ಮತ್ತು ಮುಜಾಫರ್ ಅಹ್ಮದ್ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ದೋಷಾರೋಪಣೆ ಪಟ್ಟಿ ಸಲ್ಲಿಸಿದೆ. ಈ ಪ್ರಕರಣದಲ್ಲಿ ದೋಷಾರೋಪಣೆ ಪಟ್ಟಿಗೆ ಸೇರಿದವರ ಒಟ್ಟು ಸಂಖ್ಯೆ 13ಕ್ಕೆ ಏರಿಕೆಯಾಗಿದೆ. 2025 ನವೆಂಬರ್ 10ರಂದು ಕೆಂಪುಕೋಟೆಯ ಬಳಿ ಸಂಭವಿಸಿದ ಮತ್ತು 11 ಜನರನ್ನು ಬಲಿಪಡೆದ ವಾಹನ ಆಧಾರಿತ ಸುಧಾರಿತ ಸ್ಫೋಟಕ ಸಾಧನ (ವಿಬಿಐಇಡಿ) ಸ್ಫೋಟದ ಪ್ರಮುಖ ಸಂಚುಕೋರರಲ್ಲಿ ಮುಜಾಫರ್ ಅಹ್ಮದ್ ಒಬ್ಬ ಎಂದು ತನಿಖೆಯಿಂದ ತಿಳಿದುಬಂದಿದೆ.

ಆಫ್ಘಾನ್‌ನಲ್ಲಿ ಭೂಕಂಪನ : ಭಾರತದಲ್ಲಿ ಕಂಪನಾನುಭವ

ಹೊಸದಿಲ್ಲಿ: ಈಶಾನ್ಯ ಅಫ್ಘಾನಿಸ್ತಾನದ ಹಿಂದು ಕುಶ್ ಪ್ರದೇಶದಲ್ಲಿ ಸಂಭವಿಸಿದ 6.2ರಷ್ಟು ತೀವ್ರತೆ ಪ್ರಬಲ ಭೂಕಂಪನದಿಂದಾಗಿ ಭಾರತದ ರಾಜಧಾನಿ ದಿಲ್ಲಿ ಸೇರಿದಂತೆ ಇಡೀ ಉತ್ತರ ಭಾರತದಾದ್ಯಂತ ಕಂಪನದ ಅನುಭವವಾಗಿದೆ. ಘಟನೆಯಲ್ಲಿ ಯಾವುದೇ ಸಾವು-ನೋವುಗಳು ದಾಖಲಾಗಿಲ್ಲ. ದಿಲ್ಲಿ, ಎನ್‌ಸಿಆರ್ ವ್ಯಾಪ್ತಿ ಹಾಗೂ ಜಮ್ಮು-ಕಾಶ್ಮೀರದಲ್ಲಿ ಕೆಲವು ಸೆಕೆಂಡು ಭೂಮಿ ತೀವ್ರವಾಗಿ ಕಂಪಿಸಿದೆ. ರಾಷ್ಟ್ರೀಯ ಭೂಕಂಪನ ಶಾಸ್ತ್ರ ಕೇಂದ್ರದ ಮಾಹಿತಿ ಪ್ರಕಾರ, ಭೂಕಂಪನದ ಕೇಂದ್ರಬಿಂದು ಈಶಾನ್ಯ ಅಫ್ಘಾನಿಸ್ತಾನದ ಕಲಾಫ್ಗನ್‌ನಿಂದ ಸುಮಾರು 81 ಕಿಮೀ ದೂರದಲ್ಲಿದ್ದು, ಭೂಮಿಯ ಆಳದಲ್ಲಿ ಅಂದರೆ ಸುಮಾರು 215 ಕಿಮೀ ಆಳದಲ್ಲಿ ಸೃಷ್ಟಿಯಾಗಿದೆ.

ದಾಳಿ ಬೆದರಿಕೆ ಇ-ಮೇಲ್ ಹಲವೆಡೆ ತೀವ್ರ ಕಟ್ಟೆಚ್ಚರ

ಹೊಸದಿಲ್ಲಿ: ಸಂಭಾವ್ಯ ಭಯೋತ್ಪಾದಕ ದಾಳಿಯ ಕುರಿತು ಬಂದಿರುವ ಬೆದರಿಕೆ ಇಮೇಲ್‌ಗಳ ಹಿನ್ನೆಲೆಯಲ್ಲಿ ದಿಲ್ಲಿ ಮತ್ತು ಉತ್ತರಾಖಂಡ್ ರಾಜ್ಯಗಳಾದ್ಯಂತ ಭದ್ರತೆಯನ್ನು ತೀವ್ರಗೊಳಿಸಲಾಗಿದೆ. ಖಲಿಸ್ತಾನಿ ಭಯೋತ್ಪಾದಕರಿಂದ ದಾಳಿ ನಡೆಯಬಹುದು ಎಂಬ ಮುನ್ನೆಚ್ಚರಿಕೆಯ ನಂತರ ದಿಲ್ಲಿ ಪೊಲೀಸ್, ಉತ್ತರಾಖಂಡ್ ಪೊಲೀಸ್ ಮತ್ತು ಕೇಂದ್ರ ಗುಪ್ತಚರ ಸಂಸ್ಥೆಗಳು ಜಂಟಿಯಾಗಿ ತನಿಖೆ ಆರಂಭಿಸಿವೆ.

ಗುಪ್ತಚರ ಇಲಾಖೆಯ ಮಾಹಿತಿಯ ಪ್ರಕಾರ, ಪ್ರಮುಖ ದೇವಾಲಯಗಳು, ಸರ್ಕಾರಿ ಕಚೇರಿಗಳು, ರಾಜಕೀಯ ನಾಯಕರು, ಸಾರ್ವಜನಿಕ ಮೂಲಸೌಕರ್ಯಗಳು, ರೈಲ್ವೆ ನಿಲ್ದಾಣಗಳು ಮತ್ತು ಪೊಲೀಸ್ ಸಿಬ್ಬಂದಿಯನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಸಾಧ್ಯತೆಯಿದೆ. ಈ ಕಾರಣದಿಂದಾಗಿ, ಪ್ರಮುಖ ಧಾರ್ಮಿಕ ಸ್ಥಳಗಳು ಮತ್ತು ಪ್ರಮುಖ ಸಂಸ್ಥೆಗಳಲ್ಲಿ ಕಣ್ಗಾವಲು ಹೆಚ್ಚಿಸಲಾಗಿದ್ದು, ಭದ್ರತಾ ವ್ಯವಸ್ಥೆಗಳನ್ನು ಬಲಪಡಿಸಲಾಗಿದೆ.

ಘಟನೆಯ ಹಿನ್ನೆಲೆ: ಚಮೋಲಿ ಜಿಲ್ಲೆಯಲ್ಲಿ ಸ್ಥಳೀಯ ನಿವಾಸಿಗಳ ಮೇಲೆ ದಾಳಿ ಮಾಡಿದ ಆರೋಪದಲ್ಲಿ ನಾಲ್ವರು ನಿಹಾಂಗ್ ಯಾತ್ರಿಕರನ್ನು ಬಂಧಿಸಿದ ವಿಷಯವಾಗಿ ಉತ್ತರಾಖಂಡ್ ಪೊಲೀಸ್ ಮತ್ತು ನಿಹಾಂಗ್ ಸಿಖ್ಖರ ನಡುವೆ ಇತ್ತೀಚೆಗೆ ನಡೆದ ಘರ್ಷಣೆಯ ಬೆನ್ನಲ್ಲೇ ಈ ಕಟ್ಟೆಚ್ಚರ ವಹಿಸಲಾಗಿದೆ. ಜೂನ್ 16 ರಂದು ಕರ್ಣಪ್ರಯಾಗದಲ್ಲಿ ನಡೆದ ಗಲಾಟೆಯಲ್ಲಿ ನಾಲ್ವರು ಯಾತ್ರಿಕರು ತಲವಾರುಗಳಿಂದ ನಾಲ್ವರು ಸ್ಥಳೀಯ ನಿವಾಸಿಗಳನ್ನು ಗಾಯಗೊಳಿಸಿದ್ದರು.

ದೇಸಿ ಗಸ್ತು ಹಡಗು ಅಕ್ಷಯ್ ಕರಾವಳಿ ಪಡೆಗೆ ಸೇರ್ಪಡೆ

ಪಣಜಿ: ಗೋವಾ ಶಿಪ್‌ಯಾರ್ಡ್ ಲಿ. ನಿರ್ಮಾಣದ ಐಸಿಜಿಎಸ್ ಅಕ್ಷಯ್ ಎಂಬ ಹೊಸ ತಲೆಮಾರಿನ ವೇಗದ ಗಸ್ತು ಹಡಗನ್ನು ಭಾರತೀಯ ಕರಾವಳಿ ಪಡೆಯು ಶನಿವಾರ ನಿಯೋಜನೆ ಮಾಡಿದೆ. ಸಾಗರೋತ್ತರ ಭದ್ರತೆ, ಸಂಶೋಧನೆ, ರಕ್ಷಣಾ ಕಾರ್ಯಾಚರಣೆ ಹಾಗೂ ಕರಾವಳಿ ಕಣ್ಗಾವಲು ಬಲವರ್ಧನೆಯ ಉದ್ದೇಶದಿಂದ ವೇಗದ ಗಸ್ತು ಹಡಗನ್ನು ಕರಾವಳಿ ಪಡೆ ನಿಯೋಜಿಸಿದೆ. ವಾಸ್ಕೋದಲ್ಲಿನ ಗೋವಾ ಶಿಪ್‌ಯಾರ್ಡ್ ಲಿ.ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಕರಾವಳಿ ಪಡೆ ಸಿಬ್ಬಂದಿ ಮತ್ತು ಸರ್ಕಾರಿ ಗಣ್ಯರ ಉಪಸ್ಥಿತಿಯಲ್ಲಿ ದೇಸಿ ಗಸ್ತು ಹಡಗನ್ನು ಕರಾವಳಿ ಪಡೆಯಲ್ಲಿ ನಿಯೋಜಿಸಲಾಗಿದೆ. ಕೇಂದ್ರ ಸರ್ಕಾರದ ಆತ್ಮನಿರ್ಭರ(ಸ್ವಾವಲಂಬಿ) ಭಾರತದ ಕನಸು ಮತ್ತು ಮೇಕ್ ಇನ್ ಇಂಡಿಯಾ ಯೋಜನೆಗಳ ಅನ್ವಯ ದೇಸಿ ಗಸ್ತು ಹಡಗನ್ನು ಗೋವಾ ಶಿಪ್‌ಯಾಡ್‌ನಲ್ಲೇ ವಿನ್ಯಾಸಗೊಳಿಸಿ ನಿರ್ಮಿಸಲಾಗಿದೆ. ಇದು ಭಾರತದ ದೇಸಿ ಹಡಗು ನಿರ್ಮಾಣದ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ನಾಶವಿಲ್ಲದ ಅಥವಾ ಅವಿನಾಶಿ ಅರ್ಥವಿರುವ ಅಕ್ಷಯ ಎಂಬ ಹೆಸರಿಡಲಾಗಿದೆ. ಇದು ದೇಶದ ಸಾಗರ ಹಿತಾಸಕ್ತಿಯ ರಕ್ಷಣೆ ಮತ್ತು ಸುರಕ್ಷಿತ, ಸುಭದ್ರ ಮತ್ತು ಸ್ವಚ್ಛವಾಗಿಡುವ ಕರಾವಳಿ ಪಡೆಯ ಬದ್ಧತೆಯ ಪ್ರತೀಕವಾಗಿದೆ. ಈ ನೌಕೆ ಸಮುದ್ರ ಕಾನೂನು ಜಾರಿಯಲ್ಲಿ ನೆರವಾಗಲಿದ್ದು, ಸಂಕಷ್ಟದಲ್ಲಿ ಸಿಲುಕುವ ನಾವಿಕರಿಗೆ ನೆರವು ನೀಡುವುದು ಸೇರಿ ವಿವಿಧ ಕರ್ತವ್ಯಗಳನ್ನು ನಿರ್ವಹಿಸಲಿದೆ. ಈ ನೌಕೆಯ ನೇತೃತ್ವವನ್ನು ಕಮಾಂಡೆಂಟ್ (ಜೂ. ಗ್ರೇಡ್) ದೀಪಕ್ ಚೌಬೆ ವಹಿಸಲಿದ್ದಾರೆ.



ವಿದೇಶಾಂಗ ನೀತಿಗಿಂತ ಮತ ಬ್ಯಾಂಕ್ ಮುಖ್ಯವಾಯಿತೇ?

ಹೊಸದಿಲ್ಲಿ: ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಗಾಜಾ ವಿಚಾರದಲ್ಲಿ ಕೇಂದ್ರ ಸರ್ಕಾರ ಮೌನ ವಹಿಸಿದೆ ಎಂದು ಆರೋಪಿಸಿದ್ದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಬಿಜೆಪಿಯು, ಕಾಂಗ್ರೆಸ್ ನಾಯಕಿ ಭಾರತದ ವಿದೇಶಾಂಗ ನೀತಿಗಿಂತ ಜನರನ್ನು ದಾರಿತಪ್ಪಿಸಲು ಮತಬ್ಯಾಂಕ್ ರಾಜಕೀಯಕ್ಕೇ ಹೆಚ್ಚು ಆದ್ಯತೆ ನೀಡಿರುವುದು ವಿಪರ್ಯಾಸವೆಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಹೇಳಿದ್ದಾರೆ.

- ಸೋನಿಯಾಗೆ ಪೂನಾವಾಲಾ ಪ್ರಶ್ನೆ

ಭಾರತವು ಪ್ಯಾಲೆಸ್ತೀನ್ ಜನರ ಹಕ್ಕುಗಳ ಕುರಿತ ತನ್ನ ಐತಿಹಾಸಿಕ ನಿಲುವಿಗಿಂತ ಇಸ್ರೇಲ್‌ನೊಂದಿಗೆ ನಿಕಟ ಸಂಬಂಧಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಸೋನಿಯಾ ಆರೋಪಿಸಿದ್ದರು.ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ, ಜನರನ್ನು ದಾರಿತಪ್ಪಿಸಲು ಮತಬ್ಯಾಂಕ್ ರಾಜಕಾರಣಕ್ಕೆ ಆದ್ಯತೆ ನೀಡಲು ಸೋನಿಯಾ ಗಾಂಧಿ ಪ್ರಯತ್ನಿಸುತ್ತಿದ್ದಾರೆ. ಆದರೆ ಭಾರತ ಗಾಜಾ ಮತ್ತು ಪ್ಯಾಲೆಸ್ತೀನ್ ವಿಷಯದಲ್ಲಿ ಹಲವು ಬಾರಿ ತನ್ನ ನಿಲುವನ್ನು ಸ್ಪಷ್ಟಪಡಿಸಿದ್ದು, ಪ್ಯಾಲೆಸ್ತೀನ್‌ಗೆ ಮಾನವೀಯ ನೆರವನ್ನೂ ನೀಡಿರುವುದನ್ನು ಪೂನಾವಾಲಾ ಎತ್ತಿತೋರಿದರು. 2023ರಲ್ಲಿ ಹಮಾಸ್ ಉಗ್ರರು ಇಸ್ರೇಲ್ ಗಡಿಯಲ್ಲಿ ನಡೆಸಿದ ಅಮಾನುಷ ದಾಳಿಯಲ್ಲಿ ಸಾವಿರಕ್ಕೂ ಅಧಿಕ ಮಕ್ಕಳು, ಮಹಿಳೆಯರು, ನಾಗರಿಕರು ಬಲಿಯಾದ ಬಳಿಕ ಇಸ್ರೇಲ್ ವ್ಯಾಪಕವಾಗಿ ಪ್ರತಿದಾಳಿ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು. ಪ್ಯಾಲೆಸ್ತೀನ್-ಇಸ್ರೇಲ್ ನಡುವಣ ತಿಕ್ಕಾಟಕ್ಕೆ ಸಂಬಂಧಿಸಿದ ವಿಶ್ವಸಂಸ್ಥೆಯ ನಿರ್ಣಯಗಳ ಮೇಲೆ ಭಾರತ ಮತ ಚಲಾಯಿಸುವ ಮೂಲಕ ತನ್ನ ನಿಲುವು ಸ್ಪಷ್ಟಪಡಿಸಿದೆ.

ಪಾರದರ್ಶಕ ತನಿಖೆ ಖಚಿತಪಡಿಸಲು ಬದ್ಧ

ಅಯೋಧ್ಯೆ: ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಶನಿವಾರ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಟ್ರಸ್ಟ್ ಸದಸ್ಯ ಅನಿಲ್ ಮಿಶ್ರಾ ಅವರ ರಾಜೀನಾಮೆ ಸಲ್ಲಿಸಿರುವುದನ್ನು ದೃಢೀಕರಿಸಿದ್ದು, ಶ್ರೀರಾಮ ಮಂದಿರ ದೇಣಿಗೆ ದುರುಪಯೋಗ ಆರೋಪಗಳ ಬಗ್ಗೆ ಪಾರದರ್ಶಕ ತನಿಖೆಯನ್ನು ಖಚಿತಪಡಿಸಲು ನಾವು ಬದ್ಧರಾಗಿದ್ದೇವೆ ಎಂದು ಭರವಸೆ ನೀಡಿದೆ. ಶ್ರೀರಾಮ ಮಂದಿರ ಟ್ರಸ್ಟ್ ನ ಖಜಾಂಚಿ ಸ್ವಾಮಿ ಗೋವಿಂದ್ ದೇವ್ ಗಿರಿ ಮಹಾರಾಜ್ ಅವರು ಪ್ರಕಟಿಸಿದ ಹೇಳಿಕೆಯಲ್ಲಿ, ರಾಮ ಮಂದಿರ ವಿಚಾರದಲ್ಲಿ ಇತ್ತೀಚೆಗಿನ ಬೆಳವಣಿಗೆಗಳಿಂದ ಆಘಾತಕ್ಕೆ ಒಳಗಾಗಿದ್ದೇವೆ, ನೊಂದಿದ್ದೇವೆ. ಪಾರದರ್ಶಕ ತನಿಖೆ ನಡೆಸಲಾಗುವುದು. ಭಕ್ತರ ನಂಬಿಕೆಯನ್ನು ಪುನಸ್ಥಾಪಿಸುವ ಕುರಿತ ಖಚಿತಪಡಿಸಲು ಟ್ರಸ್ಟ್ ಬದ್ಧವಾಗಿದೆ. ಭಕ್ತರು ಶ್ರೀರಾಮನಿಗೆ ಸಲ್ಲಿಸಿದ ಬೆಳ್ಳಿ ಇಟ್ಟಿಗೆಗಳು, ಆಭರಣಗಳು ಸೇರಿದಂತೆ ಎಲ್ಲಾ ಬೆಲೆಬಾಳುವ ವಸ್ತುಗಳು ನಿಜವಾದ ಲೆಕ್ಕಸಮೇತ ಸುರಕ್ಷಿತವಾಗಿವೆ. ಭವಿಷ್ಯದಲ್ಲಿ ಇಂತಹ ಯಾವುದೇ ದುರದೃಷ್ಟಕರ ಪರಿಸ್ಥಿತಿ ಉದ್ಭವಿಸದಂತೆ ನಾವು ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಮಹಾರಾಜ್ ಭರವಸೆ ನೀಡಿದ್ದಾರೆ.

10 ಬೋಗಿಗಳ ರೈಲು ಜಿಂದ್-ಸೋನಿಪತ್ ಮಾರ್ಗದಲ್ಲಿ ಸಂಚಾರ

ಹೈಡ್ರೋಜನ್ ರೈಲು ಸಂಚಾರಕ್ಕೆ ಅನುಮತಿ

ಲಖನೌ: ದೇಶದಲ್ಲಿ ಹಸಿರು ರೈಲು ಪ್ರಯಾಣ ಹಾಗೂ ಸ್ವಚ್ಛತೆಗೆ ಉತ್ತೇಜಿಸುವ ಉದ್ದೇಶದಿಂದ ದೇಶದ ಮೊದಲ ಸ್ವದೇಶಿ ಹೈಡ್ರೋಜನ್ ರೈಲಿಗೆ ಭಾರತೀಯ ರೈಲ್ವೆ ಕಾರ್ಯಾಚರಣಾ ಅನುಮತಿಯನ್ನು ನೀಡಿದೆ. ದೇಶದ ಮೊದಲ ಹೈಡ್ರೋಜನ್ ಇಂಧನ ಬ್ಯಾಟರಿ ಆಧಾರಿತ ರೈಲಾಗಿದ್ದು, ಜಿಂದ್-ಸೋನಿಪತ್ ಮಾರ್ಗದಲ್ಲಿ ಸಂಚರಿಸಲಿದೆ. ಹೈಡ್ರೋಜನ್ ರೈಲೆಂದರೆ ವೇಗದಲ್ಲಿ ಸಂಚರಿಸುವ ವಿದ್ಯುತ್ ಸ್ಥಾವರವಿದ್ದಂತೆ. ಈ 10 ಬೋಗಿಗಳ ರೈಲು ತಲಾ 1,200 ಕಿವ್ಯಾಟ್ ವಿದ್ಯುತ್ ಉತ್ಪಾದಿಸುವ ಎರಡು ಡ್ರೈವಿಂಗ್ ಕಾರುಗಳನ್ನು ಹೊಂದಿದೆ. ಅಂದರೆ ಇದು ಒಟ್ಟು 2,400 ಕಿವ್ಯಾಟ್ ವಿದ್ಯುತ್ ಉತ್ಪಾದಿಸುತ್ತದೆ. ಉಷ್ಣ ಮತ್ತು ನೀರಿನ ಆವಿಯನ್ನಷ್ಟೇ ಹೊರಸೂಸುವುದರಿಂದ ಇದು ಸಂಪೂರ್ಣ ಕಾರ್ಬನ್ ಮುಕ್ತವಾಗಿದೆ.

ಸುರಕ್ಷತೆ ಮತ್ತು ಶೇಖರಣೆ : ರೈಲಿನಲ್ಲಿ 54 ಹೈಡ್ರೋಜನ್ ಸಿಲಿಂಡರ್‌ಗಳು, ಅತ್ಯಾಧುನಿಕ ಸೋರಿಕೆ ಮತ್ತು ಬೆಂಕಿ ಪತ್ತೆಹಚ್ಚುವ ಉಪಕರಣಗಳು ಇರಲಿದ್ದು, ಜಿಂದ್‌ನಲ್ಲಿ ಇಂಧನ ಬಂಕ್ ನಿರ್ಮಿಸಲಾಗಿದೆ. ಇದು ಎಲ್ಲಾ ರೀತಿಯ ಸುರಕ್ಷತೆ ನೀಡಲಿದ್ದು, ಹೈಡ್ರೋಜನ್ ರೈಲಿನ ತಡೆರಹಿತ ಕಾರ್ಯಾಚರಣೆಯನ್ನು ಖಚಿತಪಡಿಸಲಿದೆ. ಈ ರೈಲಿನಲ್ಲಿ ಶಬ್ದ ಮಾಲಿನ್ಯ ಇರುವುದಿಲ್ಲ.

ಸ್ವದೇಶಿ ನಿರ್ಮಿತ (ಮೇಡ್ ಇನ್ ಇಂಡಿಯಾ): ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮನಿರ್ಭರ(ಸ್ವಾವಲಂಬಿ) ಭಾರತ ಉಪಕ್ರಮದ ಅನ್ವಯ ಸಂಪೂರ್ಣ ದೇಶೀಯ ನಿರ್ಮಾಣ ಮತ್ತು ವಿನ್ಯಾಸವನ್ನು ಹೊಂದಿದೆ. ಇದು ಮುಂದಿನ ತಲೆಮಾರಿನ ಸುಸ್ಥಿರ ರೈಲ್ವೆ ತಂತ್ರಜ್ಞಾನದ ಸಾಮರ್ಥ್ಯವನ್ನು ಪ್ರದರ್ಶಿಸಲಿದೆ.



- ವೇಗ: ಪ್ರತಿ ಗಂಟೆಗೆ 120ರಿಂದ 140 ಕಿ.ಮೀ.
- ವಿದ್ಯುತ್ ಔಟ್‌ಪುಟ್: 2,400 ಕಿವ್ಯಾಟ್
- ಹಾರ್ಸ್ ಪವರ್: 3,200ರಿಂದ 3,220 ಎಚ್‌ಪಿ
- ಬೋಗಿಗಳು: 10
- ಕಾರ್ಬನ್ ಅಂಶ: ಸಂಪೂರ್ಣ ಕಾರ್ಬನ್ ಮುಕ್ತ
- ಸಂಚಾರ ಮಾರ್ಗ: ಜಿಂದ್ -ಸೋನಿಪತ್, ಹರ್ಯಾಣ
- ಇಂಧನ ಬಂಕ್: ಜಿಂದ್
- ಮೈಲೇಜ್: 250 ಕಿ.ಮೀ.
- ಹೈಡ್ರೋಜನ್: 54 ಸಿಲಿಂಡರ್‌ಗಳು

ರಾಮಮಂದಿರ ದೇಣಿಗೆ ದುರುಪಯೋಗ

ಲಪಟಾಯಿಸಿದ್ದ 79 ಲಕ್ಷ ರೂ.ವಶ

ಅಯೋಧ್ಯೆ: ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ದೇಣಿಗೆ ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಬಂಧಿಸಲಾದ 8 ಆರೋಪಿಗಳನ್ನು ಜೂ.29 ರವರೆಗೆ ನ್ಯಾಯಾಲಯ ಪೊಲೀಸ್ ಕಸ್ಟಡಿಗೆ ನೀಡಿದೆ, ಈ ಅವಧಿಯಲ್ಲಿ ತನಿಖಾಧಿಕಾರಿಗಳು ಅವರನ್ನು ವಿಚಾರಣೆ ಮುಂದುವರಿಸಲಿದ್ದಾರೆ. ಬಂಧಿತರಿಂದ 79.85ಲಕ್ಷ ರೂ.ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪ್ರಾಸಿಕ್ಯೂಷನ್ ಅಧಿಕಾರಿ ಕೆ.ಸಿ.ವರ್ಮಾ ತಿಳಿಸಿದ್ದಾರೆ. ಆರೋಪಿಗಳು ಸಾರ್ವಜನಿಕ ಸೇವಕರಾಗಿದ್ದು, ಆರು ಮಂದಿ ಬ್ಯಾಂಕ್ ಉದ್ಯೋಗಿಗಳಾಗಿದ್ದಾರೆ. ಇವರನ್ನು ಬ್ಯಾಂಕ್ ದೇವಾಲಯದಲ್ಲಿ ಸ್ವೀಕರಿಸಿದ ನಗದು ದೇಣಿಗೆಗಳನ್ನು ಎಣಿಸಲು ನಿಯೋಜಿಸಿತ್ತು. ಅವರು ಬ್ಯಾಂಕಿನಿಂದ ವೇತನ ಪಡೆಯುತ್ತಿದ್ದರು. ಇನ್ನೊಬ್ಬ ಆರೋಪಿ ಟಿನ್ನು ಯಾದವ್ ಅವರು ಮಂದಿರ ಟ್ರಸ್ಟಿನ ಕಾರ್ಯದರ್ಶಿಯಾಗಿದ್ದ ಚಂಪತ್ ರಾಯ್ ಅವರ ಮಾಜಿ ಕಾರು ಚಾಲಕನಾಗಿದ್ದ.

ಈ ಆರೋಪಿಗಳು ನಗದು ಎಣಿಕೆ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗದಂತೆ ಒಬ್ಬ ಅಡ್ಡಲಾಗಿ ನಿಂತರೆ, ಇನ್ನೊಬ್ಬ ಹುಂಡಿಯಿಂದ ಎಣಿಕೆಗೆ ತೆಗೆದ ಹಣವನ್ನು ಎಗರಿಸುತ್ತಿದ್ದ. ಮತ್ತೊಂದು ತಂಡ ಬಂಡಲ್‌ನೊಳಗೆ ಹೆಚ್ಚುವರಿ ನೋಟು ಸಿಕ್ಕಿಸಿ ಬ್ಯಾಂಕಿಗೆ ಜಮೆ ಮಾಡುವ ಮುನ್ನ ಅದನ್ನು ಲಪಟಾಯಿಸುತ್ತಿತ್ತಲ್ಲದೆ, ಕಡಿಮೆ ಲೆಕ್ಕ ತೋರಿಸುತ್ತಿತ್ತು. ಇನ್ನೊಂದು ತಂಡ ದೇಗುಲದ ಶೌಚಾಲಯದೊಳಗೆ ಅದನ್ನು ಬಚ್ಚಿಟ್ಟು ಬಳಿಕ ತಮ್ಮೊಳಗೆ ಹಂಚಿಕೊಳ್ಳುವ ಕೆಲಸ ಮಾಡುತ್ತಿತ್ತು

ಗುಪ್ತ ಕ್ಯಾಮರಾ ಇಟ್ಟ ಆಡಳಿತ ಮಂಡಳಿ- ಬಯಲಾಯ್ತು ಅಕ್ರಮ !: ದೇವಸ್ಥಾನದಿಂದ ನಿಯಮಿತವಾಗಿ ಬ್ಯಾಂಕಿಗೆ ಜಮೆ ಮಾಡಲಾಗುತ್ತಿದ್ದ ಕಾಣಿಕೆ ಹಣದ ಕಡತಗಳ ಪರಿಶೀಲನೆಯ ವೇಳೆ, ಎಲ್ಲೋ ವ್ಯತ್ಯಾಸವಾಗುತ್ತಿರುವ ಬಗ್ಗೆ ಸಂಶಯ ಬಂದಿದೆ.6-7ಲಕ್ಷ ರೂ.ಗಳವರೆಗೆ ಸಂಗ್ರಹಿಸಬಹುದಾದ ಹುಂಡಿಯಲ್ಲಿ 500ರೂ. ಮುಖಬೆಲೆಯ ನೋಟುಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಕಂಡುಬಂದಿದೆ. ಇದರಿಂದ ತೀವ್ರ ಅನುಮಾನಗೊಂಡ ಆಡಳಿತ ಮಂಡಳಿ ವಂಚನೆಯ ಪತ್ತೆಗಾಗಿ ಹಣಲೆಕ್ಕ ಮಾಡುತ್ತಿದ್ದ ಕೋಣೆಯೊಳಗೆ ರಹಸ್ಯ ಕ್ಯಾಮರಾಗಳನ್ನು ಅಳವಡಿಸಿತು.

ಕಿರುಸುದ್ದಿ

ಸಿಎ ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆ



ಪುತ್ತೂರು: ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯ ನಡೆಸಿದ 2026ರ ಸಿಎ ಅಂತಿಮ ಪರೀಕ್ಷೆಯಲ್ಲಿ ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜಿನ ಹಿರಿಯ ವಿದ್ಯಾರ್ಥಿಗಳಾದ ಕೆ. ನಿಶ್ಚಯ್ ಕುಡ್ವ ಮತ್ತು ಸ್ಕಂದ ಕೃಷ್ಣ ಸಿ. ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ. ಕೆ. ನಿಶ್ಚಯ್ ಕುಡ್ವ ಸಾಮೇತಡ್ಕದ ನಿವಾಸಿ ಕೆ. ನಾರಾಯಣ ಕುಡ್ವ ಹಾಗೂ ಕೆ. ನಂದಿತಾ ಕುಡ್ವ ದಂಪತಿಯ ಪುತ್ರ ಮತ್ತು ಸ್ಕಂದಕೃಷ್ಣ ಸಿ. ಅಮರಪಡ್ನೂರು ನಿವಾಸಿ ಶಿವಪ್ರಸಾದ್ ಮತ್ತು ವಿದ್ಯಾಸರಸ್ವತಿ ದಂಪತಿಯ ಪುತ್ರ.

ಎಸ್‌ಎಸ್ ಇನ್ನೋವೇಶನ್‌ಗೆ 'ಔಟ್ ಸ್ಟ್ಯಾಂಡಿಂಗ್' ಪ್ರಶಸ್ತಿ

ಮಂಗಳೂರು: ಭಾರತದ ವೈದ್ಯಕೀಯ ತಂತ್ರಜ್ಞಾನ ಕ್ಷೇತ್ರಕ್ಕೆ ಜಾಗತಿಕ ಮಟ್ಟದಲ್ಲಿ ಅಭೂತಪೂರ್ವ ಮನ್ನಣೆ ಸಿಕ್ಕಿದೆ. ವಿಶ್ವದ ಅತ್ಯಂತ ಪ್ರತಿಷ್ಠಿತ ಸರ್ಜಿಕಲ್ ರೋಬೋಟಿಕ್ಸ್ ಟೆಕ್ನಾಲಜಿ (ಎಸ್‌ಆರ್‌ಟಿ) ಇಂಡಸ್ಟ್ರಿ ಅವಾರ್ಡ್ಸ್ 2026ರಲ್ಲಿ ಭಾರತದ ಎಸ್‌ಎಸ್ ಇನ್ನೋವೇಶನ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯು ಅತ್ಯುನ್ನತ ಔಟ್ ಸ್ಟ್ಯಾಂಡಿಂಗ್ ಕಂಪನಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ಈ ವಿಭಾಗದಲ್ಲಿ ಇಂತಹದೊಂದು ಅತ್ಯುನ್ನತ ಗೌರವ ಪಡೆದ ಭಾರತದ ಮೊದಲ ಕಂಪನಿ ಎಂಬ ಹೆಗ್ಗಳಿಕೆಗೆ ಈ ಸಂಸ್ಥೆ ಪಾತ್ರವಾಗಿದೆ. ಎಸ್‌ಆರ್‌ಟಿ ಇಂಡಸ್ಟ್ರಿ ಅವಾರ್ಡ್ಸ್ ನಲ್ಲಿ ಔಟ್‌ಸ್ಟ್ಯಾಂಡಿಂಗ್ ಕಂಪನಿ ಪ್ರಶಸ್ತಿ ಗೆದ್ದಿರುವುದು ನಮ್ಮ ಸಂಸ್ಥೆಗೆ ಮತ್ತು ದೇಶಕ್ಕೆ ಹೆಮ್ಮೆಯ ವಿಷಯ. ಅತ್ಯಾಧುನಿಕ, ಸುಲಭವಾಗಿ ಲಭ್ಯವಾಗುವ ಮತ್ತು ಕೈಗೆಟುಕುವ ದರದ ಸರ್ಜಿಕಲ್ ರೋಬೋಟಿಕ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ನಮ್ಮ ಬದ್ಧತೆಗೆ ಸಿಕ್ಕ ಮನ್ನಣೆ ಇದಾಗಿದೆ ಎಂದು ಎಸ್‌ಎಸ್ ಇನ್ನೋವೇಶನ್ಸ್ ನ ಸಂಸ್ಥಾಪಕ ಅಧ್ಯಕ್ಷ ಮತ್ತು ಸಿಇಒ ಡಾ.ಸುಧೀರ್ ಶ್ರೀವಾಸ್ತವ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿವೃತ್ತ ಲೈನ್‌ಮ್ಯಾನ್ ನೇಣಿಗೆ ಶರಣು

ಉಡುಪಿ: ದೀರ್ಘಕಾಲದ ಮಾನಸಿಕ ಕಾಯಿಲೆಯಿಂದ ಮನನೊಂದಿದ್ದ ಕೆ.ಇ.ಬಿ ನಿವೃತ್ತ ಲೈನ್‌ಮ್ಯಾನ್ ಒಬ್ಬರು ಮನೆಯ ಅಂಗಳದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಕಸಬಾ ಗ್ರಾಮದ ಪೆರ್ವಾಜೆ ರಸ್ತೆಯಲ್ಲಿ ಸಂಭವಿಸಿದೆ. ಪೆರ್ವಾಜೆ ರಸ್ತೆ ನಿವಾಸಿ ಸುಂದರ ಮೊಯಿಲಿ (75) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. ಇವರು ಕೆ.ಇ.ಬಿ ಯಲ್ಲಿ ಲೈನ್‌ಮ್ಯಾನ್ ಆಗಿ ಕೆಲಸ ಮಾಡಿ ನಿವೃತ್ತರಾಗಿದ್ದರು. ಕಳೆದ ಸುಮಾರು 20 ವರ್ಷಗಳಿಂದ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದ ಇವರಿಗೆ ಮಂಗಳೂರಿನ ಆರ್ಕುಳದಲ್ಲಿರುವ ಮನಸ್ವಿನಿ ಆಸ್ಪತ್ರೆಯಲ್ಲಿ ನಿರಂತರ ಚಿಕಿತ್ಸೆ ಕೊಡಿಸಲಾಗುತ್ತಿತ್ತಾದರೂ ಕಾಯಿಲೆ ಗುಣಮುಖವಾಗಿರಲಿಲ್ಲ. ಇದರಿಂದ ತೀವ್ರ ಬೇಸತ್ತಿದ್ದ ಅವರು ಜೂನ್ 27ರಂದು ಮನೆಯ ಅಂಗಳದ ಶೀಟ್‌ನ ಮರದ ಪಕ್ಕಾಸಿಗೆ ಲುಂಗಿಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತರ ಮಗ ಪ್ರದೀಪ್ ಕುಮಾರ್ (43) ನೀಡಿದ ದೂರಿನಂತೆ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬ್ಯಾಂಕ್ ಮ್ಯಾನೇಜರ್ ಹೊಳೆಯಲ್ಲಿ ಶವವಾಗಿ ಪತ್ತೆ

ಉಡುಪಿ: ದಿನಸಿ ತರಲೆಂದು ಸ್ಕೂಟರ್‌ನಲ್ಲಿ ಮನೆಯಿಂದ ಹೊರಟಿದ್ದ ಕಾರ್ಕಳ ಕೆನರಾ ಬ್ಯಾಂಕ್‌ನ ಮ್ಯಾನೇಜರ್ ರಿಯಾಜ್ ಕೆ.ಕೆ (49) ಅವರ ಮೃತದೇಹ ಉದ್ಯಾವರ ಪಾಪನಾಶಿನಿ ಹೊಳೆಯಲ್ಲಿ ಪತ್ತೆಯಾಗಿದೆ. ಮೂಲತಃ ಕೇರಳದ ಕಣ್ಣೂರು ಜಿಲ್ಲೆಯವರಾದ ರಿಯಾಜ್, ಪ್ರಸ್ತುತ ಉಡುಪಿಯ ತೋನ್ಸೆ ರೆಸಿಡೆನ್ಸಿಯಲ್ಲಿ ಕುಟುಂಬದೊಂದಿಗೆ ವಾಸವಿದ್ದರು. ಈ ಮುನ್ನ ಮಣಿಪಾಲ ಕೆನರಾ ಬ್ಯಾಂಕ್ ನಲ್ಲಿದ್ದ ಇವರು ಒಂದು ತಿಂಗಳ ಹಿಂದೆಯಷ್ಟೇ ಕಾರ್ಕಳ ಶಾಖೆಗೆ ವರ್ಗಾವಣೆಗೊಂಡಿದ್ದರು. ಉಡುಪಿಯಿಂದ ಪ್ರತಿದಿನ ಕಾರ್ಕಳಕ್ಕೆ ಓಡಾಡುತ್ತಿದ್ದ ರೆನ್ನಲಾಗಿದೆ. ಜೂನ್ 26ರಂದು ಮೊಹರಂ ರಜೆಯಿದ್ದ ಕಾರಣ ಬೆಳಿಗ್ಗೆ 11 ಗಂಟೆಗೆ ಮೊಬೈಲ್ ಅನ್ನು ಮನೆಯಲ್ಲೇ ಬಿಟ್ಟು ದಿನಸಿ ತರಲು ಸ್ಕೂಟರ್‌ನಲ್ಲಿ ಹೊರಟವರು ರಾತ್ರಿಯಾದರೂ ಮರಳಿ ಬಂದಿರಲಿಲ್ಲ. ಜೂನ್ 27ರ ರಾತ್ರಿ 1.30ರ ಸುಮಾರಿಗೆ ಅವರ ಸ್ಕೂಟರ್ ಹಾಗೂ ಮೃತದೇಹ ಉದ್ಯಾವರ ಸೇತುವೆ ಬಳಿಯ ಪಾಪನಾಶಿನಿ ಹೊಳೆಯಲ್ಲಿ ಪತ್ತೆಯಾಗಿದೆ. ಅವರು ಆಕಸ್ಮಿಕವಾಗಿ ಬಿದ್ದು ಅಥವಾ ಆತ್ಮಹತ್ಯೆ ಮಾಡಿಕೊಂಡು ನೀರಿನಲ್ಲಿ ಮುಳುಗಿ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ. ಪತ್ನಿ ರಸೀನಾ ನೀಡಿದ ದೂರಿನಂತೆ ಕಾಪು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ಉಡುಪಿಯ ಪಟ್ಲದಲ್ಲಿರುವ ಯು ಎಸ್ ನಾಯಕ್ ಪ್ರೌಢ ಶಾಲೆಯ ನೂರು ವಿದ್ಯಾರ್ಥಿಗಳಿಗೆ ಉಚಿತವಾಗಿ ಸಂಸ್ಕಾರ ನೋಟ್ ಪುಸ್ತಕಗಳನ್ನು ವಿತರಿಸುವ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯಕರ್ತರಾದ ಸೌ. ರತ್ನ, ಸೌ. ಲಲಿತಾ, ಸೌ ಸುವರ್ಣ ಉಪಸ್ಥಿತರಿದ್ದರು. ಕಾರ್ಯಕ್ರಮದ ಯಶಸ್ವಿ ಆಯೋಜನೆಗೆ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗದವರು ಉತ್ತಮ ಸಹಕಾರ ನೀಡಿದರು.

ಮಾಣಿ–ಸಂಪಾಜೆ ಚತುಷ್ಪಥ ಹೆದ್ದಾರಿ ಯೋಜನೆ

2 ವರ್ಷದೊಳಗೆ ಟೆಂಡರ್ ಹಂತಕ್ಕೆ

ಪುತ್ತೂರು: ಮಾಣಿ–ಸಂಪಾಜೆ ಚತುಷ್ಪಥ ಹೆದ್ದಾರಿ ಅಭಿವೃದ್ಧಿಯ ದೃಷ್ಟಿಯಿಂದ ದ.ಕ. ಸಂಸದರೊಂದಿಗೆ ಚರ್ಚಿಸಿರುವ ಜತೆಗೆ ಹೆದ್ದಾರಿ ಇಲಾಖೆಯ ಪ್ರಾದೇಶಿಕ ಮುಖ್ಯಸ್ಥರನ್ನು ಭೇಟಿ ಮಾಡಿ ಎರಡು ವಾರದೊಳಗೆ ಕೇಂದ್ರಕ್ಕೆ ಡಿಪಿಆರ್ ಸಲ್ಲಿಸಿ ಅಲೈನ್ಮೆಂಟ್ ಅನುಮೋದನೆಯ ಬಳಿಕ ಹೆದ್ದಾರಿ ವಿನ್ಯಾಸದ ಕುರಿತು ನಮ್ಮ ಜತೆ ಚರ್ಚಿಸಿ ಅಂತಿಮ ಅನುಮೋದನೆಗೆ ಕಳುಹಿಸಲು ತಿಳಿಸಲಾಗಿದ್ದು, ಯೋಜನೆ ಅನುಷ್ಠಾನಕ್ಕೆ 2 ವರ್ಷದೊಳಗೆ ಭೂಸ್ವಾಧೀನಗೊಂಡು ಟೆಂಡರ್ ಹಂತಕ್ಕೆ ಹೋಗಬೇಕು ಎಂಬುದು ನಮ್ಮ ಯೋಚನೆಯಾಗಿದೆ ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಶನಿವಾರ ಪುತ್ತೂರಿನಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಮಾಣಿ–ಸಂಪಾಜೆ ಚತುಷ್ಪಥ ಯೋಜನೆಯ ಪ್ರಸ್ತಾವನೆ ಲೋಕೋಪಯೋಗಿ ಇಲಾಖೆಯಿಂದ ರಾಷ್ಟ್ರೀಯ ಹೆದ್ದಾರಿಗೆ ಹಸ್ತಾಂತರ ಮಾಡಿ 3 ವರ್ಷಗಳಾಗಿದ್ದು, ಅದನ್ನು ವಾರ್ಷಿಕ ಯೋಜನೆಯಲ್ಲಿ ಸೇರಿಸುವಂತೆ ಡಿಪಿಆರ್ ಮಾಡಲು ಮೂರು ವರ್ಷಗಳಿಂದ ಪ್ರಯತ್ನ ನಡೆಸುತ್ತಿದ್ದೇನೆ. ಅದರ ಡಿಪಿಆರ್‌ಗೆ ಸೂಚನೆ ಬಂದ ಬಳಿಕ ಅದರ ಟೆಂಡರ್ ಕರೆಯಲು 6 ತಿಂಗಳು ಕಳೆದಿದ್ದು, ಆದರೆ ಡಿಪಿಆರ್‌ಗೆ ಕೇಂದ್ರ ಸರಕಾರದಿಂದ ಅನುದಾನ ಮಂಜೂರಾತಿಗೆ ಬಾಕಿ ಇತ್ತು. ಕೇಂದ್ರದಿಂದ ಅನುದಾನ ಬಾರದ ಹಿನ್ನೆಲೆಯಲ್ಲಿ ಕಳೆದ ವರ್ಷ ಲೋಕೋಪಯೋಗಿ ಇಲಾಖಾ ಸಚಿವ ಸತೀಶ್ ಜಾರಕಿಹೊಳಿ ಅವರು ಪುತ್ತೂರಿಗೆ ಬಂದಾಗ ನಾನು ಹಾಗೂ ಸಂಸದ ಕ್ಯಾ.ಬ್ರಿಜೇಶ್ ಚೌಟ ಅವರು ವಿನಂತಿ ಮಾಡಿದ ಕಾರಣಕ್ಕೆ ಅವರು ಡಿಪಿಆರ್ ಗೆ ರೂ. 3.19 ಕೋಟಿ ಮಂಜೂರಾತಿ ಮಾಡಿದ್ದರು. ಅದಕ್ಕೆ ತಾತ್ಕಾಲಿಕ ಡಿಪಿಆರ್ ಸಿದ್ಧಗೊಂಡರೂ, ಅಂತಿಮ ಡಿಪಿಆರ್ ಆಗಿಲ್ಲ. ಹೀಗಾಗಿ ಹೆದ್ದಾರಿ ಇಲಾಖೆಯ ಪ್ರಾದೇಶಿಕ ಮುಖ್ಯಸ್ಥ ರನ್ನು ಭೇಟಿಯಾಗಿ ಮಾತುಕತೆ ನಡೆಸಲಾಗಿದೆ ಎಂದರು.

ಚತುಷ್ಪಥ ಹೆದ್ದಾರಿ ಶಾಶ್ವತವಾಗಿರಬೇಕು ಎನ್ನುವ ನಿಟ್ಟಿನಲ್ಲಿ ನಾವು ಪುತ್ತೂರಿನ ನೆಹರೂನಗರ, ಮಂಜಲ್ಪಡ್ಪು ಸರ್ಕಲ್ ಹಾಗೂ ದರ್ಬೆ ಸರ್ಕಲ್ ಬಳಿ ಫ್ಲೈಓವರ್‌ಗೆ ಬೇಡಿಕೆ ಇಟ್ಟಿದ್ದೇವೆ ಎಂದು ಶಾಸಕರು ತಿಳಿಸಿದರು.

ಎಸ್‌ಸಿ–ಎಸ್‌ಟಿ ಕುಂದುಕೊರತೆ ಸಭೆ | ಫುಟ್‌ಪಾತ್ ಪಾದಚಾರಿಗಿರಲಿ

ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲು ಆಗ್ರಹ

ಮಂಗಳೂರು: ಜಿಲ್ಲೆಯ ದೂರದ ಪ್ರದೇಶದಿಂದ ಮಂಗಳೂರಿಗೆ ಆಗಮಿಸುವ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸಿಗುತ್ತಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ಪಿಜಿಗಳಿಗೆ ದುಬಾರಿ ದರ ಪಾವತಿಸುವಂತಾಗಿದೆ. ತಕ್ಷಣ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಒದಗಿಸಬೇಕು ಎಂದು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮುಖಂಡರು ಆಗ್ರಹಿಸಿದ್ದಾರೆ.

ಮಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಕಾನೂನು ಸುವ್ಯವಸ್ಥೆ ಡಿಸಿಪಿ ಮಿಥುನ್ ಎಚ್.ಎನ್. ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಎಸ್‌ಸಿ – ಎಸ್‌ಟಿ ಕುಂದುಕೊರತೆ ಸಭೆಯಲ್ಲಿ ಈ ಒತ್ತಾಯ ಕೇಳಿಬಂತು.

ಶಾಲೆ– ಕಾಲೇಜುಗಳು ಆರಂಭವಾಗಿ ತಿಂಗಳಾಗುತ್ತಿದೆ. ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಆಗಿಲ್ಲ. ಇದರಿಂದ ಜಿಲ್ಲೆಯ ಸುಳ್ಯ, ಪುತ್ತೂರು, ಬೆಳ್ತಂಗಡಿ ಸೇರಿದಂತೆ ದೂರದ ಪ್ರದೇಶಗಳ ಹಾಗೂ ಅನ್ಯ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುತ್ತಿದೆ. ಶಾಲೆ ಆರಂಭದ ಸಂದರ್ಭದಲ್ಲೇ ಇಲಾಖೆಗಳು ಹಾಸ್ಟೆಲ್ ಸೌಕರ್ಯ ಕಲ್ಪಿಸುವ ಬಗ್ಗೆ ಪ್ರಯತ್ನ ಮಾಡದ ಪರಿಣಾಮ ಸಮುದಾಯದ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸುವಂತಾಗಿದೆ ಎಂದು ದಲಿತ ಮುಖಂಡ ಎಸ್.ಪಿ.ಆನಂದ ದೂರಿದರು.

ಈ ಬಗ್ಗೆ ಉತ್ತರಿಸಿದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮಂಗಳೂರು ನಗರ ವ್ಯಾಪ್ತಿಯಲ್ಲಿ ಹಾಸ್ಟೆಲ್‌ಗಳ ಕೊರತೆ ಇದೆ. ಎರಡು ಹೊಸ ಹಾಸ್ಟೆಲ್ ಬೇಕು ಎಂದು ಬೆಂಗಳೂರಿನ ಕೇಂದ್ರ ಕಚೇರಿಗೆ ಪ್ರಸ್ತಾವನೆ ಕಳುಹಿಸಲಾಗಿದೆ ಎಂದರು.



ಶನಿವಾರ ನಡೆದ ಎಸ್‌ಸಿ – ಎಸ್‌ಟಿ ಕುಂದುಕೊರತೆ ಸಭೆ

ಮಂಗಳೂರು ನಗರದಲ್ಲಿ ಫ್ಲೆಕ್ಸ್ ಹಾವಳಿ ಕಡಿಮೆಯಾಗಿದೆ. ಆದರೆ ಹೊರ ವಲಯ, ಗ್ರಾಮಾಂತರ ಭಾಗದಲ್ಲಿ ಇನ್ನೂ ಇದೆ. ಹೆದ್ದಾರಿಯ ಮಧ್ಯದಲ್ಲಿ ಕಟೌಟ್ ರೀತಿ ಅಳವಡಿಸುತ್ತಾರೆ. ಇದರಿಂದ ಅಪಾಯವಾಗುವ ಸಾಧ್ಯತೆಯೂ ಇದೆ. ಫ್ಲೆಕ್ಸ್ ಅಳವಡಿಸದಂತೆ ತಡೆಯಬೇಕು ಎಂದು ಗಿರೀಶ್ ಕುಮಾರ್ ಆಗ್ರಹಿಸಿದರು. ಈ ಬಗ್ಗೆ ಸ್ಥಳೀಯ ಸಂಸ್ಥೆಗಳಿಗೆ ದೂರು ಕೊಡಿ, ಇಲಾಖೆಯಿಂದಲೂ ಪತ್ರ ಬರೆದು ತೆರವಿಗೆ ಸೂಚಿಸಲಾಗುವುದು ಎಂದು ಡಿಸಿಪಿ ರವಿಶಂಕರ್ ತಿಳಿಸಿದರು.

ನಗರದ ಲೇಡಿಗೋಷನ್ ಪ್ರದೇಶ, ರಥಬೀದಿ ಸೇರಿದಂತೆ ವಿವಿಧೆಡೆ ಫುಟ್‌ಪಾತ್‌ನಲ್ಲೇ ವ್ಯಾಪಾರ ಮಾಡುವುದರಿಂದ ಪಾದಚಾರಿಗಳಿಗೆ ಸಮಸ್ಯೆಯಾಗುತ್ತಿದೆ. ಕೆಲವು ಏಜೆಂಟ್‌ಗಳು ವ್ಯಾಪಾರಿಗಳನ್ನು ರಸ್ತೆಯಲ್ಲಿ ವ್ಯಾಪಾರ ಮಾಡಿಸುತ್ತಿದ್ದಾರೆ. ಇವರನ್ನೆಲ್ಲ ತೆರವುಗೊಳಿಸಬೇಕು ಎಂದು ಆನಂದ್ ಆಗ್ರಹಿಸಿದರು. ಉತ್ತರಿಸಿದ ಡಿಸಿಪಿ ರವಿಶಂಕರ್ ಈ ಬಗ್ಗೆ ಪಾಲಿಕೆಗೆ ಪತ್ರ ಬರೆಯಲಾಗಿದೆ. ತೆರವುಗೊಳಿಸಲಿದ್ದಾರೆ ಎಂದರು.

ಜಿನ್ನಪ್ಪ ಬಂಗೇರ ಮಾತನಾಡಿ, ವಾಮಂಜೂರು ಜಂಕ್ಷನ್‌ನಲ್ಲಿ ಹೆದ್ದಾರಿ ಅಗಲೀಕರಣ ಕಾಮಗಾರಿ ನಡೆದ ಬಳಿಕ ಜನರಿಗೆ ರಸ್ತೆ ದಾಟುವುದು ತ್ರಾಸದಾಯಕವಾಗಿದೆ. ವಾರದಲ್ಲಿ 2–3 ಅಪಘಾತವೂ ಆಗುತ್ತಿದೆ. ಸ್ಥಳದಲ್ಲಿ ಪೊಲೀಸ್ ಸಿಬಂದಿ ನಿಯೋಜಿಸಬೇಕು ಎಂದು ಒತ್ತಾಯಿಸಿದರು.

> ▸▸ ಶಾಲೆ– ಕಾಲೇಜುಗಳು ಆರಂಭವಾಗಿ ತಿಂಗಳಾಗುತ್ತಿದೆ. ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಆಗಿಲ್ಲ
>
> ▸▸ ವಾಮಂಜೂರು ಜಂಕ್ಷನ್‌ನಲ್ಲಿ ಹೆದ್ದಾರಿ ಅಗಲೀಕರಣ ಕಾಮಗಾರಿ ನಡೆದ ಬಳಿಕ ಜನರಿಗೆ ರಸ್ತೆ ದಾಟುವುದು ತ್ರಾಸದಾಯಕವಾಗಿದೆ.

ವಾಮಂಜೂರು ಜಂಕ್ಷನ್ ಬಳಿಯ ಬಳಿಯ ಮೈದಾನದಲ್ಲಿ ತಡರಾತ್ರಿವರೆಗೆ ಕ್ರಿಕೆಟ್ ಆಡುತ್ತಾ, ಅಕ್ರಮ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡಬಾರದು. ಇತ್ತೀಚೆಗೆ ಬೈಕ್‌ನ ಲೈಟ್ ಬಿತ್ತು ಎನ್ನುವ ಕಾರಣಕ್ಕೆ ಅಮಾಯಕ ಯುವಕನಿಗೆ ಕ್ರಿಕೆಟ್ ಆಡುತ್ತಿದ್ದವರು ಹಲ್ಲೆ ಮಾಡಿದ್ದಾರೆ ಎಂದು ಆನಂದ್ ತಿಳಿಸಿದರು. ಉತ್ತರಿಸಿದ ಎಸಿಪಿ ಶ್ರೀಕಾಂತ್, ಹಲ್ಲೆಗೆ ಸಂಬಂಧಿಸಿದಂತೆ 8 ಮಂದಿಯನ್ನು ಬಂಧಿಸಲಾಗಿದೆ ಎಂದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಡಿಸಿಪಿ ಮಿಥುನ್ ಅವರು ಭರವಸೆ ನೀಡಿದರು.

ಡಿಸಿಆರ್ ಇ ಎಸ್.ಪಿ. ಸೈಮನ್, ಎಸಿಪಿ ಶ್ರೀಕಾಂತ್, ರವೀಶ್ ನಾಯಕ್, ವಿಜಯಕ್ರಾಂತಿ, ವಿವಿಧ ಠಾಣೆಗಳ ನಿರೀಕ್ಷರು, ದಲಿತ ಸಂಘಟನೆಗಳ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು. ಪಣಂಬೂರು ಠಾಣಾ ನಿರೀಕ್ಷಕ ಸಲೀಂ ಅಬ್ಬಾಸ್ ಪಾನಲಾ ವರದಿ ವಾಚಿಸಿ, ವಂದಿಸಿದರು.

ವಿಠಲಗೌಡನಿಗೆ ಶೋಧ

ಬೆಳ್ತಂಗಡಿ: ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಒಂದು ತಿಂಗಳ ಕಾರಾಗೃಹ ಶಿಕ್ಷೆಗೆ ಒಳಗಾದ ಬಳಿಕ ತಲೆ ಮರೆಸಿಕೊಂಡಿರುವ ಧರ್ಮಸ್ಥಳ ಗ್ರಾಮದ ಪಾಂಗಳ ನಿವಾಸಿ ವಿಠಲ ಗೌಡ ಅವರ ಬಂಧನಕ್ಕೆ ಪೊಲೀಸರು ಜೂ.27ರಂದು ಬೆಳ್ತಂಗಡಿ ತಾಲೂಕಿನ ವಿವಿದೆಡೆ ವ್ಯಾಪಕ ಶೋಧ ನಡೆಸಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಮತ್ತು ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರ ಕುರಿತು ಅವಹೇಳನಕಾರಿಯಾಗಿ ಮಾತನಾಡದಂತೆ ನ್ಯಾಯಾಲಯ ನಿರ್ಬಂಧ ವಿಧಿಸಿದ್ದರೂ ನ್ಯಾಯಾಲಯದ ಆದೇಶ ಉಲ್ಲಂಘಿಸಿ ಮಾತಾಡಿದ ವಿಠಲ ಗೌಡ ಅವರಿಗೆ ಬೆಂಗಳೂರು ನ್ಯಾಯಾಲಯ ಒಂದು ತಿಂಗಳ ಸಜೆ ವಿಧಿಸಿ ನಾಲ್ಕು ತಿಂಗಳ ಹಿಂದೆ ಆದೇಶ ನೀಡಿತ್ತು. ಬಳಿಕ ತಲೆ ಮರೆಸಿಕೊಂಡಿರುವ ವಿಠಲ ಗೌಡ ಸ್ಥಳೀಯ ಪೊಲೀಸರಿಗೂ ಸಿಗದೆ ತಲೆಮರೆಸಿಕೊಂಡಿದ್ದಾನೆ. ಈ ಹಿನ್ನೆಲೆಯಲ್ಲಿ ವಿಠಲ ಗೌಡನನ್ನು ಬಂಧಿಸಲು ಜೂ.27ರಂದು ಬೆಂಗಳೂರಿನಿಂದ ಕೋರ್ಟ್ ಅಧಿಕಾರಿಗಳೊಂದಿಗೆ ಆಗಮಿಸಿರುವ ಪೊಲೀಸರು ವಿವಿಧೆಡೆ ಶೋಧ ನಡೆಸಿ ದ್ದಾರೆ. ವಿಠಲ ಗೌಡ ಮನೆ, ಕುಸುಮಾವತಿ ಯವರ ಮನೆ ಮಹೇಶ್ ಶೆಟ್ಟಿ ತಿಮರೋಡಿ ಮನೆ ಸಹಿತ ಹಲವೆಡೆ ಶೋಧ ನಡೆಸಿ ವಿಠಲ ಗೌಡರ ಬಂಧನಕ್ಕೆ ಪ್ರಯತ್ನನಡೆಸಿದ್ದಾರೆ.

ನ್ಯಾಯಾಲಯದ ಆದೇಶ ಪ್ರಶ್ನಿಸಿ ವಿಠಲ ಗೌಡ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದಾಗಿ ತಿಳಿದು ಬಂದಿದ್ದು ಇದರ ವಿಚಾರಣೆ ಇನ್ನಷ್ಟೇ ನಡೆಯಬೇಕಿದೆ

ಬಿಜೆಪಿ ದ.ಕ.ಜಿಲ್ಲಾ ಆರ್ಥಿಕ ಪ್ರಕೋಷ್ಠ ಸಂಚಾಲಕ ಸಿಎ ಎಸ್.ಎಸ್. ನಾಯಕ್

ಸಾಲದ ಬೆಳವಣಿಗೆ ಶೇ.23.5ಕ್ಕೇರಿಕೆ

ಮಂಗಳೂರು: ದೇಶದಲ್ಲಿ ಎಂಎಸ್ ಎಂಇಗಳಿಗೆ 2014ರಲ್ಲಿ 8.5 ಲಕ್ಷ ಕೋಟಿ ರೂ. ಇದ್ದ ಬ್ಯಾಂಕ್ ಸಾಲ ಪ್ರಸ್ತುತ 2.50 ಕೋಟಿಗೂ ಹೆಚ್ಚು ಖಾತೆಗಳಲ್ಲಿ 35 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಒಟ್ಟು ಬ್ಯಾಂಕ್ ಸಾಲದ ಕನಿಷ್ಠ ಶೇ. 7.5ರಷ್ಟು ಸೂಕ್ಷ್ಮ ಉದ್ಯಮಗಳಿಗೆ ಮಾತ್ರ ಹಂಚಿಕೆಯಾಗಿದೆ. 2025–26ನೇ ಹಣಕಾಸು ವರ್ಷದಲ್ಲಿ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆ ಬ್ಯಾಂಕ್ ಸಾಲ ಶೇ.33ರಷ್ಟು ಹೆಚ್ಚಾಗಿದೆ. 2025–26ನೇ ಹಣಕಾಸು ವರ್ಷದಲ್ಲಿ ಎಂಎಸ್‌ಎಂಇ ವಲಯಕ್ಕೆ ಬ್ಯಾಂಕ್ ಸಾಲದ ಬೆಳವಣಿಗೆ ಶೇ.23.5ಕ್ಕೆ ಏರಿದೆ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಆರ್ಥಿಕ ಪ್ರಕೋಷ್ಠ ಸಂಚಾಲಕ ಸಿಎ ಎಸ್.ಎಸ್. ನಾಯಕ್ ಹೇಳಿದರು.

ಜೂ.27ರಂದು ಅಂತಾರಾಷ್ಟ್ರೀಯ ಎಂಎಸ್‌ಎಂಇ ದಿನಾಚರಣೆ ಹಿನ್ನೆಲೆಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಎಂಎಸ್‌ಎಂಇ ವಲಯಕ್ಕೆ ಕೇಂದ್ರ ಸರಕಾರ ಹಲವು ಪ್ರಮುಖ ಯೋಜನೆ ಗಳನ್ನು ರೂಪಿಸಿದೆ. ಸೂಕ್ಷ್ಮ ಉದ್ಯಮಗಳಿಗೆ ಕ್ರೆಡಿಟ್ ಕಾರ್ಡ್ ಯೋಜನೆ (ಸಿಸಿಎಂಇ), ಪ್ರಧಾನ ಮಂತ್ರಿ ಮುದ್ರಾ ಯೋಜನೆ, ಪ್ರಧಾನ ಮಂತ್ರಿ ಉದ್ಯೋಗ ಸೃಷ್ಟಿ ಕಾರ್ಯಕ್ರಮ (ಪಿಎಂಇಜಿಪಿ), ಪಿಎಂಎಫ್ ಎಂಇ ಯೋಜನೆ, ಸಾಂಪ್ರದಾಯಿಕ ಕುಶಲಕರ್ಮಿಗಳಿಗೆ ಮತ್ತು ಕರಕುಶಲ ವೃತ್ತಿದಾರರಿಗೆ ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ, ನಗರ ಬೀದಿ ವ್ಯಾಪಾರಿಗಳಿಗೆ ಪ್ರಧಾನ ಮಂತ್ರಿ ಸ್ವನಿಧಿ ಯೋಜನೆ, ತುರ್ತು ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆ (ಇಸಿಎಲ್‌ಜಿಎಸ್ 5.0), 59 ನಿಮಿಷಗಳಲ್ಲಿ ಸಾಲ, ಜಿಎಸ್‌ಟಿ ವ್ಯವಹಾರ ಸಾಲ, ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆ, ಸ್ಟಾರ್ಟ್ ಅಪ್ ಇಂಡಿಯಾ ಯೋಜನೆ, ಸಿಜಿಟಿಎಂಎಸ್‌ಇ ಯೋಜನೆ, ಮ್ಯೂಚುಯಲ್ ಕ್ರೆಡಿಟ್ ಗ್ಯಾರಂಟಿ ಯೋಜನೆ (ಎಂಸಿಜಿಎಸ್ –ಎಂಎಸ್‌ಎಂಇ), ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆ, ಜವಳಿ ಉದ್ಯಮಕ್ಕೆ ಟಿಯುಎಫ್ ಯೋಜನೆ, ಕೃಷಿ ಮೂಲಸೌಕರ್ಯ ನಿಧಿ, ಟ್ರೆಡ್ಸ್ ಯೋಜನೆ, ಸಿಡ್ಬಿ ಯೋಜನೆಗಳ ಮೂಲಕ ಕೇಂದ್ರ ಸರಕಾರ ಎಂಎಸ್‌ಎಂಇಗಳ ಬಲವರ್ಧನೆಗೆ ಕ್ರಮ ಕೈಗೊಂಡಿದೆ ಎಂದು ವಿವರಿಸಿದರು.



ಮೇಕ್ ಇನ್ ಇಂಡಿಯಾ, ಮೇಡ್ ಇನ್ ಇಂಡಿಯಾ, ವೋಕಲ್ ಫಾರ್ ಲೋಕಲ್, ಒನ್ ಡಿಸ್ಟ್ರಿಕ್ಟ್ ಒನ್ ಪ್ರಾಡಕ್ಟ್, ಡಿಜಿಟಲ್ ಇಂಡಿಯಾದಂತಹ ಹಲವಾರು ಸರಕಾರಿ ನೀತಿಗಳು ದೇಶದಲ್ಲಿ ಎಂಎಸ್‌ಎಂಇ ಬೆಳವಣಿಗೆಯನ್ನು ಪ್ರೋತ್ಸಾಹಿಸಿವೆ. ರಾಜ್ಯ ಸರಕಾರವೂ ವಿವಿಧ ಯೋಜನೆಗಳ ಮೂಲಕ ಎಂಎಸ್ ಎಂಇಗಳನ್ನು ಬೆಂಬಲಿಸುತ್ತಿದೆ ಎಂದರು.

ಜಿಲ್ಲಾ ಆರ್ಥಿಕ ಪ್ರಕೋಷ್ಠ ಸಹ ಸಂಚಾಲಕ ಜಿ. ಯೋಗೀಶ್ ಪೈ, ಸದಸ್ಯರಾದ ಎಂ. ರಾಜೇಶ್ ರಾವ್, ವಸಂತ ಶೆಟ್ಟಿ, ಡಾ.ಎಸ್.ಎಂ. ಶಿವಪ್ರಕಾಶ್, ರಘುನಾಥ್ ಪೈ, ಎಂ. ಸುಂದರ ಶೆಟ್ಟಿ ಉಪಸ್ಥಿತರಿದ್ದರು.

ಮೈಸೂರು ದಸರಾದಲ್ಲಿ ಕಂಬಳ ಆಯೋಜನೆ

ಸಿಎಂ ಸಭೆಯಲ್ಲಿ ಅಂತಿಮ ರೂಪುರೇಷೆ

ಪುತ್ತೂರು: ಈ ಬಾರಿಯ ಮೈಸೂರು ದಸರಾದಲ್ಲಿ ಜನಪದ ಕ್ರೀಡೆ ಕಂಬಳ ನಡೆಯಲಿದ್ದು, ಶುಕ್ರವಾರ ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಪ್ರಥಮ ಸಭೆಯಲ್ಲಿ ಕಂಬಳ ದಿನಾಂಕ ಮತ್ತು ಸ್ಥಳ ನಿಗದಿ ಮಾಡಲಾಗಿದೆ ಎಂದು ಕಂಬಳದ ರೂವಾರಿ ಪುತ್ತೂರು ಶಾಸಕ ಅಶೋಕ್ ರೈ ತಿಳಿಸಿದ್ದಾರೆ.

ಅ.18 ಮತ್ತು 19ರಂದು ಕಂಬಳ ನಡೆಯಲಿದೆ. ಭಾನುವಾರ ಮತ್ತು ಸೋಮವಾರ ಎರಡು ದಿನಗಳಲ್ಲಿ ಕಂಬಳ ನಡೆಯಲಿದೆ ಎಂದು ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ.

ಮೈಸೂರಿನಲ್ಲಿರುವ ಸರ್.ಎಂ. ವಿಶ್ವೇಶ್ವರಯ್ಯ ತಾಂತ್ರಿಕ ವಿದ್ಯಾಲಯದ ಬಳಿ ಇರುವ ಸುಮಾರು 20 ಎಕ್ರೆ ಜಾಗದಲ್ಲಿ ಕಂಬಳ ನಡೆಯಲಿದೆ. 2 ಸ್ಥಳಗಳನ್ನು ಸೂಚಿಸಲಾಗಿದ್ದು, ಈ ಪೈಕಿ 20 ಎಕ್ರೆ ಇರುವ ಜಾಗವೇ ಕಂಬಳಕ್ಕೆ ಸೂಕ್ತ ಎಂಬ ಅಂತಿಮ ನಿರ್ಧಾರಕ್ಕೆ ಬರಲಾಯಿತು.

ಕಂಬಳದಲ್ಲಿ ಸುಮಾರು 150 ಜೋಡಿ ಕೋಣಗಳು ಭಾಗವಹಿಸುವ ನಿರೀಕ್ಷೆ ಇದೆ. ಜು.15 ರೊಳಗಾಗಿ ಕಂಬಳಕ್ಕೆ ಭೂಮಿಪೂಜೆ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಹಿತ ಹಲವು ಗಣ್ಯರು ಭಾಗವಹಿಸಲಿದ್ದಾರೆ.



ಸಿಎಂ ಸಭೆಯಲ್ಲಿ ಅಂತಿಮ ನಿರ್ಧಾರ

ಮೈಸೂರು ದಸರಾಗೆ ನಡೆಯಲಿರುವ ಕಂಬಳದ ಮೊದಲ ಸಭೆ ಶುಕ್ರವಾರ ನಡೆದಿದೆ. ಈ ಸಭೆಯಲ್ಲಿ ಕಂಬಳ ಸಮಿತಿ ಪ್ರಮುಖರು, ಅಧಿಕಾರಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಕೆಲವೊಂದು ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ದಿನಾಂಕ ಮತ್ತು ಸ್ಥಳವನ್ನು ಮಾತ್ರ ಪ್ರಥಮ ಸಭೆಯಲ್ಲಿ ಅಂತಿಮ ಮಾಡಲಾಗಿದೆ. ಉಳಿದಂತೆ ಎಲ್ಲಾ ವಿಚಾರಗಳು ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆಯುವ ಸಭೆಯಲ್ಲಿ ಕಂಬಳದ ರೂಪುರೇಶೆಗಳ ಬಗ್ಗೆ ಅಂತಿಮ ತೀರ್ಮಾನವನ್ನು ಕೈಗೊಳ್ಳಲಾಗುತ್ತದೆ ಎಂದು ಶಾಸಕ ಅಶೋಕ್ ರೈ ತಿಳಿಸಿದ್ದಾರೆ.

ಸಭೆಯಲ್ಲಿ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ, ಮೈಸೂರು ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯೂಕೇಶ್ ಕುಮಾರ್, ಮೈಸೂರು ಡಿಸಿಪಿ ಡಾ. ಹರ್ಷ ಪ್ರಿಯಂವದ, ಕಂಬಳದ ಸಂಚಾಲಕರಾದ ರಾಜೀವ್ ಶೆಟ್ಟಿ ಎಡ್ತೂರು, ಗುಣಪಾಲ್ ಕಡಂಬ, ಮುರಳೀಧರ್ ರೈ ಮಠಂತಬೆಟ್ಟು, ಕರಾವಳಿ ಅಸೋಸಿಯೇಶನ್ ಅಧ್ಯಕ್ಷ ಗ್ರಾಸಿಯನ್ ರೋಡ್ರಿಗಸ್ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸಿಗರಿಂದಲೇ ಸರಕಾರದ ವೈಫಲ್ಯ ಬಯಲು: ಸತೀಶ್ ಕುಂಪಲ

ಮಂಗಳೂರು: ರಾಜ್ಯ ಸರಕಾರದ ಗೃಹಲಕ್ಷ್ಮಿ ಸಹಿತ ಗ್ಯಾರಂಟಿ ಯೋಜನೆ ಅನುಷ್ಠಾನದಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬುದನ್ನು ಸ್ವತಃ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಒಪ್ಪಿಕೊಂಡಿದ್ದಾರೆ. ಆ ಮೂಲಕ ಈ ಹಿಂದಿನ ಸಿದ್ದರಾಮಯ್ಯ ಸರಕಾರ ಆಡಳಿತದಲ್ಲಿ ವಿಫಲವಾಗಿದೆ ಎಂದು ಡಿಕೆಶಿ ಅವರು ಪರೋಕ್ಷವಾಗಿ ಹೇಳಿದ್ದಾರೆ. ಗ್ಯಾರಂಟಿ ಯೋಜನೆ ಅಸಮರ್ಪಕ ಅನುಷ್ಠಾನ ಹಿನ್ನೆಲೆಯಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಗಳನ್ನು ವಜಾ ಮಾಡಬೇಕು. ಅವರಿಗೆ ನೀಡಿದ ಗೌರವಧನ ವಾಪಸ್ ಪಡೆದು, ಗ್ಯಾರಂಟಿ ಯೋಜನೆ ಭ್ರಷ್ಟಾಚಾರದ ಸಮಗ್ರ ತನಿಖೆ ನಡೆಸಬೇಕು ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಆಗ್ರಹಿಸಿದರು.

ಗೃಹಲಕ್ಷ್ಮಿ ಸಹಿತಗ್ಯಾರಂಟಿಯೋಜನೆಗಳನ್ನು ಆರಂಭದಲ್ಲಿಯೇಸಮರ್ಪಕವಾಗಿ ಅನುಷ್ಠಾನ ಮಾಡಬೇಕಿತ್ತು. ಈಗ ಪರಿಷ್ಕರಣೆ ಹೆಸರಿನಲ್ಲಿ ಫಲಾನುಭವಿಗಳಿಗೆ ವಂಚಿಸಲು ಸರಕಾರ ಹೊರಟಿದೆ. ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ಕಾಂಗ್ರೆಸ್ ತನ್ನ ಪಕ್ಷದ ಕಾರ್ಯಕರ್ತರಿಗೆ ರಾಜ್ಯ, ಜಿಲ್ಲಾ, ತಾಲೂಕು ಮಟ್ಟದ ಜವಾಬ್ದಾರಿಯನ್ನು ನೀಡಿ ಅವರ ಗೌರವಧನಕ್ಕೆ ಕೋಟಿಗಟ್ಟಲೆ ಹಣವನ್ನು ದುರ್ಬಳಕೆ ಮಾಡಿದೆ. ಗೃಹಲಕ್ಷ್ಮಿ ಹಣ ಮೂರ್ನಾಲ್ಕು ತಿಂಗಳಿಗೊಮ್ಮೆ ಬರುತ್ತಿದೆ. ಆದರೆ, ಅನುಷ್ಠಾನ ಸಮಿತಿಗೆ ಪ್ರತಿ ತಿಂಗಳು ಜನರ ತೆರಿಗೆ ಹಣ ಗೌರವಧನವಾಗಿ ಸಂದಾಯವಾಗುತ್ತಿದೆ. ಈ ಮಧ್ಯೆ ಯೋಜನೆ ಅನುಷ್ಠಾನ ವೈಫಲ್ಯವಾಗಿರುವುದು, ಭ್ರಷ್ಟಾಚಾರ ನಡೆದಿರುವುದಕ್ಕೆ ಸಮಿತಿ ಜವಾಬ್ದಾರಿಯಲ್ಲವೇ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಪ್ರಶ್ನಿಸಿದರು.



ರಾಜ್ಯದಲ್ಲಿ ಚುನಾವಣೆ ಸಂದರ್ಭ ಮಹಾದೇವಪ್ಪನಿಗೂ– ಕಾಕಾ ಸಾಹೇಬನಿಗೂ ಫ್ರೀ ಎಂದು ಹೇಳಿದ್ದ ಕಾಂಗ್ರೆಸ್ ನಾಯಕರು ಈಗ ರಾಗ ಬದಲಾಯಿಸಿ ರಾಜ್ಯದ ಜನತೆಯನ್ನು ವಂಚಿಸಲು ಹೊರಟಿದ್ದಾರೆ. ಡಿ.ಕೆ. ಶಿವಕುಮಾರ್ ಅವರು ಅಧಿಕಾರ ಸ್ವೀಕರಿಸಿದ ಮೇಲೆ ಸಿದ್ದರಾಮಯ್ಯ ಸರಕಾರದ ವೈಫಲ್ಯವನ್ನು ಬಹಿರಂಗಪಡಿಸುತ್ತಿದ್ದಾರೆ ಎಂದು ಹೇಳಿದ ಕುಂಪಲ, ಗ್ಯಾರಂಟಿ ಯೋಜನೆ ಮಹಿಳೆಯರ ಸ್ವಾವಲಂಬಿ ಬದುಕಿಗಲ್ಲ, ಅವರ ಪಕ್ಷದ ನಾಯಕರಿಗೆ ಅನುಕೂಲ ಮಾಡಿದ ಯೋಜನೆ. ರಾಜ್ಯ ಸರಕಾರ ಅನುಷ್ಠಾನ ಸಮಿತಿಗೆ ನೀಡಿದಗೌರವಧನದ ಹಣವೆಷ್ಟು ಎಂಬುದನ್ನು ಬಹಿರಂಗಪಡಿಸಲಿ. ಭ್ರಷ್ಟಾಚಾರಕ್ಕೆ ಕಾರಣವಾದ ಗ್ಯಾರಂಟಿ ಅನುಷ್ಠಾನ ಸಮಿತಿಯನ್ನು ವಜಾ ಮಾಡಲಿ ಎಂದು ಒತ್ತಾಯಿಸಿದರು.

> **ಸರಕಾರದ ವೈಫಲ್ಯ ಬಹಿರಂಗ**
>
> ಗೃಹಲಕ್ಷ್ಮಿ ಯೋಜನೆ ಅನರ್ಹರಿಗೂ ಸಿಗುತ್ತಿದೆ ಎಂದು ಹೇಳುವ ಮೂಲಕ ಸಿಎಂ ಡಿಕೆಶಿ ಅವರು ಸಿದ್ದರಾಮಯ್ಯ ಸರಕಾರದ ವೈಫಲ್ಯ ಹೇಳಿದ್ದರೆ, ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಬ್ರ್ಯಾಂಡ್ ಬೆಂಗಳೂರಿನ ರಸ್ತೆ ಗುಂಡಿಗಳ ಚಿತ್ರಣ ಬಯಲಿಗೆಳೆದು, ಸಿದ್ದರಾಮಯ್ಯ ಸರಕಾರದ ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿದ್ದ ಡಿಕೆಶಿ ಅವರ ವೈಫಲ್ಯವನ್ನು ಬಹಿರಂಗಗೊಳಿಸಿದ್ದಾರೆ. ಗ್ಯಾರಂಟಿ ಫಲಾನುಭವಿಗಳನ್ನು ಗುರುತಿಸುವಲ್ಲಿ ಸರಕಾರ ವಿಫಲವಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ. ಕಾಂಗ್ರೆಸ್ ಸರಕಾರದ ವೈಫಲ್ಯವನ್ನು ಕಾಂಗ್ರೆಸಿಗರೇ ಹೇಳುತ್ತಿದ್ದಾರೆ ಎಂದು ಸತೀಶ ಕುಂಪಲ ಹೇಳಿದರು.

ಭ್ರಷ್ಟಾಚಾರ ಅವ್ಯಾಹತವಾಗಿದೆ

ರಾಜ್ಯದಲ್ಲಿ ಭ್ರಷ್ಟಾಚಾರ ಅವ್ಯಾಹತವಾಗಿದೆ. ಸಂಪುಟ ವಿಸ್ತರಣೆ ಮಾಡುವ ತಾಕತ್ತಿಲ್ಲದ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಒಬ್ಬೊಬ್ಬ ಸಚಿವರಿಗೆ 4 ಜಿಲ್ಲೆಗಳ ಉಸ್ತುವಾರಿಯ ಜವಾಬ್ದಾರಿ ನೀಡಿದ್ದಾರೆ. ಒಟ್ಟಿನಲ್ಲಿ ರಾಜ್ಯದಲ್ಲಿ ಅಸ್ಥಿರ ಸರಕಾರ ಆಡಳಿತ ನಡೆಸುತ್ತಿದೆ ಎಂದರು.

ಖರ್ಗೆ ಹೇಳಿಕೆಗೆ ಮಹತ್ವ ಬೇಡ

ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್‌ನ್ನು ಟೀಕಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಸತೀಶ್ ಕುಂಪಲ, ಆರ್‌ಎಸ್ ಎಸ್ ನಮ್ಮ ದೇಶದಲ್ಲಿ ಮಾತ್ರವಲ್ಲದೆ ವಿಶ್ವಾದ್ಯಂತ ಕಾರ್ಯಚಟುವಟಿಕೆ ನಡೆಸುತ್ತಿದೆ. ತಂದೆಯ ಕಾರಣಕ್ಕೆ ಪ್ರಿಯಾಂಕ್ ಅವರು ಗೃಹಸಚಿವರಾಗಿದ್ದಾರೆ. ಅವರೊಬ್ಬರ ಹೇಳಿಕೆಗೆ ಮಹತ್ವ ನೀಡಬೇಕಾಗಿಲ್ಲ ಎಂದರು.

ಬಿಜೆಪಿ ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ, ಜಿಲ್ಲಾ ಉಪಾಧ್ಯಕ್ಷರಾದ ತಿಲಕ್‌ರಾಜ್ ಕೃಷ್ಣಾಪುರ, ಪೂಜಾ ಪೈ, ಕಾರ್ಯದರ್ಶಿ ಪೂರ್ಣಿಮಾ, ಬಿಜೆಪಿ ಕಾರ್ಯಾಲಯ ಕಾರ್ಯದರ್ಶಿ ಗುರುಚರಣ್, ಮಾಧ್ಯಮ ಸಹ ಸಂಚಾಲಕ ಮನೋಹರ್ ಕದ್ರಿ ಉಪಸ್ಥಿತರಿದ್ದರು.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೪

ಕರ್ನಾಟಕ

ರಾಜ್ಯದಲ್ಲಿಂದು ಪಲ್ಸ್ ಪೋಲಿಯೊ

ಬೆಂಗಳೂರು: ಆರೋಗ್ಯ ಇಲಾಖೆ ವತಿಯಿಂದ ರಾಜ್ಯಾದ್ಯಂತ ಜೂ.28 (ಭಾನುವಾರ) ರಂದು ಪಲ್ಸ್ ಪೋಲಿಯೊ ಲಸಿಕೆ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಬೆಳಗ್ಗೆ 8 ಗಂಟೆಗೆ ಸದಾಶಿವನಗರದ ತಮ್ಮ ನಿವಾಸದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

ರಾಜ್ಯದಲ್ಲಿ ಐದು ವರ್ಷದೊಳಗಿನ 64.84 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ ನೀಡುವ ಗುರಿಯನ್ನು ಆರೋಗ್ಯ ಇಲಾಖೆ ಹೊಂದಿದೆ. ಇದಕ್ಕಾಗಿ 36,076 ಲಸಿಕಾ ಬೂತ್‌ಗಳನ್ನು



ಸ್ಥಾಪಿಸಲಾಗಿದ್ದು, ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳು, ಅಂಗನವಾಡಿ ಕೇಂದ್ರಗಳು ಹಾಗೂ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಲಸಿಕೆ ವಿತರಣೆ ನಡೆಯಲಿದೆ.

ಗುಡ್ಡಗಾಡು ಪ್ರದೇಶಗಳ ಮಕ್ಕಳನ್ನು ತಲುಪಲು 988 ಮೊಬೈಲ್ ತಂಡಗಳನ್ನು ರಚಿಸಲಾಗಿದೆ. ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರಯಾಣಿಸುವ ಮಕ್ಕಳಿಗೆ ಲಸಿಕೆ ನೀಡಲು 2,125 ಟ್ರಾನ್ಸಿಟ್ ತಂಡಗಳನ್ನು ನಿಯೋಜಿಸಲಾಗಿದೆ. ಅಭಿಯಾನದ ಯಶಸ್ವಿ ಅನುಷ್ಠಾನಕ್ಕಾಗಿ ಒಟ್ಟು 1.14 ಲಕ್ಷಕ್ಕೂ ಹೆಚ್ಚು ಆರೋಗ್ಯ ಸಿಬ್ಬಂದಿ ಹಾಗೂ ಕಾರ್ಯಕರ್ತರನ್ನು ನಿಯೋಜಿಸಲಾಗಿದೆ.

ಐದು ವರ್ಷದೊಳಗಿನ ಪ್ರತಿ ಮಗುವಿಗೂ ತಪ್ಪದೆ ಪೋಲಿಯೊ ಹನಿ ಹಾಕಿಸಬೇಕು ಎಂದು ಆರೋಗ್ಯ ಇಲಾಖೆ ಮನವಿ ಮಾಡಿದೆ. ಇದೇ ವೇಳೆ, ಸಾರ್ವಜನಿಕರಿಗೆ ಸಮೀಪದ ಲಸಿಕಾ ಕೇಂದ್ರವನ್ನು ಸುಲಭವಾಗಿ ಪತ್ತೆಹಚ್ಚಲು ಮೊಬೈಲ್‌ನಲ್ಲಿ ಪ್ಲೇ ಆ್ಯಪ್‌ನಲ್ಲಿ ಲಭ್ಯವಿರುವ ನಿಯರ್ ಬೈ ವ್ಯಾಕ್ಸಿನ್ ಸೆಂಟರ್ ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಅದರ ಮೂಲಕ ಸಮೀಪದ ಲಸಿಕಾ ಕೇಂದ್ರದ ಮಾಹಿತಿ ಪಡೆಯಬಹುದಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಅಂಕೋಲಾ ಮೂಲದ ಪ್ರೇಮಿಗಳ ನಡುವೆ ಜಗಳ | ಚೂರಿ ಇರಿತ

ಕಾರಲ್ಲೇ ಬಾಂಬ್ ಸ್ಫೋಟಿಸಿಕೊಂಡು ಆತ್ಮಹತ್ಯೆ

ತುಮಕೂರು: ಚಲಿಸುತ್ತಿದ್ದ ಕಾರಿನಲ್ಲೇ ಯುವತಿಯೊಂದಿಗೆ ಜಗಳವಾಡಿದ ಯುವಕನೊಬ್ಬ, ಆಕೆಗೆ ಚಾಕುವಿನಿಂದ ಇರಿದು, ಬಳಿಕ ತಾನು ಪೆಟ್ರೋಲ್ ಬಾಂಬ್ ಸ್ಫೋಟಿಸಿಕೊಂಡು ಸಜೀವ ದಹನವಾಗಿರುವ ಘಟನೆ ಶಿರಾ ತಾಲೂಕಿನ ಜೋಗಿಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ನಾಗೇಂದ್ರ (30) ಮೃತಪಟ್ಟಿದ್ದು, ರಮ್ಯಾ (23) ಗಂಭೀರವಾಗಿ ಗಾಯಗೊಂಡಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಬ್ಬರೂ ಉತ್ತರ ಕನ್ನಡ ಜಿಲ್ಲೆ ಅಂಕೋಲಾ ಮೂಲದವರಾಗಿದ್ದು, ಬೆಂಗಳೂರಿನಿಂದ ಅಂಕೋಲಾಗೆ ತೆರಳುವ ವೇಳೆ ಈ ಘಟನೆ ನಡೆದಿದೆ.

ಘಟನೆ ಹಿನ್ನೆಲೆ: ಬೆಂಗಳೂರಿನ ಜಯನಗರದ 1ನೇ ಬ್ಲಾಕ್‌ನಲ್ಲಿ ವಾಸವಾಗಿದ್ದ ರಮ್ಯಾ ಖಾಸಗಿ ಆಸ್ಪತ್ರೆಯೊಂದರಲ್ಲಿ ಲ್ಯಾಬ್ ಟೆಕ್ನೀಷಿಯನ್ ಆಗಿ ಕೆಲಸ ಮಾಡುತ್ತಿದ್ದು, 6 ವರ್ಷಗಳಿಂದ ನಾಗೇಂದ್ರ ಹಾಗೂ ರಮ್ಯಾ ಪ್ರೀತಿಸುತ್ತಿದ್ದರು. ಕಳೆದ ಹಲವು ದಿನಗಳಿಂದ ಇಬ್ಬರ ನಡುವೆ ಮನಸ್ತಾಪ ಉಂಟಾಗಿತ್ತು. ಇದರಿಂದಾಗಿ ರಮ್ಯಾ ನಾಗೇಂದ್ರನ ಫೋನ್ ನಂಬರ್ ಬ್ಲಾಕ್ ಮಾಡಿದ್ದಳು. ಶನಿವಾರ ಬೆಳಗ್ಗೆ ರಮ್ಯಾಳ ರೂಂ ಬಳಿ ಬಂದಿದ್ದ ನಾಗೇಂದ್ರ ಆಕೆಯನ್ನು ಬಲವಂತವಾಗಿ ಕರೆದುಕೊಂಡು ಬೆಂಗಳೂರಿನಿಂದ ಅಂಕೋಲಾಕ್ಕೆ ಖಾಸಗಿ ಟ್ಯಾಕ್ಸಿಯೊಂದರಲ್ಲಿ ತೆರಳುತ್ತಿದ್ದ.

ಜೋಗಿಹಳ್ಳಿ ಬಳಿ ಬರುತ್ತಿದ್ದಂತೆ ಇಬ್ಬರ ನಡುವೆ ವೈಯಕ್ತಿಕ ವಿಚಾರವಾಗಿ ವಾಗ್ವಾದ ಶುರುವಾಗಿದ್ದು, ಮಾತಿನ ಚಕಮಕಿ ತಾರಕ



ಕ್ಕೇರಿದಾಗ, ನಾಗೇಂದ್ರ ರಮ್ಯಾಳಿಗೆ ಚಾಕುವಿನಿಂದ ಇರಿದಿದ್ದಾನೆ. ಚಾಕು ಇರಿತದಿಂದ ಗಾಬರಿಗೊಂಡ ರಮ್ಯಾ ತಕ್ಷಣವೇ ಚಲಿಸುವ ಕಾರಿನಿಂದ ಜಿಗಿದಿದ್ದಾಳೆ. ತಕ್ಷಣ ಕ್ಯಾಬ್ ಚಾಲಕ ಪ್ರವೀಣ್ ಕುಮಾರ್ ನಾಯಕ ಕಾರನ್ನು ನಿಲ್ಲಿಸಿ ಆಕೆಯನ್ನು ರಕ್ಷಿಸಲು ಹೋಗಿದ್ದಾನೆ. ಕಾರಿನೊಳಗೆ ಏಕಾಂಗಿಯಾದ ನಾಗೇಂದ್ರ ತಕ್ಷಣವೇ ಡೋರ್ ಲಾಕ್ ಮಾಡಿಕೊಂಡಿದ್ದಾನೆ.

ಬಳಿಕ ತಾನು ಮೊದಲೇ ತಂದಿದ್ದ ಪೆಟ್ರೋಲ್ ಬಾಂಬ್ ಅನ್ನು ಕಾರಿನೊಳಗೆ ಸ್ಫೋಟಿಸಿಕೊಂಡಿದ್ದಾನೆ. ಸ್ಫೋಟದ ತೀವ್ರತೆಗೆ ಕಾರು ಸಂಪೂರ್ಣವಾಗಿ ಹೊತ್ತಿ ಉರಿ ದಿದ್ದು, ನಾಗೇಂದ್ರ ಕಾರಿನೊಳಗೇ ಸಜೀವ ದಹನವಾಗಿದ್ದಾನೆ. ಸ್ಥಳಕ್ಕೆ ಕಳ್ಳಂಬೆಳ್ಳ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಭೂದಾನಿಗಳ ಸ್ಮರಣೆ

ಪುಟ ೧➡ ಭೂಮಿ ಕಳೆದುಕೊಂಡವರ ಬಗ್ಗೆ ನಮಗೆ ಕಾಳಜಿ ಇದೆ. ಕೆಂಗೇರಿ ಹಾಗೂ ಯಲಹಂಕ ಪಟ್ಟಣ ನಿರ್ಮಾಣ ಮಾಡಿದ್ದು ಹೇಗೆ? ಪರಮೇಶ್ವರ್ ಅವರು ತುಮಕೂರಿನಲ್ಲಿ ಟೌನ್‌ಶಿಪ್ ಮಾಡಲು ಮುಂದಾಗಿದ್ದಾರೆ. ಅವು ಭೂಮಿಯಲ್ಲವೇ? ಮನುಷ್ಯನ ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ. ಜನನ ಉಚಿತ, ಮರಣ ಖಚಿತ. ಈ ಹುಟ್ಟು ಸಾವಿನ ಮಧ್ಯೆ ನಾವು ಏನು ಸಾಧನೆ, ತ್ಯಾಗ ಮಾಡುತ್ತೇವೆ ಎಂಬುದು ಮುಖ್ಯ. ಈ 10 ಪಥದ ರಸ್ತೆಗೆ ಭೂಮಿ ತ್ಯಾಗ ಮಾಡಿದ ಎಲ್ಲರಿಗೂ ಸಾಷ್ಟಾಂಗ ನಮನ ಸಲ್ಲಿಸುತ್ತೇನೆ ಎಂದರು.

ಶಾಲಾ ಮಕ್ಕಳಿಗೆ ಗಿಡ ನೆಟ್ಟು ಬೆಳೆಸುವ ಸ್ಪರ್ಧೆ: ಹಸಿರು ಬೆಂಗಳೂರು ಕಟ್ಟಬೇಕು, ಆ ಮೂಲಕ ಕೆಂಪೇಗೌಡರ ದೂರದೃಷ್ಟಿ ಉಳಿಯಬೇಕು ಎಂದು ಬಿಡಿಎ ವತಿಯಿಂದ ಇಂದು 15 ಲಕ್ಷ ಸಸಿಗಳನ್ನು ನೆಡಲಾಗಿದೆ. ಇದು ದಾಖಲೆಯ ತೀರ್ಮಾನ. ಇದೇ ರೀತಿ ಬೆಂಗಳೂರಿನಲ್ಲಿ ಪ್ರತಿ ಶಾಲೆಗಳು ಒಂದೊಂದು ಪ್ರದೇಶದ ಉಸ್ತುವಾರಿ ವಹಿಸಿಕೊಂಡು ಅಲ್ಲಿ ಮಕ್ಕಳಿಂದ ಗಿಡ ನೆಡೆಸಿ ಬೆಳೆಸುವ ಕಾರ್ಯಕ್ರಮ ಮಾಡಬೇಕು. ಈ ವಿಚಾರದಲ್ಲಿ ಜಿಬಿಎ ವತಿಯಿಂದ ಸ್ಪರ್ಧೆ ಏರ್ಪಡಿಸಲಾಗುವುದು ಎಂದು ತಿಳಿಸಿದರು. ಬೆಂಗಳೂರು ವಿವಿಯಲ್ಲಿ ಕೆಂಪೇಗೌಡ ಅಧ್ಯಯನ ಕೇಂದ್ರ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಕೆ.ಎಚ್. ಮುನಿಯಪ್ಪನವರು ತಮ್ಮ ಕ್ಷೇತ್ರದಲ್ಲಿ 9.5 ಎಕರೆ ಜಾಗ ನೀಡಿದ್ದು, ಅಲ್ಲಿ ಕೆಂಪೇಗೌಡ ಅಧ್ಯಯನ ಕೇಂದ್ರ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಹುತ್ರಿದುರ್ಗದಲ್ಲಿ 10 ಕೋಟಿ ಮೊತ್ತದ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಕಳೆದ ಎರಡು ವರ್ಷ ಐದು ತಿಂಗಳಲ್ಲಿ ಬಿಡಿಎ ಪ್ರಾಧಿಕಾರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವುದರ ಜತೆಗೆ ಕೆಂಪೇಗೌಡ ಬಡಾವಣೆ ಅಭಿವೃದ್ಧಿಗೆ ಶ್ರಮಿಸಲಾಗಿದೆ. ಡಿ.ಕೆ.ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ಇಲ್ಲಿಯವರೆಗೂ ಹಲವಾರು ಬದಲಾವಣೆಗಳನ್ನು ತಂದು ಜಮೀನನ್ನು ಕಳೆದುಕೊಂಡ ರೈತರಿಗೆ ಅವರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯ ಒದಗಿಸಲಾಗಿದೆ.

■ **ಎನ್.ಎ. ಹ್ಯಾರಿಸ್,** ಬಿಡಿಎ ಅಧ್ಯಕ್ಷ

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಾನಿರದಿದ್ದರೆ ಇಸ್ರೇಲ್ ಇರುತ್ತಿರಲಿಲ್ಲ
– ಟ್ರಂಪ್ ಹೇಳಿಕೆ
– ಹೌದು, ಕೋಳಿ ಕೂಗದಿರುತ್ತಿದ್ದರೆ ಬೆಳಗಾಗುತ್ತಿರಲಿಲ್ಲ!

ದಿನ ಭವಿಷ್ಯ

ಮೇಷ
ಅಹಿತಕರ ಪ್ರಸಂಗ. ಆತ್ಮವಿಶ್ವಾಸಕ್ಕೆ ಕುಂದು. ನಿರ್ಭೀತಿಯಿಂದ ಕಾರ್ಯ ನಿರ್ವಹಿಸಿ. ಈ ಬಗ್ಗೆ ಇತರರಿಗೆ ವಿವರಣೆ ಕೊಡುವ ಅಗತ್ಯ ಇಲ್ಲ.

ತುಲಾ
ನಿಮ್ಮ ಭಾವನೆ ಸ್ಪಷ್ಟವಾಗಿ ವ್ಯಕ್ತಪಡಿಸಿ. ಅದಕ್ಕೆ ಮುಜುಗರ ಬೇಕಿಲ್ಲ. ಗೊಂದಲಕ್ಕೆ ಆಸ್ಪದ ನೀಡಬೇಡಿ. ಹಣಕಾಸು ಒತ್ತಡ ಎದುರಿಸುವಿರಿ.

ವೃಷಭ
ಶುಭ ಸುದ್ದಿ ಕೇಳುವಿರಿ. ಕೌಟುಂಬಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಅವಕಾಶ. ನಿಮ್ಮ ನಿರ್ವಹಣೆ ಉತ್ತಮ ಪಡಿಸಿಕೊಳ್ಳಲು ಯತ್ನಿಸಿ.

ವೃಶ್ಚಿಕ
ನೆಗೆಟಿವ್ ಮನಸ್ಥಿತಿಯ ಜನರನ್ನು ದೂರವಿಡಿ. ಹಳೆಯ ಸ್ನೇಹಿತರ ಭೇಟಿ ಸಾಧ್ಯತೆ ಕೌಟುಂಬಿಕ ಬಿಕ್ಕಟ್ಟು ಶೀಘ್ರ ಪರಿಹಾರ ಕಾಣಲಿದೆ.

ಮಿಥುನ
ಮನದ ಶಾಂತಿ ಕಾಯಲು ಸಂಘರ್ಷಗಳಿಂದ ದೂರವಿರಿ. ಸವಾಲು ಎದುರಿಸುವ ತಾಕತ್ತು ನಿಮಗಿದೆ, ಧೈರ್ಯ ಬೇಕು ಅಷ್ಟೆ.

ಧನು
ನಿಮ್ಮ ದೀರ್ಘ ಅನುಭವ ಇಂದು ನೆರವಿಗೆ ಬರಲಿದೆ. ಬಿಕ್ಕಟ್ಟನ್ನು ಸಮರ್ಥವಾಗಿ ನಿಭಾಯಿಸುವಿರಿ. ಹಣದ ಸಮಸ್ಯೆ ನಿವಾರಣೆ.

ಕಟಕ
ಆರ್ಥಿಕವಾಗಿ ಫಲಪ್ರದ ದಿನ. ಇತರರು ಹರಡುವ ವದಂತಿಗೆ ಕಿವಿಗೊಡಬೇಡಿ. ಆತ್ಮೀಯ ಬಂಧುಮಿತ್ರರ ಕಾಣುವ ಅವಕಾಶ ಸಿಗಲಿದೆ.

ಮಕರ
ನಾಯಕತ್ವದ ಗುಣ ಪ್ರದರ್ಶಿಸುವ ಪ್ರಸಂಗ ಬರಲಿದೆ. ದಿಟ್ಟ ನಿರ್ಧಾರ ತಾಳಲು ಹಿಂಜರಿಕೆ ತೋರದಿರಿ. ಕೌಟುಂಬಿಕ ಅಸಹಕಾರ ಕಾಣುವಿರಿ.

ಸಿಂಹ
ಅಸಹನೀಯ ಸನ್ನಿವೇಶ ಎದುರಿಸುವ ಪ್ರಸಂಗ ಬಂದೀತು. ತಕ್ಷಣ ಭಾವಾವೇಶದಿಂದ ಪ್ರತಿಕ್ರಿಯಿಸದಿರಿ. ತಾಳ್ಮೆಯಿಂದ ನಿಭಾಯಿಸಿ.

ಕುಂಭ
ಆತ್ಮವಿಶ್ವಾಸ ಹೆಚ್ಚಿಸುವ ಪ್ರಸಂಗ. ಭಾವುಕತೆ ಬಿಟ್ಟು ಪ್ರಾಯೋಗಿಕ ನೆಲೆಯಲ್ಲಿ ಚಿಂತಿಸಿ. ಆಗ ನಿಮ್ಮನ್ನು ಕಾಡುವ ಸಮಸ್ಯೆ ಇತ್ಯರ್ಥವಾದೀತು.

ಕನ್ಯಾ
ಸಿಹಿ–ಕಹಿ ಎರಡೂ ಪ್ರಸಂಗ ಎದುರಿಸುವಿರಿ. ವಾಗ್ವಾದದಿಂದ ದೂರ ಇರುವುದೇ ಒಳಿತು. ಆಪ್ತರ ಜತೆ ಪ್ರವಾಸ ಹೊರಡುವ ಅವಕಾಶ.

ಮೀನ
ಹಣದ ಕೊರತೆ ನೀಗುವುದು. ಸಂಬಂಧದಲ್ಲಿ ಯಾವುದೇ ಅನುಮಾನ ಉಳಿಯದಿರಲಿ. ಎಲ್ಲವನ್ನು ಸ್ಪಷ್ಟಪಡಿಸಿಕೊಳ್ಳಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 3,8,2,5

ಕೆಂಪೇಗೌಡ ಜಯಂತಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ

ಆಧುನಿಕ ಬೆಂಗಳೂರು ನಿರ್ಮಾತೃ

ಬೆಂಗಳೂರು: ಬೆಂಗಳೂರು ನಗರವನ್ನು ರಾಷ್ಟ್ರಮಟ್ಟ ಮಾತ್ರವಲ್ಲದೇ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಬೆಳೆಯಲು ನಾಡಪ್ರಭು ಕೆಂಪೇಗೌಡರೇ ಕಾರಣ ಎನ್ನಲು ಹೆಮ್ಮೆ ಎನಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ತಿಳಿಸಿದ್ದಾರೆ.

ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ವತಿಯಿಂದ ಶನಿವಾರ ಸದಾಶಿವನಗರದ ಕೆಂಪೇಗೌಡ ಗಡಿಗೋಪುರ ಉದ್ಯಾನವನದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಮಾಜಸೇವಕ ಆರ್.ಪಿ.ರವಿಶಂಕರ್ ಅವರ ಸನ್ಮಾನ ನೆರವೇರಿಸಿ ಮಾತನಾಡಿದ ಅವರು, 517 ವರ್ಷಗಳ ನಂತರದಲ್ಲೂ ನಾಡ ಪ್ರಭು ಕೆಂಪೇಗೌಡರನ್ನು ನಾವು ನೆನಪಿಸುತ್ತಿದ್ದೇವೆ ಎಂದರೆ, ಅವರು ಬೆಂಗಳೂರು ನಗರ, ನಾಡಿಗೆ ಕೊಟ್ಟ ಕೊಡುಗೆ ಎಂದರು.

ಅಷ್ಟೇ ಅಲ್ಲ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರ ಹೆಸರೇ ಶ್ರೇಷ್ಠ ಎಂದು ತೀರ್ಮಾನ ತೆಗೆದು ಕೊಂಡರು ಎಂದು ಸ್ಮರಿಸಿದರು. ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಅವರು ಮಾತನಾಡಿ, ನಾಡಪ್ರಭು ಕೆಂಪೇಗೌಡರ ಪ್ರೇರೇಪಣೆ ನಮ್ಮೆಲ್ಲರ ಮೇಲಿರಲಿ ಎಂದು ಆಶಿಸಿದರು. ಯಡಿಯೂರಪ್ಪ ಸಿಎಂ ಆಗಿದ್ದಾಗ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರು ನಾಮಕರಣ ಮಾಡಿದ್ದ ವಿಚಾರವನ್ನು ಪ್ರಸ್ತಾಪಿಸಿ ಮೆಚ್ಚುಗೆ ಸೂಚಿಸಿದರು.

ಯಡಿಯೂರಪ್ಪನವರು ಎರಡನೇ ಬಾರಿ ಅವರು ಸಿಎಂ ಆಗಿದ್ದಾಗ ವಿಮಾನ ನಿಲ್ದಾಣದ ಬಳಿ ಕೆಂಪೇಗೌಡರ ಪ್ರತಿಮೆ ನಿರ್ಮಾಣಕ್ಕೆ ಒಪ್ಪಿಗೆ ಸೂಚಿಸಿದರು. 108 ಅಡಿಯ ಪ್ರತಿಮೆಗೆ 65 ಕೋಟಿ ರೂ., ಥೀಮ್‌ಪಾರ್ಕಿಗೆ 20 ಕೋಟಿ ರೂ. ಹಾಗೂ ನಾಡಪ್ರಭು ಕೆಂಪೇಗೌಡರ



ನಾಡಪ್ರಭು ಕೆಂಪೇಗೌಡರ ಹೆಸರು ಕೇವಲ ಕರ್ನಾಟಕ, ದೇಶ ಮಾತ್ರವಲ್ಲದೇ, ಇಡೀ ವಿಶ್ವದಲ್ಲಿ ಚರ್ಚೆ ಆಗುವಂತೆ ಆಗಬೇಕೆಂಬ ಸದುದ್ದೇಶದಿಂದ ಹಿಂದಿನ ಸಿಎಂ ಬಿ.ಎಸ್ .ಯಡಿಯೂರಪ್ಪನವರು ಅಧ್ಯಯನ ಕೇಂದ್ರಕ್ಕೆ 50 ಕೋಟಿ ರೂ. ಕೊಟ್ಟಿದ್ದರು. ಪ್ರತಿಮೆ ನಿರ್ಮಾಣಕ್ಕೆ ಹಣ ಕೊಟ್ಟದ್ದಲ್ಲದೇ, ಪಾರ್ಕ್ ನಿರ್ಮಿಸಲು ತಿಳಿಸಿದ್ದರು.

■ **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ವೀರಸಮಾಧಿಗೆ ಜಮೀನು ಸ್ವಾಧೀನಕ್ಕೆ 10 ಕೋಟಿ ರೂ. ನೀಡಿದ್ದಲ್ಲದೇ, ಬೆಂವಿವಿ ಅಧ್ಯಯನ ಕೇಂದ್ರಕ್ಕೆ ಅವಶ್ಯಕ ಹಣ ಬಿಡುಗಡೆ ಮಾಡಿದ್ದರು ಎಂದರು. ಪ್ರತಿ ಗ್ರಾಮದಿಂದ ಮೃತ್ತಿಕೆಯನ್ನೂ ತರಲಾಗಿತ್ತು.

ಇದು ಯಡಿಯೂರಪ್ಪನವರ ನೇತೃತ್ವ, ಮಾತ್ರವಲ್ಲದೇ ಹೃದಯವಂತಿಕೆಯ ಕೆಲಸ ಎಂದರು. ರಕ್ಷಣಾ ವೇದಿಕೆಯ ಅಧ್ಯಕ್ಷ ಶಿವ ರಾಮೇಗೌಡ, ಮಂಜುನಾಥ್, ಡಾ.ರಾಜೇಶ್, ಜಯಪಾಲ್, ಸುಮಂಗಲಾ ಕೇಶವ್ ಮೊದ ಲಾದ ಪ್ರಮುಖರು ವೇದಿಕೆಯಲ್ಲಿದ್ದರು.

ಸೈಬರ್ ಅಪರಾಧ: ತಾಂತ್ರಿಕ ಸಾಮರ್ಥ್ಯ ಇನ್ನಷ್ಟು ಬಲ

ಬೆಂಗಳೂರು: ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತಾಂತ್ರಿಕ ಸಾಮರ್ಥ್ಯವನ್ನು ಇನ್ನಷ್ಟು ಬಲಪಡಿಸುವುದು, ಆಧುನಿಕ ತಂತ್ರಜ್ಞಾನಗಳ ಅಳವಡಿಕೆ, ಸಾರ್ವಜನಿಕರಿಗೆ ತ್ವರಿತ ಸೇವೆ ಒದಗಿಸುವತ್ತ ಹೆಚ್ಚಿನ ಆದ್ಯತೆ ನೀಡುವಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅಧಿಕಾರಿಗಳಿಗೆ ಸೂಚಿಸಿದರು.

ಶನಿವಾರ ಬೆಂಗಳೂರಿನ ಬಹುಮಹಡಿ ಕಟ್ಟಡದಲ್ಲಿರುವ ಪೊಲೀಸ್ ಕಂಪ್ಯೂಟರ್ ವಿಭಾಗಕ್ಕೆ ಭೇಟಿ ನೀಡಿ, ಇಲಾಖೆಯ ಕಾರ್ಯಚಟುವಟಿಕೆಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದರು. ಮಾಹಿತಿ ತಂತ್ರಜ್ಞಾನದ ಸಮರ್ಪಕ ಬಳಕೆಯ ಮೂಲಕ ಪೊಲೀಸ್ ಸೇವೆಗಳನ್ನು ಇನ್ನಷ್ಟು ಪಾರದರ್ಶಕ, ಪರಿಣಾಮಕಾರಿ ಹಾಗೂ ಜನಸ್ನೇಹಿಯಾಗಿ ರೂಪಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಪೊಲೀಸ್ ಇಲಾಖೆಯ ಡಿಜಿಟಲ್ ಸೇವೆಗಳು ಮತ್ತು ಮಾಹಿತಿ ವ್ಯವಸ್ಥೆಗಳನ್ನು ಮತ್ತಷ್ಟು ಕಾರ್ಯಕ್ಷಮಗೊಳಿಸುವ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವವನ್ನು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪೊಲೀಸ್ ಕಂಪ್ಯೂಟರ್ ವಿಭಾ



ಗವು ರಾಜ್ಯ ಪೊಲೀಸ್ ಇಲಾಖೆಯ ತಾಂತ್ರಿಕ ಬೆನ್ನೆಲುಬಾಗಿದ್ದು, ಇಲಾಖೆಯ ವಿವಿಧ ಡಿಜಿಟಲ್ ಜಾಲತಾಣಗಳು, ಮಾಹಿತಿ ನಿರ್ವಹಣಾ ವ್ಯವಸ್ಥೆಗಳು, ಸಾಫ್ಟ್‌ವೇರ್ ವೇದಿಕೆಗಳು ಹಾಗೂ ಮಾಹಿತಿ ತಂತ್ರಜ್ಞಾನ ಸಂಬಂ ಧಿತ ಸೇವೆಗಳ ಸಮನ್ವಯ ಮತ್ತು ನಿರ್ವಹಣೆಯನ್ನು ಕೈಗೊಳ್ಳುತ್ತಿದೆ ಎಂದು ಸಚಿವ ಖರ್ಗೆ ತಿಳಿಸಿದರು.

ಇದರೊಂದಿಗೆ, ಸೈಬರ್ ಅಪರಾಧ ವಿಭಾಗವು ಆನ್‌ಲೈನ್ ವಂಚನೆ, ಕ್ರಿಪ್ಟೋಕರೆನ್ಸಿ ವಂಚನೆ, ಹ್ಯಾಕಿಂಗ್ ಸೇರಿದಂತೆ ವಿವಿಧ ರೀತಿಯ ಸೈಬರ್ ಅಪರಾಧಗಳ ತನಿಖೆಯನ್ನು ಪರಿಣಾಮಕಾರಿಯಾಗಿ ನಡೆಸುತ್ತಿದೆ. ಸೈಬರ್ ಫೋರೆನ್ಸಿಕ್ ಘಟಕವು ಡಿಜಿಟಲ್ ಸಾಕ್ಷ್ಯಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ ವಿಶ್ಲೇಷಿಸುವುದರ ಜೊತೆಗೆ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಿಗೆ ಅಗತ್ಯ ತಾಂತ್ರಿಕ ನೆರವನ್ನು ಒದಗಿಸುತ್ತಿದೆ ಎಂದರು.

ಭೂ, ಲವ್ ಜಿಹಾದ್ ತಡೆಗೆ ಕಠಿಣ ಕ್ರಮ

ಪುಟ ೧➡ **ವಿಪಕ್ಷಗಳ ವಿರೋಧ:** ಪ.ಬಂಗಾಳ ಸಮಾನ ನಾಗರಿಕ ಸಂಹಿತೆ ಮಸೂದೆ 2026 ಜಾರಿ ಪ್ರಕ್ರಿಯೆ ಸದ್ಯ ಪ್ರಗತಿಯಲ್ಲಿದೆ. ವಿಪಕ್ಷಗಳು ಯುಸಿಸಿ ಜಾರಿ ವಿರುದ್ಧ ಆಕ್ಷೇಪಿಸಿವೆ. ಯುಸಿಸಿ ಸಾಮಾಜಿಕ ವೈರುಧ್ಯಗಳನ್ನು ಗಾಢಗೊಳಿಸುವುದು ಎಂಬುದು ವಿಪಕ್ಷಗಳ ಆರೋಪವಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಶಂಕರ್ ಘೋಷ್ ತಿಳಿಸಿದ್ದಾರೆ.

ಮೋಸದ ಮತಾಂತರ ಪಿಡುಗಿಗೆ ಕಡಿವಾಣ: ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಬಂಗಾಳದಲ್ಲಿ ಯುಸಿಸಿ ಜಾರಿಗೊಳಿಸಲಾಗುವುದು ಎಂದು ಬಿಜೆಪಿ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿತ್ತು. ಮೋಸದಿಂದ, ಆಮಿಷಬಲ, ಬಲವಂತವಾಗಿ ಮತಾಂತರಿಸುವ ಪಿಡುಗಿನ ಕಡಿವಾಣಕ್ಕೆ ಮತಾಂತರ ವಿರೋಧಿ ಕಾಯಿದೆ ಜಾರಿಗೊಳಿಸಲಾಗುವುದು, ಜೌಗು ಪ್ರದೇಶ, ಮೀಸಲು ಅರಣ್ಯ ಹಾಗೂ ಸರಕಾರಿ ಭೂಮಿಗಳ ಅಕ್ರಮ ಅತಿಕ್ರಮಣವನ್ನು 200 ದಿನಗಳೊಳಗೆ ತೆರವುಗೊಳಿಸಲಾಗುವುದು ಎಂದು ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿತ್ತು.

ಮಾಜಿ ಸಿಎಂ ಸಿದ್ದುಗೆ ಮೈಸೂರಿನಲ್ಲಿ ಅದ್ದೂರಿ ಸ್ವಾಗತ

ಮೈಸೂರು: ತವರು ಜಿಲ್ಲಾ ಕೇಂದ್ರವಾದ ಮೈಸೂರಿಗೆ ಶನಿವಾರ ಸಂಜೆ ಆಗಮಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅವರ ಅಭಿಮಾನಿಗಳು, ಕಾಂಗ್ರೆಸ್‌ನ ಮುಖಂಡರು, ಕಾರ್ಯಕರ್ತರು ಅದ್ದೂರಿ ಸ್ವಾಗತ ನೀಡಿದರು. ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಾಗೂ ಎಐಸಿಸಿ ಕಾರ್ಯಕಾರಿ ಸಮಿತಿ ಸದಸ್ಯರಾಗಿ ನೇಮಕಗೊಂಡ ಬಳಿಕ ಇದೇ ಮೊದಲ ಬಾರಿಗೆ ತವರು ಜಿಲ್ಲಾ ಕೇಂದ್ರವಾದ ಮೈಸೂರಿಗೆ ಶನಿವಾರ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ಅದ್ದೂರಿ ಸ್ವಾಗತ ದೊರೆಯಿತು. ನಗರದ ಹೈವೇ ಸರ್ಕಲ್‌ನಲ್ಲಿ ಪಕ್ಷದಿಂದ ಅವರನ್ನು ಬರಮಾಡಿಕೊಳ್ಳಲಾಯಿತು.

ಕಾವೇರಿ ವಿವಾದ ಇತ್ಯರ್ಥಕ್ಕೆ ಸಲಹೆ

ಪುಟ ೧➡ **ನದಿ ಜೋಡಣೆಯೇ ಪರಿಹಾರ!:** ಕರ್ನಾಟಕ–ತ.ನಾಡು ನಡುವೆ ಕಾವೇರಿ ಸಮಸ್ಯೆ ಬಗೆಹರಿಸಲು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ವಿನಂತಿಸಿದರು. ನದಿ ಜೋಡಣೆ ಬಗ್ಗೆ ಬಹಳ ಗಂಭೀರವಾದ ಚರ್ಚೆ ನಡೆಯುತ್ತಿದೆ. ನದಿ ಜೋಡಣೆಯೂ ಒಂದು ಪರಿಹಾರವೇ. ಭಾರತದ ಎಲ್ಲಾ ನದಿಗಳನ್ನು ಜೋಡಿಸಿ, ಒಂದು ಹನಿ ನೀರೂ ವ್ಯರ್ಥವಾಗದಂತೆ ನಿರ್ವಹಿಸಬೇಕು. ಗೋದಾವರಿ ಮತ್ತು ಕಾವೇರಿ ನದಿ ಜೋಡಣೆ ಮಾಡಬಹುದಲ್ಲವೆ ಎಂದು ನಾನು ಚಂದ್ರಬಾಬು ನಾಯ್ಡು ಅವರೊಂದಿಗೆ ಆಗಾಗ ಚರ್ಚೆ ಮಾಡುತ್ತಿರುತ್ತೇನೆ. ಆದರೆ, ಇದು ತಕ್ಷಣಕ್ಕೆ ಆಗುವ ಕೆಲಸವಲ್ಲ ಎಂದರು.

ಬೆಂಗಳೂರಿನಂಥ ನಾಡು ಕಟ್ಟಿದ ಕೆಂಪೇಗೌಡರಿಗೆ ದೂರದೃಷ್ಟಿ ಇತ್ತು. ಅದರ ಲಾಭವನ್ನು ನಾವೀಗ ಅನುಭವಿಸುತ್ತಿದ್ದೇವೆ. ಕೆಂಪೇಗೌಡ ನಗರ ನಿರ್ಮಾತೃ, ಅವರು ಪರಂಪರೆಯನ್ನೇ ಹುಟ್ಟು ಹಾಕಿದವರು, ದೂರದೃಷ್ಟಿ ನಾಯಕ. ಅವರ ದೂರದೃಷ್ಟಿಗೆ ಬೆಂಗಳೂರು ನಗರ ಸಾಕ್ಷಿಯಾಗಿದೆ. ಅವರು ಕಟ್ಟಿದ ಬೆಂಗಳೂರು ಇಂದು ಮಿನಿ ಭಾರತವೇ ಆಗಿದೆ. ಅವರು ಆಡಳಿತ ಎಂದರೆ, ಜನರಿಗೆ ಕೇವಲ ಸೇವೆಗಳನ್ನು ನೀಡುವುದು ಎಂದು ತಿಳಿಯದೆ ಸುಸ್ಥಿರವಾಗಿ ನಗರ ನಿರ್ಮಾಣ ಮಾಡಿದ್ದಾರೆ. ಕೆರೆಗಳ ಜಾಲದ ಮೂಲಕ ಜಲ ನಿರ್ವಹಣೆ, ಪರಿಸರದ ಸಂರಕ್ಷಣೆಯ ಮಾದರಿಯನ್ನು 500 ವರ್ಷಗಳ ಹಿಂದೆಯೇ ಕೆಂಪೇಗೌಡರು ತೋರಿಸಿಕೊಟ್ಟಿದ್ದಾರೆ ಎಂದು ವಿವರಿಸಿದರು.

ಆದಿಚುಂಚನಗಿರಿ ಮಹಾಸಂಸ್ಥಾನದ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮತ್ತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾದಾರ ಚೆನ್ನಯ್ಯ ಮಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಕೇಂದ್ರ ಸಚಿವ ವಿ. ಸೋಮಣ್ಣ, ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಎಂ. ಕೃಷ್ಣೇಗೌಡ ಅವರು ವೇದಿಕೆಯಲ್ಲಿದ್ದರು.

ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ,



ನಗರ ನಿರ್ಮಾಣವೆಂದರೆ ಕೇವಲ ಕಟ್ಟಡ, ರಸ್ತೆಗಳ ನಿರ್ಮಾಣವಲ್ಲ ಎಂದು ಕೆಂಪೇಗೌಡರು ತಿಳಿದಿದ್ದರು. ಅವರು ಐದು ಶತಮಾನಗಳ ಹಿಂದೆಯೇ ಜಲ ನಿರ್ವಹಣೆ, ಪರಿಸರ ಸಂರಕ್ಷಣೆ, ಸಾಮಾಜಿಕ ಸಾಮರಸ್ಯ ಇದ್ಯಾದಿ ಕುರಿತು ಸುಸ್ಥಿರ ಯೋಜನೆಯೊಂದಿಗೆ ನಗರ ನಿರ್ಮಿಸಿದ್ದರು.

■ **ಥಾವರ್‌ಚಂದ್ ಗೆಹಲೋತ್,** ರಾಜ್ಯಪಾಲ



ಕೆಂಪೇಗೌಡರು ಬೆಂಗಳೂರು ನಗರವನ್ನು ಕಟ್ಟಿ 64 ಸಮುದಾಯಗಳಿಗೆ 64 ಪೇಟೆಗಳನ್ನು ನಿರ್ಮಾಣ ಮಾಡಿ ಕೊಟ್ಟಿದ್ದರು. ಇದಕ್ಕೆ ಕಾರಣ ಈ ನಗರವನ್ನು ನಿರ್ಮಾಣ ಮಾಡಿರುವ ಕೆಂಪೇಗೌಡರ ದೂರದೃಷ್ಟಿ. ಅವರು ಕೇವಲ ಭೌತಿಕ ವಾಗಿ ನಗರ ನಿರ್ಮಿಸಿಲ್ಲ. ನಿಷ್ಕಾಮ ಸೇವೆ ಮಾಡಿ ಎಲ್ಲ ಮತದವರಿಗೆ ದೇವಾಲಯಗಳನ್ನು ಮಾಡಿಕೊಟ್ಟಿದ್ದರು.

■ **ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ,** ಆದಿಚುಂಚನಗಿರಿ ಮಠ

ಟಿ.ವಿ. ಮೋಹನ್ ದಾಸ್ ಪೈ, ಎ.ಸಿ. ಲಕ್ಷ್ಮಣ್ ಅವರಿಗೆ ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಗಣ್ಯರಿಗೆ ಕರುನಾಡ ಪ್ರಭು ಕೆಂಪೇಗೌಡ ಪ್ರಶಸ್ತಿ ನೀಡಲಾಯಿತು.

ಸೀಶೆಲ್ಸ್: ಮೋದಿಗೆ ಅದ್ದೂರಿ ಸ್ವಾಗತ

ಪುಟ ೧➡ **ಶ್ರೀರಾಮ ಭಜನೆ, ಶಿವತಾಂಡವಸ್ತೋತ್ರದೊಂದಿಗೆ ಭರತನಾಟ್ಯ:** ಪ್ರಧಾನಿ ಮೋದಿ ಸೀಶೆಲ್ಸ್ ನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯುತ್ತಿದ್ದಂತೆ ನಿಲ್ದಾಣದ ಹೊರಗಡೆ ಜಮಾಯಿಸಿದ್ದ ಅಸಂಖ್ಯ ಜನರು ಹರ್ಷೋಲ್ಲಾಸದಿಂದ ಭಾರತದ ತ್ರಿವರ್ಣ ಧ್ವಜ ಬೀಸಿ ಪ್ರಧಾನಿ ಮೋದಿ ಅವರನ್ನು ಇದಿರುಗೊಂಡರು. ಭಾರತೀಯರ ಜತೆ ಪ್ರಧಾನಿ ಮೋದಿ ಕೆಲ ಕ್ಷಣ ಸಂವಾದ ನಡೆಸಿದರು. ಶ್ರೀರಾಮ ಸಂಕೀರ್ತನೆ ಮತ್ತು ಶಿವತಾಂಡವ ಸ್ತೋತ್ರದ ಹಿನ್ನೆಲೆಯೊಂದಿಗೆ ಆಕರ್ಷಕ ಭರತನಾಟ್ಯವನ್ನು ಲಯಬದ್ಧವಾಗಿ ಭಾರತೀಯ ಸಮುದಾಯ ಪ್ರದರ್ಶಿಸಿತು.

ಆತ್ಮೀಯ ಸ್ವಾಗತ ನೀಡಿದ ಸೀಶೆಲ್ಸ್ ಅಧ್ಯಕ್ಷ ಡಾ.ಹರ್ಮಿನ್

ಶನಿವಾರ ಮಧ್ಯಾಹ್ನ ಸೀಶೆಲ್ಸ್ ವಿಮಾನ ನಿಲ್ದಾಣ ತಲುಪಿದ ಪ್ರಧಾನಿ ಮೋದಿ ಅವರನ್ನು ಸಂಪುಟ ಸಹೋದ್ಯೋಗಿಗಳು ಮತ್ತು ಸರಕಾರಿ ಅಧಿಕಾರಿಗಳೊಡಗೂಡಿ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನ್ ವೈಯಕ್ತಿಕವಾಗಿ ಆತ್ಮೀಯವಾಗಿ ಸ್ವಾಗತಿಸಿದರು. ಸಾಂಪ್ರದಾಯಿಕ ಗೌರವ ರಕ್ಷೆಯನ್ನೂ ಪ್ರಧಾನಿ ಮೋದಿ ಸ್ವೀಕರಿಸಿದರು. ಹರ್ಮಿನ್ ಆಮಂತ್ರಣ ಮೇರೆಗೆ ಸೀಶೆಲ್ಸ್‌ಗೆ ಭೇಟಿ ನೀಡಿರುವ ಪ್ರಧಾನಿ ಮೋದಿ ಅಲ್ಲಿನ ರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮದಲ್ಲಿ ಗೌರವ ಅತಿಥಿಯಾಗಿ ಪಾಲ್ಗೊಳ್ಳುವರು.

194 ವರ್ಷದ ಜೋನಾಥನ್‌ಗೆ ಆಹಾರ ನೀಡಿದ ಮೋದಿ: ಸೀಶೆಲ್ಸ್ ಅಧ್ಯಕ್ಷ ಡಾ. ಪ್ಯಾಟ್ರಿಕ್ ಹರ್ಮಿನ್ ಜತೆ ಸೀಶೆಲ್ಸ್‌ನ ರಾಷ್ಟ್ರೀಯ ಬೊಟಾನಿಕಲ್ ಗಾರ್ಡನ್‌ಗೆ ಭೇಟಿ ನೀಡಿದ ಪ್ರಧಾನಿ ಮೋದಿ, ಅಲ್ಲಿ ಬೃಹತ್ ಆಮೆಗಳು ವಾಸವಿರುವ ಪ್ರದೇಶಕ್ಕೆ ಭೇಟಿ ನೀಡಿದರು. ಅಲ್ಲಿರುವ ಜಗತ್ತಿನ ಅತ್ಯಂತ ಹಿರಿಯ ಆಮೆಯೆಂದೇ ಪರಿಗಣಿತ 194 ವರ್ಷದ ಜೋನಾಥನ್ ಸಹಿತ ಹಲವು ಬೃಹತ್ ಆಮೆಗಳಿಗೆ ಪ್ರಧಾನಿ ಮೋದಿ ಆಹಾರ ನೀಡಿದರು. ಉಭಯ ನಾಯಕರು ಬೊಟಾನಿಕಲ್ ಗಾರ್ಡನ್‌ನಲ್ಲಿ ಸ್ಮಾರಕ ಸಸಿಗಳನ್ನು ನೆಟ್ಟರು. ನಂತರ ಗಾರ್ಡನ್‌ನ ಸಂರಕ್ಷಣಾ ಸಿಬ್ಬಂದಿಯಿಂದ ಪ್ರಧಾನಿ ಮೋದಿ ಗಾರ್ಡನ್‌ನ ವಿಶೇಷತೆಗಳ ಬಗ್ಗೆ ಮಾಹಿತಿ ಪಡೆದರು. ವಿಮಾನ ನಿಲ್ದಾಣದಿಂದ ಬೊಟಾನಿಕಲ್ ಗಾರ್ಡನ್‌ಗೆ ಪಯಣಿಸುವಾಗ ಅಧ್ಯಕ್ಷ ಹರ್ಮಿನ್ ಜತೆಗೆ ತೆಗೆದ ಫೋಟೋವನ್ನು ಎಕ್ಸ್‌ನಲ್ಲಿ ಶೇರ್ ಮಾಡಿರುವ ಪ್ರಧಾನಿ ಮೋದಿ, ಸೀಶೆಲ್ಸ್ ಅಧ್ಯಕ್ಷ ಡಾ.ಪ್ಯಾಟ್ರಿಕ್ ಹರ್ಮಿನ್ ಜತೆ ಸೀಶೆಲ್ಸ್‌ನ ರಾಷ್ಟ್ರೀಯ ಬೊಟಾನಿಕಲ್ ಗಾರ್ಡನ್‌ಗೆ ಹೊರಟಿರುವೆ ಎಂದು ಎಕ್ಸ್‌ಗೆ ಪೋಸ್ಟ್ ಹಾಕಿದ್ದಾರೆ.

ಗಸ್ತು ನೌಕೆ, ಆಂಬುಲೆನ್ಸ್ ಹಸ್ತಾಂತರ: 100 ಕೋಟಿ ರೂ. ವೆಚ್ಚದಲ್ಲಿ ಸ್ವದೇಶಿ ನಿರ್ಮಿತ ವೇಗದ ಗಸ್ತು ನೌಕೆ ಲೆಸ್ವಾರ್, ಆಂಬುಲೆನ್ಸ್, ಲೇಸರ್ ರೇಡಿಯಲ್ ದೋಣಿಗಳು ಹಾಗೂ ಸೀಶೆಲ್ಸ್ ರಕ್ಷಣಾ ಪಡೆಗೆ ಉಪಯುಕ್ತ ವಾಹನಗಳನ್ನು ಸೀಶೆಲ್ಸ್ ಅಧ್ಯಕ್ಷ ಡಾ.ಪ್ಯಾಟ್ರಿಕ್ ಅವರಿಗೆ ಪ್ರಧಾನಿ ಮೋದಿ ಹಸ್ತಾಂತರಿಸಿದರು. ಇವುಗಳಲ್ಲಿ ಒಂದು ಗಸ್ತು ನೌಕೆ, 10 ಆಂಬುಲೆನ್ಸ್, 10 ಟಾಟಾ ವಾಹನಗಳು ಹಾಗೂ 5 ಸೆಟ್ ದೋಣಿಗಳು ಸೇರಿವೆ. ಇದು ಭಾರತ ಮತ್ತು ಸೀಶೆಲ್ಸ್ ನಡುವಿನ ರಕ್ಷಣಾ ಮತ್ತು ಸಾಗರ ಸುರಕ್ಷತೆ ಪಾಲುದಾರಿಕೆಯಲ್ಲಿನ ಪ್ರಗತಿಯ ಮೈಲಿಗಲ್ಲು ಎಂದು ಮೋದಿ ಬಣ್ಣಿಸಿದ್ದಾರೆ. ಸೀಶೆಲ್ಸ್‌ನ ಹೆಮ್ಮೆಯ ನಂಬಿಕಸ್ಥ ಪಾಲುದಾರ ರಾಷ್ಟ್ರವಾಗಿ ಭಾರತ ನಿಂತಿದೆ ಎಂದಿದ್ದಾರೆ.

ಗಿಡ ನೆಟ್ಟು ಜಾಗತಿಕ ಸಂದೇಶ: ಸೀಶೆಲ್ಸ್ ಅಧ್ಯಕ್ಷ ಡಾ.ಪ್ಯಾಟ್ರಿಕ್ ಹರ್ಮಿನ್‌ರೊಂದಿಗೆ ರಾಷ್ಟ್ರೀಯ ಸಸ್ಯೋದ್ಯಾನದಲ್ಲಿ ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರಧಾನಿ ಮೋದಿ, ಕೊಕೊ ಡೆ ಮೆರ್ ಗಿಡವನ್ನು ನೆಡುವ ಮೂಲಕ ಜಾಗತಿಕ ಸಂದೇಶ ನೀಡಿದರು. ಸೀಶೆಲ್ಸ್‌ನ ವಿಶೇಷ ಗಿಡ ಕೊಕೊ ಡೆ ಮೆರ್ ಅನ್ನು ನೆಡಲಾಯಿತು. ವಿಶ್ವದ ಅತಿ ದೊಡ್ಡ ಬೀಜ ಮತ್ತು ಅತ್ಯಧಿಕ ಭಾರದ ಹಣ್ಣಿಗೆ ಹೆಸರಾದ ಈ ಮರವು ಸೀಶೆಲ್ಸ್ ರಾಷ್ಟ್ರ ಲಾಂಛನದಲ್ಲೂ ಸ್ಥಾನವನ್ನು ಪಡೆದಿದೆ. ಫ್ರಾನ್ಸ್, ಸೀಶೆಲ್ಸ್, ಎರಡೂ ತಮ್ಮ ಮುಂದಿನ ಪೀಳಿಗೆಗೆ ಪರಿಸರ ಸಂರಕ್ಷಣೆಯ ಸಂಕಲ್ಪ ಹೊಂದಿವೆ. ಪರಿಸರ ಸ್ನೇಹಿ ಹಸಿರು ವಿಶ್ವದ ನಿರ್ಮಾಣವನ್ನು ಸಾರುವ ಕಾರ್ಯಕ್ರಮ ಇದಾಗಿತ್ತು ಎಂದು ಮೋದಿ ಎಕ್ಸ್‌ನಲ್ಲಿ ಹೇಳಿದ್ದಾರೆ.

ಏನಿದು ಕೊಕೊ ಡೆ ಮೆರ್? ಕೊಕೊ ಡೆ ಮೆರ್(ಸಮುದ್ರ ತೆಂಗು), ಇದು ಸೀಶೆಲ್ಸ್ ದ್ವೀಪರಾಷ್ಟ್ರದ ಪ್ರಸ್ಲಿನ್ ಮತ್ತು ಕ್ಯೂರಿಯೂಸ್ ದ್ವೀಪಗಳಲ್ಲಿ ಮಾತ್ರ ಸ್ವಾಭಾವಿಕವಾಗಿ ಬೆಳೆಯುವ ವಿಶ್ವದ ಅತಿ ದೊಡ್ಡ ಕಾಯಿ ಹೊಂದಿರುವ ಅಪರೂಪದ ತಾಳೆ ಜಾತಿಯ ಮರವಾಗಿದೆ.

ರೀಲಾಂಚ್‌ಗೆ ಕಾದಿರುವ ಸಿಗಂದೂರು ಲಾಂಚ್

▶ **ಜಿ. ನಾಗೇಶ್ ಸಾಗರ**

ಸಾಗರ: ಸುಮಾರು ಐದು ದಶಕಗಳ ಕಾಲ ಶರಾವತಿ ಮುಳುಗಡೆ ಸಂತ್ರಸ್ತರು, ಸಿಗಂದೂರು ದೇವಿ ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ಸೇವೆ ನೀಡಿದ್ದ ಮೂರು ಲಾಂಚ್‌ಗಳು ದಡ ಸೇರಿ ಒಂದು ವರ್ಷ ಸಮೀಪಿಸಿದೆ. ಕಳೆದ ಒಂದು ವರ್ಷದಿಂದ ಮೂರು ಲಾಂಚ್ ಮಳೆ ಬಿಸಿಲಿನ ಹೊಡೆತಕ್ಕೆ ಸಿಲುಕಿ ತುಕ್ಕು ಹಿಡಿಯುತ್ತಿದ್ದರೂ ಜನಪ್ರತಿನಿಧಿಗಳು, ಅಧಿಕಾರಿಗಳು ಗಮನಹರಿಸಿಲ್ಲ ಎನ್ನುವ ಚರ್ಚೆ ಸಾಮಾಜಿಕ ಜಾಲತಾಣದಲ್ಲಿ ಜೋರಾಗಿಯೇ ನಡೆಯುತ್ತಿದೆ.

ನಾಡಿಗೆ ಬೆಳಕು ನೀಡಲು ಸರ್ವಸ್ವ ಕಳೆದುಕೊಂಡ ಹಿನ್ನೀರ ಜನರಿಗೆ ರಾಜ್ಯ ಸರ್ಕಾರ ಸಾಗರ ಕೇಂದ್ರಕ್ಕೆ ಸಂಪ ರ್ಕ ಬೆಸೆದುಕೊಳ್ಳಲು ಲಾಂಚ್ ಸೇವೆಯನ್ನು ಒದಗಿಸಿತ್ತು. ಇದಾಗಿ ಕೆಲವೇ ವರ್ಷಗಳಲ್ಲಿ ಸಿಗಂದೂರು ಚೌಡೇಶ್ವರಿ ದೇವಿ ಪ್ರಸಿದ್ಧಿಗೆ ಬಂದಿದ್ದರಿಂದ ರಾಜ್ಯದಾದ್ಯಂತ ಪ್ರವಾಸಿಗರು ಇಲ್ಲಿಗೆ ಬರಲು ಆರಂಭಿಸಿದ್ದರು.

ಒಂದೇ ಲಾಂಚ್ ಇದ್ದುದರಿಂದ ಪ್ರಯಾಣ ಸಂದರ್ಭದಲ್ಲಿ ಸ್ಥಳೀಯರು, ಪ್ರವಾಸಿಗರ ನಡುವೆ ಪರಸ್ಪರ ಘರ್ಷಣೆ ನಡೆಯುತ್ತಿತ್ತು. ನಂತರ ಒಂದರ ಹಿಂದೆ ಒಂದರಂತೆ ಮೂರು ಲಾಂಚ್ ಬಿಡಲಾಗಿದೆ.

ತುಕ್ಕು ಹಿಡಿಯುತ್ತಿದೆ: ಸಿಗಂದೂರು ಸೇತುವೆ ಸೇವೆ ಪ್ರಾರಂಭಿಸಿ ಒಂದು ವರ್ಷ ಸಮೀಪಿಸಿದೆ. ಜುಲೈನಲ್ಲಿ ಸೇತುವೆ ಅಧಿಕೃತ ಕಾರ್ಯಾರಂಭ ಮಾಡಿದ್ದರೂ, ಜೂನ್ ಅಂತ್ಯದಿಂದಲೇ ಬಹುತೇಕ ವಾಹನ ಸಂಚಾರ, ಜನ ಸಂಚಾರಕ್ಕೆ ಸೇತುವೆ ಮುಕ್ತವಾಗಿತ್ತು. ಇದರಿಂದಾಗಿ ಅಂಬಾರಗೋಡ್ಲು–ಕಳಸವಳ್ಳಿ ನಡುವೆ ಸಂಪರ್ಕ ಕಲ್ಪಿಸಿದ್ದ ಮೂರು ಲಾಂಚ್‌ಗಳನ್ನು ಪ್ರಯಾಣಿಕರಿಲ್ಲದ ಹಿನ್ನೆಲೆಯಲ್ಲಿ ಕಳಸವಳ್ಳಿ ದಡಕ್ಕೆ ತಂದು ಸೇರಿಸಲಾಯಿತು. ಅಂದಿನಿಂದ ಇಂದಿನವರೆಗೆ ಲಾಂಚ್‌ಗಳು ನೀರಿನಲ್ಲಿ ಸಂಚರಿಸಲೇ ಇಲ್ಲ.

ಮೂರು ಲಾಂಚ್‌ನ ಬಹುತೇಕ ಭಾಗಗಳು ತುಕ್ಕು ಹಿಡಿಯಲಾರಂಭಿಸಿವೆ. ಇನ್ನು ಕೆಲವರು ಲಾಂಚ್‌ನ ಕಬ್ಬಿಣ ಇನ್ನಿತರೆ ಬೆಲೆಬಾಳುವ ಭಾಗಗಳನ್ನು ಮಾರಾಟ ಮಾಡುತ್ತಿದ್ದಾರೆ. ಒಂದೊಂದು ಲಾಂಚ್ ನಾಲ್ಕೈದು ಕೋಟಿ ರೂ. ಬೆಲೆಬಾಳುತ್ತದೆ. ಅಂತಹದ್ದರಲ್ಲಿ ಮೂರು ಲಾಂಚ್‌ಗಳನ್ನು ಹೀಗೆ ತುಕ್ಕು ಹಿಡಿಯಲು ಬಿಟ್ಟಿರುವುದು, ಬಿಡಿಭಾಗಗಳನ್ನು ಕಳ್ಳತನ ಮಾಡಿಕೊಂಡು ಹೋಗಲು ಅವಕಾಶ ಕೊಟ್ಟಿರುವುದು ಎಷ್ಟು ಸರಿ. ಹೆಚ್ಚು ಭಾರ ಇರುವುದರಿಂದ ಈ ಲಾಂಚ್‌ಗಳನ್ನು ಲಾರಿ ಇನ್ನಿತರೆ ವಾಹನ ಮೂಲಕ ಇನ್ನೊಂದು ಕಡೆ ಸಾಗಿಸಲು ಬರುವುದಿಲ್ಲ. ಇರುವ ಜಾಗದಲ್ಲಿಯೆ ಅದನ್ನು ಪುನರ್ ಬಳಕೆ ಮಾಡಿಕೊಳ್ಳುವತ್ತ ಯೋಜನೆ ರೂಪಿಸಬೇಕಾಗಿದೆ. ಲಾಂಚ್‌ಗೆ ಮೂವರು ಕಾಯಂ ಡ್ರೈವರ್ ಇದ್ದರು. ಈ ಪೈಕಿ ಈಗ ಒಬ್ಬರು ಮಾತ್ರ ಇದ್ದು ಅವರು ಪ್ರತಿದಿನ ಬಂದು ಲಾಂಚ್ ನೋಡಿಕೊಂಡು ಹೋಗುತ್ತಿದ್ದಾರೆ.

ಪರ್ಯಾಯ ವ್ಯವಸ್ಥೆ ಮಾಡಬಹುದಾ?: ಉಪಯೋಗಕ್ಕೆ ಬರದೆ ನಿಂತ ಲಾಂಚ್‌ಗಳನ್ನು ಪ್ರವಾಸೋದ್ಯಮ ಇಲಾಖೆ ಮೂಲಕ ತೇಲುವ ಹೋಟೆಲ್ ಮಾಡುವುದಾಗಿ ಶಾಸಕರು ಭರವಸೆ ನೀಡಿದ್ದರು. ಆದರೆ ಅದು ದುಬಾರಿ ಮತ್ತು ಕಾರ್ಯಸಾಧುವಲ್ಲ ಎನ್ನುವ ಚರ್ಚೆ ಹಿನ್ನೆಲೆಯಲ್ಲಿ ಅದನ್ನು ಕೈಬಿಟ್ಟಿದ್ದಾರೆ ಎನ್ನಲಾಗುತ್ತಿದೆ. ಈಚೆಗೆ ಸಂಸದ ಬಿ.ವೈ. ರಾಘವೇಂದ್ರ ವಾಟರ್ ಏರೋಡ್ರಂ ಪ್ರವಾಸೋದ್ಯಮ ಹಿನ್ನೀರಿನಲ್ಲಿ ಅಭಿವೃದ್ಧಿಪಡಿಸುವ, ಯುದ್ಧ ವಿಮಾನಗಳ ಡೆಮೋ ಹಿನ್ನೀರಿನ ಮೇಲೆ ಸ್ಥಾಪಿಸುವ ಯೋಜನೆ ಕುರಿತು ವಿಶ್ವಾಸದ ಮಾತುಗಳನ್ನು ಆಡಿದ್ದರು.

ಲಾಂಚ್‌ಗಳನ್ನು ಒಂದೇ ಕಡೆ ನಿಲ್ಲಿಸಿರುವುದರಿಂದ ತುಕ್ಕು ಹಿಡಿದು ಹಾಳಾಗುತ್ತಿವೆ. ಬೇಸಿಗೆಯ ಹದಿನೈದು ಇಪ್ಪತ್ತು ದಿನ ಮಡೆನೂರು ಡ್ಯಾಂ ನೀರಿನಿಂದ ಮೇಲೆದ್ದು ಬರುತ್ತಿದ್ದು ಪ್ರವಾಸಿಗರಿಗೆ ಅದನ್ನು ನೋಡಿ ಬರಲು ಸೂಕ್ತ ರಸ್ತೆ ವ್ಯವಸ್ಥೆ ಇಲ್ಲ. ಲಾಂಚ್ ಮೂಲಕ ಪ್ರವಾಸಿಗರನ್ನು ಅಲ್ಲಿಗೆ ಕರೆದೊಯ್ದು ಅತ್ಯಂತ ವಿನ್ಯಾಸಮಯವಾಗಿ ನಿರ್ಮಿಸಿರುವ ಡ್ಯಾಂ ತೋರಿಸಿಕೊಂಡು ಬರಬಹುದು. ನಮಗೆ ಸೇವೆ ನೀಡಿದ್ದ ಮೂರು ಲಾಂಚ್ ನಮ್ಮಲ್ಲಿಯೆ ಇದ್ದು, ಸದ್ಬಳಕೆಯಾಗಬೇಕು. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಗಮನಹರಿಸಬೇಕು.

■ **ಜಿ.ಟಿ.ಸತ್ಯನಾರಾಯಣ,** ತುಮರಿ ಗ್ರಾಪಂ ಮಾಜಿ ಅಧ್ಯಕ್ಷ

ಸಂತ್ರಸ್ತ ಜನರಿಗೆ ಐದು ದಶಕ ಕಾಲ ನಿರಂತರ ಸೇವೆ ನೀಡಿದ ಲಾಂಚ್ ಜತೆ ನಮಗೆ ಅವಿನಾಭಾವ ಸಂಬಂಧವಿದ್ದು, ಅದನ್ನು ಇಲ್ಲಿಯೆ ಉಳಿಸಿಕೊಳ್ಳಲು ನಾವು ಬಯಸುತ್ತೇವೆ. ಸಂಸದರು ವಾಟರ್ ಏರೋಡ್ರಂ ಪರಿಕಲ್ಪನೆ ನೀಡಿದ್ದು ಅದು ಅನುಷ್ಠಾನಕ್ಕೆ ಬಂದರೆ ಪ್ರವಾಸಿಗರಿಗೆ ಲಾಂಚ್ ಅಗತ್ಯವಾಗಿ ಬೇಕಾಗುತ್ತದೆ. ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ತಕ್ಷಣ ಕಾರ್ಯಪ್ರವೃತ್ತವಾಗಬೇಕು.

■ **ಶ್ರೀನಿವಾಸ್ ಗದ್ದೆಮನೆ,** ತುಮರಿ ಗ್ರಾಪಂ ಸದಸ್ಯ

ಅನೈತಿಕ ಮಾರ್ಗದಿಂದ ಕೈ ಅಡ್ಡಮತದಾನ: ಸಿ.ಟಿ.ರವಿ

• **ಬೆಂಗಳೂರು:** ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಅನೈತಿಕ ಮಾರ್ಗದಿಂದ ಅಡ್ಡಮತದಾನ ಮಾಡಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಆರೋಪಿಸಿದ್ದಾರೆ.



ವಿಧಾನಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನದ ಕುರಿತು ಆಂತರಿಕ ತನಿಖಾ ವರದಿಯನ್ನು ಶನಿವಾರ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿ, ಅಡ್ಡಮತದಾನ ಆಗಿರುವುದು ಕಾಂಗ್ರೆಸ್ ಮೇಲಿನ ಅಭಿಮಾನಕ್ಕೆ ಅಂತ ಕಾಂಗ್ರೆಸ್ ನಾಯಕರು ಭಾವಿಸಬಾರದು. ಬೇರೆ ರಾಜ್ಯಗಳಲಿ ಅಡ್ಡಮತದಾನ ಆದಾಗ ಕಾಂಗ್ರೆಸ್‌ನವರು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧ ಅಂತ ಉಪದೇಶ ಮಾಡ್ತಾರೆ. ಆದರೆ ಈಗ ಅಡ್ಡಮತದಾನದ ಮೂಲಕ ಪ್ರಜಾಪ್ರಭುತ್ವವನ್ನು ಅಪಮೌಲ್ಯಗೊಳಿಸಿದ್ದಾರೆ. ಆದ್ದರಿಂದ ಇನ್ನು ಮುಂದೆ ಅವರಿಗೆ ಅಡ್ಡ ಮತದಾನ ಆದರೆ ಪ್ರಶ್ನಿಸುವ ಯಾವುದೇ ನೈತಿಕತೆ ಇಲ್ಲ ಎಂದರು.

ಚುನಾವಣೆಯಲ್ಲಿ ಯಾವ ಎಚ್ಚರಿಕೆ ವಹಿಸಬೇಕಿತ್ತು ಯಾವ ಎಚ್ಚರಿಕೆ ವಹಿಸಿಲ್ಲ ಎಂಬುದು ವರದಿಯಲ್ಲಿ ಇದೆ. ಇದು ಆಂತರಿಕ ತನಿಖೆ ಆಗಿರುವುದರಿಂದ ಹೆಚ್ಚಿನ ಮಾಹಿತಿ ನೀಡಲಾಗದು ಎಂದು ಹೇಳಿದರು. ಅಡ್ಡಮತದಾನದ ಕುರಿತು ಆಂತರಿಕ ತನಿಖೆ ಮಾಡಲು ನನ್ನೊಂದಿಗೆ ಮಾಜಿ ಸಚಿವ ಎನ್. ಮಹೇಶ, ಶಾಸಕ ಮಹೇಶ್ ಟೆಂಗಿನಕಾಯಿ ಅವರು ಸೇರಿದ ಮೂರು ಜನರ ಸಮಿತಿ ಮಾಡಿದ್ದರು. ಆದಷ್ಟು ಬೇಗ ಆಂತರಿಕವಾಗಿ ತನಿಖೆ ನಡೆ ವರದಿ ನೀಡಿ ಎಂದು ರಾಜ್ಯಾಧ್ಯಕ್ಷರು ನಿರ್ದೇಶನ ನೀಡಿದ್ದರು. ಅಡ್ಡಮತದಾನ ಮಾಡಿದವರ ಬಗ್ಗೆ ಮಾಧ್ಯಮ ಮತ್ತು ಸಾರ್ವಜನಿಕ ವಲಯದಲ್ಲಿ ಅನುಮಾನ ಕಂಡು ಬಂದವರ ಪಟ್ಟಿ ಮಾಡಿ ಅವರೊಂದಿಗೆ ಚರ್ಚೆ ಮಾಡಿದ್ದೇವೆ. ಅಭ್ಯರ್ಥಿಗಳ ಜತೆಗೆ ಮಾತುಕತೆ ನಡೆಸಿ ಅಭಿಪ್ರಾಯ ಸಂಗ್ರಹಿಸಿದ್ದೇವೆ ಎಂದರು.



ರಾಷ್ಟ್ರೀಯ ಸ್ವಯಂಸೇವಕ ಸಂಘ (ಪುಟ್ಟೇನಹಳ್ಳಿ ನಗರ, ಜಯನಗರ ಭಾಗ) ವತಿಯಿಂದ ಆರ್‌ಬಿಐ ಬಡಾವಣೆ ಆಟದ ಮೈದಾನದಲ್ಲಿ ಆಯೋಜಿಸಿದ್ದ ಹಿಂದೂ ಸಾಮ್ರಾಜ್ಯ ದಿನೋತ್ಸವ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ನ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಬೌದ್ಧಿಕ್ ನೀಡಿದರು. ಈ ವೇಳೆ ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್.ಉಮಾಪತಿ, ಜಯನಗರ ಭಾಗ ಸಂಘಚಾಲಕ ನರಹರಿ ರಾವ್ ಇದ್ದರು.

ಬಸ್ ಪ್ರಯಾಣ ದರ ಏರಿಕೆಗೆ ಚಿಂತನೆ: ಬೈರತಿ ಸುರೇಶ್

• **ಬೆಂಗಳೂರು:** ದಿನದಿಂದ ದಿನಕ್ಕೆ ಪೆಟ್ರೋಲ್, ಡೀಸೆಲ್ ದರಗಳು ಹೆಚ್ಚಾಗುತ್ತಿವೆ. ಎಲ್ಲಾ ಸಾರಿಗೆ ನಿಗಮಗಳಿಗೆ ಸುಮಾರು 5 ಸಾವಿರ ಕೋಟಿ ರೂ. ನಷ್ಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬಸ್ ಪ್ರಯಾಣ ದರ ಏರಿಕೆ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದರು.



ಹೆಬ್ಬಾಳದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಸ್ ಪ್ರಯಾಣ ದರ ಏರಿಕೆ ಮಾಡುವ ಬಗ್ಗೆ ಸರ್ಕಾರಕ್ಕೆ ಇಲಾಖೆಯಿಂದ ಇದುವರೆಗೆ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ. ಮುಂದಿನ ಸಂಪುಟ ಸಭೆಗಳಲ್ಲಿ ಈ ಬಗ್ಗೆ ಪ್ರಸ್ತಾವನೆ ಮಂಡಿಸಲಾಗುತ್ತದೆ ಎಂದರು. ಸಾರಿಗೆ ದರ ಏರಿಕೆ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ. ಆದಾಗ್ಯೂ, ಜನ ಸಾಮಾನ್ಯರಿಗೆ ಹೊರೆ ಆಗದ ರೀತಿಯಲ್ಲಿ ಪ್ರಯಾಣ ದರ ಹೆಚ್ಚಳ ಮಾಡುವ ಬಗ್ಗೆ ಚರ್ಚೆಗಳು ನಡೆದಿವೆ ಎಂದರು.

ಸುರಂಗ ರಸ್ತೆ ನಿರ್ಮಾಣಕ್ಕೆ ಭೂಮಿಪೂಜೆ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಹೆಬ್ಬಾಳ ಜಂಕ್ಷನ್‌ನಿಂದ ಯುಎಎಸ್ ಕ್ವಾಟರ್ಸ್ ವರೆಗಿನ ಸುರಂಗ ರಸ್ತೆ ನಿರ್ಮಾಣಕ್ಕೆ ಸಿಎಂ ಡಿ.ಕೆ. ಶಿವಕುಮಾರ್ ಭಾನುವಾರ ಬೆಳಗ್ಗೆ 9.30 ಕ್ಕೆ ಹೆಬ್ಬಾಳ ಜಂಕ್ಷನ್‌ನಲ್ಲಿ ಭೂಮಿಪೂಜೆ ನೆರವೇರಿಸಲಿದ್ದಾರೆ. ಮೇಖ್ರಿ ವೃತ್ತದಿಂದ ಹೆಬ್ಬಾಳ ಜಂಕ್ಷನ್ ವರೆಗೆ ಸಾಕಷ್ಟು ಸಂಚಾರ ದಟ್ಟಣೆ ಉಂಟಾಗುತ್ತಿತ್ತು. ಇದರಿಂದ ವಿಮಾನ ನಿಲ್ದಾಣ ಸೇರಿದಂತೆ ಇತರೆಡೆಗೆ ಹೋಗುವುದು ಕಷ್ಟವಾಗುತ್ತಿತ್ತು. ಈ ಸಮಸ್ಯೆ ನಿವಾರಣೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಸುರಂಗ ರಸ್ತೆ ನಿರ್ಮಾಣಕ್ಕೆ ನಿರ್ಧರಿಸಿದೆ ಎಂದರು.

ಕಿರುಸುದ್ದಿ

ಜಿಲ್ಲಾ ನ್ಯಾ, ತಹಸೀಲ್ದಾರ್ ಕಚೇರಿಗೆ ಬಾಂಬ್ ಬೆದರಿಕೆ

• **ಬೀದರ್:** ನಗರದ ಜಿಲ್ಲಾ ನ್ಯಾಯಾಲಯ ಹಾಗೂ ತಹಸೀಲ್ದಾರ್ ಕಚೇರಿಗೆ ಶನಿವಾರ ಬಾಂಬ್ ಬೆದರಿಕೆಯ ಇಮೇಲ್ ಬಂದಿದೆ. ಜಿಲ್ಲಾ ಸತ್ರ ನ್ಯಾಯಾಲಯದ ಅಧಿಕೃತ ಇ-ಮೇಲ್ ವಿಳಾಸಕ್ಕೆ ಬಾಂಬ್ ಬೆದರಿಕೆ ಮೇಲ್ ಬಂದಿರುವ ವಿಷಯ ಗೊತ್ತಾಗುತ್ತಿದ್ದಂತೆ ನ್ಯಾಯಾಧೀಶರು, ವಕೀಲರು ಹಾಗೂ ಕಕ್ಷಿದಾರರು ಕಟ್ಟಡದಿಂದ ಹೊರಭಾಗಕ್ಕೆ ಬಂದರು. ತಕ್ಷಣವೇ ಮಾರ್ಕೆಟ್ ಠಾಣೆ ಪೊಲೀಸರಿಗೆ ತಿಳಿಸಲಾಯಿತು. ಶ್ವಾನ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದೊಂದಿಗೆ ಸ್ಥಳಕ್ಕೆ ಬಂದ ಪೊಲೀಸರು ಪರಿಶೀಲನೆ ನಡೆಸಿದರು. ನ್ಯಾಯಾಲಯಕ್ಕೆ ಹೊಂದಿಕೊಂಡಿರುವ ತಹಸೀಲ್ದಾರ್ ಕಚೇರಿಗೂ ಇಂಥದ್ದೇ ಮೇಲ್ ಬಂದಿತ್ತು. ಅಲ್ಲೂ ಕೂಡ ಪರಿಶೀಲಿಸಿದಾಗ, ಇದೊಂದು ಸುಳ್ಳು ಬೆದರಿಕೆಯ ಇಮೇಲ್ ಎಂಬುದು ದೃಢಪಟ್ಟಿತು. ಕೆಲ ತಿಂಗಳ ಹಿಂದೆ ನಗರದ ಗುರುದ್ವಾರಕ್ಕೂ ಇದೇ ರೀತಿಯ ಮೇಲ್ ಬಂದಿತ್ತು.

ಭಾ.ಮಾ.ಹರೀಶ್‌ರವರ ಪುತ್ರ ಚಾರಣದ ವೇಳೆ ಸಾವು

• **ನಗರ(ಹೊಸನಗರ):** ರಾಜ್ಯದ ಪ್ರಸಿದ್ಧ ಪ್ರವಾಸಿ ತಾಣವಾದ ಹೊಸನಗರ ತಾಲೂಕಿನ ಕೊಡಚಾದ್ರಿ ಬೆಟ್ಟದಲ್ಲಿ ಬೆಂಗಳೂರಿನಿಂದ ಚಾರಣಕ್ಕಾಗಿ ಬಂದಿದ್ದ ತಂಡದಲ್ಲಿದ್ದ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷರು ಮತ್ತು ಸಿನಿಮಾ ನಿರ್ಮಾಪಕರಾದ ಭಾ.ಮಾ.ಹರೀಶ್‌ರವರ ಪುತ್ರ ಉಲ್ಲಾಸ್(28) ತೀವ್ರ ಹೃದಯಾಘಾತದಿಂದ ಸಾವನ್ನಪ್ಪಿರುವ ಹೃದಯ ವಿದ್ರಾವಕ ಘಟನೆ ಶನಿವಾರ ನಡೆದಿದೆ. ಬೆಳಗ್ಗೆ ಚಾರಣ ಹೊರಟಿದ್ದ 13 ಯುವಕರ ತಂಡ ಕೊಡಚಾದ್ರಿಯ ತುತ್ತ ತುದಿ ಸರ್ವಜ್ಞ ಪೀಠಕ್ಕೂ ತೆರಳಿ ವಾಪಾಸಾಗುವ ಮಾರ್ಗದ ಮಧ್ಯೆ ಉಲ್ಲಾಸ ಹೃದಯಾಘಾತದಿಂದ ಕುಸಿದಿದ್ದಾರೆ. ತಕ್ಷಣ ಉಲ್ಲಾಸ ಅವರನ್ನು ಬೆಟ್ಟದ ನಡುವಿನ ಕಿರಿದಾದ ಕಾಲು ಮಾರ್ಗದಲ್ಲಿ ಕೊಡಚಾದ್ರಿಯ ಪರ್ವತೇಶ್ವರ ದೇಗುಲದವರೆಗೂ ಹೊತ್ತು ತರಲಾಯಿತು. ನಂತರ ದುರ್ಗಮ ಮಾರ್ಗದಲ್ಲಿ ಜೀಪ್ ಮೂಲಕ ಕಟ್ಟಿಹೊಳೆಯವರೆಗೆ ತಂದು ಆಂಬುಲೆನ್ಸ್ ಮೂಲಕ ನಗರ ಸಂಯುಕ್ತ ಆಸ್ಪತ್ರೆಗೆ ಚಿಕಿತ್ಸೆಗೆ ತರಲಾಗಿತ್ತು. ಈ ಮಧ್ಯೆ ಪ್ರಥಮ ಚಿಕಿತ್ಸೆಗೆ ತೆರಳಲು ಸುಮಾರು 2 ತಾಸುಗಳಾಗಿದ್ದು, ಹೊಸನಗರ ತಾಲೂಕು ಆಸ್ಪತ್ರೆಗೆ ತೆರಳುವ ವೇಳೆಗೆ ಉಲ್ಲಾಸ್ ಸಾವನ್ನಪ್ಪಿದ್ದರು. ಮೃತ ಯುವಕನ ಮರಣೋತ್ತರ ಪರೀಕ್ಷೆಯು ಹೊಸನಗರ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ನಡೆದಿದೆ. ಈ ಕುರಿತು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಪೊಲೀಸರು ವಿಚಾರಣೆ ಕೈಗೊಂಡಿದ್ದಾರೆ.

ಅಪಘಾತದಲ್ಲಿ ಕುಟುಂಬದ ಐವರು ಸೇರಿ 6 ಮಂದಿ ಸಾವು

• **ಕೊಪ್ಪಳ:** ಜಿಲ್ಲೆಯ ಕುಕನೂರು ತಾಲೂಕಿನ ಭಾನಾಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಶನಿವಾರ ಬೆಳಗಿನ ಜಾವ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಐವರು ಮೃತಪಟ್ಟಿದ್ದಾರೆ. ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲೂಕಿನ ಕಬ್ಬಾರ್ ಗ್ರಾಮದ ನಿವಾಸಿಗಳು ಓಮಿನಿ ವಾಹನದಲ್ಲಿ ಮಂತ್ರಾಲಯಕ್ಕೆ ತೆರಳುತ್ತಿದ್ದ ವೇಳೆ, ಪಕ್ಕದ ರಸ್ತೆಯಲ್ಲಿ ಸಂಚರಿಸುತ್ತಿದ್ದ ಅಶೋಕ್ ಲೇಲ್ಯಾಂಡ್ ಲಾರಿ ನಿಯಂತ್ರಣ ತಪ್ಪಿ ಡಿವೈಡರ್ ದಾಟಿ ಎದುರು ಬರುತ್ತಿದ್ದ ಓಮಿನಿ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಈ ದುರಂತ ಸಂಭವಿಸಿದೆ. ಅಪಘಾತದಲ್ಲಿ ಹೇಮಾ (ಕೆಂಚಮ್ಮ) ಬಾಳೆಕಾಯಿ (35), ಅಮೃತಾ ಕೋಟ್ಯಾಳ್ (25), ಅವರ ಪುತ್ರ ಪ್ರಣವ್ (10), ರಮೇಶ್ ಬಳ್ಳಾರಿ (45) ಹಾಗೂ ಪ್ರವೀಣ್ ಬಾಳೆಕಾಯಿ (23) ಚಿನ್ಮಯ (30) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದಲ್ಲಿ ಉಳಿದ ಗಾಯಗೊಂಡ 5 ಮಂದಿ ಕೊಪ್ಪಳ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ನಾಡಪ್ರಭುವಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಮನ | 28 ವಿಧಾನಸಭಾ ಕ್ಷೇತ್ರಗಳಲ್ಲಿ 28 ವರ್ಷ ಕಾರ್ಯಕ್ರಮ

ದೂರದೃಷ್ಟಿಯ ನಾಡಪ್ರಭು ಕೆಂಪೇಗೌಡ

• **ದೇವನಹಳ್ಳಿ:** ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಕೇವಲ ವಿಧಾನಸೌಧ ಹೊರತಾಗಿ, ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳಲ್ಲಿ ಮುಂದಿನ 28 ವರ್ಷಗಳ ಕಾಲ ಒಂದೊಂದು ಕ್ಷೇತ್ರದಲ್ಲಿ ರಾಜ್ಯಮಟ್ಟದ ಕೆಂಪೇಗೌಡ ಜಯಂತಿ ಆಚರಣೆ ಮಾಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ಬೆಂಗಳೂರು ನಿರ್ಮಾತೃ, ಸರ್ವ ಜನಾಂಗದ ನಾಯಕ, ಬೆಂದಕಾಳೂರು ಕಟ್ಟಿದ ದೂರದೃಷ್ಟಿಯ ನಾಯಕ ಕೆಂಪೇಗೌಡರ 517ನೇ ಜಯಂತಿ ಅಂಗವಾಗಿ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ನಾಡಪ್ರಭು ಕೆಂಪೇ ಗೌಡರ 108 ಅಡಿ ಎತ್ತರದ ಕಂಚಿನ ಬೃಹತ್ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ 517ನೇ ಕೆಂಪೇಗೌಡ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ನಂತರ ಪ್ರತಿಮೆಯ ಪಕ್ಕದಲ್ಲಿ ನಿರ್ಮಾಣ ಮಾಡಿರುವ ಥೀಮ್ ಪಾರ್ಕ್ ಅನ್ನು ವೀಕ್ಷಿಸಿ ಮುಖ್ಯಮಂತ್ರಿಗಳು ಮಾತನಾಡಿ, ಇಂದು ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮ ಮಾಡುತ್ತಿದ್ದು, ಮುಂದಿನ ವರ್ಷ ಶಾಸಕರೊಂದಿಗೆ ಚರ್ಚಿಸಿ ಬ್ಯಾಟರಾಯನಪುರ, ಯಲಹಂಕ, ಕೆ.ಆರ್.ಪುರ ಅಥವಾ ಬೇರೆ ಕ್ಷೇತ್ರಗಳಲ್ಲಿ ಕೆಂಪೇಗೌಡರ ಜಯಂತಿಯ ರಾಜ್ಯಮಟ್ಟದ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಗುವುದು.

ಮುಂದಿನ ಸಾವಿರಾರು ವರ್ಷಗಳ ದೂರದೃಷ್ಟಿ ಇಟ್ಟುಕೊಂಡು ಕೋಟ್ಯಂತರ ಉದ್ಯೋಗ ಸೃಷ್ಟಿ ಹಾಗೂ ಜನರಿಗೆ ಜೀವನ ಕಟ್ಟಿಕೊಳ್ಳುವಂತೆ ಅಂದಿನ ಬೆಂದಕಾಳೂರು(ಬೆಂಗಳೂರು) ಅನ್ನು ವ್ಯವಸ್ಥಿತವಾಗಿ ನಿರ್ಮಿಸಿದ ದೂರದೃಷ್ಟಿಯ ಮಹಾಚೇತನ ಕೆಂಪೇಗೌಡರು ಎಂದು ಸಿಎಂ ನಾಡಪ್ರಭು ಕೆಂಪೇಗೌಡರನ್ನು ಬಣ್ಣಿಸಿದರು. ಕೆಂಪೇಗೌಡರ ಚಿಂತನೆ, ಆಚಾರ, ವಿಚಾರ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮ್ಯಾರಥಾನ್ ಓಟ, ಬೆಂಗಳೂರಿನಲ್ಲಿ 15 ಲಕ್ಷ ಸಸಿ ನೆಡುವ ಕಾರ್ಯಕ್ರಮ, ಮಾಗಡಿಯಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಕೆಂಪೇಗೌಡರ ಕೋಟೆ ಸಮಗ್ರ ಅಭಿವೃದ್ಧಿ ಕಾರ್ಯ ಹಮ್ಮಿಕೊಂಡಿದ್ದೇವೆ, ಮಾಗಡಿಯಲ್ಲಿರುವ ಕೆಂಪೇಗೌಡರ ಸಮಾಧಿ ಬಳಿ 10 ಎಕರೆ ಜಮೀನು ಸ್ವಾಧೀನ ಪ್ರಕ್ರಿಯೆ ಆರಂಭವಾಗಿದ್ದು, ಈಗಾಗಲೇ ಐದೂವರೆ ಎಕರೆ ಖರೀದಿ ಮಾಡಲಾಗಿದೆ? ಎಂದು ಮಾಹಿತಿ ನೀಡಿದರು.



> ರಾಜ್ಯಾದ್ಯಂತ ಎಲ್ಲಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹಾಗೂ ವಾರ್ಡ್ ಮಟ್ಟದಲ್ಲಿ ಈ ಕಾರ್ಯಕ್ರಮ ಆಚರಣೆಗೆ ಜಿಬಿಎ ವತಿಯಿಂದ ಆದೇಶ ಮಾಡಲಾಗಿದೆ. ಕೆಂಪೇಗೌಡರ ಆಚಾರ ವಿಚಾರ ಅಳವಡಿಸಿಕೊಂಡು ಬೆಂಗಳೂರಿನ ಅಭಿವೃದ್ಧಿಗೆ ಯೋಜನೆ ರೂಪಿಸಲಾಗುವುದು. ಬೆಂಗಳೂರಿಗೆ ಹೊಸ ರೂಪ ನೀಡಲು ಕ್ರಮ ಕೈಗೊಳ್ಳಲಾಗುವುದು.
> ■ **ಡಿ.ಕೆ.ಶಿವಕುಮಾರ್**, ಸಿಎಂ

ಪ್ರಾಧಿಕಾರದಿಂದ ಒಪ್ಪಿಗೆ: 108 ಅಡಿಯ ಈ ಕಂಚಿನ ಪ್ರತಿಮೆ ಬಳಿ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಹಸಿರು ರೂಪಿಸಲಾಗಿದೆ. ಇಲ್ಲಿನ ಕಾಮಗಾರಿ ಸಂಪೂರ್ಣ ಮುಗಿದ ಬಳಿಕ ಇದನ್ನು ಉದ್ಘಾಟನೆ ಮಾಡುತ್ತೇವೆ, ಈ 'ಕೆಂಪೇಗೌಡರ ಥೀಮ್ ಪಾರ್ಕ್' ಅನ್ನು ವಿಮಾನ ನಿಲ್ದಾಣ ಪ್ರಾಧಿಕಾರ ನಿರ್ವಹಣೆ ಮಾಡಲು ಸೂಚಿಸಿದ್ದೇನೆ. ಇದಕ್ಕೆ ಪ್ರಾಧಿಕಾರವೂ ಒಪ್ಪಿದ್ದು, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ, ಸಿರಾ ತಾಲೂಕಿನ ಸ್ಪಟಿಕಪುರಿಯ ನಂಜಾವಧೂತ ಸ್ವಾಮೀಜಿ ಹಾಗೂ ವಿಶ್ವ ಒಕ್ಕಲಿಗರ ಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದರು. ಕಾರ್ಯಕ್ರಮದ ವೇದಿಕೆಯಲ್ಲಿ ಸಚಿವರಾದ ಕೆ.ಎಚ್.ಮುನಿಯಪ್ಪ, ಕೃಷ್ಣ ಭೈರೇಗೌಡ, 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ.ನಾರಾಯಣಸ್ವಾಮಿ, ಶಾಸಕರಾದ ಪ್ರದೀಪ್ ಈಶ್ವರ, ರಿಜ್ವಾನ್ ಅರ್ಷದ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್, ನಗರ ಪೊಲೀಸ್ ಆಯುಕ್ತ ಸಿಮಂತ್‌ಕುಮಾರ್ ಸಿಂಗ್ ಇದ್ದರು.

ಕೆಂಪೇಗೌಡರು ಎಲ್ಲಾ ವರ್ಗದ ಆಸ್ತಿ

ಬೆಂಗಳೂರಿನಲ್ಲಿ 1.40 ಕೋಟಿ ಜನಸಂಖ್ಯೆ ಇದ್ದು, 1.30 ಕೋಟಿ ವಾಹನಗಳ ಸಂಖ್ಯೆ ಇವೆ, ನಾವು ಎಷ್ಟೇ ಮೆಟ್ರೋ, ಸಾರ್ವಜನಿಕ ಸಾರಿಗೆ ತಂದರೂ ಒಬ್ಬರು ಒಂದೊಂದು ವಾಹನ ಇಟ್ಟುಕೊಂಡಿದ್ದಾರೆ, ಮುಂದಿನ ಒಂದು ವರ್ಷದಲ್ಲಿ ವಿಮಾನ ನಿಲ್ದಾಣಕ್ಕೆ ಮೆಟ್ರೋ ಸಂಪರ್ಕ ಸಾಧಿಸಲು ಮುಂದಾಗಿದ್ದೇವೆ, ನಮ್ಮ ಮುಂದಿನ 2 ವರ್ಷಗಳ ಅವಧಿಯಲ್ಲಿ 500 ಕಿ.ಮೀ ಉದ್ದದ ಮೆಟ್ರೋ ವಿಸ್ತರಣೆಗೆ ಆಲೋಚನೆ ಮಾಡಿದ್ದು, ಕೃಷ್ಣ ಬೈರೇಗೌಡರು ಈ ಬಗ್ಗೆ ಚಿಂತನೆ ಮಾಡಲಿದ್ದಾರೆ. ಈ ಕಾರ್ಯಕ್ರಮ ಒಂದು ಜಾತಿಗೆ ಸೀಮಿತವಲ್ಲ. ಇದು ಕೆಂಪೇಗೌಡರ ದೂರದೃಷ್ಟಿ, ಆಚಾರ, ವಿಚಾರಗಳ, ನೀತಿಯನ್ನು ಬಿಂಬಿಸುವ ಮಹತ್ವದ ಕಾರ್ಯಕ್ರಮವಾಗಿದೆ. ಕೆಂಪೇಗೌಡರು ರಾಜ್ಯದ ಎಲ್ಲಾ ವರ್ಗದ ಆಸ್ತಿಯಾಗಿದ್ದಾರೆ ಎಂದು ಸಿಎಂ ತಿಳಿಸಿದರು.

15 ಲಕ್ಷ ಸಸಿ ನೆಟ್ಟು ದಾಖಲೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆ, ವಿವಿಧ ಸರ್ಕಾರಿ ಇಲಾಖೆ ಹಾಗೂ ಸಾರ್ವಜನಿಕ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ಬೆಂಗಳೂರು ನಗರ ಪುನಶ್ಚೇತನ ಮಿಷನ್ 2026-30ರ ಅಂಗವಾಗಿ, ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ 2026 ಶನಿವಾರ ನಗರದ ವಿವಿಧ ಭಾಗಗಳಲ್ಲಿ 12 ಗಂಟೆಗಳಲ್ಲಿ 15 ಲಕ್ಷ ಸ್ಥಳೀಯ ತಳಿ ಸಸಿಗಳನ್ನು ಸುಮಾರು 65 ಸಾವಿರಕ್ಕೂ ಹೆಚ್ಚು ಸ್ವಯಂ ಸೇವಕರು, ಎನ್‌ಜಿಓಗಳು ಸಸಿ ನೆಡುವ ಮೂಲಕ ಗಿನ್ನಿಸ್ ದಾಖಲೆ ಬರೆದಿದ್ದಾರೆ.



10 ಕಿಮಿ ಮ್ಯಾರಾಥಾನ್

ಈ ಕಾರ್ಯಕ್ರಮದ ಅಂಗವಾಗಿ ಬಿಡಿಎ ವತಿಯಿಂದ ಹಮ್ಮಿಕೊಳ್ಳಲಾದ ಕೆಂಪೇಗೌಡ ರನ್-2026 ಸಹ ಯಶಸ್ವಿಯಾಗಿ ನಡೆಯಿತು. 5 ಕಿ.ಮೀ. ಮತ್ತು 10 ಕಿ.ಮೀ. ಓಟಗಳಲ್ಲಿ ಸಾವಿರಾರು ಓಟಗಾರರು ಉತ್ಸಾಹದಿಂದ ಭಾಗವಹಿಸಿದರು. ಓಟವು ನಗರದ ಎಸ್.ಎಂ.ಕೃಷ್ಣ ರಸ್ತೆ, ಚಲ್ಲಘಟ್ಟ ಮೆಟ್ರೊ ನಿಲ್ದಾಣದಿಂದ ಆರಂಭಗೊಂಡು, ಅದೇ ಸ್ಥಳದಲ್ಲಿ ಸಮಾಪ್ತಿಗೊಂಡಿತು. ಈ ಬೃಹತ್ ಸಸಿ ನೆಡುವ ಅಭಿಯಾನದಲ್ಲಿ ಸಾವಿರಾರು ನಾಗರಿಕರು, ವಿದ್ಯಾರ್ಥಿಗಳು, ಸರ್ಕಾರಿ ಅಧಿಕಾರಿಗಳು, ನಿವಾಸಿಗಳ ಕಲ್ಯಾಣ ಸಂಘಗಳು, ಸ್ವಯಂಸೇವಾ ಸಂಸ್ಥೆಗಳು, ಕಾರ್ಪೊರೇಟ್ ಸ್ವಯಂಸೇವಕರು ಹಾಗೂ ಪರಿಸರ ಸಂಘಟನೆಗಳು ಉತ್ಸಾಹದಿಂದ ಪಾಲ್ಗೊಂಡು ಹಸಿರು ಹಾಗೂ ಸುಸ್ಥಿರ ಬೆಂಗಳೂರಿನ ನಿರ್ಮಾಣಕ್ಕೆ ಕೈಜೋಡಿಸಿದರು.

ಪ್ರಮುಖ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ

ಬತ್ತುತ್ತಿರುವ ಜೀವನದಿ ಕಾವೇರಿ

• **ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಮಳೆಯ ಕೊರತೆಯಿಂದಾಗಿ ಜೀವನದಿ ಕಾವೇರಿ ನದಿಯಲ್ಲಿ ನೀರಿನ ಹರಿವು ಸಂಪೂರ್ಣ ಕಡಿಮೆಯಾಗಿದ್ದು, ಭವಿಷ್ಯದಲ್ಲಿ ಬೆಂಗಳೂರು, ಮೈಸೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಆತಂಕ ತಲೆದೋರಿದೆ.

ಜಿಲ್ಲೆಗೆ ಮುಂಗಾರು ಕಾಲಿರಿಸಿದ್ದರೂ, ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಪರಿಣಾಮ ಕಾವೇರಿಯಲ್ಲಿ ಹರಿವು ಗಣನೀಯವಾಗಿ ಕುಸಿದಿದೆ ಸಾಮಾನ್ಯವಾಗಿ ಮಳೆಗಾಲದ ಆರಂಭದಲ್ಲೇ ತುಂಬಿ ಹರಿಯಬೇಕಿದ್ದ ನದಿ ಈಗ ಕಲ್ಲುಗಳ ನಡುವೆ ಸಣ್ಣ ಹರಿವಿಗೆ ಸೀಮಿತವಾಗಿದೆ. ಕೊಡಗು-ಮೈಸೂರು ಗಡಿಯ ಕೊಪ್ಪ ಸೇತುವೆ ಬಳಿ ನದಿಯ ನೀರಿನ ಮಟ್ಟ ತೀವ್ರವಾಗಿ ಕುಸಿ ದಿದೆ. ಈ ಸಮಯದಲ್ಲಿ ಸುಮಾರು 10 ರಿಂದ 15 ಅಡಿ ನೀರು ಹರಿಯುವ ಪ್ರದೇಶದಲ್ಲಿ ಈಗ ಕೇವಲ ಅರ್ಧದಿಂದ ಒಂದು ಅಡಿ ಮಟ್ಟದಲ್ಲಿ ಮಾತ್ರ ನೀರು ಕಾಣಿಸುತ್ತಿದೆ. ಜಲಮಾಪಕದಲ್ಲೂ ನೀರಿನ ಮಟ್ಟ ಶೂನ್ಯಕ್ಕೆ ತಲುಪಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸಿದೆ.

ಜಿಲ್ಲೆಯಲ್ಲಿ ಈಗಾಗಲೇ ಶೇ. 70ರಷ್ಟು ಮಳೆ ಕೊರತೆ ದಾಖಲಾಗಿರುವುದು ಜಲಮೂಲಗಳ ಮೇಲೆ ನೇರ ಪರಿಣಾಮ ಬೀರಿದೆ. ವಿಶೇಷವಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯ ಅಭಾವದಿಂದ ನದಿ ಹರಿವು ಕುಂಠಿತವಾಗಿದೆ.



ಇದರಿಂದಾಗಿ ಕಾವೇರಿ ನೀರನ್ನೇ ಅವಲಂಬಿ ಸಿರುವ ಬೆಂಗಳೂರು, ಮೈಸೂರು, ಮಂಡ್ಯ, ಕೊಡಗು ಸೇರಿದಂತೆ ಹಲವು ಪ್ರದೇಶಗಳಲ್ಲಿ ಭವಿಷ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಭೀತಿ ಎದುರಾಗಿದೆ. ಜೊತೆಗೆ ಕೃಷಿ ಚಟುವಟಿಕೆಗಳಿಗೂ ಹೊಡೆತ ಬೀಳುವ ಸಾಧ್ಯತೆ ಹೆಚ್ಚಿದೆ. ಕಾವೇರಿ ನದಿಯ ಪ್ರಮುಖ ಜಲಾಶಯಗಳಾದ ಕೆಆರ್ ಎಸ್ ಹಾಗೂ ಹಾರಂಗಿ ಜಲಾಶಯಗಳಲ್ಲೂ ನೀರಿನ ಸಂಗ್ರಹ ನಿರೀಕ್ಷಿತ ಮಟ್ಟ ತಲುಪದಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

ಜಿಲ್ಲಾ ನ್ಯಾಯಾಲಯ, ಕೇಂದ್ರೀಯ ವಿದ್ಯಾಲಯಕ್ಕೆ ಬಾಂಬ್ ಬೆದರಿಕೆ

• **ಮಡಿಕೇರಿ:** ನಗರದ ಹೊರವಲಯದಲ್ಲಿರುವ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯ ಮತ್ತು ಜಿಲ್ಲಾ ನ್ಯಾಯಾಲಯಕ್ಕೆ ಶನಿವಾರ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿದೆ. ಬೆದರಿಕೆ ಸಂದೇಶದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಮನೆಗೆ ಕಳುಹಿಸಲಾಗಿದೆ.

ನ್ಯಾಯಾಲಯದ ಒಳಗೆ ವಕೀಲರು ಮತ್ತು ಸಿಬ್ಬಂದಿ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದ್ದು, ಕಲಾಪಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಮಡಿಕೇರಿ ನ್ಯಾಯಾಲಯಕ್ಕೆ ಕಳೆದ ಫೆಬ್ರವರಿ 16ರಂದು ಮೊದಲ ಸಲ ಮತ್ತು ಜೂ.23 ರಂದು ಎರಡನೇ ಸಲ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಪರಿಶೀಲನೆ ಸಂದರ್ಭ ಹುಸಿ ಬಾಂಬ್ ಬೆದರಿಕೆ ಎಂದು ತಿಳಿದು ಬಂದಿತ್ತು. ಮಡಿಕೇರಿ ಕೋರ್ಟ್ ಸಮೀಪದಲ್ಲೇ ಪಿಎಂಶ್ರೀ ವಿದ್ಯಾಲಯವಿದ್ದು, ಈ ಬಾರಿ ಇಲ್ಲಿಗೂ ಕೂಡಾ ಬಾಂಬ್ ಬೆದರಿಕೆ ಸಂದೇಶ ಬಂದಿರುವುದು ವಿಶೇಷವಾಗಿದೆ. ಹಾಗೇಯೇ ಚಾಮರಾಜನಗರ ಜಿಲ್ಲಾ ನ್ಯಾಯಾಲಯಕ್ಕೂ ಬಾಂಬ್ ಬೆದರಿಕೆ ಬಂದಿದ್ದು, ತೀವ್ರ ತಪಾಸಣೆ ನಡೆಸಿದ್ದಾರೆ.

ಬೆಳ್ಳಿಗಟ್ಟಿ ಕಳವಾಗಿಲ್ಲ , ಸುರಕ್ಷಿತವಾಗಿವೆ:ಎಸ್‌ಐಟಿ

ಪುಟ ೧➡ ಆದರೆ ಸರಕಾರ ಮತ್ತು ಭದ್ರತಾ ಪಡೆಗಳು ನಡೆಸಿದ ತನಿಖೆಯಲ್ಲಿ ಅವು ಸಂಪೂರ್ಣ ಸುರಕ್ಷಿತವಾಗಿವೆ. ಮತ್ತು ಅವನ್ನು ಪಾರದರ್ಶಕ ವ್ಯವಸ್ಥೆಯಲ್ಲಿ ರಕ್ಷಿಸಿಡಲಾಗಿದೆ ಎಂದು ತಿಳಿದು ಬಂದಿದೆ. ಅಧಿಕೃತ ದಾಖಲೆಗಳ ಪ್ರಕಾರ, ಅನುರಾಗ್ ರಸ್ತೋಗಿ ಅವರು 2 ಪ್ರತ್ಯೇಕ ಸ್ತರಗಳಲ್ಲಿ ಈ ದೇಣಿಗೆ ನೀಡಿದ್ದಾಗಿ ದಾಖಲಾಗಿದೆ.2020ರ ಜು.21ರಂದು 38ಕಿಲೋ ಮತ್ತು 2020ರ ಜು.28ರಂದು ಉಳಿದವನ್ನು ನೀಡಲಾಗಿತ್ತು.ಅಲ್ಲದೆ 2020ರ ಜು.29ರಂದು ಮತ್ತೆ ಟ್ರಸ್ಟ್ 25.576ಕಿ.ಗ್ರಾಂ ಬೆಳ್ಳಿಯನ್ನು ಸ್ವೀಕರಿಸಿತ್ತು.ಇವೆಲ್ಲವೂ ಬ್ಯಾಂಕ್ ಲಾಕರ್‌ಗಳಲ್ಲಿ ಸುರಕ್ಷಿತವಾಗಿರುವುದನ್ನು ದೃಢಪಡಿಸಲಾಗಿದೆ.

ಹಾಗೆಯೇ ಸಿಂಧಿ ಸಮುದಾಯ ಸದಸ್ಯರು 2021ರಲ್ಲಿ 200ಕಿಲೋ ಬೆಳ್ಳಿ ಗಟ್ಟಿಗಳನ್ನು ನೀಡಿದ್ದರು.ಇವು ಕೂಡ ಸುರಕ್ಷಿತವಾಗಿವೆ. ಕಳವಾಗಿರುವುದು ದಿನವಹಿ ಕಾಣಿಕೆಯಲ್ಲಿ ಮಾತ್ರವೇ ವಿನಾ ದೇಣಿಗೆಗಳಲ್ಲಲ್ಲ. ಆ ಹಣ ಮತ್ತು ಆಭರಣಗಳೆಲ್ಲ ಬ್ಯಾಂಕ್‌ಗಳಲ್ಲಿ ಠೇವಣಿಯಾಗಿ ಸುರಕ್ಷಿತವಾಗಿವೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.ಸಿಂಧಿ ಸಮುದಾಯದ ರಾಜು ಮಂಡ್ವಾನಿ ರಶೀದಿ ಸಿಕ್ಕಿಲ್ಲ ಎಂದು ಹೇಳಿಕೆ ನೀಡಿದ್ದರಿಂದ ಈ ತಪ್ಪು ಮಾಹಿತಿಗಳು ಹರಡಲು ಕಾರಣವಾಗಿತ್ತು.ರಾಜು ಮಂಡ್ವಾನಿ ನೀಡಿದ್ದ ಎಲ್ಲ 8ಬೆಳ್ಳಿ ಗಟ್ಟಿಗಳು ಕೂಡ ಭದ್ರತಾ ಮುದ್ರೆಗಳನ್ನು ಪಡೆದಿದ್ದು ಮಿಂಟಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದಿಂದ ತಪಾಸಣೆಯಾಗಿ ಸುರಕ್ಷಿತವಾಗಿ ಕಾಯ್ದಿರಿಸಲಾಗಿದೆ .ಅವನ್ನು 10ಬಾಕ್ಸ್‌ಗಳಲ್ಲಿ ರಕ್ಷಿಸಿಡಲಾಗಿದೆ ಎಂಬುದಾಗಿ ದಾಖಲೆ ಪುಸ್ತಕದ ಪುಟ1ರ 96ನೇ ಸಂಖ್ಯೆಯಲ್ಲಿ ಹೇಳಲಾಗಿದ್ದು, ಇದನ್ನು ತಾಂತ್ರಿಕವಾಗಿ ಪರಿಶೀಲನೆಗೈದು ದೃಢಪಡಿಸಿಕೊಳ್ಳಲಾಗಿದೆ . ಈ ಕುರಿತ ಪ್ರಚಾರಗಳೆಲ್ಲ ಸುಳ್ಳು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮುಂಬೈಯ ಉದ್ಯಮಿ ಅನಿಲ್ ವಿಶ್ವಕರ್ಮ ಅವರು ನೀಡಿದ್ದ ಬೆಳ್ಳಿಯ ನೆಕ್ಲೆಸ್ ಮತ್ತು ಸ್ಯಾಂಡಲ್‌ಗಳ ಕುರಿತಾದ ವರದಿಗೆ ಸಂಬಂಧಿಸಿಯೂ ಎಸ್‌ಐಟಿ ತನಿಖೆ ನಡೆಸಿದ್ದು, ಅವು ಕೂಡ ಟ್ರಸ್ಟ್‌ನ ಅಧೀನದಲ್ಲಿ ಸುರಕ್ಷಿತವಾಗಿರುವುದಾಗಿ ಸ್ಪಷ್ಟಪಡಿಸಲಾಗಿದೆ.

ಬಿಡದಿ ಟೌನ್‌ಶಿಪ್ ವಿರೋಧಿಸಿ ಬೈರಮಂಗಲ ಗ್ರಾಮದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಚಿವ ಕಿಡಿ

ರೈತರ ಪರವಾದ ಹೋರಾಟಕ್ಕೆ ನಾನು ಬದ್ಧ: ಎಚ್‌ಡಿಕೆ

• **ರಾಮನಗರ:** ಬಿಡದಿ ಟೌನ್ ಶಿಪ್ ವಿಚಾರದಲ್ಲಿ ನನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಹುನ್ನಾರ ನಡೆಯುತ್ತಿದ್ದು, ಇದರಿಂದ ನಾನು ವಿಚಲಿತವಾಗುವುದಿಲ್ಲ. ರೈತರ ಪರವಾದ ಹೋರಾಟಕ್ಕೆ ನಾನು ಬದ್ಧವಾಗಿದ್ದು, ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಬಿಡದಿ ಟೌನ್‌ಶಿಪ್ ವಿರೋಧಿಸಿ ಬೈರಮಂಗಲ ಗ್ರಾಮದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಟೌನ್‌ಶಿಪ್ ವಿಚಾರದಲ್ಲಿ ಸರ್ಕಾರ ಬಂಡತನದಿಂದ ನಡೆದುಕೊಂಡರೆ ಏನು ಮಾಡಬೇಕು ಎಂಬುದು ಗೊತ್ತಿದೆ. ಯಾವುದೇ ಆಮಿಷಗಳಿಗೆ ಒಳಗಾಗದೆ ರೈತರು ನಡೆಸುವ ಹೋರಾಟಕ್ಕೆ ನಾನು ಬೆನ್ನೆಲುಬಾಗಿ ನಿಲ್ಲುತ್ತೇನೆ ಎಂದು ತಿಳಿಸಿದರು.

ನನ್ನ ಏಳಿಗೆ ಸಹಿಸದೆ ನನ್ನ ವಿರುದ್ಧ ನಾಲ್ಕು ದೂರುಗಳನ್ನು ದಾಖಲಿಸಿದರು. ಎರಡು ಬಾರಿ ಸಿಎಂ ಆಗಿ ಕೆಲಸ ಮಾಡಿದ ನನ್ನ ವಿರುದ್ಧ ಯಾವುದೇ ಹಗರಣಗಳಿದ್ದರೂ ಅದನ್ನು ಹೊರಗೆ ತರಲಿ. ನನ್ನನ್ನು ಜೈಲಿಗೆ ಕಳುಹಿಸುತ್ತೇನೆ ಎನ್ನುತ್ತಿರುವವರು, ಮೊದಲು ಅವರೇಕೆ ಜೈಲಿಗೆ ಹೋದರು ಎಂಬುದನ್ನು ಜನರಿಗೆ ತಿಳಿಸಲಿ ಎಂದು ಸವಾಲು ಹಾಕಿದರು. ಕೆಂಪೇಗೌಡರ ಜಯಂತಿ ಹೆಸರಿನಲ್ಲಿ ಹದಿನೈದು ಲಕ್ಷ ಗಿಡ ನೆಡುವುದರಲ್ಲೂ ಕೋಟಿಗಟ್ಟಲೇ ಲೂಟಿ ಹೊಡೆಯಲು ಹೊರಟಿದ್ದಾರೆ.



> ನಾನು ಸಿಎಂ ಆಗಿದ್ದಾಗ ರೈತರ ಬದುಕಿಗೆ ಕಾಯಕಲ್ಪ ಮಾಡಲು, ಬೆಂಗಳೂರಿನ ಸಮಸ್ಯೆ ನಿವಾರಣೆ ಕೆಲಸ ಮಾಡಿದೆ. ಗ್ರಾಮೀಣ ಭಾಗದ ಜನರ ಸಮಸ್ಯೆ ಆಲಿಸಲು ಗ್ರಾಮವಾಸ್ತವ್ಯ ಪ್ರಾರಂಭ ಮಾಡಿದ್ದು, ಇಂದಿಗೂ ಜನರ ಮನಸ್ಸಿನಲ್ಲಿ ಉಳಿದಿದೆ.
> ■ **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರಸಚಿವ

ನಕಲಿ ದಾಖಲೆ ಸೃಷ್ಟಿ ಮಾಡಿ ಕಾಲೇಜು ಕಟ್ಟಿಸಲು ಅಮಾಯಕರ ಭೂಮಿ ಲೂಟಿ ಹೊಡೆದಿದ್ದಾರೆ. ಇವರಂತೆ ನಮ್ಮ ಕುಟುಂಬ ಬದುಕುತ್ತಿಲ್ಲ ಎಂದು ತಿಳಿಸಿದರು.

ಈಗಲ್ಟನ್ ರೆಸಾರ್ಟ್‌ನವರು ಬಳಕೆ ಮಾಡಿಕೊಂಡಿರುವ ಸರ್ಕಾರಿ ಖರಾಬ್ ಭೂಮಿಗೆ 12 ಕೋಟಿ ಹಣ ನಿಗಧಿಪಡಿಸಿರುವ ಸರ್ಕಾರ ಅದರ ಪಕ್ಕದಲ್ಲಿಯೇ ಇರುವ ರೈತರ ಭೂಮಿಗೆ ಎರಡು ಕೋಟಿ ನಿಗದಿಪಡಿಸಿರುವುದನ್ನು ನೋಡಿದರೆ ಎಷ್ಟು ಹಣ ಲೂಟಿ ಹೊಡೆಯಲು ಮುಂದಾಗಿದ್ದಾರೆ ಎಂಬುದು ತಿಳಿಯುತ್ತದೆ ಎಂದು ತಿಳಿಸಿದರು.

ಬೈರಮಂಗಲ ಗ್ರಾಮದ ರೈತರ ಹೋರಾಟ ರಾಜ್ಯದ ಇಂದಿನ ಪರಿಸ್ಥಿತಿಯಲ್ಲಿ ಹೊಸ ಆಯಾಮ ಸೃಷ್ಟಿಸಲಿದೆ. ಜನರ ಆಶೀರ್ವಾದದಿಂದ ಐದು ಬಾರಿ ಮರುಜೀವ ಮರುಹುಟ್ಟು ಪಡೆದಿದ್ದೇನೆ ಎಂದು ತಿಳಿಸಿದರು. ಕಳೆದ ನಲ್ವತ್ತು ವರ್ಷಗಳ ಹಿಂದೆ ದೇವೇಗೌಡರ ಒತ್ತಾಯದಿಂದ ಕೇತುಗಾನಹಳ್ಳಿಯಲ್ಲಿ ಜಮೀನು ಖರೀದಿ ಮಾಡಿದೆ.

ನನ್ನ ಜಮೀನಿನಲ್ಲಿ ತೆಂಗು, ಮಾವು ಬೆಳೆದಿದ್ದೇನೆಯೇ ಹೊರತು ಜಮೀನಿನಲ್ಲಿ ರಿಯಲ್ ಎಸ್ಟೇಟ್ ಮಾಡಿಲ್ಲ. ಇಂದು ರೈತರನ್ನು ಲೂಟಿ ಮಾಡಿ ರಿಯಲ್ ಎಸ್ಟೇಟ್ ಮಾಡಲು ಹೊರಟಿರುವವರು ಉತ್ತರ ಕೊಡಬೇಕು ಎಂದರು.

ಮೂವತ್ತು ವರ್ಷ ಕಳೆದರು ನೈಸ್ ರಸ್ತೆಗೆ ಭೂಮಿ ಕಳೆದುಕೊಂಡ ನಾಲ್ಕು ಸಾವಿರ ರೈತರಿಗೆ ಪರ್ಯಾಯ ಭೂಮಿ ನೀಡಿಲ್ಲ. ಹಲವು ಜನ ಮರಣವಾಗಿದ್ದಾರೆ. ಈಗ ಬಿಡದಿಯಲ್ಲಿ ರೈತರನ್ನು ಒಕ್ಕಲೆಬ್ಬಿಸಲು ಹೊರಟಿದ್ದಾರೆ. ನಾನು ಸಿಎಂ ಆಗಿದ್ದಾಗ ಬಿಡದಿ ರೈತರಿಗೆ ನೋವು ನೀಡಿ ಟೌನ್ ಷಿಪ್ ನಿರ್ಮಾಣ ಮಾಡುವುದಿಲ್ಲ ಎಂದು ನೀಡಿರುವ ಹೇಳಿಕೆ ದಾಖಲೆಯಲ್ಲಿದೆ. ಆದರೂ ಸಿಎಂ ಅವರು ನನ್ನ ವಿರುದ್ಧ ನೀಡುತ್ತಿರುವ ಹೇಳಿಕೆ ಬೇಸರ ತರಿಸಿದೆ ಎಂದರು.

ರಾಜ್ಯದ ಯಾವುದೇ ಭಾಗದ ರೈತರು ತಮ್ಮ ಭೂಮಿ ಕಳೆದುಕೊಂಡು ಬೀದಿಗೆ ಬರಬೇಡಿ, ರೈತರ ಕಣ್ಣಲ್ಲಿ ನೀರು ತರಿಸುವ ಕೆಲಸ ಮಾಡಿದರೆ ನನ್ನ ಮಗನಿಗೆ ಒಳ್ಳೆಯದಾಗಲ್ಲ ಎಂದ ಅವರು ಸಿಎಂ ಅವರು ಟೌನ್ ಶಿಪ್ ಬಗ್ಗೆ ಚರ್ಚಿಸಲು ವಿಧಾನಸೌಧಕ್ಕೆ ಕರೆದರು. ಆದರೆ ನಾನು ರೈತರ ಸಮ್ಮುಖದಲ್ಲಿಯೇ ತೀರ್ಮಾನಕ್ಕೆ ಆಹ್ವಾನ ಕೊಟ್ಟೆ. ಆದರೆ ಅವರು ಬರಲಿಲ್ಲ ಎಂದರು.

ಟೌನ್‌ಶಿಪ್ ವಿಚಾರ ರೈತರಿಗೆ ತೊಂದರೆ ಸಲ್ಲ: ಸೋಮಣ್ಣ

• **ದಾವಣಗೆರೆ:** ಬಿಡದಿ ಟೌನ್‌ಶಿಪ್ ವಿಚಾರವಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳುವುದರಲ್ಲಿ ಅರ್ಥವಿದೆ. ಅಭಿವೃದ್ಧಿ ಹಾಗೂ ಟೌನ್‌ಶಿಪ್ ನಿರ್ಮಾಣದ ಹೆಸರಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ರೈತರಿಗೆ ತೊಂದರೆ ಕೊಡಬಾರದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.



ಶನಿವಾರ ಸುದ್ದಿಗಾರರ ಜತೆ ಮಾತನಾಡಿ, ಈ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಠಮಾರಿ ಧೋರಣೆ ಕೈಬಿಟ್ಟು ಜನರ ಭಾವನೆಗಳಿಗೆ ಸ್ಪಂದಿಸಬೇಕು. ಅಲ್ಲಿಂದ ಒಂದು 10 ಕಿಲೋಮೀಟರ್ ಮುಂದಕ್ಕೆ ಹೋದರೆ ಜಾಗ ಸಿಗುತ್ತದೆ. ಈಗಾಗಲೇ ಆ ಭಾಗದಲ್ಲಿ ಸಾಕಷ್ಟು ಕಾರ್ಖಾನೆ, ಟೌನ್ ಶಿಪ್‌ಗಳು ಬಂದಿವೆ. ರಾಜ್ಯದ ಮುಖ್ಯಮಂತ್ರಿಯಾಗಿ ನನ್ನದೇ ನಡೀಬೇಕು ಎಂಬ ಹಠಕ್ಕೆ ಬೀಳಬೇಡಿ ಎಂದು ಅವರು ಸಲಹೆ ನೀಡಿದರು.

ನಾನು ಕೂಡ ವಸತಿ ಸಚಿವನಾಗಿ 10-12 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಹಿಂದೆ ನಾವು ಸೂರ್ಯನಗರದ 1, 2, 3 ಮತ್ತು 4ನೇ ಹಂತದ ಟೌನ್ ಶಿಪ್ ಮಾಡಿದ್ದೆವು. 4ನೇ ಹಂತದಲ್ಲಿ ಸುಮಾರು 2 ಸಾವಿರ ಎಕರೆ ಭೂಮಿಯನ್ನು ವಶಪಡಿಸಿಕೊಂಡಾಗಲೂ ಒಬ್ಬನೇ ಒಬ್ಬ ರೈತ ರಸ್ತೆಗಿಳಿದು ಪ್ರತಿಭಟಿಸದಂತೆ ಯೋಜನೆ ರೂಪಿಸಿ ಅನುಷ್ಠಾನಗೊಳಿಸಿದ್ದೆವು. ಅಂದು ನಾವು ಮಾಡಿದ ಯೋಜನೆಯ ಫಲಾನುಭವಿಗಳು ನೀವಾಗಿದ್ದೀರಿ. ಒಮ್ಮೆ ಆನೇಕಲ್ ತಾಲೂಕಿನ ಜಿಗಣಿ, ಸರ್ಜಾಪುರ ಭಾಗಕ್ಕೆ ಭೇಟಿ ನೀಡಿ, ನಾವು ಮಾಡಿರುವ ಸೂರ್ಯನಗರ 4ನೇ ಹಂತದ ಪ್ರಧಾನಮಂತ್ರಿಗಳ ಟೌನ್ ಶಿಪ್ ಅನ್ನು ವೀಕ್ಷಿಸಿ ಬನ್ನಿ ಎಂದರು.

ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ಹಗಲಿರುಳೂ ಚಿಂತಿಸಬೇಕಾದುದು ಯಾವುದು?

▸ ಭಗವಚ್ಚರಣವೇ ಹೊರತು ಸಂಸಾರವಲ್ಲ.

ಚಿಂತಿಸಲೇಬೇಕಾದದ್ದು ಯಾವುದು ಎಂದರೆ ಅದು ಭಗವಂತನ ಪಾದಾರವಿಂದ. ಯಾವುದನ್ನು ಚಿಂತಿಸಬೇಕಾಗಿದೆಯೋ ಅದನ್ನು ಚಿಂತಿಸದೆ, ಯಾವುದನ್ನು ಚಿಂತಿಸಿದರೆ ಸಮಯವೂ, ಆಯುಷ್ಯವೂ ವ್ಯರ್ಥವೋ ಅಂತಹ ವಿಷಯವನ್ನು ಚಿಂತಿಸುವ ಪ್ರವೃತ್ತಿಗೆ ಉತ್ತರರೂಪವಾಗಿ ಇಲ್ಲಿ ವಿಷಯವನ್ನು ನೀಡಲಾಗಿದೆ. ಸಂಸಾರದ ಬಗ್ಗೆ ನಾವು ಪ್ರತಿನಿತ್ಯ ಪ್ರತಿಕ್ಷಣವೂ ಯೋಚಿಸುತ್ತಿದ್ದೇವೆ. ಇದರ ಮಧ್ಯದಲ್ಲಿ ನಮಗೆ ಯಾವುದನ್ನು ಚಿಂತಿಸಬೇಕು ಎಂಬುದರ ಬಗ್ಗೆ ಸ್ವಲ್ಪವೂ ನಿಗಾ ಇಲ್ಲದಿರುವ ಪರಿಸ್ಥಿತಿ ಬಂದಿದೆ. ಅಷ್ಟರಮಟ್ಟಿಗೆ ನಮ್ಮ ಚಿಂತನೆಯ ದಿಕ್ಕು ಬದಲಾಗಿದೆ. ಆದರೆ ವಸ್ತುತಃ ನಾವು ಯಾವ ದಿಕ್ಕಿನ ಕಡೆ ನಿರಂತರವಾಗಿ ಚಿಂತಿಸಬೇಕಾಗಿದೆ ಎಂಬುದನ್ನು ಇಲ್ಲಿ ಹೇಳಲಾಗಿದೆ. ಹೀಗೊಂದು ಮಾತು ಬರುತ್ತದೆ–'ಸಂಸಾರೇ ಕಿಂ ಸಾರಂ? ಕಂಸಾರೇಃ ಪದಕಮಲಂ ಸಾರಂ' ಎಂಬುದಾಗಿ. ಈ ಸಂಸಾರದಲ್ಲಿ ಒಂದು ಸಾರ ಎಂಬುದಾಗಿ ಬರಬೇಕಾದರೆ ಅದಕ್ಕೆ ಕಂಸಾರಿಯದ ಭಗವಾನ್ ಶ್ರೀ ಕೃಷ್ಣನ ಅನವರತ ಚಿಂತನೆಯೇ ಇದಕ್ಕೆ ಸಾರ ಎಂಬುದಾಗಿ ಈ ಮಾತು ತಿಳಿಸುತ್ತದೆ. ನಮ್ಮ ಚಿಂತನೆಯು ಕೇವಲ ಸಂಸಾರದಲ್ಲೇ ಇದೆ ಎಂದರ್ಥ.

ಸಂಸಾರ ಎಂದರೇನು? ಸಂಸಾರದ ಬಗ್ಗೆ ಚಿಂತಿಸುವುದು ತಪ್ಪೇ? ಇತ್ಯಾದಿ ಪ್ರಶ್ನೆಗಳು ಬರಬಹುದು. ಸಂಸಾರದಲ್ಲಿ ಇದ್ದು ಸಂಸಾರವನ್ನು ದಾಟುವ ಬಗ್ಗೆ ಚಿಂತಿಸುವ ವಿಷಯ ಇಲ್ಲಿದೆ. ಆದರೆ ನಾವಿಂದು ಸಂಸಾರವನ್ನು ಮಾತ್ರ ಚಿಂತಿಸುತ್ತಿದ್ದೇವೆ. ಸಂಸಾರದಲ್ಲಿ ಇದ್ದು ಸಂಸಾರವನ್ನು ದಾಟುವ, ಸಂಸಾರದ ಸಾರ್ಥಕತೆಯನ್ನು ಪಡೆಯುವ ಬಗ್ಗೆ ನಮ್ಮ ಚಿಂತನೆ ಇಲ್ಲದಾಗಿದೆ. ಮಡದಿ ಮಕ್ಕಳ ಚಿಂತೆ ಬಿಡು ಮನವೇ! ಕಡೆಗೆ ಸತ್ಯನು ನೀನಲ್ಲವೇ? ಪುರಂದರ ವಿಠಲ ನಿನ್ನೊಲಿದು ನಂಬಿದರೆ, ಸಿರಿ ಸಂಪತ್ತುಗಳೆಲ್ಲವು ಬರುವವು, ಕರವ ಕೂಡಿಸಿ, ನಿತ್ಯ ಹರಿನಾಮವ ಪಾಡು, ನಿರ್ಮಲ ಮುಕ್ತಿಯು ದೊರೆಯುವುದು ಮನವೇ ಎಂಬ ಪುರಂದರ ದಾಸರ ಕೃತಿ ನಮಗೆ ಇದನ್ನು ಎಚ್ಚರಿಸುತ್ತದೆ. ಸಂಸಾರ ಎಂದರೆ ಗಂಡನಿಗೆ ಹೆಂಡತಿಯ ಚಿಂತೆ, ಹೆಂಡತಿಗೆ ಗಂಡನ ಚಿಂತೆ, ಗಂಡಹೆಂಡಂದಿರಿಗೆ ಮಕ್ಕಳ ಚಿಂತೆ. ಅಜ್ಜ ಅಜ್ಜಿಯರಿಗೆ ಮಕ್ಕಳು ಮೊಮ್ಮಕ್ಕಳ ಚಿಂತೆ. ಹೀಗೆ ಎಲ್ಲ ಕಡೆಗೆ ಚಿಂತೆಯೇ ಆವರಿಸಿದೆ. ಇಷ್ಟನ್ನು ಸೇರಿ ಸಂಸಾರ ಎಂಬುದಾಗಿ ಕರೆಯುವಂತಾಗಿದೆ. ತನ್ನ ಜೀವಿತದಲ್ಲಿ ಇವರ ಬಗ್ಗೆಯೇ ಯೋಚಿಸುತ್ತಾ, ತನ್ನ ಜೀವನವನ್ನು ಇವರಿಗಾಗಿಯೇ ಕಳೆದು, ಜೀವನವನ್ನು ಒಂದು ದಿನ ಮುಗಿಸುವ ಜನರೂ ಇದ್ದಾರೆ. ಅಂತಹವರಿಗಾಗಿ ಈ ಒಂದು ಸೂಚನೆ ಇಲ್ಲಿದೆ. ಪುರಂದರ ವಿಠಲನನ್ನು ನಂಬಿ, ವಿಶ್ವಾಸದಿಂದ ಅವನನ್ನು ಭಾವಿಸಿದರೆ ಅವನೇ ಎಲ್ಲವನ್ನು ಕೊಡಬಲ್ಲ, ಕೈಗೆತ್ತಿ ತುತ್ತು ಈಯಬಲ್ಲ. ಹೀಗಿರುವಾಗ ನಾವೇ ಸಂಸಾರವನ್ನು ತೂಗಿಸುತ್ತೇವೆ; ಸಂಸಾರದ ಭಾರವನ್ನು ನಾವೇ ಹೊರುತ್ತೇವೆ ಎಂಬ ಅಹಂಕಾರ ಬೇಡ. ಹಾಗಾದಾಗ ಈ ಸಂಸಾರ ನಮಗೆ ಭಾರವಾಗುತ್ತದೆ. ಅದೇ ಹೊಣೆಗಾರಿಕೆಯನ್ನು ಅವನಿಗೆ ಒಪ್ಪಿಸಿದರೆ ಸಂಸಾರವು ನಮಗೆ ಸಾರವಾಗಿ, ಅಂದರೆ ನಮಗೆ ಅದು ಅತ್ಯಂತ ಆಪ್ಯಾಯಮಾನವಾಗಿ ಕಾಣುತ್ತದೆ ಎಂಬ ಅಭಿಪ್ರಾಯ ಇಲ್ಲಿದೆ.

ವ್ಯಾಸ ವೀಕ್ಷಿತ

◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಸಹದೇವನ ದಕ್ಷಿಣ ದಿಗ್ವಿಜಯ

ಕಿಷ್ಕಿಂಧೆಯಲ್ಲಿ ವಾನರರಾಜರಾದ ಮೈಂದ-ದ್ವಿವಿದರು ರತ್ನಗಳನ್ನು ಸ್ವೀಕರಿಸಿದ ಸಹದೇವನು, ಮಾಹಿಷ್ಮತಿಯ ನೀಲನನ್ನು ಎದುರಿಸಿದನು. ಅಲ್ಲಿ ಅವರಿಬ್ಬರಿಗೆ ಭಯಂಕರವಾದ ಯುದ್ಧವೇ ಆಯಿತು. ನೋಡುತ್ತಿದ್ದಂತೆಯೇ ಅಲ್ಲಿ ಆಶ್ಚರ್ಯವೊಂದು ಘಟಿಸಿತು. ಸಹದೇವನ ಕಡೆಯ ರಥ-ಗಜ-ತುರಗಗಳೂ ಸೈನಿಕರೂ ಅವರ ಕವಚಗಳೂ ಇದ್ದಕ್ಕಿದ್ದಂತೆ ಬೆಂಕಿಯಿಂದ ಉರಿಯಲಾರಂಭಿಸಿದುವು!

ಅದಕ್ಕೊಂದು ಹಿನ್ನೆಲೆಯಿದೆ. ಈ ನೀಲಮಹಾರಾಜನಿಂದ ಅಗ್ನಿದೇವನಿಗೆ ಹಿಂದೊಂದು ಉಪಕಾರವಾಗಿತ್ತು. ಆ ಕಾರಣ, ಅಗ್ನಿಯು ನೀಲನ ಸೈನ್ಯಕ್ಕೆ ಅಭಯ ಪ್ರದಾನವನ್ನು ಮಾಡಿದ್ದನು. ಇದನ್ನರಿತಿದ್ದ ಯಾವುದೇ ಅರಸರೂ ನೀಲರಾಜನ ಮೇಲೆ ದಂಡೆತ್ತಿಹೋಗುತ್ತಿರಲಿಲ್ಲ. ತನ್ನ ಸೈನ್ಯವೆಲ್ಲಾ ಅಗ್ನಿಯಿಂದ ಸುಡುತ್ತಿರುವುದನ್ನು ಸಹದೇವನೂ ಕಂಡನು. ಆದರೆ ಅದರಿಂದಾಗಿ ಕಂಪಿತನಾಗಲಿಲ್ಲ, ಬದಲಾಗಿ ಆಚಮನವನ್ನು ಮಾಡಿ ಶುದ್ಧನಾಗಿ, ಅಗ್ನಿದೇವನ ಸ್ತುತಿಯನ್ನು ಮಾಡಿದನು. ಜೊತೆಗೆ, ಹೀಗೆ ಬಿನ್ನವಿಸಿಕೊಂಡನು ಕೂಡ: "ಹವ್ಯವಾಹನನಾದ ಅಗ್ನಿದೇವನೇ, ಯಜ್ಞಕ್ಕೆ ನೀನೇ ವಿಘ್ನವನ್ನುಂಟುಮಾಡುವುದು ತರವಲ್ಲ" ಎಂದು. ಅಷ್ಟೇ ಅಲ್ಲ, ನೆಲದ ಮೇಲೆ ದರ್ಭೆಯನ್ನು ವಿಧಿವತ್ತಾಗಿ ಹಾಸಿಕೊಂಡನು. ತನ್ನ ಸೈನ್ಯವು ಭಯೋದ್ವಿಗ್ನಗೊಂಡಿದ್ದರೂ, ಅವರ ಎದುರೇ ಅದರ ಮೇಲೆ ಆಸೀನನಾದನು. ಸಹದೇವನ ಈ ವರ್ತನೆಯಿಂದ ಅಗ್ನಿಯು ಪ್ರಸನ್ನನಾದನು. ಶಾಂತನಾಗಿ ಸಾಂತ್ವದ ಮಾತುಗಳನ್ನೇ ಆಡಿದನು: "ಏಳು ಸಹದೇವಾ, ನಿನ್ನ ಹಾಗೂ ಧರ್ಮರಾಜನ ಅಭಿಪ್ರಾಯವು ನನಗೆ ವಿದಿತವಾಗಿವೆ. ಈ ಪುರಿಯನ್ನು ರಕ್ಷಿಸಬೇಕೆಂಬುದು ನನ್ನ ಸಂಕಲ್ಪವಾಗಿತ್ತು ಅಷ್ಟೆ" ಎಂದನು. ಅಗ್ನಿಯು ಹೀಗೆ ಶಾಂತನಾಗಿ ಹಿಂದಿರುಗಲು, ನೀಲರಾಜನೇ ಸಹದೇವನ ಬಳಿಗೆ ಬಂದನು. ಸಹದೇವನನ್ನು ಸತ್ಕರಿಸಿದನು. ಸಹದೇವನು ನೀಲರಾಜನೊಡನೆ ಮಾತನಾಡಿ, ಆತನೂ ಕರವನ್ನೊಪ್ಪಿಸುವಂತೆ ಮಾಡಿದನು. ತನ್ನ ದಿಗ್ವಿಜಯ ಪ್ರಯಾಣವನ್ನು ಮುಂದುವರಿಸಿದನು. ಆಮೇಲೆ ತ್ರಿಪುರಾಧಿಪತಿ, ಪೌರವರಾಜ್ಯಾಧಿಪತಿ, ಸುರಾಷ್ಟ್ರಾಧಿಪತಿ–ಇವರುಗಳನ್ನು ವಶಪಡಿಸಿಕೊಂಡನು. ಸಹದೇವನು ಭೋಜಕಟ ರಾಜ್ಯಕ್ಕೆ ಒಡೆಯನಾದ ರುಕ್ಮಿ ಹಾಗೂ ಆತನ ತಂದೆಯಾದ ಭೀಷ್ಮಕರಲ್ಲಿಗೆ ತನ್ನ ರಾಯಭಾರಿಯನ್ನು ಕಳುಹಿಸಿಕೊಟ್ಟನು. ಅವರು ವಾಸುದೇವನ ನಿಕಟತೆಯನ್ನು ಸ್ಮರಿಸಿ, ತಮ್ಮ ಸಹಕಾರವನ್ನು ಸೂಚಿಸಿದರು. ಮತ್ತೂ ದಕ್ಷಿಣದ ದಂಡಕಾರಣ್ಯವನ್ನೂ ಸಹದೇವನು ವಶಕ್ಕೆ ತೆಗೆದುಕೊಂಡನು. ಆಮೇಲೆ ಸಮುದ್ರ ದ್ವೀಪವಾಸಿಗಳಾಗಿದ್ದ ಮ್ಲೇಚ್ಛರನ್ನೂ ಜಯಿಸಿದನು. ಹಾಗೆಯೇ ನಿಷಾದರು, ಪುರುಷಾದರು (ನರಮಾಂಸ-ಭಕ್ಷಕರು) ಹಾಗೂ ಕಾಲಮುಖ ಎಂಬ ಹೆಸರಿನ ನರರಾಕ್ಷಸರನ್ನೂ ಅನೇಕರನ್ನು ಜಯಿಸಿದನು. ಕೇರಳ, ಕರ-ಹಾಟಕದೇಶಗಳಿಗೆ (ಕರ್ನಾಟಕವೇ ಸರಿ) ತನ್ನ ದೂತರನ್ನು ಕಳುಹಿಸಿ, ಅದಷ್ಟರಿಂದಲೇ ಅವರನ್ನು ವಶವರ್ತಿಗಳನ್ನಾಗಿಸಿಕೊಂಡನು. ಹಾಗೆಯೇ ಪಾಂಡ್ಯರು, ದ್ರವಿಡರು, ಆಂಧ್ರರು, ಕಲಿಂಗರುಗಳನ್ನೂ ದೂತದ್ವಾರಾ ವಶಪಡಿಸಿಕೊಂಡನು. ಆಮೇಲೆ ಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿ, ತನ್ನ ಭ್ರಾತೃವಿನ ಪುತ್ರನಾದ ಘಟೋತ್ಕಚನನ್ನು ಸ್ಮರಿಸಿಕೊಂಡನು. ಆತನೋ, ಚಿಂತಿತ-ಮಾತ್ರದಿಂದಲೇ ಪ್ರತ್ಯಕ್ಷನಾದನು! ಆತನನ್ನು ವಿಭೀಷಣನಲ್ಲಿಗೆ ದೂತನನ್ನಾಗಿ ಕಳುಹಿಸಿಕೊಟ್ಟನು. ಆತನ ಮಾತುಗಳನ್ನು ವಿಭೀಷಣನು ಸಂತೋಷಪೂರ್ವಕವಾಗಿಯೇ ಒಪ್ಪಿದನು ಹಾಗೂ ನಾನಾರತ್ನಗಳನ್ನೂ ದಿವ್ಯಾಭರಣಗಳನ್ನೂ ಬೆಲೆಬಾಳುವ ಮಣಿಗಳನ್ನೂ ವಿಶೇಷವಸ್ತ್ರಗಳನ್ನೂ ಕಾಣಿಕೆಯಾಗಿತ್ತನು.

ಇವೆಲ್ಲವನ್ನೂ ಸಂಗ್ರಹಿಸಿ ಹಿಂದಿರುಗಿದ ಸಹದೇವನು, ಯುಧಿಷ್ಠಿರನಿಗೆ ಸಮಸ್ತವನ್ನೂ ಸಮರ್ಪಿಸಿದನು. ಯುಧಿಷ್ಠಿರನೂ ಸಹದೇವನ ಸಾಧನೆಗೆ ಸಂತೋಷಿಸಿದನು.

ಸೀನುವಿನ ಗಾನಾರ್ಥಮಂಜರಿ (ಗಾನಾರ್ಥಮಂ ಜರಿ!)

ವಕ್ರದೃಷ್ಟಿ

◆ ಎನ್. ರಾಮನಾಥ್
anakuramanath@gmail.com

"ಹಾಡೊಂದ ಹಾಡುವೆ ನೀ ಕೇಳು ಮಗುವೇ..." ಪಿ.ಬಿ. ಶ್ರೀನಿವಾಸರ ಮಧುರ ಕಂಠಕ್ಕೆ ಕಿವಿಯಾಗಿದ್ದೆ. ಸೀನು ವಕ್ಕರಿಸಿ "ಮಗುವಿಗೆ ಯಾವ ಹಾಡು ಹಾಡಿದರೂ ನಡೆಯತ್ತೆ. ಪ್ರಾರ್ಥನೆಯ ಹಾಡನ್ನು ಆಯ್ಕೆ ಮಾಡುವುದೇ ಕಷ್ಟ" ಎಂದ.

"ಅದೇನ್ಮಹಾ ಕಷ್ಟವೋ? ಸ್ಕೂಲ್ ಫಂಕ್ಷನ್ ಆದರೆ ಸರಸ್ವತಿಯ ಪ್ರಾರ್ಥನೆ..." ಎನ್ನುತ್ತಿದ್ದಂತೆಯೇ,

"ಅದು ಅಷ್ಟು ಸಿಂಪಲ್ ಅಲ್ಲ. ಪ್ಲೇಸೂ ಡಿಸೈಡ್ಸ್ ದ ಸಾಂಗೂ" ಎಂದ.

"ವಿವರಿಸು."

"ಕ್ಯಾಸೆಟ್ಸ್‌ಗಳು ಸೆಟ್ಸ್ ಲೆಕ್ಕದಲ್ಲಿ ವ್ಯಾಪಾರವಾಗುತ್ತಿದ್ದ ಕಾಲದಲ್ಲಿ ಆ ಅಂಗಡಿಗಳ ಉದ್ಘಾಟನೆಯ ಸಮಯದಲ್ಲಿ 'ಕಲ್ಯಾಣಿ ಗೀರ್ವಾಣಿ...' ಹಾಡನ್ನು ಹಾಡುತ್ತಿದ್ದರು."

"ಏಕೆ?"

"ತೆಳುವಾದಟೇಪಿನಮೇಲೆವಿಧವಿಧವಾದಗೀರುಗಳುಮೂಡುವಮೂಲಕ ವಾಣಿಯ ಪ್ರಸಾರವಾಗುತ್ತಿದ್ದುದರಿಂದ ಆ ಸಮಯಕ್ಕೆ ಗೀರ್-ವಾಣಿ ಪ್ರಸ್ತುತವಾಗಿತ್ತು. 'ಲರ್ನ್ ಫ್ರೆಂಚ್', '30 ದಿನಗಳಲ್ಲಿ ಇಂಗ್ಲಿಷ್' ಮೊದಲಾದ ಟುಟೋರಿಯಲ್‌ಗಳಲ್ಲಿ 'ಸರಸ್ವತಿ ನಮಸ್ತುಭ್ಯಮ್ ವರದೇ ಕಾಮರೂಪಿಣಿ' ಸೂಕ್ತ."

"ಏಕೆ?"

"ಇಲ್ಲಿನ ಕ್ಯಾಚ್ ವರ್ಡ್ 'ಕಾಮರೂಪಿಣಿ'. ಭಾಷೆ ಬಳಸುವಾಗ ಎಲ್ಲಿ ಕಾಮಾ, ಫುಲ್ ಸ್ಟಾಪ್ ಮೊದಲಾದವನ್ನು ಹಾಕಬೇಕೆಂದು ತಿಳಿಸು ಎಂದು ದೇವಿಯನ್ನು ಪ್ರಾರ್ಥಿಸಲು ಇದು ಸರಿ."

"ಕಲಾ ಶಾಲೆಗೆ?"

"ಯಾ ಕುಂದೇಂದು ತುಷಾರ ಹಾರಧವಳಾ."

"ಕ್ಯಾನ್ವಾಸಿನ ಬಣ್ಣಧವಳ ಉರುಫ್ ವೈಟ್ ಇರುವುದರಿಂದೇನು?"

"ಅದೂ ಒಂದು ಪಾಯಿಂಟೇ. ಇಂದು(ಚಂದ್ರ)ವಿನಲ್ಲಿನ ಕುಂದಿನಂತೆ ಇಲ್ಲಿ ಕುಂದು ಸಂಭವಿಸದಿರಲಿ ಎಂದು ಪ್ರಾರ್ಥಿಸಲು ಈ ಗೀತೆ."

"ಶಾರದೇ ದಯೆ ತೋರಿದೆ ಎಂಬ ಹಾಡನ್ನು ಯಾವಾಗ ಹಾಡಬೇಕು?"

"ಸಿಇಟಿ ಪರೀಕ್ಷೆಯಲ್ಲಿ ಒಳ್ಳೆ ಸ್ಕೋರ್ ಬಂದು ಅನ್ನೊಂಡ್ಕಾಲೇಜಲ್ಲಿ ಸೀಟ್ ಸಿಕ್ಕಾಗ ಆಪ್ತರಿಗೆ ಕೊಡೋ ಪಾರ್ಟಿಯಲ್ಲಿ ಇದನ್ನ ಹಾಡಬೇಕು."

"ಪೊರೆಯೇ ಶಾರದೆ...?"

"ಕಣ್ಣಿನ ಪೊರೆಯನ್ನು ಹೋಗಲಾಡಿಸುವ ಕ್ಯಾಟರಾಕ್ಟ್ ಸರ್ಜರಿಯಲ್ಲಿ ಎಕ್ಸ್‌ಪರ್ಟ್ ಆಗಬೇಕೆನ್ನುವವರು ನುತಿಸಲೇಬೇಕಾದ ಹಾಡು."

"ಲಕ್ಷ್ಮಿಯ ಬಾಬ್ತೂ ಹೀಗೇ ಏನು?"

"ಡೆಫನೆಟ್ಲಿ! ಸರ್ಕಾರದ ಭಾಗ್ಯಗಳಿಗೆಲ್ಲ ಹಣ ಒದಗಿಬರಲೆಂದು ಸರ್ಕಾರವು ಪ್ರಾರ್ಥಿಸಲು 'ಭಾಗ್ಯದ ಲಕ್ಷ್ಮೀ ಬಾರಮ್ಮ'. ಅತ್ತೆಸೊಸೆಯರ ಅಕೌಂಟಿಗೆ ಸರ್ಕಾರಿ ಹಣ ತಲುಪಲೆಂದು ಪ್ರಾರ್ಥಿಸಲು 'ಬಾರೇ ಭಾಗ್ಯದ ನಿಧಿಯೆ.' ಎಟಿಎಂ ಉದ್ಘಾಟನೆಯ ಸಮಯದಲ್ಲಿ 'ಧನಲಕ್ಷ್ಮಿ ದಯೆ ತೋರು ಬಾಮ್ಮಾ...'"

"ಯಾಕೆ?"

"ಕಾರ್ಡು, ನೋಟುಗಳು ಸಿಕ್ಕಿಹಾಕಿಕೊಳ್ಳದಿರಲಿ, ದುಡ್ಡು ಸರಾಗವಾಗಿ ಸರಿದು ಬರಲಿ ಎಂದು."

"ವಾದಿರಾಜರು ರಚಿಸಿದ 'ಇಂತವಗ್ಯಾಗೆ ಮನಸೋತೆ' ಗೀತೆಯನ್ನು ಯಾರು ಹಾಡಿದರೆ ಸೂಕ್ತ?"

"ಹಣವಿದ್ದೂ, 80ಸಿಸಿ ಅಡಿಯಲ್ಲಿ ಟ್ಯಾಕ್ಸ್ ಬೆನಿಫಿಟ್ ಇದ್ದೂ, ದಾನ ಮಾಡದವನನ್ನು ಕಂಡು ಇತರರು ಹಾಡುವುದು ಸಮಂಜಸ."

ಹೀಗೆಯೇದೇವತೆಗಳವಿವಿಧನಾಮಗಳಒಳಾರ್ಥಗಳನ್ನುಹಿಡಿದುಸೀನುವು 'ಸಮಯಕ್ಕೆ ತಕ್ಕ ಹಾಡು' ಸೂಚಿಸುತ್ತಿರುವುದನ್ನು ಮುಂದುವರಿಸಿದ್ದಲ್ಲದೆ ಹಿಂದಿ ಚಿತ್ರಗೀತೆಗಳಲ್ಲಿಯೂ ದೇವರ ಸ್ತುತಿಯಿದೆಯೆಂದ.

"ಯಾವ್ಹಾಡೋ?" ಎಂದೆ.

"ಬದನ್ ಪೆ ಸಿತಾರೆ ಲಪೇಟೆ ಹುಯೇ; ಓ ಜಾನೆ ತಮನ್ನ ಕಿಧರ್ ಜಾ ರಹೀ ಹೋ; ಝರಾ ಪಾಸ್ ಆವೋ ತೋ ಚೈನ್ ಆಜಾಯೇ" ಎಂದ.

"ಅದು ಪ್ರೇಮಗೀತೆಯಲ್ಲವೇನೋ?"

"ಗಮನಿಸು. 'ಸಿತಾರೆ ಲಪೇಟೇ ಹುಯೇ' ಎಂದರೆ ಫಳಫಳ ಹೊಳೆಯುವುದನ್ನು ಧರಿಸಿರುವವಳು ಎಂದರ್ಥ. ದೇವಿಯ ಮೈಮೇಲೆ ಹೊಳೆಯುವುದು ನಕ್ಕಿಯಲ್ಲ, ನಗ ಎನ್ನುವುದೇ ನಕ್ಕಿ. ಬಂಗಾರದ ಆಭರಣಗಳನ್ನು ಧರಿಸಿ ಎಲ್ಲಿಯೋ ಹೋಗುತ್ತಿರುವೆಯಲ್ಲ, ಸ್ವಲ್ಪ ನನ್ನ ಕಡೆಯೂ ಕೃಪೆ ತೋರಿದರೆ ಕನಿಷ್ಠ ಕುತ್ತಿಗೊಂದು ಸರವಾದರೂ ಲಭ್ಯವಾದೀತು ಎನ್ನುವುದು ಈ ಲಕ್ಷ್ಮಿಯ ಭಕ್ತನ ಅಳಲು" ಎಂದ ಸೀನುವು "ಸಾಯಂಕಾಲ ಮುಸ್ಸಂಜೆಯ ಹೊತ್ತಿನಲ್ಲಿ ಲಕ್ಷ್ಮಿಯು ಮನೆಗೆ ಬರುತ್ತಾಳಲ್ಲವೆ, ಅದಕ್ಕೂ ಒಂದು ಹಾಡಿನ ಸಾಲಿದೆ" ಎಂದ.

"ಯಾವುದು?"

"ಚಿತ್ ಚೋರ್ ಚಿತ್ರದ 'ಜಬ್ ದೀಪ್ ಜಲೇ ಆನಾ; ಜಬ್ ಶ್ಯಾಮ್ ಢಲೇ ಆನಾ' ಎಂಬ ಹಾಡು. ಸಂಜೆ ದೀಪ ಹೊತ್ತುವ ಹೊತ್ತಿಗೆ ಬಾ ಎನ್ನುವುದು ಸೊಳ್ಳೆಗಳಿಗಲ್ಲ, ದೇವತೆಗೆ ಎಂದು ಅರಿಯುವಂಥವನಾಗು" ಎಂದುದ್ಗರಿಸಿದ.

"ನಿನ್ನ ಹಿಂದಿ ಹೇರಿಕೆಗೆ ಧಿಕ್ಕಾರ! ಕನ್ನಡದ ಚಿತ್ರಗೀತೆಗಳಲ್ಲಿ ಇಂತಹವು ಯಾವುವೂ ಇಲ್ಲವೇನು?"

"ಹಾಡಿನ ಒಂದೇ ಸಾಲಿನಲ್ಲಿ ಎರಡೆರಡು ಕ್ಷೇತ್ರಗಳವರು ಪ್ರಾರ್ಥಿಸುವ ವಿಧವಿದೆ" ಎಂದು ಬೀಗಿದ.

"ಯಾವ ಹಾಡಿನ ಯಾವ ಸಾಲು?"

"ವಿಠಲ ವಿಠಲ ಪಾಂಡುರಂಗ ವಿಠಲ..." ಎನ್ನುತ್ತಾ ಭಾವಪರವಶನಾದ. (ಈ ಪದವೇ ವಿಚಿತ್ರ. ಭಾವನಿಗೆ ಪರವಶವಾಗತಕ್ಕದ್ದು ಅಕ್ಕ ಒಬ್ಬಳೇ ಅಲ್ಲವೆ? ಹೆಚ್ಚೆಂದರೆ ಒಂದು ಮಟ್ಟದಲ್ಲಿ ಭಾವಮೈದನು ಪರವಶನಾಗಬಹುದು. ಮಿಕ್ಕಂತೆ ಯಾರ್ಯಾರೋ ಭಾವನಿಗೆ ಪರವಶರಾಗುವುದು ವಿಚಿತ್ರವೇ ಸೈ!)

"ಮೂರು ವಿಠಲ ಬಿಟ್ಟರೆ ಇರುವುದೇ ಒಂದು ಪದ. ಇದರಲ್ಲಿ ನಿನಗೆ ಎರಡು ಕ್ಷೇತ್ರಗಳು ಎಲ್ಲಿ ಕಂಡವು?"

"ಪಾಂಡು ಎನ್ನುವುದು pond ಎನ್ನುವುದರ ಕನ್ನಡ ರೂಪ. ಕೆರೆ ಅಭಿವೃದ್ಧಿ ಪ್ರಾಧಿಕಾರದವರು ಮತ್ತು 'ರಂಗ' ಉರುಫ್ ನಾಟಕಕ್ಷೇತ್ರದವರು ಇಬ್ಬರಿಗೂ ಪ್ರಿಯವಾದ ಹಾಗೂ ಸೂಕ್ತವಾದ ಭಕ್ತಿಗೀತೆ ಇದು" ಎಂದು ವಿವರಿಸಿದನವ.

ಪಂಡರಾಪುರದಲ್ಲಿ ಸ್ಥಿತನಾದ ಕಾರಣ ಪಾಂಡುರಂಗನಾದ ವಿಷ್ಣುವು ಭಾಷಾಪಭ್ರಂಶಿ ಸೀನುವಿನ ಬಾಯಿಗೆ ಸಿಲುಕಿ ಹೊಸ ಅರ್ಥಗಳಿಗೆ ಒಳಗಾಗಿದ್ದ.

"ವಿಠಲನಾಮ ಸ್ಮರಣೆಯ ಹಾಡನ್ನು ಹಾಡಿದ್ದು ಗೋರ ಕುಂಬಾರ. ನೀನು ಘೋರ ಕುಂಬಾರ. ಅವನು ಕಟ್ಟಿದ ಅರ್ಥಗಳನ್ನು ನೀನು ನಿನ್ನ ಅನರ್ಥದಿಂದ ಒಡೆದುಹಾಕುತ್ತೀಯೆ. ಅವನದು ಭಕ್ತಿ. ನಿನ್ನದೂ..."

"ತಡೆ. ಭಕ್ತ ಎಂದರೆ 'ಕತ್ತರಿಸಿದ' ಎಂಬ ಅರ್ಥವಿದೆ. ಅವನ ಹಾಡು ಭಕ್ತನ ಗೀತೆ, ನನ್ನದು ಭಕ್ತ ಗೀತೆ; ಇಷ್ಟೇ ವ್ಯತ್ಯಾಸ. ಕೊಂಚ ವ್ಯತ್ಯಾಸವನ್ನೂ ಸಹಿಸದ ನೀನೆಂಥ ಕನ್ನಡಿಗನಯ್ಯ! ಹಾರವನ್ನು ಆರ ಎಂದೂ, ಅನ್ನವನ್ನು ಹನ್ನ ಎಂದೂ, ಧನವನ್ನು ದನ ಎಂದೂ ಉಚ್ಚರಿಸಿದರೂ ಸಕಲ ಹುಚ್ಚುಚ್ಚಾರಗಳನ್ನು ಕ್ಷಮಿಸಿ ಟಿವಿ ವೀಕ್ಷಿಸುವ ಶುದ್ಧ ಕನ್ನಡಿಗರ ವೈಕಿ ಇದ್ದೂ ನಿನಗೆ ಇಂತಹ ಅಸಹನೆ ತರವಲ್ಲ" ಎಂದು ಗುಡುಗಿದ ಸೀನು.

"ಬಿಡು ಚಿತ್ರಗೀತೆಗಳನ್ನು. ಮರಳು ಪ್ರಾರ್ಥನಗೀತೆಗಳಿಗೆ. ಎಲ್ಲ ವ್ರತಗಳಲ್ಲಿಯೂ ಅಗ್ರಪೂಜೆ ಗಣಪತಿಯದೇ. ಗಣೇಶನ ಯಾವ ಯಾವ ಹಾಡುಗಳು ಎಲ್ಲೆಲ್ಲಿ ಸೂಕ್ತ?" ಎನ್ನುತ್ತಾ ಹಳಿಯುವುದರಲ್ಲಿ ನಿರತನಾದ ಸೀನುವನ್ನು ಹಳಿಗೆ ತರಲು ಯತ್ನಿಸಿದೆ.

"ಹಾಡುಗಳನ್ನು ಗುನುಗುತ್ತಾ ಬಾ."

"ಶರಣು ಸಿದ್ಧಿ ವಿನಾಯಕ; ಶರಣು ವಿದ್ಯಾ ಪ್ರದಾಯಕ."

"ಶರಣು ಶರಣಾರ್ಥಿ ಎನ್ನುವವರು ನಡೆಸುವ ಕಾರ್ಯಕ್ರಮಗಳಲ್ಲಿ ಇದನ್ನು ಬಳಸುವುದು ಸೂಕ್ತ. ಶರಣುವಿಗೆ ಶರಣುವೇ ಮ್ಯಾಚಿಂಗ್."

"ಶ್ರೀ ಗಣನಾಥ ಸಿಂಧೂರಾ ವರ್ಣ...?"

"ರೆಡ್ ಕ್ರಾಸ್ ಸಂಸ್ಥೆಯವರದು ಸಿಂಧೂರ ವರ್ಣಕ್ಕೆ ಸಮೀಪವಾದುದು. ಅಲ್ಲದೆ 'ಆಪರೇಷನ್ ಸಿಂಧೂರ'ಕ್ಕೆ ಸಂಬಂಧಿಸಿದ ಸಕಲ ಕಾರ್ಯಕ್ರಮಗಳಲ್ಲಿಯೂ ಇದನ್ನು ಪ್ರಾರ್ಥನೆಯಾಗಿ ಬಳಸಬಹುದು."

"ವಾತಾಪಿ ಗಣಪತಿಂ ಭಜೆ?"

"ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಮತ್ತು ಸಕಲ ಮಾಲಿನ್ಯ ವಿರೋಧಿ ಜನಗಳು ಹಾಡಬೇಕಾದ ಹಾಡದು."

"ಎತ್ತಣ ಸಂಬಂಧವಂ ಹುಡುಕಿರುವೆ?"

"ಕಲುಷವಿದೂರಂ ಭೂತಾಕಾರಂ ಎಂಬ ಸಾಲು ಆ ಹಾಡಿನಲ್ಲಿದೆ. ಭೂತಾಕಾರದ ಸಮಸ್ಯೆಯೆನಿಸುವ ಕಲುಷವನ್ನು ನಮ್ಮಿಂದ ದೂರಗೊಳಿಸಲು ಯಾವ ನಗರಪಾಲಿಕೆಯವರಿಗೂ ಸಾಧ್ಯವಿಲ್ಲ. ಅದು ದೇವನೊಬ್ಬನೇ ಸಾಧಿಸಬಲ್ಲ ಕಾರ್ಯ. ತತ್ಕಾರಣ ಈ ಗೀತೆ ಅಲ್ಲಿಯೇ ಹೆಚ್ಚು ಪ್ರಸ್ತುತ."

"ಮಹಾಗಣಪತಿಂ..."

"ಇದು ನನ್ನನ್ನು ವಿಸ್ಮಯಗೊಳಿಸಿರುವ ಗೀತೆ. 'ಮನಸಾ ಸ್ಮರಾಮಿ' ಎನ್ನುತ್ತಾ ಮೈಕ್ ಕಿತ್ತುಹೋಗುವಂತೆ ಹಾಡುವುದು ಸರಿಯೆ? ಈ ಹಾಡನ್ನು ನಿಜಭಕ್ತಿಯುಳ್ಳವರು ಧ್ಯಾನಾಸಕ್ತರಾದಾಗ ಮನದಲ್ಲೇ ಹಾಡಿಕೊಳ್ಳುವುದು ಸರಿಯೆಂದು ನನ್ನ ಅಭಿಪ್ರಾಯ."

"ಗಣನಾಯಕಾಯ ಗಣದೈವತಾಯ..."

"ಪ್ರಾರ್ಥನೆಯೆಂದರೆ ಇದು! ಅನೇಕ ಜನರಿಗೆ ಸೂಕ್ತವಾಗುವ ಹಾಡಿದು!" ಸೀನು ಅತ್ಯುತ್ಸಾಹದಿಂದ ಉಲಿದ.

"ಯಾರ್ಯಾರಿಗೆ?"

"ಗುಣಶರೀರಾಯ ಎಂದರೆ ಸ್ವಸ್ಥವಾದ ಶರೀರವುಳ್ಳವರಿಗೆ; ಯೋಗ ಕೇಂದ್ರಗಳು ಮತ್ತು ನರ್ಸಿಂಗ್ ಹೋಂಗಳು ಈ ಪದವನ್ನು ಪದೇ ಪದೇ ಉಚ್ಚರಿಸಬೇಕು. ಗುಣಮಂಡಿತಾಯ ಎನ್ನುವುದು ಕಂಗ್ಲಿಷ್ ಜನರಲ್ಲಿ ವಿಶೇಷ ಅರ್ಥವನ್ನು ಕೊಡುತ್ತದೆ. ಮಂಡಿ ಸವೆದ ಮಂದಿ 'ಮಂಡಿ ಮರ್ಚೆಂಟ್ಸ್' ಬಳಿ ಹೋಗಿ ಸರಿಯಾದ ಮಂಡಿಯನ್ನು (ಚಿಪ್ಪನ್ನು) ಒದಗಿಸು ಎಂದು ಕೇಳುವುದರ ಶುದ್ಧ ಅಪಭ್ರಂಶ ರೂಪವೇ 'ಗುಣ ಮಂಡಿ ತಾ yar' ಎನ್ನುವುದು. ಗುಣೇಶಾನಾಯ ಎನ್ನುವುದು ಫ್ಯಾಶನ್ ಇಂಡಸ್ಟ್ರಿಯವರು ಸ್ತುತಿಸಬೇಕಾದ ಪದ."

"ಏಕೆ? ಹೇಗೆ ಪ್ರಸ್ತುತವಿದು?"

"ಗುಣ ಎಂದರೆ ನೂಲು. ಗುಣೇಶರೆಂದರೆ ನೂಲಿನೊಡೆಯರು ಉರುಫ್ ಟೆಕ್ಸ್‌ಟೈಲ್ ಇಂಡಸ್ಟ್ರಿಯ ಮಾಲಿಕರು. ಟೆಕ್ಸ್‌ಟೈಲಿನ ವಿವಿಧ ಫ್ಯಾಶನ್‌ಗಳ ವಸ್ತ್ರಗಳನ್ನು ಮಾರುವುದರ ಮೂಲಕ ಆಯ(ಧನ) ಪಡೆಯಲು ಈ ಪದದ ಪ್ರಾರ್ಥನೆಯೇ ಸೂಕ್ತ" ಎಂದನವ.

"ನಿನ್ನ ಬುದ್ಧಿ ಹಾಳಾಗಿದೆ. ನೀನು ವಿದ್ಯಾಗಣಪತಿಯ ಪ್ರಾರ್ಥನೆ ಮಾಡುವುದು ಅತ್ಯವಶ್ಯ" ಎಂದೆ.

ಸೀನು ನನ್ನತ್ತ ವಿರೋಧಪಕ್ಷದವನು ಮುಖ್ಯಮಂತ್ರಿಗಳತ್ತ ಬೀರುವ ಕ್ರುದ್ಧದೃಷ್ಟಿಯನ್ನು ಬೀರುತ್ತಾ ಹೊರನಡೆದ.

ಚರಿತ್ರೆ ಮೆಚ್ಚಿದ ಸಂಯಮದ ಹಾದಿ

ಪ್ರತಿಯೊಂದು ಪ್ರಚೋದನೆಗೂ ಪ್ರತಿಕ್ರಿಯಿಸಲೇಬೇಕಾದ ಅಗತ್ಯವಿಲ್ಲ ಎಂಬುದನ್ನು ಶ್ರೇಷ್ಠ ನಾಯಕರು ಮತ್ತು ಕಾಲವನ್ನು ಗೆದ್ದು ನಿಂತ ಸಂಸ್ಥೆಗಳು ನಮಗೆ ನೆನಪಿಸಿವೆ.

▸ ಸಾತ್ವಿಕ್ ರಮೇಶ್



ಇತ್ತೀಚಿನ ವಾರಗಳಲ್ಲಿ ಸಂಘದ ವಿರುದ್ಧ ಹಳೆಯ ಆರೋಪಗಳನ್ನೇ ಮತ್ತೆ ಮುನ್ನೆಲೆಗೆ ತರುತ್ತಿರುವುದು ಕಂಡುಬರುತ್ತಿದೆ.

ಸೂಕ್ಷ್ಮವಾಗಿ ಗಮನಿಸುವ ಯಾರಿಗಾದರೂ, ಈ ಎಲ್ಲ ವಿಶ್ಲೇಷಣೆಗಳ ಹಿಂದಿರುವುದು ಸತ್ಯದ ಅನ್ವೇಷಣೆಯಲ್ಲ, ಬದಲಿಗೆ ಅನಗತ್ಯ ವಿವಾದ ಸೃಷ್ಟಿಸಿ ರಾಜಕೀಯ ಲಾಭ ಮಾಡಿಕೊಳ್ಳುವ ಹಠ ಎಂಬುದು ಸ್ಪಷ್ಟವಾಗುತ್ತದೆ. ಈ ಆರೋಪಗಳ ಕುರಿತು ಸಾರ್ವಜನಿಕ ವಲಯದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಗಳು ನಡೆದಿವೆ; ಪ್ರಮುಖ ಕಾನೂನು ತಜ್ಞರು ಹಾಗೂ ಸಾರ್ವಜನಿಕ ಚಿಂತಕರು ಇವುಗಳಿಗೆ ಸೂಕ್ತ ಉತ್ತರವನ್ನೂ ನೀಡಿದ್ದಾರೆ. ಆದಾಗ್ಯೂ, ಆ ಎಲ್ಲ ಸ್ಪಷ್ಟೀಕರಣಗಳನ್ನು ಬದಿಗಿಟ್ಟು, ಇದೇ ವಿವಾದವನ್ನು ಹಠಕ್ಕೆ ಬಿದ್ದಂತೆ ಮತ್ತೆಮತ್ತೆ ಕೆದಕಲಾಗುತ್ತಿದೆ.

ಇಂತಹ ಸಂದಿಗ್ಧ ಸಂದರ್ಭಗಳಲ್ಲಿ ಚರಿತ್ರೆಯು ನಮಗೊಂದು ದಾರಿದೀಪವಾಗುತ್ತದೆ. ಪ್ರತಿಯೊಂದು ಪ್ರಚೋದನೆಗೂ ಪ್ರತಿಕ್ರಿಯಿಸಲೇಬೇಕಾದ ಅಗತ್ಯವಿಲ್ಲ ಎಂಬುದನ್ನು ಇತಿಹಾಸದ ಶ್ರೇಷ್ಠ ನಾಯಕರು ಮತ್ತು ಕಾಲವನ್ನು ಗೆದ್ದು ನಿಂತ ಸಂಸ್ಥೆಗಳು ನಮಗೆ ಪದೇ ಪದೇ ನೆನಪಿಸಿವೆ. ಅನೇಕ ಬಾರಿ, ಅತ್ಯಂತ ಕಠಿಣವಾದ ಮಾರ್ಗವೇ ಅತ್ಯಂತ ವಿವೇಕಯುತವಾದದ್ದಾಗಿರುತ್ತದೆ; ಅದೇ 'ಸಂಯಮದ ಮಾರ್ಗ'.

ಯಾವುದೇ ಒಂದು ಸಂಸ್ಥೆ, ಚಳವಳಿ ಅಥವಾ ನಾಯಕನಿಗೆ ಎದುರಾಳಿಗಳಿಂದ ವಿರೋಧ ವ್ಯಕ್ತವಾಗುವುದು ಸಹಜವೇ. ಆದರೆ ಅವರ ನೈಜ ಪರೀಕ್ಷೆ ಎದುರಾಗುವುದು ಶತ್ರುಗಳ ವಿರೋಧದಿಂದಲ್ಲ, ಬದಲಿಗೆ ತಮ್ಮವರಲ್ಲೇ ಮೂಡುವ ಸಂಶಯದಿಂದ. ವಿರೋಧಿಗಳ ಟೀಕೆಗಳನ್ನು ನಿರ್ಲಕ್ಷಿಸಬಹುದು, ಹಿತೈಷಿಗಳ ಪ್ರಶ್ನೆಗಳಿಗೆ ಉತ್ತರಿಸುವುದು ಕೊಂಚ ಕಷ್ಟವೇ. ಆದರೆ ನಾಯಕತ್ವದ ಅತ್ಯಂತ ದೊಡ್ಡ ಜವಾಬ್ದಾರಿಯೆಂದರೆ, ತಾವು ನಂಬಿದ ಹಾದಿಯಲ್ಲಿ ಸಾಗುವಾಗ, ಯಾರ ಹಿತಕ್ಕಾಗಿ ಶ್ರಮಿಸುತ್ತಿದ್ದೇವೆಯೋ ಅವರೇ ಭರವಸೆ ಕಳೆದುಕೊಳ್ಳಲು ತೊಡಗಿದಾಗಲೂ ತನ್ನ ದೃಢತೆಯನ್ನು ಕಳೆದುಕೊಳ್ಳದಿರುವುದು.

ನಮ್ಮ ಇತಿಹಾಸದಲ್ಲಿ ಇದಕ್ಕೆ ಅಪಾರ ಉದಾಹರಣೆಗಳಿವೆ.

ಚರಿತ್ರೆ ಕಲಿಸಿದ ಪಾಠ

ಛತ್ರಪತಿ ಶಿವಾಜಿ ಮಹಾರಾಜರ ವಿರುದ್ಧ ಅಫ್ಜಲ್ ಖಾನ್ ದಂಡೆತ್ತಿ ಬಂದಾಗ, ಅದು ಕೇವಲ ಒಂದು ಸೈನಿಕ ಆಕ್ರಮಣವಾಗಿರಲಿಲ್ಲ. ಅದೊಂದು ವ್ಯವಸ್ಥಿತ ಪ್ರಚೋದನೆಯಾಗಿತ್ತು. ಹಳ್ಳಿಗಳನ್ನು ಹಾಳುಗೆಡವಲಾಯಿತು,



ಧಾರ್ಮಿಕ ಶ್ರದ್ಧಾಕೇಂದ್ರಗಳನ್ನು ಧ್ವಂಸಗೊಳಿಸಲಾಯಿತು, ಮನೆಗಳನ್ನು ಲೂಟಿ ಮಾಡಿ ಅಸಂಖ್ಯಾತ ಮುಗ್ಧ ಜನರನ್ನು ಹಿಂಸಿಸಲಾಯಿತು. ಈ ದಾಳಿಯ ಉದ್ದೇಶ ಕೇವಲ ವಿನಾಶ ಉಂಟುಮಾಡುವುದಷ್ಟೇ ಆಗಿರಲಿಲ್ಲ; ಜನರಲ್ಲಿ ತೀವ್ರ ಆಕ್ರೋಶವನ್ನು ಹುಟ್ಟುಹಾಕಿ, ಶಿವಾಜಿ ಮಹಾರಾಜರು ತಮ್ಮ ಯುದ್ಧತಂತ್ರವನ್ನು ಮರೆತು ಕೇವಲ ಭಾವಾವೇಶಕ್ಕೆ ಒಳಗಾಗಿ ತಕ್ಷಣವೇ ಪ್ರತಿಕ್ರಿಯಿಸುವಂತೆ ಮಾಡುವುದಾಗಿತ್ತು. ಸಾಮಾನ್ಯ ಜನರ ನಿರೀಕ್ಷೆಯೂ ಅಷ್ಟೇ ಸರಳವಾಗಿತ್ತು: ಶಿವಾಜಿ ಮಹಾರಾಜರು ತಕ್ಷಣವೇ ಕೋಟೆಯಿಂದ ಹೊರಬಂದು ಶತ್ರುವನ್ನು ಎದುರಿಸಬೇಕೆಂಬುದೇ ಅವರ ಹಂಬಲವಾಗಿತ್ತು.

ದಿನಗಳು ಉರುಳಿದಂತೆ ಸಾರ್ವಜನಿಕರಲ್ಲಿ ಪ್ರಶ್ನೆಗಳು ಎದ್ದವು. ಈ ವಿಳಂಬವು ಅವರ ದೌರ್ಬಲ್ಯವನ್ನು ತೋರಿಸುತ್ತಿದೆಯೇ ಎಂದು ಕೆಲವರು ಸಂದೇಹಪಟ್ಟರೆ, ಇನ್ನು ಕೆಲವರು ಅವರ ವಿವೇಚನೆಯನ್ನೇ ಪ್ರಶ್ನಿಸಿದರು. ಆದರೆ, ಶತ್ರುಗಳು ನಿರ್ದೇಶಿಸಿದ ನಿಯಮಗಳ ಪ್ರಕಾರ ಪ್ರತಿಕ್ರಿಯಿಸುವುದು ಕೇವಲ ಶತ್ರುವಿನ ಉದ್ದೇಶಕ್ಕೆ ಮಾತ್ರ ಲಾಭದಾಯಕ ಎಂಬುದು ಶಿವಾಜಿ ಮಹಾರಾಜರಿಗೆ ಚೆನ್ನಾಗಿ ತಿಳಿದಿತ್ತು. ಅವರು ಆತುರದ ತೀರ್ಮಾನದ ಬದಲಾಗಿ ತಾಳ್ಮೆಯನ್ನೂ, ಭಾವನೆಗಳ ಬದಲಾಗಿ ತಂತ್ರಗಾರಿಕೆಯನ್ನೂ ಆರಿಸಿಕೊಂಡರು. ಆ ಸಂದರ್ಭದಲ್ಲಿ ಅವರಿಗೆ ಅಫ್ಜಲ್ ಖಾನನ ಪ್ರಚೋದನೆಗಿಂತಲೂ, ಮಹತ್ತರವಾದ ಗುರಿಯನ್ನು ನೆರವೇರಿಸುವ ಹಾದಿಯಲ್ಲಿ ಸ್ವಂತ ಜನರಿಂದ ಎದುರಾದ ಅಪನಂಬಿಕೆಯನ್ನು ಭರಿಸುವುದೇ ಅತ್ಯಂತ ಕಠಿಣವಾದ ಸವಾಲಾಗಿರಬೇಕು.

ಆ ನಂತರ ಇತಿಹಾಸದಲ್ಲಿ ಏನಾಯಿತು ಎಂಬುದು ಜಗಜ್ಜಾಹೀರು. ಸರಿಯಾದ ಸಮಯ ಬಂದಾಗ ಶಿವಾಜಿ ಮಹಾರಾಜರು ಅತ್ಯಂತ ನಿರ್ಣಾಯಕವಾಗಿ ಮುನ್ನುಗ್ಗಿದರು ಮತ್ತು ಅಫ್ಜಲ್ ಖಾನನ ಆಕ್ರಮಣವು ಅಂತ್ಯಕಂಡಿತು. ತಾಳ್ಮೆಯು ಅವರ ಸಂಕಲ್ಪವನ್ನು ದುರ್ಬಲಗೊಳಿಸಿರಲಿಲ್ಲ; ಬದಲಿಗೆ ಅವರ ಸ್ಥಾನವನ್ನುಮತ್ತಷ್ಟು ಗಟ್ಟಿಗೊಳಿಸಿತ್ತು.

ಮಹಾತ್ಮಾ ಗಾಂಧೀಜಿಯವರ ಹತ್ಯೆಯ ನಂತರದ ಅತ್ಯಂತ ಕಠಿಣ ಕಾಲಘಟ್ಟದಲ್ಲಿ ಸಂಘವು ಕೂಡ ಇಂತಹುದೇ ತತ್ವವನ್ನು ಅನುಸರಿಸಿತ್ತು. ನಿರಂತರ ನಿಂದನೆಗಳು, ನಿಷೇಧಗಳು, ಬಂಧನ ಗಳು ಹಾಗೂ ಸಾರ್ವಜನಿಕ ದ್ವೇಷವು ಅಸಂಖ್ಯಾತ ಸ್ವಯಂ ಸೇವಕರಲ್ಲಿ ತೀವ್ರ ತಲ್ಲಣವನ್ನು ಉಂಟುಮಾಡಿದ್ದವು. ಭಾವನೆಗಳು ಉಕ್ಕಿಹರಿಯುತ್ತಿದ್ದ ಆ ಹೊತ್ತಿನಲ್ಲಿ ಆಕ್ರೋಶಭರಿತವಾಗಿ ಪ್ರತಿಕ್ರಿಯಿಸುವುದು ಯಾರಿಗಾದರೂ ಸಹಜವಾಗಿತ್ತು. ಆದರೆ ಅಂದಿನ ಸರಸಂಘಚಾಲಕರಾಗಿದ್ದ ಗುರೂಜಿಯವರು ಸ್ವಯಂಸೇವಕರಲ್ಲಿ ಸಂಯಮ ಹಾಗೂ ಶಾಂತಿಯನ್ನು ಕಾಯ್ದುಕೊಳ್ಳಲು ಕರೆ ನೀಡಿದರು. ಸ್ವಯಂಸೇವಕರಿಗೆ ಅವರ ಸಂದೇಶ ಸರಳವಾಗಿತ್ತು: "Be calm at all cost" ಸಮಾಜವು ಎಷ್ಟೇ ಆಕ್ರೋಶಗೊಂಡಿದ್ದರೂ, ನಮ್ಮನ್ನು ತಪ್ಪಾಗಿ ಗ್ರಹಿಸಿದ್ದರೂ ಅದು ನಮ್ಮದೇ ಸಮಾಜ. ಆಕಸ್ಮಿಕವಾಗಿ ಹಲ್ಲು ನಾಲಿಗೆ ಯನ್ನು ಕಚ್ಚಿತೆಂದು ಯಾರೂ ಹಲ್ಲುಗಳನ್ನು ಮುರಿದುಕೊಳ್ಳುವುದಿಲ್ಲವಷ್ಟೇ? ಹಾಗೆಯೇ ನೋವಿನ ಕ್ಷಣಗಳಲ್ಲಿ ನಮ್ಮದೇ ಸಮಾಜದ ವಿರುದ್ಧ ನಾವು ತಿರುಗಿಬೀಳಲು ಸಾಧ್ಯವಿಲ್ಲ. ಮುಂದಿನ ವರ್ಷಗಳು ಅವರ ಆ ಅಚಲ ವಿಶ್ವಾಸಕ್ಕೆ ಸಾಕ್ಷಿಯಾದವು. ನಿಷೇಧಗಳು, ಪುನರಾವರ್ತಿತ ಆರೋಪಗಳು ಮತ್ತು ಪ್ರತಿಕೂಲ ಪರಿಸ್ಥಿತಿ ಗಳ ನಡುವೆಯೂ ಸಂಘವು ನಿರಂತರವಾಗಿ ಬೆಳೆಯಿತು. ಇಂದು ಸಂಘವು ತನ್ನ ಶತಮಾನೋತ್ಸವದ ವರ್ಷದಲ್ಲಿದ್ದು, ಎಂದಿಗಿಂತಲೂ ಹೆಚ್ಚು ಸದೃಢವಾಗಿ ಮತ್ತು ವ್ಯಾಪಕವಾಗಿ ದೇಶಾದ್ಯಂತ ಪಸರಿಸಿದೆ.

ಆವೇಶ ವರ್ಜಿತ ವಿವೇಚನೆ

ಅನೇಕ ನಾಯಕರು ಮತ್ತು ಸಂಸ್ಥೆಗಳು ತಾವು ಮಾಡಿದ ಕೆಲಸಗಳಿಗಿಂತ ಹೆಚ್ಚಾಗಿ, ತಾವು ಮಾಡದೇ ಇರಲು ನಿರ್ಧರಿಸಿದ (ಸಂಯಮ ವಹಿಸಿದ) ನಿರ್ಧಾರಗಳಿಗಾಗಿ ಇತಿಹಾಸದಲ್ಲಿ ಟೀಕೆಗೆ ಒಳಗಾಗಿವೆ. ವ್ಯೂಹಾತ್ಮಕ ತಾಳ್ಮೆಯನ್ನು ಆಯಾ ಸಂದರ್ಭದಲ್ಲಿ ಯಾರೂ ಪ್ರಶಂಸಿಸುವುದಿಲ್ಲ. ಸಂಯಮವನ್ನು ದುರ್ಬಲತೆಯೆಂದೂ, ಮೌನವನ್ನು ಅಸಹಾಯಕತೆಯೆಂದೂ, ಕಾಯುವಿಕೆಯನ್ನು ಅನಿಶ್ಚಿತತೆಯೆಂದೂ ತಪ್ಪಾಗಿ ಅರ್ಥೈಸಲಾಗುತ್ತದೆ. ಆದರೆ ಇತಿಹಾಸವು ಆಯಾ ಕ್ಷಣದ ಕೋಲಾಹಲವನ್ನು ನೆನಪಿಟ್ಟುಕೊಳ್ಳುವುದಿಲ್ಲ, ಬದಲಿಗೆ ವಿವೇಕಯುತ ನಿರ್ಧಾರ ತಂದಿಟ್ಟ ಸುಸ್ಥಿರ ಫಲಿತಾಂಶವನ್ನು ಮಾತ್ರ ಗೌರವಿಸುತ್ತದೆ. ಸಮಾಜವು ಸದಾ ಪ್ರಶ್ನೆಗಳನ್ನು ಕೇಳುತ್ತಲೇ ಇರುತ್ತದೆ. ಎದುರಾಳಿಗಳು ಪ್ರಚೋದಿಸುತ್ತಲೇ ಇರುತ್ತಾರೆ. ಹಿತೈಷಿಗಳೂ ಸಹ ಕೆಲವು ಬಾರಿ ತಾಳ್ಮೆ ಕಳೆದುಕೊಳ್ಳಬಹುದು. ಇವೆಲ್ಲವೂ ತೀರಾ ಸ್ವಾಭಾವಿಕ ಪ್ರತಿಕ್ರಿಯೆಗಳು. ಆದರೆ, ನಾಯಕತ್ವವು ಇದಕ್ಕಿಂತಲೂ ಮಿಗಿಲಾದ ಔನ್ನತ್ಯವನ್ನು ಬೇಡುತ್ತದೆ. ಸದ್ಯದ ಪರಿಸ್ಥಿತಿಯನ್ನು ಮೀರಿ ನಿಂತು, ವಿಶಾಲವಾದ ಧ್ಯೇಯೋದ್ದೇಶಗಳಿಗೆ ಬದ್ಧವಾಗಿರುವುದೇ ನೈಜ ನಾಯಕತ್ವ. ಭಾವಾವೇಶವು ಪ್ರಚೋದಿತ ಆತುರಕ್ಕೆ ಪ್ರೇರೇಪಿಸಿದರೆ, ಆತ್ಮವಿಶ್ವಾಸವು ವಿವೇಕಯುತ ಪ್ರತಿಕ್ರಿಯೆಗೆ ದಾರಿ ತೋರುತ್ತದೆ. ಆತುರದ ಆಕ್ರೋಶವು ಕ್ಷಣಿಕ ತೃಪ್ತಿಯನ್ನು ನೀಡಬಹುದು; ಆದರೆ ವಿವೇಚನೆಯು ಶಾಶ್ವತವಾದ ಯಶಸ್ಸನ್ನು ತಂದುಕೊಡುತ್ತದೆ. ಆಕ್ರೋಶವನ್ನು ಹೊರಹಾಕಲು ಕೇವಲ ಉದ್ವೇಗ ಸಾಕು; ಆದರೆ ಸಂಯಮವನ್ನು ಕಾಯ್ದುಕೊಳ್ಳಲು ಅಪಾರವಾದ ಆತ್ಮಬಲ ಬೇಕು.

ಮೆಸ್ಸಿ, ರೊನಾಲ್ಡೋ: ಯಾರು ಮೇಲೆಂಬ ಅನವಶ್ಯ ಚರ್ಚೆ!

▸ ದಿನೇಶ್ ನಾಯಕ್

ಅರ್ಜೆಂಟೀನಾದ ಫುಟ್ಬಾಲಿಗ ಲಿಯೋನೆಲ್ ಮೆಸ್ಸಿಗೆ ಈಗ 39 ವರ್ಷ. ಪೋರ್ಚುಗಲ್‌ನ ಕ್ರಿಸ್ಟಿಯಾನೋ ರೊನಾಲ್ಡೋಗೆ 41 ವರ್ಷ. ಅವರಿಬ್ಬರೊಳಗೆ ಯಾರು ಶ್ರೇಷ್ಠರು ಎಂಬ ಕುರಿತಂತೆ ಅವರ ಅಭಿಮಾನಿಗಳು ಮತ್ತು ಫುಟ್ಬಾಲ್ ಪಂಡಿತರು ಕೆಲವು ವರ್ಷಗಳಿಂದ ಚರ್ಚಿಸುತ್ತಲೇ ಇದ್ದಾರೆ. ಆದರೆ ಆ ಚರ್ಚೆ ಮುಗಿಯುವಂತೆ ಕಾಣುತ್ತಿಲ್ಲ. ಏಕೆಂದರೆ ಇಬ್ಬರೂ ತಮ್ಮ ನಿರ್ವಹಣೆಯಲ್ಲಿ ಕುಂದು ತೋರುತ್ತಿಲ್ಲ. ಹೊಸ ಹೊಸ ದಾಖಲೆಗಳನ್ನು ಬರೆಯುತ್ತಲೇ ಇದ್ದಾರೆ. ವಯಸ್ಸು ಅವರ ನಿರ್ವಹಣೆಯ ಮೇಲೆ ಪ್ರಭಾವ ಬೀರಿದಂತೆ ಕಂಡುಬರುತ್ತಿಲ್ಲ. ವಯಸ್ಸು ಮಾಗಿದಂತೆ ಅವರ ಗೋಲು ಗಳಿಕೆಯ ಸಾಮರ್ಥ್ಯವೂ ಹೆಚ್ಚುತ್ತಿದೆ.

ಈ ಬಾರಿಯ ವಿಶ್ವಕಪ್‌ನಲ್ಲಿ ಆಸ್ಟ್ರೀಯಾದೆದುರಿನ ತನ್ನ ಮೊದಲ ಪಂದ್ಯದಲ್ಲಿ ಮೆಸ್ಸಿ 3 ಗೋಲು ಬಾರಿಸುವ ಮೂಲಕ ವಿಶ್ವಕಪ್‌ನಲ್ಲಿ ತಮ್ಮ ಗೋಲುಗಳ ಸಂಖ್ಯೆಯನ್ನು 18ಕ್ಕೇರಿಸಿಕೊಂಡು, ವಿಶ್ವಕಪ್‌ಗಳಲ್ಲಿ ಅತ್ಯಧಿಕ ಗೋಲು ಬಾರಿಸಿದ ವಿಶಿಷ್ಟ ಸಾಧನೆಗೈದರು. ಅದಕ್ಕೆ ಮುನ್ನ ರೊನಾಲ್ಡೋ ಕಾಂಗೋ ವಿರುದ್ಧ ಗೋಲು ಗಳಿಸಲು ವಿಫಲರಾಗಿದ್ದುದರಿಂದ ಎಲ್ಲರೂ ಮೆಸ್ಸಿಯೇ ರೊನಾಲ್ಡೋಗಿಂತ ಶ್ರೇಷ್ಠ ಎಂಬುದಾಗಿ ಮಾತನಾಡತೊಡಗಿದರು. ಆದರೆ ಮೆಸ್ಸಿ ವಿಶ್ವದಾಖಲೆ ಮಾಡಿದ ರಾತ್ರಿಯೇ ರೊನಾಲ್ಡೋ ಉಜ್ಬೇಕಿಸ್ತಾನದ ವಿರುದ್ಧ 2 ಗೋಲು ಬಾರಿಸುವ ಮೂಲಕ ತಾವಾಡಿದ ಎಲ್ಲಾ ಆರು ವಿಶ್ವಕಪ್‌ಗಳಲ್ಲೂ (2006, 2010, 2014, 2018, 2022, 2026) ಗೋಲು ದಾಖಲಿಸಿದ ವಿಶೇಷ ಸಾಧನೆಗೆ ಪುರಸ್ಕೃತರಾದರು. ಅಲ್ಲಿಂದ ಮೆಸ್ಸಿ ಮತ್ತು ರೊನಾಲ್ಡೋ ಮಧ್ಯೆ ಯಾರು ಶ್ರೇಷ್ಠರೆಂಬ ಚರ್ಚೆ ಮತ್ತೆ ಕಾವೇರಿತು. ಮೆಸ್ಸಿ ಕೂಡಾ ಈ ಆರೂ ವಿಶ್ವಕಪ್‌ಗಳಲ್ಲಿ ಆಡಿದ್ದಾರಾದರೂ 2010ರ ವಿಶ್ವಕಪ್‌ನಲ್ಲಿ ಗೋಲು ಗಳಿಸಲು ವಿಫಲರಾಗಿದ್ದರು.

ರೊನಾಲ್ಡೋ ತಮ್ಮ ವಿರುದ್ಧ ಟೀಕೆಗಳು ಕೇಳಿಬಂದಾಗಲೆಲ್ಲ ತಿರುಗಿ ಬಿದ್ದು ಟೀಕಾಕಾರರು ಬಾಯಿ ಮುಚ್ಚುವಂತೆ ಮಾಡುತ್ತಾರೆ. ಅವರು ಉಜ್ಬೇಕಿಸ್ತಾನದ ವಿರುದ್ಧ ಗೋಲು ಬಾರಿಸುವ ಮುನ್ನ ವಿಶ್ವಕಪ್‌ನ ನಿರಂತರ 11 ಪಂದ್ಯಗಳಲ್ಲಿ ಗೋಲು ಬಾರಿಸಲಾಗದೆ ನಿರಾಶೆ ಹೊಂದಿದ್ದರು. 2022ರ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಘಾನಾ ವಿರುದ್ಧ ಗೋಲು ಸಾಧಿಸಿದ ಬಳಿಕ ಅವರು ಯಾವುದೇ ಗೋಲು ಬಾರಿಸಿರಲಿಲ್ಲ. ಆ ಬರವನ್ನೀಗ ನೀಗಿದ್ದಾರೆ.

41 ವರ್ಷ ದಾಟಿರುವ ರೊನಾಲ್ಡೋ ಈಗ ವಿಶ್ವಕಪ್‌ನ ಇತಿಹಾಸದಲ್ಲಿ ಗೋಲು ಬಾರಿಸಿದ ಎರಡನೇ ಅತ್ಯಂತ ಹಿರಿಯ ಆಟಗಾರರಾಗಿದ್ದಾರೆ. (ಕ್ಯಾಮರೂನ್‌ನ ರೋಜರ್ ಮಿಲಾ 42ನೇ ವಯಸ್ಸಿನಲ್ಲಿ ಗೋಲು ಬಾರಿಸಿದ್ದರು.)

ತಮ್ಮ ದೇಶದ ಪರವಾಗಿ ವಿಶ್ವಕಪ್‌ನಲ್ಲಿ ಗೋಲು ಬಾರಿಸಿದ



ಅತ್ಯಂತ ಕಿರಿಯ ಮತ್ತು ಅತ್ಯಂತ ಹಿರಿಯ ಆಟಗಾರನೆಂಬ ದಾಖಲೆಯೂ ಅವರಲ್ಲಿದೆ. ವಿಶೇಷವೆಂದರೆ ಅರ್ಜೆಂಟೀನಾ ಪರವಾಗಿ ಮೆಸ್ಸಿ ಕೂಡಾ ಅತ್ಯಂತ ಕಿರಿಯ ಮತ್ತು ಅತ್ಯಂತ ಹಿರಿಯ ಆಟಗಾರನಾಗಿ ವಿಶ್ವಕಪ್‌ನಲ್ಲಿ ಗೋಲು ಬಾರಿಸಿದ ದಾಖಲೆ ಹೊಂದಿದ್ದಾರೆ.

ವಿಶೇಷವೆಂದರೆ ಇಬ್ಬರೂ ಆಟಗಾರರು ವಯಸ್ಸಾದಂತೆ ಹೆಚ್ಚೆಚ್ಚು ಗೋಲು ದಾಖಲಿಸುತ್ತಿರುವುದು. ಮೆಸ್ಸಿ 35 ವರ್ಷ ದಾಟಿದ ಬಳಿಕ ವಿಶ್ವಕಪ್‌ನಲ್ಲಿ 12 ಗೋಲು ದಾಖಲಿಸಿದ್ದಾರೆ. ಆದರೆ 18ರಿಂದ 34 ವರ್ಷದ ಅವಧಿಯಲ್ಲಿ ತಾವಾಡಿದ 19 ವಿಶ್ವಕಪ್ ಪಂದ್ಯಗಳಲ್ಲಿ ಮೆಸ್ಸಿ ಗೋಲು ಗಳಿಸಿದ್ದು 6 ಮಾತ್ರ. ಬಾರ್ಸಿಲೋನಾ ಕ್ಲಬ್ ತ್ಯಜಿಸಿದ ಬಳಿಕ ಮೆಸ್ಸಿ ತಮ್ಮ ದೇಶದ ಪರವಾಗಿ ಹೆಚ್ಚು ಗೋಲು ಗಳಿಸಿದ್ದಾರೆ ಎಂಬುದು ಗಮನಾರ್ಹ.

ರೊನಾಲ್ಡೋ 35ರ ಹರಯದ ಬಳಿಕ ವಿಶ್ವಕಪ್ ಮತ್ತು ಯುರೋಪಿಯನ್ ಚಾಂಪ್ಯನ್‌ಶಿಪ್‌ನಲ್ಲಿ 8 ಗೋಲು ಬಾರಿಸಿದ್ದಾರೆ. ರೊನಾಲ್ಡೋ ತಮ್ಮ ವೃತ್ತಿ ಜೀವನದಲ್ಲಿ ಒಟ್ಟು 975 ಗೋಲುಗಳನ್ನು ಬಾರಿಸಿದ್ದು, ಮುಂದಿನ ದಿನಗಳಲ್ಲಿ ಇನ್ನೂ 25 ಗೋಲು ದಾಖಲಿಸಿ ಸಾವಿರ ಗೋಲುಗಳ ಸರದಾರನಾಗುವ ಗುರಿ ಹೊಂದಿದ್ದಾರೆ.

ಮೆಸ್ಸಿ ಮತ್ತು ರೊನಾಲ್ಡೋ ನಡುವಿನ ತುಲನೆಗೆ ಬರುವುದಾದರೆ ಯಾರೊಬ್ಬರನ್ನೂ ಪ್ರತ್ಯೇಕವಾಗಿ ತೂಗಿ ನೋಡಲಾಗುವುದಿಲ್ಲ. ಇಬ್ಬರೂ ಶ್ರೇಷ್ಠರೇ. ಅವರೊಳಗೆ ತುಲನೆ ಮಾಡುವುದೂ ಸಾಧುವಲ್ಲ. "ಇಬ್ಬರು ಆಟಗಾರರೂ ಕಳೆದ ಕೆಲವು ವರ್ಷಗಳಿಂದ ಜಾಗತಿಕ ಫುಟ್ಬಾಲ್‌ಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಅವರೊಳಗಿನ ಸ್ಪರ್ಧೆಯು ಅವರ ಆಟದ ಸುಧಾರಣೆಗೇ ಹೆಚ್ಚು ಮಹತ್ವದ್ದಾಗಿದೆ " ಎಂದು ಅರ್ಜೆಂಟೀನಾದ ಮಾಜಿ ಫುಟ್ಬಾಲಿಗ ಮಾರ್ಟಿನೆಜ್ ಹೇಳುತ್ತಾರೆ.

ಅವರಿಬ್ಬರೊಳಗೆ ಸ್ಪರ್ಧಾತ್ಮಕ ಪೈಪೋಟಿ ಇರುವುದು ಕೂಡಾ ನಿಜವೇ. ಒಬ್ಬರನ್ನೊಬ್ಬರು ಮೀರಿಸಲು ಸದಾ ಯತ್ನಿಸುತ್ತಾರೆ. ಮೆಸ್ಸಿ ದಾಖಲೆಯ ಕುರಿತಂತೆ ಇತ್ತೀಚೆಗೆ ರೊನಾಲ್ಡೋರನ್ನು ಪ್ರಶ್ನಿಸಿದಾಗ ಅವರು ಆ ಕುರಿತಂತೆ ಪ್ರತಿಕ್ರಿಯಿಸಲೇ ನಿರಾಕರಿಸಿದ ಪ್ರಸಂಗ ನಡೆದಿದೆ. ಮೆಸ್ಸಿ ತಂಡದ ಹಿತಕ್ಕನುಗುವಾಗಿ ಆಟವಾಡಿದರೆ, ರೊನಾಲ್ಡೋ ಸ್ವಾರ್ಥಿ ಆಟಗಾರ, ತಾನೇ ಗೋಲು ಹೊಡೆಯಲು ಹೆಚ್ಚು ಆದ್ಯತೆ ಕೊಡುತ್ತಾನೆ ಎಂದು ಕೆಲವರು ಟೀಕಿಸುವುದಿದೆ.

ಈ ವಿಶ್ವಕಪ್‌ನಲ್ಲಿ ಅವರಿಬ್ಬರು ಪರಸ್ಪರ ಮುಖಾಮುಖಿಯಾಗುವ ಸಂದರ್ಭ ಬರಬಹುದೆ ಎಂದು ಫುಟ್ಬಾಲ್ ಪ್ರೇಮಿಗಳು ನಿರೀಕ್ಷಿಸುತ್ತಿದ್ದಾರೆ. ಅರ್ಜೆಂಟೀನಾ ಮತ್ತು ಪೋರ್ಚುಗಲ್‌ಗಳು ತಮ್ಮ ತಮ್ಮ ಬಣಗಳಲ್ಲಿ ಮೇಲಕ್ಕೇರಿ ನಾಕೌಟ್ ಪಂದ್ಯಗಳನ್ನೂ ಗೆಲ್ಲುತ್ತಾ ಸಾಗಿದರೆ ಜುಲೈ 11ರಂದು ಕನ್ಸಾಸ್ ನಗರದಲ್ಲಿ ಅವರಿಬ್ಬರೊಳಗಿನ ಕ್ವಾರ್ಟರ್ ಫೈನಲ್ ಪಂದ್ಯವನ್ನು ವೀಕ್ಷಿಸಬಹುದಾಗಿದೆ. ಅದಕ್ಕಿಂತ ಮುನ್ನ ಮೆಸ್ಸಿಗೆ ಮತ್ತು ರೊನಾಲ್ಡೋಗೆ ಜೂನ್ 28ರಂದು ತಮ್ಮ ನಿರ್ವಹಣೆ ತೋರುವ ಅವಕಾಶವಿದೆ. ಅರ್ಜೆಂಟೀನಾವು ಜೋರ್ಡಾನನ್ನು ಮತ್ತು ಪೋರ್ಚುಗಲ್ ಕೊಲಂಬಿಯಾವನ್ನು ಎದುರಿಸಲಿಕ್ಕಿದೆ.

ಅವರಿಬ್ಬರ ವಿಶ್ವಕಪ್ ಇದೇ ಕೊನೆಯದು ಎಂಬುದಾಗಿ ಕಳೆದೆರಡು ವಿಶ್ವಕಪ್‌ನಿಂದಲೇ ಕೆಲವರು ಭವಿಷ್ಯ ನುಡಿಯುತ್ತಾ ಬರುತ್ತಿದ್ದಾರೆ. ಆದರೆ ಮೆಸ್ಸಿ ಮತ್ತು ರೊನಾಲ್ಡೋ ನಿರ್ವಹಣೆ ಗಮನಿಸಿದರೆ 2030ರ ವಿಶ್ವಕಪ್‌ನಲ್ಲಿ ಕೂಡಾ ಅವರನ್ನು ಕಾಣುವಂತಾದರೆ ಅಚ್ಚರಿ ಪಡಬೇಕಾಗಿಲ್ಲ.

ಕಿರುಸುದ್ದಿ

ಫ್ಯೂಚರ್ ಬೂಟ್ ಕ್ಯಾಂಪ್ ಪರಿಚಯಾತ್ಮಕವಾದ ಕಾರ್ಯಕ್ರಮ

ಕುಂದಾಪುರ: ಗಿನ್ನಿಸ್ ದಾಖಲೆಗಳನ್ನು ಸಾಧಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಹಟ್ಟಿಯಂಗಡಿಯ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯಲ್ಲಿ ಯುರೋಪಿನ ಫಿನ್‌ಲ್ಯಾಂಡ್‌ನಲ್ಲಿ ನಡೆಯಲಿರುವ ಫ್ಯೂಚರ್ ಬೂಟ್ ಕ್ಯಾಂಪ್‌ನ ಪರಿಚಯಾತ್ಮಕವಾದ ಕಾರ್ಯಕ್ರಮ ಮಂಗಳವಾರ ನಡೆಯಿತು. ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಅಂಗವಾಗಿ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಗೆ ಭೇಟಿ ನೀಡಿದ್ದ ಫಿನ್‌ಲ್ಯಾಂಡ್‌ನ ಖ್ಯಾತ ಶಿಕ್ಷಣ ನವೋದ್ಯಮಿ, ಭವಿಷ್ಯದ ಶಿಕ್ಷಣ ತಜ್ಞೆ, "ಫಿನ್‌ಲ್ಯಾಂಡ್ 2030" ಸಂಸ್ಥೆಯ ನಿರ್ದೇಶಕಿ ಮೈಕೆ ಕ್ರೌಟ್‌ಶೈಡ್ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಾ "ಫಿನ್‌ಲ್ಯಾಂಡ್ ದೇಶವು ಪ್ರಪಂಚದಲ್ಲಿ ಸಾಮರಸ್ಯಕ್ಕೆ ಹೆಸರಾದ ದೇಶ. ಸ್ತ್ರೀ-ಪುರುಷರ ಸಮಾನತೆಯನ್ನು ಒಪ್ಪಿ ಅದರಂತೆ ವ್ಯವಹರಿಸುವ ದೇಶ. ಸದಾ ಸಂತೋಷದಿಂದ ಇರುವ ಜನರಿರುವ ದೇಶ. ಶಿಕ್ಷಣವು ಕೇವಲ ಪರೀಕ್ಷೆಗಳಿಗಾಗಿ ಅಲ್ಲ. ಜೀವನದ ಸವಾಲುಗಳನ್ನು ಎದುರಿಸಲು ಹಾಗೂ ಸಮಾಜದ ಪರಿವರ್ತನೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು ಹೇಳಿ, ಫ್ಯೂಚರ್ ಬೂಟ್ ಕ್ಯಾಂಪ್‌ನ ಪರಿಚಯಾತ್ಮಕವಾದ ಕೆಲವಷ್ಟು ವಿಚಾರಗಳನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲ ಮತ್ತು ಶ್ರೀ ಸಿದ್ಧಿ ಶೈಕ್ಷಣಿಕ ಪ್ರತಿಷ್ಠಾನದ ಕಾರ್ಯದರ್ಶಿ ಶರಣ ಕುಮಾರ ಅವರು ಅತಿಥಿಗಳನ್ನು ಗೌರವಿಸಿದರು. ಶಾಲಾ ಆಡಳಿತಾಧಿಕಾರಿ ವೀಣಾ ರಶ್ಮಿ ಎಂ., ಉಪಪ್ರಾಂಶುಪಾಲ ರಾಮ ದೇವಾಡಿಗ, ಶಿಕ್ಷಕರು, ಶಿಕ್ಷಕೇತರರು, ವಿದ್ಯಾರ್ಥಿಗಳೂ ಪಾಲ್ಗೊಂಡಿದ್ದರು. ಶ್ರೀಮಧು ಕೆ.ಎಲ್. ಕಾರ್ಯಕ್ರಮವನ್ನು ನಿರ್ವಹಿಸಿ, ವಂದಿಸಿದರು.

ಗ್ರಾ.ಪಂ. ಮಾಜಿ ಉಪಾಧ್ಯಕ್ಷರಿಂದ ಬಸ್ ತಂಗುದಾಣ ಕೊಡುಗೆ

ಸುಂಟಿಕೊಪ್ಪ: ವಿದ್ಯುತ್ ಕಂಬದ ವ್ಯವಸ್ಥೆ ಹಾಗೂ ಬಸ್ ತಂಗುದಾಣವನ್ನು ಕೆದಕಲ್ ಗ್ರಾಮ ಪಂಚಾಯತ್‌ನ ಮಾಜಿ ಉಪಾಧ್ಯಕ್ಷರಾದ ಸಂಜು ಪೊನ್ನಪ್ಪ ರವರು ತಮ್ಮ ಸ್ವಂತ ಖರ್ಚಿನಲ್ಲಿ ನಿರ್ಮಿಸುವ ಮೂಲಕ ಜನಸೇವೆಗೆ ಮಾದರಿಯಾಗಿದ್ದಾರೆ.



ಕೆದಕಲ್ ಗ್ರಾಮ ಪಂಚಾಯತ್ ವ್ಯಾಪ್ತಿಯ ಏಳನೇ ಮೈಲಿನ ವಿಕ್ರಂ ಬಡಾವಣೆಯಲ್ಲಿ ಕಳೆದ ಹಲವು ತಿಂಗಳುಗಳಿಂದ ವಿದ್ಯುತ್ ಕಂಬ ಇಲ್ಲದೇ ಆ ಭಾಗದ ನಿವಾಸಿಗಳಿಗೆ ಸಂಚರಿಸಲು ಸಾಧ್ಯವಾಗಿರಲಿಲ್ಲ. ಇದನ್ನು ಮನಗಂಡ ಸಂಜುಪೊನ್ನಪ್ಪ ಅವರು ಕೂಡಲೇ ಸೆಸ್ಕ್ ಇಲಾಖೆಯೊಂದಿಗೆ ಚರ್ಚಿಸಿ ಕೂಡಲೇ ರೂ 40 ಸಾವಿರ ವೆಚ್ಚದಲ್ಲಿ ವಿದ್ಯುತ್ ಕಂಬ ಅಳವಡಿಸುವ ಮೂಲಕ ನಿವಾಸಿಗಳಿಗೆ ದಾರಿದೀಪರಾಗಿದ್ದಾರೆ. ಕೆದಕಲ್ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಅಂದಾಜು ರೂ.60 ಸಾವಿರ ವೆಚ್ಚದಲ್ಲಿ ಕೆದಕಲ್-ಹೊರೂರು ಮೊದ್ದೂರು ಭಾಗದ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಬಸ್ ತಂಗುದಾಣ ನಿರ್ಮಿಸಿಕೊಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಸಂಜು ಪೊನ್ನಪ್ಪ ಅವರ ಸಮಾಜ ಸೇವೆಯನ್ನು ಪರಿಗಣಿಸಿ ಕೆದಕಲ್ ಗ್ರಾಮದ ನಿವಾಸಿಗಳಾದ ಬಿ.ಆರ್. ಸಂತೋಷ್ (ದಿನು), ಸತೀಶ್ ಪೂಜಾರಿ, ಮೋಹನ್ ಡಿಸೋಜ, ಡಾಲು, ಮನು, ಬಾಲ, ಜೀವನ್ ಸೇರಿದಂತೆ ಇತರರು ಅವರನ್ನು ಸನ್ಮಾನಿಸಿ ಗೌರವಿಸಿದರು.

ಹಿರಿಯ ವಿದ್ಯಾರ್ಥಿಯಿಂದ ಏಕತಡ್ಕ ಶಾಲೆಗೆ ಕೊಡುಗೆಗಳ ಹಸ್ತಾಂತರ

ನಿಡ್ಪಳ್ಳಿ: ಏಕತಡ್ಕ ಅಜ್ಜಿಕಲ್ಲು ಸರಕಾರಿ ಉನ್ನತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2026-27ನೇ ಸಾಲಿನಲ್ಲಿ 1ನೇ ತರಗತಿಗೆ ದಾಖಲಾತಿಗೊಂಡ ಎಲ್ಲಾ ವಿದ್ಯಾರ್ಥಿಗಳಿಗೆ ಶಾಲೆಯ ಹಿರಿಯ ವಿದ್ಯಾರ್ಥಿ ಶರತ್ ರೈ ಹೊಸ ಮನೆಯವರು ಊಟದ ತಟ್ಟೆ ಲೋಟ ಹಾಗೂ ನೀರಿನ ಬಾಟಲ್ ಕೊಡುಗೆಯಾಗಿ ನೀಡಿದರು. ಪುತ್ತೂರು ಇನ್ನರ್ ವೀಲ್ ಘಟಕದ ಅಧ್ಯಕ್ಷೆ ರಾಜೇಶ್ವರಿ ಆಚಾರ್ಯ ಅವರು ತಮ್ಮ ಮಗಳ ಹುಟ್ಟು ಹಬ್ಬದ ಪ್ರಯುಕ್ತ ಕುಕ್ಕರ್ ಮತ್ತು ಪಾತ್ರೆಯನ್ನು ಕೊಡುಗೆಯಾಗಿ ನೀಡಿದರು. ಶಾಲಾ ಮುಖ್ಯ ಗುರು ತನುಜಾ ಎಂ.ಕೆ. ಮತ್ತು ಶಿಕ್ಷಕ ವೃಂದದವರು, ಅಕ್ಷರ ದಾಸೋಹ ಸಿಬ್ಬಂದಿ ಕೊಡುಗೆಯನ್ನು ಸ್ವೀಕರಿಸಿದರು.

ಕಟಪಾಡಿ ರೋಟರಿ ಕ್ಲಬ್ : ಆಶ್ರಮವಾಸಿಗಳಿಗೆ ಊಟ, ಹಣ್ಣು ಹಂಪಲು ವಿತರಣೆ

ಕಟಪಾಡಿ: ರೋಟರಿ ಕ್ಲಬ್ ಕಟಪಾಡಿ ವತಿಯಿಂದ ಕಟಪಾಡಿಯ ಕಾರುಣ್ಯ ಆಶ್ರಮದಲ್ಲಿರುವ ವೃದ್ಧರಿಗೆ ಅನ್ನದಾನ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಆಶ್ರಮದ ನಿವಾಸಿಗಳಿಗೆ ಊಟ ಹಾಗೂ ಹಣ್ಣುಗಳನ್ನು ವಿತರಿಸಲಾಯಿತು. ಈ ಕಾರ್ಯಕ್ರಮವು ಆಶ್ರಮದ ವೃದ್ಧರಲ್ಲಿ ಸಂತೋಷ ಮತ್ತು ಸಂಭ್ರಮವನ್ನುಂಟು ಮಾಡಿತು. ಕಾರ್ಯಕ್ರಮದಲ್ಲಿ ರೋಟರಿ ಪ್ರಮುಖರಾದ ಜಗನ್ನಾಥ ಕೋಟೆ, ಶ್ರೀಕರ್ ಅಂಚನ್, ಶಕುಂತಲಾ ಟೀಚರ್, ವಿಲ್ಫ್ರೆಡ್ ಲೂಯಿಸ್, ಲಕ್ಷ್ಮಿ, ಟಿ.ಆರ್. ದೊಡ್ಡಮನಿ ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಸಹಕರಿಸಿದರು.

ಕೊಲ್ಲೂರು: ವಿಷ ಸೇವಿಸಿದ್ದ ಜೆಸಿಬಿ ಚಾಲಕ ಸಾವು

ಉಡುಪಿ: ಜೀವನದಲ್ಲಿ ಜಿಗುಪ್ಸೆಗೊಂಡು ಜಡ್ಕಲ್ ಪೇಟೆಯ ಬಳಿ ವಿಷ ಸೇವಿಸಿದ್ದ ಜೆಸಿಬಿ ಚಾಲಕರೊಬ್ಬರು ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಜೂನ್ 27ರಂದು ಮೃತಪಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆಯ ಕಾರ್ಗಲ್ ನಿವಾಸಿಯಾದ ಪ್ರಿನ್ಸ್ ವಿ. (29) ಮೃತಪಟ್ಟ ಯುವಕ. ಬೈಂದೂರು ತಾಲೂಕಿನ ಜಡ್ಕಲ್ ಗ್ರಾಮದಲ್ಲಿ ಜೆಸಿಬಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದು, ವಿಪರೀತ ಮದ್ಯಪಾನದ ಚಟ ಹೊಂದಿದ್ದರು ಎನ್ನಲಾಗಿದೆ. ಜೂನ್ 23ರಂದು ಸಂಜೆ 5.30ರ ಸುಮಾರಿಗೆ ತಾಯಿ ತಂಗಮ್ಮ ಅವರಿಗೆ ಕರೆ ಮಾಡಿದ್ದ ಪ್ರಿನ್ಸ್, ತಾವು ಜೀವನದಲ್ಲಿ ಜಿಗುಪ್ಸೆಗೊಂಡಿದ್ದು ಜಡ್ಕಲ್ ಪೇಟೆಯ ಬಳಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಿಳಿಸಿದ್ದರು. ತಕ್ಷಣವೇ ಸೋದರ ಪ್ರಿನ್ಸ್ ವಿ ಅವರು ಸ್ಥಳೀಯ ಕ್ಲಿನಿಕ್‌ನಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಕೆಎಂಸಿ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆಗೆ ಸ್ಪಂದಿಸದ ಪ್ರಿನ್ಸ್ ಜೂನ್ 27ರ ಬೆಳಗ್ಗಿನ ಜಾವ 3:45ಕ್ಕೆ ಕೊನೆಯುಸಿರೆಳೆದಿದ್ದಾರೆ. ಕೊಲ್ಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಾಪು ವಿಧಾನಸಭಾ ಕ್ಷೇತ್ರದ ಮುದರಂಗಡಿ ಗ್ರಾ.ಪಂ. ವ್ಯಾಪ್ತಿಯ ಸಾಂತೂರು ಅಂಗನವಾಡಿ ಕೇಂದ್ರವನ್ನು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಉದ್ಘಾಟಿಸಿದರು. ಈ ಸಂದರ್ಭ ಧರ್ಮಗುರು ಶಾಲಿನಿ ಸ್ಟೈನ್, ಜೆನೆಟ್ ಬರ್ಬೋಜ, ಶಿವರಾಮ ಭಂಡಾರಿ, ರವೀಂದ್ರ ಪ್ರಭು, ಇಂದಿರ ಆಚಾರ್ಯ, ಶರತ್ ಶೆಟ್ಟಿ, ಉದ್ಯಮಿಗಳಾದ ಸುಜಿತ್ ಶೆಟ್ಟಿ ಸಾಂತೂರ್, ಪ್ರಾಂಶುಪಾಲ ಹರಿ ಹೆಬ್, ಅಂಗನವಾಡಿ ಶಿಕ್ಷಕರಾದ ಯಶೋದಾ ಪೂಜಾರಿ, ವಿಶ್ವನಾಥ ಶೆಟ್ಟಿ, ಗುರುಪ್ರಸಾದ್ ಶೆಟ್ಟಿ, ಗುತ್ತಿಗೆದಾರರಾದ ರಾಘವೇಂದ್ರ ಶೆಟ್ಟಿ ಹಾಗೂ ರಂಜಿತ್ ಪ್ರಭು ಉಪಸ್ಥಿತರಿದ್ದರು.

ರಾಜ್ಯ ಸರಕಾರಕ್ಕೆ ಶ್ರೀ ನಾರಾಯಣಗುರು ವಿಚಾರ ವೇದಿಕೆ ಆಗ್ರಹ

500 ಕೋಟಿ ರೂ. ಅನುದಾನ ಕೊಡಿ

ಮಂಗಳೂರು: ರಾಜ್ಯ ಸಚಿವ ಸಂಪುಟದಲ್ಲಿ ಬಿಲ್ಲವ-ಈಡಿಗ ಸಮುದಾಯಕ್ಕೆ ಎರಡು ಸಚಿವ ಸ್ಥಾನ ನೀಡಬೇಕು, ಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮಕ್ಕೆ ವಾರ್ಷಿಕ 500 ಕೋಟಿ ರೂ. ಅನುದಾನ ಬಿಡುಗಡೆ ಮಾಡಬೇಕು ಎಂದು ಶ್ರೀ ನಾರಾಯಣಗುರು ವಿಚಾರ ವೇದಿಕೆ ಆಗ್ರಹಿಸಿದೆ.

ಸಚಿವ ಸಂಪುಟ ವಿಸ್ತರಣೆ ವೇಳೆ ಮುಂದಿನ ಒಂದೂವರೆ ವರ್ಷದ ಸರಕಾರದ ಅವಧಿಯಲ್ಲಿ ನಮ್ಮ ಸಮಾಜದ ಕನಿಷ್ಠ ಇಬ್ಬರಿಗೆ ಸಚಿವ ಸ್ಥಾನದ ಅವಕಾಶ ಮಾಡಿಕೊಡಬೇಕು ಎಂಬುದು ಮುಖ್ಯಮಂತ್ರಿ ಹಾಗೂ ನಮ್ಮದೇ ಸಮುದಾಯದ ಕೆಪಿಸಿಸಿ ನೂತನ ಅಧ್ಯಕ್ಷರಲ್ಲಿ ನಮ್ಮ ವಿನಂತಿಯಾಗಿದೆ ಎಂದು ಶ್ರೀ ನಾರಾಯಣಗುರು ವಿಚಾರ ವೇದಿಕೆ ಕರ್ನಾಟಕ ರಾಜ್ಯಾಧ್ಯಕ್ಷ ಸತ್ಯಜಿತ್ ಸುರತ್ಕಲ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಬಿಲ್ಲವ-ಈಡಿಗ ಸಮಾಜದ 26 ಪಂಗಡಗಳ ಅಭಿವೃದಿಗಾಗಿ ರಚನೆಯಾಗಿರುವ ಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮಕ್ಕೆ ವಾರ್ಷಿಕ 500 ಕೋಟಿ ರೂ. ಮೀಸಲಿಡುವ ಭರವಸೆಯನ್ನು ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನೀಡಿತ್ತು. ಆದರೆ, ಕಳೆದ ಮೂರು ವರ್ಷದಲ್ಲಿ ನಿಗಮ ರಚನೆಗೊಂಡು ಅಧ್ಯಕ್ಷರ ನೇಮಕ ನಡೆದು ನಿಗಮದ ಕಚೇರಿ ಮಾತ್ರ ಆಗಿದೆ. ನಿಗಮಕ್ಕೆ ಯಾವುದೇ ಹಣಕಾಸಿನ ಘೋಷಣೆ, ಬಿಡುಗಡೆ ಇದುವರೆಗೆ ಆಗಿಲ್ಲ. ಅನುದಾನ ಸಿಗದೆ ನಮ್ಮ ಸಮಾಜ ಶೈಕ್ಷಣಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಆಗಿಲ್ಲ. ಸಮಾಜದ ಅಭಿವೃದ್ಧಿಗಾಗಿ ಈ ಅನುದಾನ ಬಿಡುಗಡೆಗೊಳಿಸಬೇಕು. ಮುಂದಿನ ಆರು ತಿಂಗಳೊಳಗೆ ಅನುದಾನ ಬಿಡುಗಡೆ ಆಗದಿದ್ದರೆ ಅನಿವಾರ್ಯವಾಗಿ ಹೋರಾಟ ನಡೆಸುತ್ತೇವೆ. ದ.ಕ. ಜಿಲ್ಲೆಯಲ್ಲೂ ವಿಚಾರ ವೇದಿಕೆ ನೇತೃತ್ವದಲ್ಲಿ ಸಮಾಜದ ಸಂಘಟನೆಗಳ ಸಹಯೋಗದೊಂದಿಗೆ ಬೃಹತ್ ಸಭೆ ಆಯೋಜಿಸಲಾಗುವುದು ಎಂದು ಸತ್ಯಜಿತ್ ಎಚ್ಚರಿಸಿದರು.

ಶ್ರೀ ನಾರಾಯಣಗುರು ವಿಚಾರ ವೇದಿಕೆ ರಾಜ್ಯ ಸಾಮಾಜಿಕ ಜಾಲತಾಣ ಪ್ರಮುಖ ಸಂದೀಪ್ ಪಂಪ್‌ವೆಲ್, ಜಿಲ್ಲಾ ಪ್ರಮುಖರಾದ ಎಂ.ಕೆ. ಪ್ರಸಾದ್, ದಿನೇಶ್‌ಕುಮಾರ್ ರಾಯಿ, ಲಕ್ಷ್ಮೀಶ್ ಸುವರ್ಣ, ಬಂಟ್ವಾಳ ತಾಲೂಕು ಅಧ್ಯಕ್ಷ ನವೀನ್ ಕೋಟ್ಯಾನ್, ಗಣೇಶ್ ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಕುಪ್ಮಾ ಸಮಿತಿಯ ಚಿಂತನಾ ಸಭೆಯಲ್ಲಿ ಡಾ. ಮೋಹನ ಆಳ್ವ ಒತ್ತಾಯ

ಖಾಸಗಿ ಶಿಕ್ಷಣ ಸಂಸ್ಥೆಗಳ ಸಮಸ್ಯೆ ಪರಿಹರಿಸಿ

ಮಂಗಳೂರು: ಕರ್ನಾಟಕ ಅನುದಾನ ರಹಿತ ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಸಂಘ, ದಕ್ಷಿಣ ಕನ್ನಡ ಜಿಲ್ಲಾ ಕುಪ್ಮಾ ಸಮಿತಿಯ ಚಿಂತನಾ ಸಭೆ ಮಂಗಳೂರಿನ ಹೋಟೇಲ್ ಓಶಿಯನ್ ಪರ್ಲ್‌ನಲ್ಲಿ ನಡೆಯಿತು. 'ಖಾಸಗಿ ಶಿಕ್ಷಣ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಪರಿಹಾರಗಳು' ಪ್ರಮುಖ ವಿಷಯವಾಗಿತ್ತು.

ಅಧ್ಯಕ್ಷತೆ ವಹಿಸಿದ್ದ ರಾಜ್ಯ ಕುಪ್ಮಾ ಸಮಿತಿಯ ಅಧ್ಯಕ್ಷ ಡಾ.ಎಂ ಮೋಹನ್ ಆಳ್ವ ಮಾತನಾಡಿ, ಕುಪ್ಮಾ ಎಂದಿಗೂ ಹೋರಾಟವನ್ನು ಮಾಡಲು ಬಯಸುವುದಿಲ್ಲ. ಬದಲಾಗಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರಕಾರದೊಂದಿಗೆ ಸಹಕಾರವನ್ನು ಬಯಸುತ್ತೇವೆ. ಸಂಘರ್ಷವಿಲ್ಲದೆ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಕಾರ್ಯ ಆಗಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಇಂದು ಹಲವಾರು ಗಂಭೀರವಾದ ಸಮಸ್ಯೆಗಳು ಇವೆ. ಅವುಗಳನ್ನು ಬಗೆಹರಿಸಲು ಸರ್ಕಾರವು ಉತ್ತಮವಾಗಿ ಸ್ಪಂದಿಸಬೇಕು ಎಂದರು.

ಸಾರಿಗೆ ಇಲಾಖೆ, ಅರಣ್ಯ ಇಲಾಖೆ, ವಸತಿ ಇಲಾಖೆ, ಪರಿಸರ ಇಲಾಖೆ ಹೀಗೆ ಬೇರೆ ಬೇರೆ ಸರಕಾರಿ ಇಲಾಖೆಗಳು ಅನಗತ್ಯವಾಗಿ ಶಿಕ್ಷಣ ಸಂಸ್ಥೆಗಳಿಗೆ ತೊಂದರೆಯನ್ನು ನೀಡಬಾರದು. ಶಿಕ್ಷಣ ಸಂಸ್ಥೆಗಳು ತಪ್ಪಿದಾಗ ಸೂಕ್ತವಾದ ಪರಿಹಾರಗಳೊಂದಿಗೆ ಮಾರ್ಗದರ್ಶನವನ್ನು ನೀಡಬೇಕು. ಸರ್ಕಾರವು ವಿದ್ಯಾರ್ಥಿಗಳ ಪಠ್ಯ ಮತ್ತು ಪಠ್ಯೇತರ



ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಮುಂದಿನ ದಿನಗಳಲ್ಲಿ ಕುಪ್ಮಾ ಸಂಘಟನೆಯು ಜಿಲ್ಲೆಯ ಕನಿಷ್ಠ ಕುಪ್ಮಾದ ಸದಸ್ಯ ಕಾಲೇಜುಗಳ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಟ್, ಕೆ -ಸಿಇಟಿ, ಜೆಇಇ ಮೌಖಿಕ ಪರೀಕ್ಷೆಯನ್ನು ಏಕಕಾಲಕ್ಕೆ ನಡೆಸುವ ಮೂಲಕ ವಿದ್ಯಾರ್ಥಿ ಸಮೂಹಕ್ಕೆ ಸಹಾಯ ಆಗಬೇಕು ಎಂದು ಹೇಳಿದರು.

ಕುಪ್ಮಾ ರಾಜ್ಯ ಸಮಿತಿಯ ಕಾರ್ಯದರ್ಶಿ ಪ್ರೊ. ನರೇಂದ್ರ ಎಲ್. ನಾಯಕ್ ಅವರು ಮಾತನಾಡಿ, ಕುಪ್ಮಾ ಸಂಘಟನೆಯನ್ನು ಸಂಘಟಿಸಿರುವ ಕಾರಣ ಮ್ಯಾನೇಜ್ಮೆಂಟ್‌ಗಳ ನಡುವೆ ಯಾವುದೇ ರೀತಿಯ ತಪ್ಪು ತಿಳುವಳಿಕೆಗಳಿದ್ದರೆ ಅದು ಕಡಿಮೆಯಾಗುತ್ತದೆ. ಒಬ್ಬರಿಗೊಬ್ಬರು ತಮ್ಮ ಸಮಸ್ಯೆಗಳನ್ನು ಆಲಿಸುವ ಮತ್ತು ಬಗೆಹರಿಸಿಕೊಳ್ಳುವ, ಆಪ್ತವಾಗಿ ಹಂಚಿಕೊಳ್ಳುವ ಒಂದು ಒಳ್ಳೆಯ ವೇದಿಕೆಯಾಗಿದೆ. ಕುಪ್ಮಾ ಸಂಘಟನೆಯನ್ನು ಕಟ್ಟುವುದಕ್ಕಿಂತ ಮುಂಚೆ ನಮ್ಮೆಲ್ಲರ ನಡುವೆ ಒಂದು ರೀತಿಯ ತಪ್ಪು ತಿಳುವಳಿಕೆಗಳಿದ್ದವು. ಅದು ಕುಪ್ಮಾವನ್ನು ಸಂಘಟಿಸಿದ ಕಾರಣ ದೂರವಾಗಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಕಾಲ ಕಾಲಕ್ಕೆ ಹಲವಾರು ಬದಲಾವಣೆಗಳು ಬಂದ ಕಾರಣ ಅದರದ್ದೇ ಆದ ಸಮಸ್ಯೆಗಳು ಸಹ ಉದ್ಭವವಾಗುತ್ತವೆ. ಆ ಸಮಸ್ಯೆಗಳನ್ನು ಕುಪ್ಮಾದ ಮೂಲಕ ಬಗೆಹರಿಸಿಕೊಂಡಿದ್ದೇವೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಆಡಳಿತ ಮಂಡಳಿಯವರು ಕಾನೂನಿನಡಿಯಲ್ಲಿಯೇ ಕ್ರಮಬದ್ಧವಾಗಿ ನಡೆದರೆ ಉತ್ತಮ ಶಿಕ್ಷಣ ಸಂಸ್ಥೆಯನ್ನು ಕಟ್ಟಲು ಸಾಧ್ಯ. ವಿದ್ಯಾರ್ಥಿಗಳಿಗೆ, ಹೆತ್ತವರಿಗೆ ಗುಣಮಟ್ಟದ, ಪರಿಣಾಮಕಾರಿ ಶಿಕ್ಷಣವನ್ನು ನೀಡಿದರೆ ಖಂಡಿತವಾಗಿ ಶಿಕ್ಷಣ ಸಂಸ್ಥೆಗಳು ಬೆಳೆಯಲು ವಿಪುಲವಾದ ಅವಕಾಶಗಳು ಇವೆ ಎಂದರು.

> **ಶಿಕ್ಷಣ ಸಂಸ್ಥೆಗಳಲ್ಲಿ ಒಳ್ಳೆಯ ಮೂಲಭೂತಸೌಕರ್ಯಗಳು ಗುಣಮಟ್ಟದ ಶಿಕ್ಷಣ ಇದ್ದಾಗ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರುವುದರಲ್ಲಿ ಯಾವುದೇ ರೀತಿಯ ಸಂದೇಹವಿಲ್ಲ. ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಶಿಕ್ಷಣ ಸಂಸ್ಥೆಗಳು ಅಪಾರ ಪರಿಶ್ರಮವನ್ನು ಪಡಬೇಕು**
> **ನರೇಂದ್ರ ಎಲ್. ನಾಯಕ್**

ಆಡಳಿತಾತ್ಮಕವಾಗಿ ಪ್ರತಿಯೊಂದು ಶಿಕ್ಷಣ ಸಂಸ್ಥೆಗಳಿಗೂ ಅವರದ್ದೇ ಆದ ಸವಾಲು ಇರುತ್ತವೆ. ಆ ಸವಾಲುಗಳನ್ನು ಎದುರಿಸಲು ಎಲ್ಲಾ ಶಿಕ್ಷಣ ಸಂಸ್ಥೆಗಳು ಸಮರ್ಥವಾಗಿದೆ. ಆದರೆ ಆ ಸಮಸ್ಯೆಗಳು ಸಾಮೂಹಿಕವಾಗಿದ್ದಾಗ ಕುಪ್ಮಾದಂತಹ ಸಂಘಟನೆ ಅಗತ್ಯವಾಗಿ ಬೇಕು. ಶಿಕ್ಷಣ ಸಂಸ್ಥೆಗಳಿಗೆ ಸಮಸ್ಯೆ ಬಂದಾಗ ನಾವೆಲ್ಲರೂ ಒಗ್ಗಟ್ಟಾಗಿರಬೇಕು. ಪ್ರತಿ ಕಾಲೇಜುಗಳು ಫಲಿತಾಂಶವನ್ನು ಪ್ರಕಟಿಸುವಾಗ ಏಕರೂಪದ ಕ್ರಮವನ್ನು ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ನೈತಿಕತೆ ಪ್ರದರ್ಶಿಸಬೇಕು ಎಂದರು.

ರಾಜ್ಯ ಸಮಿತಿಯ ಗೌರವ ಅಧ್ಯಕ್ಷ ಡಾ.ಎಂ.ಬಿ. ಪುರಾಣಿಕ್ ಮಾತನಾಡಿ, ನಗರದಲ್ಲಿ ಮತ್ತು ಗ್ರಾಮ ಪಂಚಾಯತ್‌ನಲ್ಲಿ ಕಾರ್ಯ ನಿರ್ವಹಿಸುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರಕಾರ ವಿಧಿಸುವ ತೆರಿಗೆಯಲ್ಲಿ ಭಿನ್ನತೆ ಇದೆ. ಅದನ್ನು ಸರಕಾರವು ತಕ್ಷಣಕ್ಕೆ ಸ್ಪಂದಿಸುವ ಮೂಲಕ ಪರಿಹಾರವನ್ನು ನೀಡಬೇಕು. ಮತ್ತು ಎಸ್ಟಿಪಿಯನ್ನು ಶಿಕ್ಷಣ ಸಂಸ್ಥೆಗಳಲ್ಲಿ ಅಳವಡಿಸುವಾಗ ಅದು ಶಿಕ್ಷಣ ಸಂಸ್ಥೆಗಳಿಗೆ ಹೊರೆಯಾಗದಂತೆ ಇಲಾಖೆಗಳು ಇದಕ್ಕೆ ಸ್ಪಂದಿಸಬೇಕು ಎಂದು ಹೇಳಿದರು.

ಸಮಿತಿಯ ಗೌರವ ಅಧ್ಯಕ್ಷ ಡಾ. ಸಂಜೀವ ರೈ, ಜಿಲ್ಲಾಧ್ಯಕ್ಷ ಯುವರಾಜ ಜೈನ್, ಕಾರ್ಯದರ್ಶಿ ಡಾ ಮಂಜುನಾಥ್ ರೇವಣ್ಕರ್ ಸೇರಿದಂತೆ ರಾಜ್ಯ ಕಾರ್ಯಕಾರಿಣಿ ಸಮಿತಿಯ ಸದಸ್ಯರು ಮತ್ತು ಜಿಲ್ಲಾ ಕುಪ್ಮಾ ಸಮಿತಿಯ ಪದಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ಅನುದಾನರಹಿತ ಕಾಲೇಜುಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಭಾಗವಹಿಸಿ, ಸೂಕ್ತವಾದ ಸಲಹೆ -ಸೂಚನೆಗಳನ್ನು ನೀಡಿದರು. ವಾಣಿ ಕಾಲೇಜಿನ ಆಡಳಿತ ಮಂಡಳಿಯವರು ಕಾಲೇಜು ಬಸ್ಸುಗಳಲ್ಲಿ ಅಳವಡಿಸುವ ಪ್ಯಾನಿಕ್ ಬಟನ್‌ಗಳ ವಾರ್ಷಿಕ ನಿರ್ವಹಣೆ ಕಷ್ಟ ಮತ್ತು ಅದರ ವೆಚ್ಚ ಅಧಿಕವಾಗಿದ್ದು ಈ ಬಗ್ಗೆ ಸಾರಿಗೆ ಇಲಾಖೆ ತಕ್ಷಣ ಸ್ಪಂದಿಸುವ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಒತ್ತಾಯಿಸಿದರು. ಉಪನ್ಯಾಸಕ ಕರುಣಾಕರ ಬಳ್ಕೂರು ಕಾರ್ಯಕ್ರಮ ನಿರೂಪಿಸಿದರು.

ದ.ಕ. ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಅಭಿನಂದನೆ

ಜನರ ಸೇವೆಗೆ ಸದಾ ಬದ್ಧ: ಪಿ.ವಿ.ಮೋಹನ್



ಮಂಗಳೂರು: ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಜನತೆಯ ಸೇವೆ ಮಾಡುತ್ತೇನೆ ಎಂದು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಪಿ.ಸಿ. ಮೋಹನ್ ಅವರು ಹೇಳಿದರು.

ಎಐಸಿಸಿ ಕಾರ್ಯದರ್ಶಿಯಾಗಿದ್ದು, ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿ ಮೊದಲ ಬಾರಿಗೆ ಶುಕ್ರವಾರ ದ.ಕ. ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಿದ ಅವರು ಪಕ್ಷದ ಅಭಿನಂದನೆಯನ್ನು ಸ್ವೀಕರಿಸಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು.

ಈಗಿನ ರಾಜಕೀಯ ಸ್ಥಿತಿಯೇ ಬದಲಾಗಿದೆ. ಹಿಂದಿನಂತೆ ಇಲ್ಲ. ಹಾಗಾಗಿ ಸವಾಲು ಇದೆ. ಭಯವೂ ಇದೆ. ಇದರ ನಡುವೆಯೇ ಜನರ ಸೇವೆ ಮಾಡುತ್ತೇನೆ. ಮಹಾತ್ಮ ಗಾಂಧೀ ಜಿ, ಅಂಬೇಡ್ಕರ್, ನೆಹರೂ, ಲೋಹಿಯಾ ಅವರ ಸಿದ್ಧಾಂತವನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತೇನೆ ಎಂದರು.

ನನಗೆ ಪಕ್ಷ ತಾಯಿ ಇದ್ದಂತೆ. ಕಾಂಗ್ರೆಸ್ ಕಚೇರಿ ದೇಗುಲವಿದ್ದಂತೆ. ಅಧಿಕಾರದ ಅಹಂಕಾರ ಇರುವುದಿಲ್ಲ. ಹೋರಾಟದ ರಾಜಕಾರಣದಿಂದ ಪಕ್ಷದ ರಾಜಕಾರಣವನ್ನು ಮಾಡಿ ಇದೀಗ ಅಧಿಕಾರದ ರಾಜಕಾರಣಕ್ಕೆ ಧುಮುಕಿದ್ದೇನೆ ಎಂದರು.

ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕೆ. ಹರೀಶ್ ಕುಮಾರ್, ಮಾಜಿ ಶಾಸಕ ಜೆ.ಆರ್. ಲೋಬೊ, ಮಾಜಿ ಮೇಯರ್ ಶಶಿಧರ ಹೆಗ್ಡೆ, ಪಕ್ಷದ ಮುಂದಾಳುಗಳಾದ ಪದ್ಮರಾಜ್ ಆರ್. ಪೂಜಾರಿ, ಮಮತಾ ಗಟ್ಟಿ, ಶಾಲೆಟ್ ಪಿಂಟೋ, ವಿಶ್ವಾಸ್‌ದಾಸ್, ಉಸ್ಮಾನ್, ಅಪ್ಪಿ, ಸುಭಾಷ್, ಡೆನ್ನಿಸ್, ನವಾಜ್, ಶುಭೋದರ, ಚೇಬಾ, ಚಿತ್ತರಂಜನ್, ಜೋಕಿಂ, ದಿನೇಶ್, ಮನೋರಾಜ್ ಉಪಸ್ಥಿತರಿದ್ದರು. ರೋಹಿತ್ ಉಳ್ಳಾಲ್ ಕಾರ್ಯಕ್ರಮ ನಿರೂಪಿಸಿದರು.

ವಿಬಿ ಜಿ ರಾಮ್‌ಜಿ ಯೋಜನೆಯ ಲೋಗೋ ವಿನ್ಯಾಸ

ರಾಮ್ ಪ್ರಸಾದ್‌ಗೆ ಬಿಜೆಪಿಯಿಂದ ಸನ್ಮಾನ



ಪುತ್ತೂರು: ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ವಿಬಿ ಜಿ ರಾಮ್ ಜಿ ಯೋಜನೆಯ ಲೋಗೋ ವಿನ್ಯಾಸಗೊಳಿಸಲು ದೇಶ ವ್ಯಾಪಿ ಆಯೋಜಿಸಿದ ಸ್ಪರ್ಧೆಯಲ್ಲಿ ಸುಮಾರು 7,000ಕ್ಕೂ ಅಧಿಕ ಸ್ಪರ್ಧಿಗಳ ಮಧ್ಯೆ ಪುತ್ತೂರಿನ ಯುವ ಚಿತ್ರ ಕಲಾವಿದ ರಾಮ್ ಪ್ರಸಾದ್ ಅವರು ವಿನ್ಯಾಸಗೊಳಿಸಿದ ಲೋಗೋ ಪ್ರಥಮ ಸ್ಥಾನ ಪಡೆದು ಅಧಿಕೃತವಾಗಿ ಆಯ್ಕೆಯಾಗಿದ್ದು, ಗುರುವಾರ ವಿಧಾನಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರ ನೇತೃತ್ವದಲ್ಲಿ ಬಿಜೆಪಿ ಪುತ್ತೂರು ನಗರ ಮಂಡಲದ ವತಿಯಿಂದ ರಾಮ್‌ಪ್ರಸಾದ್ ಅವರ ನಿವಾಸಕ್ಕೆ ಭೇಟಿ ನೀಡಿ ಅವರನ್ನು ಗೌರವಿಸಲಾಯಿತು.

ರಾಮ್ ಪ್ರಸಾದ್ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಸ್ವಯಂಸೇವಕ ಪುತ್ತೂರಿನ ಶ್ರೀರಾಮ್ ಜುವೆಲ್ಲರ್ಸ್‌ನ ಮಾಲಕ ಮಲ್ಲೇಶ್ ಆಚಾರ್ಯ ಅವರ ಪುತ್ರರಾಗಿದ್ದು, ಈಗಾಗಲೇ ಚಿತ್ರಕಲಾ ಕ್ಷೇತ್ರದಲ್ಲಿ ವಿಶೇಷ ತರಬೇತಿ ಪಡೆದು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಅನೇಕ ಸ್ಪರ್ಧೆಗಳಲ್ಲಿ ಪ್ರಶಸ್ತಿ ಹಾಗೂ ಮಾನ್ಯತೆಗಳನ್ನು ಗಳಿಸಿ ತಮ್ಮ ಪ್ರತಿಭೆಯ ಮೂಲಕ ಪುತ್ತೂರಿಗೆ ಹೆಮ್ಮೆ ತಂದಿದ್ದಾರೆ.

ಬಿಜೆಪಿ ಪುತ್ತೂರು ನಗರ ಮಂಡಲದ ಅಧ್ಯಕ್ಷ ಶಿವಕುಮಾರ್ ಕಲ್ಲಿಮಾರ್, ಮಾಜಿ ಶಾಸಕ ಸಂಜೀವ ಮಠಂದೂರು, ಜಿಲ್ಲಾ ಉಪಾಧ್ಯಕ್ಷ ಪ್ರಸನ್ನ ಮಾರ್ತ, ಪ್ರಧಾನ ಕಾರ್ಯದರ್ಶಿ ಯುವರಾಜ್ ಪೆರಿಯತ್ತೋಡಿ ಹಾಗೂ ಶಶಿಧರ ನಾಯಕ್, ಪಕ್ಷದ ಹಿರಿಯ ಮುಖಂಡರಾದ ಚಂದ್ರಶೇಖರ ರಾವ್ ಬಪ್ಪಳಿಗೆ, ಸಂತೋಷ್ ಕುಮಾರ್ ರೈ ಕೈಕಾರ, ನಾಗೇಶ್ ಟಿ.ಎಸ್. ಕಮ್ಮಾಯಿ ಹಾಗೂ ವಿರೂಪಾಕ್ಷ ಭಟ್ ಮಚ್ಚಿಮಲೆ, ನಾಗೇಂದ್ರ ಬಾಳಿಗ, ನಿರಂಜನ್ ಮಾನ್ಯ, ದಯಾನಂದ ಕಮ್ಮಾಯಿ, ಸತೀಶ್ ನಾಯಕ್, ಮನೋಹರ್ ಕಲ್ಲಾರೆ, ಹರೀಶ್ ಆಚಾರ್ಯ ಬೀರಮಲೆ, ರಾಜೇಶ್ ಬನ್ನೂರು, ವಿಶ್ವನಾಥ್ ಕುಲಾಲ್, ಪ್ರವೀಣ್ ರೈ, ಅಭಿಮಾನಿಗಳು ಉಪಸ್ಥಿತರಿದ್ದರು.

ಮಹಿಳಾ ಸಭಾದಲ್ಲಿ ಮುಂಗಾರು ಸಂಭ್ರಮ

ವನಮಹೋತ್ಸವ, ಪ್ರತಿಭಾ ಪುರಸ್ಕಾರ



ಮಂಗಳೂರು: ನಗರದ ಮಹಿಳಾ ಸಭಾದಲ್ಲಿ ಮುಂಗಾರು ಸಂಭ್ರಮ, ವನಮಹೋತ್ಸವ ಆಚರಣೆ, ಯೋಗ ದಿನಾಚರಣೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಮಂಗಳವಾರ ನಡೆಯಿತು.

ಮುಖ್ಯ ಭಾಷಣಕಾರರಾಗಿದ್ದ ಪರಿಸರ ಪ್ರೇಮಿ ದಿನೇಶ್ ಹೊಳ್ಳ ಅವರು ಹಣ್ಣಿನ ಗಿಡ ನೆಡುವ ಮೂಲಕ ವನಮಹೋತ್ಸವಕ್ಕೆ ಚಾಲನೆ ನೀಡಿದರು. ಏಳು ಹಣ್ಣಿನ ಗಿಡಗಳನ್ನು ನೆಡಲಾಯಿತು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನುಷ್ಯನಿಂದ ಪ್ರಕೃತಿಯ ಮೇಲಿನ ದಾಳಿ, ಇದರಿಂದಾಗಿ ಪರಿಸರ-ಜೀವ ಸಂಕುಲಗಳಿಗೆ ಆಗುವ ಹಾನಿ, ಇಡೀ ಮನುಕುಲಕ್ಕೆ ಮುಂದೆ ಒದಗಬಹುದಾದ ಆಪತ್ತುಗಳ ಬಗ್ಗೆ ವಿವರಿಸಿ, ಇದರ ಗಂಭೀರತೆಯನ್ನು ಅರಿಯದೆ, ಮನುಷ್ಯ ತನ್ನ ಮೋಜಿಗಾಗಿ ಕಾಡನ್ನು ಬಳಸಿಕೊಂಡು ಕಾಡಿನ ಸರ್ವನಾಶಕ್ಕೆ ಕಾರಣನಾಗುತ್ತಿದ್ದಾನೆ ಎಂದು ಬೇಸರ ವ್ಯಕ್ತಪಡಿಸಿದರು.

ಲಕ್ಷ್ಮೀ ರಾವ್ ಆರೂರು ಪ್ರಾಯೋಜಿತ ದತ್ತಿ ನಿಧಿಯಿಂದ ಕಿಟ್ಟೆಲ್ ಮೆಮೋರಿಯಲ್ ಸ್ಕೂಲ್‌ನ ಕನ್ನಡ ಮಾಧ್ಯಮದ ಹತ್ತನೇ ತರಗತಿಯ ಪ್ರತಿಭಾವಂತ ವಿದ್ಯಾರ್ಥಿನಿ, ಈಶ್ವರಾನಂದ ಮಹಿಳಾ ಸೇವಾಶ್ರಮದ ಬಾಲಕಿ ಮಮತಾ ಅವರಿಗೆ ರೂ. 7000 ರೂ. ಪ್ರತಿಭಾ ಪುರಸ್ಕಾರವನ್ನು ವಿತರಿಸಲಾಯಿತು. ಯೋಗದಿನಾಚರಣೆಯ ಅಂಗವಾಗಿ ಸಭಾದ ಸದಸ್ಯೆ ಸುಮಂಗಲಾ ಅವರ ನಿರ್ದೇಶನದಲ್ಲಿ ಸದಸ್ಯರಿಂದ ಯೋಗಾಭ್ಯಾಸ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಮಹಿಳಾ ಸಭಾದ ಅಧ್ಯಕ್ಷೆ ವಿಜಯಲಕ್ಷ್ಮಿ ಭಟ್ ಉಳುವಾನ ಸ್ವಾಗತಿಸಿದರು. ಜೊತೆ ಕಾರ್ಯದರ್ಶಿ ರೂಪಕಲಾ ಆಳ್ವ ಅಭ್ಯಾಗತರನ್ನು ಪರಿಚಯಿಸಿದರು. ಕೋಶಾಧಿಕಾರಿ ಮಲ್ಲಿಕಾ ರಾವ್, ಶೋಭಾ ಅಡ್ಯಂತಾಯ ಉಪಸ್ಥಿತರಿದ್ದರು. ಕಾರ್ಯದರ್ಶಿ ರೇಖಾ ಗಜೇಂದ್ರ ನಿರೂಪಿಸಿ, ಉಪಾಧ್ಯಕ್ಷೆ ಆಶಾ ರಾವ್ ಆರೂರು ವಂದಿಸಿದರು.

ನಿಜಾರ್ಥದ 'ನಿಷ್ಕಾಮಯೋಗಿ' ಸೇವಾನಿಷ್ಠ ಜಿ.ಕೆ.ಭಟ್

ಗೋಪಾಲಕೃಷ್ಣ ಭಟ್ ಹೀಗೊಂದು ಹೆಸರಿನವರನ್ನು ಬಂಟ್ವಾಳ ತಾಲೂಕಿನ ವಾಮದಪದವು ಪರಿಸರದಲ್ಲಿ ಹುಡುಕಲು ಹೊರಟರೆ ಆ ವ್ಯಕ್ತಿಯನ್ನು ಹುಡುಕುವುದು ಬಲು ಕಷ್ಟವಾದಿತು. ಅದೇ ಜಿ. ಕೆ.ಭಟ್ ಯಾರು ಎಂದು ಕೇಳಿ ನೋಡಿ, ಇಡೀ ಊರಿಗೆ ಊರೇ ಪರಿಚಯಿಸಿ ಕೊಡುತ್ತದೆ. ಅದು ಗೋಪಾಲಕೃಷ್ಣನೆಂಬ ವ್ಯಕ್ತಿ ಜಿ. ಕೆ. ಭಟ್ಟರಾಗಿ ಬದಲುಗೊಂಡು ವ್ಯಕ್ತಿತ್ವ – ಬದುಕು ಕಟ್ಟಿಕೊಂಡ ಬಗೆಯಿದು.

ತಾನು ಹುಟ್ಟಿ ಬೆಳೆದಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಕಡಬ ಬಳಿಯಾದರೂ ವೃತ್ತಿ ನಿಮಿತ್ತ ರಾಜ್ಯದ ವಿವಿಧ ಭಾಗಗಳಲ್ಲಿ ಸೇವೆ ಸಲ್ಲಿಸಿದ್ದರೂ ತಮ್ಮ ಬದುಕಿನ ಕರ್ಮ ಭೂಮಿಯನ್ನಾಗಿ ಆಯ್ಕೆ ಮಾಡಿದ್ದು ಮಾತ್ರ ಬಂಟ್ವಾಳದ ವಾಮದಪದವನ್ನು, ಅದು ಆ ಊರಿನ ಪುಣ್ಯ, ಅದೃಷ್ಟ.

ತಮ್ಮ ಜಟಿಲವಾದ ಬ್ಯಾಂಕಿಂಗ್ ಉದ್ಯೋಗ ನಿಮಿತ್ತ ದೂರದ ಶಿರಾಕ್ಕೆ ಹೋದಾಗಲೂ ಸರಿ, ಸಕಲೇಶಪುರದಲ್ಲಿ ಬಂದಾಗಲೂ ಸೈ. ವೃತ್ತಿಯ ಸೇವಾನಿಷ್ಠೆಯೊಂದಿಗೆ ರಾಷ್ಟ್ರೀಯ ವಿಚಾರಧಾರೆಯನ್ನು ಕೂಡ ಜತೆಗೆ ತೆಗೆದುಕೊಂಡು ಹೋಗಿ ಅಲ್ಲಿಯ ಪರಿಸರದ ಜನತೆಗೆ ದಾಟಿಸಿ, ಮುಟ್ಟಿಸಿ ಬಂದ



ನಿಜಾರ್ಥದ ನಿಷ್ಕಾಮ ಯೋಗಿಯ ಬದುಕು ಜಿ. ಕೆ. ಭಟ್ಟರದು.

ಎಲ್ಲರಿಗೂ ಇರುವಂತೆ ವೈಯುಕ್ತಿಕವಾಗಿ ತನಗೆ ನೂರು ಸಮಸ್ಯೆ, ನೋವು ಇದ್ದರೂ ತನ್ನ ಬಳಿಗೆ, ಮನೆಗೆ ಬಂದ ಯಾರಿಗಾದರೂ ಅವರು ಬಯಸಿ ಬಂದ ಸಾಂತ್ವನವನ್ನು ನೀಡಿ, ಭರವಸೆಯ ತುಂಬಿ ಕಳುಹಿಸುವ ಅವರ ಉದ್ದಾತ್ತ ಭಾವವೇ ನಮಗೆ ಸದಾ ಸ್ಫೂರ್ತಿ, ಪ್ರೇರಣೆ. ಅವರ ವಾಮದಪದವಿನ ಮನೆಯ ಅಡುಗೆ ಮನೆಗೆ ತೆರಳಿ ತಮಗೆ ಬೇಕಾದ ಟೀಯೋ, ಕಾಫಿಯೋ ತಯಾರಿಸಿ ಕುಡಿಯುವಷ್ಟು ಸ್ವಾತಂತ್ರ್ಯವನ್ನು ನಮ್ಮ ಭಾಗದ ಅನೇಕ ಕಾರ್ಯಕರ್ತರಿಗೆ ಅವರು ಒದಗಿಸಿಕೊಟ್ಟಿದ್ದಾರೆ. ಆ ಆತ್ಮೀಯತೆಯ ಕಾರಣದಿಂದ ಜಿ. ಕೆ ಭಟ್ಟರ ಮನೆ ಎಂಬುದು ಕೇವಲ ಒಬ್ಬ ಹಿರಿಯ ಕಾರ್ಯಕರ್ತರ ಮನೆ ಅಷ್ಟೇ ಅಲ್ಲದೇ ನಮ್ಮೆಲ್ಲ ಸಮಸ್ಯೆ, ಸವಾಲುಗಳಿಗೆ ಉತ್ತರ ಸಿಗುವ ನೆಮ್ಮದಿಯ ಆಲಯವೂ ಹೌದು. ಸಮಸ್ಯೆಯ ಭಾರ ಹೊತ್ತು ತಂದ ಮನಸ್ಸು, ಜೀವಗಳಿಗೆ ಮಾತೃ ಛಾಯ ಎಂಬ ಹೆಸರುಳ್ಳ ಅವರ ಮನೆ ಅಮ್ಮನ ಮಡಿಲು ಹೌದು, ನೆರಳು ಕೂಡ ಹೌದು.

> **ಸಂಘದ ನಾನಾ ಜವಾಬ್ದಾರಿಗಳನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸಿದ ಅನುಭವದೊಂದಿಗೆ ವಾಮದಪದವು ಪರಿಸರದ ನೂರಾರು ಕಾರ್ಯಕರ್ತರಿಗೆ ಅಂದಿನಿಂದ ಇಂದಿನವರೆಗೆ ನಿಜ ಮಾರ್ಗದರ್ಶಕರಾಗಿ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಅವರಲ್ಲಿ ಎಂದೂ ಧನಾತ್ಮಕ ವಿಚಾರವನ್ನು ಬಿಟ್ಟು ಬೇರೆಯದನ್ನು ನಿರೀಕ್ಷಿಸಲು ಸಾಧ್ಯವೇ ಇಲ್ಲ.**

ವಾಮದಪದವಿನ ಶ್ರೀಗಣೇಶೋತ್ಸವಕ್ಕೆ ಹೊಸ ರೂಪ, ಕಲ್ಪನೆಕೊಟ್ಟು ಹತ್ತೂರಿಗೆ ಮಾದರಿಯಾಗಿ ರೂಪಿಸಿದ ಕೀರ್ತಿ ಅವರದ್ದು. ಗಣೇಶೋತ್ಸವ ಇವತ್ತು ಊರು ಊರುಗಳಲ್ಲಿ ಆಚರಿಸಲ್ಪಡುತ್ತಿದೆ, ಆದರೆ ಅವೆಲ್ಲಕ್ಕಿಂತ ಭಿನ್ನವಾಗಿ ಅದೇ ಅಂದಿನ ಗುಣಮಟ್ಟವನ್ನು ಉಳಿಸಿಕೊಂಡು ಬರುತ್ತಿರುವ ಗಣೇಶೋತ್ಸವ ನಮ್ಮ ವಾಮದಪದವಿನದ್ದು. ಗಣೇಶೋತ್ಸವ ಸಮಿತಿ ಪ್ರತಿವರ್ಷವೂ ಬದಲಾಗುತ್ತ ಹೋದರೂ, ಇಡೀ ಮೂರು ದಿನದ ಉತ್ಸವದ ಧ್ವಜ ದಂಡವಾಗಿ ನಿಂತು ಮುನ್ನಡೆಸುತ್ತಿರುವವರು ಅದೇ ಜಿ. ಕೆ. ಭಟ್ಟರು..ಇಂದು ವಾಮದಪದವಿನ ಹೆಮ್ಮೆ ಮತ್ತು ಪ್ರತಿಯೊಬ್ಬ ಸ್ವಾಭಿಮಾನಿ ಹಿಂದೂವಿನ ಗರ್ವದ ಪ್ರತೀಕದಂತೆ ಭವ್ಯತೆ ಮತ್ತು ದಿವ್ಯತೆಯೊಂದಿಗೆ ಕಟ್ಟಲ್ಪಟ್ಟಿರುವ ಶ್ರೀಗಣೇಶ ಮಂದಿರ ಕೇವಲ ಒಂದು ಭಜನಾ ಮಂದಿರವೋ ಅಥವಾ ವರ್ಷಕ್ಕೊಮ್ಮೆ ಜರಗುವ ವೈಭವದ ಗಣೇಶೋತ್ಸವಕ್ಕೆ ಮಾತ್ರ ಸೀಮಿತವಾಗಿ ನಿರ್ಮಾಣಗೊಂಡಿದ್ದಲ್ಲ. ಹಿಂದೂ ಚಿಂತನೆಯ ಅಥವಾ ಸಾರ್ವಜನಿಕ ಹಿತಾಸಕ್ತಿಯ ಪ್ರತಿಯೊಂದು ಕಾರ್ಯಕ್ರಮ, ಬೈಠಕ್‌ಗಳಿಗೆ ಮೂಲ ಸ್ರೋತ, ಆಶ್ರಯ ತಾಣ ಇದೇ ಗಣೇಶ ಮಂದಿರ. ಪ್ರಾಯಶಃ ಅವತ್ತು ಆ ಬಗೆಯ ಒಂದು ಯೋಜನೆ, ಯೋಚನೆ ರೂಪುಗೊಳ್ಳದೆ ಇರುತ್ತಿದ್ದರೆ ಇವತ್ತು ವಾಮದಪದವು ಪರಿಸರ ಕಳೆದುಕೊಳ್ಳುತ್ತಿದ್ದದ್ದು ಕೇವಲ ಒಂದು ಭವ್ಯ ಮಂದಿರವನ್ನಲ್ಲ, ಮುನ್ನಡೆವ ದಾರಿಗೆ ಬೆಳಕ ನೀಡುವ ಕೈ ದೀವಿಗೆಯನ್ನೂ ಕೂಡ...!

ರಾಷ್ಟ್ರೀಯ ಪಕ್ಷದ ರಾಜ್ಯ ಮಟ್ಟದ ಜವಾಬ್ದಾರಿ ಹೊಂದಿರುವ ಪತ್ನಿ ಸುಲೋಚನಾ ಜಿ. ಕೆ. ಭಟ್‌ರೊಂದಿಗಿನ ಸುಮಧುರ ಆದರ್ಶ ದಾಂಪತ್ಯದೊಂದಿಗೆ ಪುತ್ರ, ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳ ಸಹಿತ ಬಂಧು ಮಿತ್ರರ ಸಮ್ಮುಖದಲ್ಲಿ ಎಪ್ಪತ್ತರ ಭೀಮರಥ ಶಾಂತಿ ಕಾರ್ಯಕ್ರಮ ವಾಮದಪದವಿನ ಶ್ರೀ ಗಣೇಶ ಮಂದಿರದಲ್ಲಿ ಜೂ. 28ರಂದು ಸಂಲಗ್ನಗೊಳ್ಳಲಿದೆ. ಸಂಭ್ರಮಿಸುವುದಕ್ಕೆ, ಸಂತೋಷ ಪಡುವುದಕ್ಕೆ ಕಾರಣಗಳು ಹತ್ತು ಹಲವು. ಎಪ್ಪತ್ತರಲ್ಲೂ ಇಪ್ಪತ್ತರ ಉತ್ಸಾಹದೊಂದಿಗೆ ಪ್ರೇರಣಾದಾಯಿ ಬದುಕಿನೊಂದಿಗೆ ಸ್ಫೂರ್ತಿಯ ಚಿಲುಮೆಯ ಗೋಪಾಲಕೃಷ್ಣ ಭಟ್ಟರಿಂದ ನಾವು ಕೂಡ ಒಂದಿಷ್ಟು ಪ್ರೇರಣೆಯನ್ನು ಪಡೆಯೋಣಾ, ಪಡೆಯುತ್ತಾ ಇರೋಣಾ ಮುಂದಕ್ಕೂ..

ಚಂದ್ರಶೇಖರ ಕೈಯಬೆ

ರಾಜ್ಯ ಮಟ್ಟದ ಅಂತರ್ ವೈದ್ಯಕೀಯ ಕಾಲೇಜು ವೈದ್ಯಕೀಯ ರಸ ಪ್ರಶ್ನೆ ಸ್ಪರ್ಧಾ ಕೂಟ

ಕೆ.ಎಂ.ಸಿ.ಗೆ ಕಿಮ್ಸ್ ಪಿ.ಜಿ. ಮೆಡಿಕ್ವಿಜ್ 2026 ಪ್ರಶಸ್ತಿ

ಮಂಗಳೂರು: ದೇರಳಕಟ್ಟೆ ನಾಟೆಕಲ್ ಕಣಚೂರು ವೈದ್ಯಕೀಯ ಶಿಕ್ಷಣ ಮಹಾವಿದ್ಯಾಲಯದ ವೈದ್ಯಕೀಯ ಶಾಸ್ತ್ರ ವಿಭಾಗದ ಆಶ್ರಯದಲ್ಲಿ ಸ್ನಾತಕೋತ್ತರ ವೈದ್ಯಕೀಯ ಶಾಸ್ತ್ರ ಶಿಕ್ಷಣ ವಿದ್ಯಾರ್ಥಿಗಳಿಗಾಗಿ 5ನೇ ವಾರ್ಷಿಕ ರಾಜ್ಯ ಮಟ್ಟದ ಅಂತರ್ ವೈದ್ಯಕೀಯ ಕಾಲೇಜು ರಸ ಪ್ರಶ್ನೆ ಸ್ಪರ್ಧಾಕೂಟ ಕಿಮ್ಸ್ ಪಿ.ಜಿ. ಮೆಡಿಕ್ವಿಜ್– 2026 ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಜರಗಿತು.



ಸ್ಪರ್ಧಾ ಕೂಟದಲ್ಲಿ ಕೆ.ಎಂ.ಸಿ. ಕಾಲೇಜು ಮಂಗಳೂರು ತಂಡವನ್ನು ಪ್ರತಿನಿಧಿಸಿದ ಡಾ. ಭಾನ್ವಿ ಅಗರ್ವಾಲ್ ಮತ್ತು ಡಾ. ಕುನಾಲ್ ಸೇತ್ ತಂಡವು ಪ್ರಥಮ ಸ್ಥಾನ ಗಳಿಸಿ ಪ್ರತಿಷ್ಠಿತ ಮೆಡಿಕ್ವಿಜ್ ಪ್ರಶಸ್ತಿ ಪಡೆಯಿತು. ಅದೇ ಕಾಲೇಜನ್ನು ಪ್ರತಿನಿಧಿಸಿದ ಡಾ. ಅಭಿಷೇಕ್ ಭಟ್ ಮತ್ತು ಡಾ. ಸಾಯಿಕೃಷ್ಣ ತಂಡವು ದ್ವಿತೀಯ ಸ್ಥಾನ, ತೃತೀಯ ಸ್ಥಾನವನ್ನು ಕಣಚೂರು ವೈದ್ಯಕೀಯ ಕಾಲೇಜನ್ನು ಪ್ರತಿನಿಧಿಸಿದ ಡಾ. ರಾಘವೇಂದ್ರ ಮತ್ತು ಡಾ. ವಿನಾಯಕ್ ತಂಡವು ಗಳಿಸಿತು.

ಮುಖ್ಯ ಅತಿಥಿಯಾಗಿದ್ದ ಕಣಚೂರು ವೈದ್ಯಕೀಯ ಕಾಲೇಜಿನ ಡೀನ್ ಡಾ. ಶಹನವಾಜ್ ಮಣಿಪಾಡಿ, ಸ್ಪರ್ಧಾ ವಿಜೇತರ ಸಾಧನೆಯನ್ನು ಪ್ರಶಂಸಿಸಿ ಪ್ರಶಸ್ತಿ, ಆಕರ್ಷಕ ಬಹುಮಾನ ಮತ್ತು ಪ್ರಶಸ್ತಿ ಪ್ರಮಾಣ ಪತ್ರವನ್ನು ಪ್ರದಾನ ಮಾಡಿ ಅಭಿನಂದಿಸಿದರು.

ಕಣಚೂರು ಆರೋಗ್ಯ ವಿಜ್ಞಾನ ಸಂಸ್ಥೆಯ ಸಲಹಾ ಸಮಿತಿಯ ಸದಸ್ಯ ಡಾ. ವೆಂಕಟ್‌ರಾಯ್ ಪ್ರಭು, ಕಣಚೂರು ವೈದ್ಯಕೀಯ ಕಾಲೇಜಿನ ವೈದ್ಯಕೀಯ ಅಧೀಕ್ಷಕ ಡಾ. ಅಂಜನ್ ಕುಮಾರ್, ಮುಖ್ಯ ಆಡಳಿತಾಧಿರಿ ಡಾ. ರೋಹನ್ ಮೋನಿಸ್ ಉಪಸ್ಥಿತರಿದ್ದರು. ವೈದ್ಯಕೀಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ದೇವದಾಸ್ ರೈ ಸ್ಪರ್ಧಾಕೂಟವನ್ನು ನಿರೂಪಿಸಿದರು.

ಅವಿಭಜಿತ ದ.ಕ. ಜಿಲ್ಲೆಯ ವಿವಿಧ ವೈದ್ಯಕೀಯ ಶಿಕ್ಷಣ ಕಾಲೇಜಿನ 31 ತಂಡಗಳು ನಿರ್ಣಾಯಕ ಮತ್ತು ಅಂತಿಮ ಸುತ್ತಿಗೆ ಪ್ರವೇಶ ಪಡೆದಿದ್ದವು.

ಎಂ.ವಿ. ಮಲ್ಯ ಅವರು ಬಹುಮಾನಗಳನ್ನು ಪ್ರಾಯೋಜಿಸಿದ್ದರು. ಡಾ. ದೇವದಾಸ್ ರೈ ಸ್ವಾಗತಿಸಿದರು. ಡಾ. ಅಬ್ದುಲ್ ಕರೀಮ್ ಫರೂಕಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಡಾ. ಪ್ರೀತಮ್ ಸಹಕರಿಸಿದರು.

ಮೀನುಗಾರರ ಜ್ವಲಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕೋರಿ ಸಿಎಂಗೆ ಮನವಿ



ಕುಂದಾಪುರ: ಬೀಜಾಡಿ ಮೀನುಗಾರರ ಸಹಕಾರಿ ಸಂಘದ ಅಧ್ಯಕ್ಷ ಆಶೋಕ್ ಪೂಜಾರಿ ಬೀಜಾಡಿ ಅವರು ಬೆಂಗಳೂರಿನ ಕೆಪಿಸಿಸಿ ಅಧ್ಯಕ್ಷರ ನಿವಾಸದಲ್ಲಿ ಕೆಪಿಸಿಸಿ ಅಧ್ಯಕ್ಷ ಬಿ. ಕೆ. ಹರಿಪ್ರಸಾದ್ ಅವರನ್ನು ಭೇಟಿ ಮಾಡಿ ಕರಾವಳಿ ತೀರದ ಮೀನುಗಾರರ ಬದುಕಿನ ಹಿತದೃಷ್ಟಿಯಿಂದ ಹಲವು ವಿಶೇಷ ಪ್ರಮುಖ ಬೇಡಿಕೆಗಳು ಹಾಗೂ ಮೀನುಗಾರರ ಬದುಕಿನ ಜ್ವಲಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕೋರಿ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿದರು.

ಮತ್ಸ್ಯಾಶ್ರಯ ಯೋಜನೆಯಡಿ ಮೀನುಗಾರರ ಮನೆ ನಿರ್ಮಾಣದ ಸಹಾಯಧನವನ್ನು 1.20 ಲಕ್ಷದಿಂದ 3 ಲಕ್ಷಕ್ಕೆ ಹೆಚ್ಚಿಸಬೇಕು, ಮಹಿಳಾ ಮೀನುಗಾರರ ಸ್ವಸಹಾಯ ಗುಂಪುಗಳ ಸಾಲಕ್ಕೆ ಸಾಲದಲ್ಲಿ ಬಡ್ಡಿ ಸಹಾಯಧನ ಮಂಜೂರು ಮಾಡಬೇಕು, ಆಕಸ್ಮಿಕ ದೋಣಿ ಅಪಘಾತ ತಡೆಯಲು ಅಗತ್ಯ ಜೀವರಕ್ಷಕ ಜಾಕೆಟ್‌ಗಳನ್ನು ಇಲಾಖೆಯಿಂದ ಒದಗಿಸಬೇಕು, ಮೀನುಗಾರಿಕೆಯಲ್ಲಿ ಅಪಘಾತಕ್ಕೀಡಾಗಿ ಗಾಯಗೊಂಡ ಮೀನುಗಾರರಿಗೆ ತಕ್ಷಣದ ತುರ್ತು ಪರಿಹಾರ ನೀಡಬೇಕು, ಸಾಂಪ್ರದಾಯಿಕ ಮೀನುಗಾರಿಕೆಗೆ ಉತ್ತೇಜನ ನೀಡಿ, ಕೈರಂಪಣಿ ಬಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸಿ ಕರಾವಳಿಯ ಪರಂಪರೆ ಉಳಿಸಬೇಕು ಎಂಬಿತ್ಯಾದಿ ಬೇಡಿಕೆಯುಳ್ಳ ಮನವಿ ಸಲ್ಲಿಸಲಾಯಿತು.

ಈ ಸಂದರ್ಭ ಬೀಜಾಡಿ ಮೀನುಗಾರರ ಸಹಕಾರಿ ಸಂಘದ ಸಿಇಒ ರಮೇಶ್ ಕಾಂಚನ್, ಹಿರಿಯ ಸದಸ್ಯರಾದ ರಾಮ ಕಾಂಚನ್ ಕೊರವಡಿ, ಯೋಗೀಶ್ ಕುಂದರ್, ರವೀಂದ್ರ ಬೀಜಾಡಿ ಮನೆ ಮತ್ತು ಆಶೋಕ್ ಪೂಜಾರಿ ಚಾತ್ರಬೆಟ್ಟು ಉಪಸ್ಥಿತರಿದ್ದರು.

ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ಎಐ ಸಂಬಂಧಿತ ಬೂಟ್ ಕ್ಯಾಂಪ್

ಬಳಕೆ ಜೊತೆ ನಿಯಂತ್ರಿಸುವ ಜ್ಞಾನವೂ ಅಗತ್ಯ

ಪುತ್ತೂರು: ಮಾನವ ಯಾವುದೇ ಕೃತಕ ತಂತ್ರಜ್ಞಾನವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದಿದ್ದರೂ, ಎಐಯನ್ನು ಒಪ್ಪಿಕೊಳ್ಳುತ್ತಿದ್ದಾನೆ. ಎಐಯನ್ನು ಬಳಸುವುದು ಮಾತ್ರವಲ್ಲದೆ, ಅದನ್ನು ನಿಯಂತ್ರಿಸುವ ವಿಧಾನವನ್ನೂ ಮನುಷ್ಯ ಅರಿಯಬೇಕು. ಆದರೆ ನಾವು ಸಂಪೂರ್ಣವಾಗಿ ಕೃತಕ ಬುದ್ಧಿಮತ್ತೆಯ ಮೇಲೆ ಅವಲಂಬಿತರಾಗಬಾರದು. ಆದ್ದರಿಂದ ಮನುಷ್ಯ ಬುದ್ಧಿವಂತನಾಗಬೇಕಾದ ಆಗತ್ಯವಿದೆ. ಎಐ ಇದ್ದರೂ ಸಹ, ಇವುಗಳ ಮಧ್ಯೆ ನಾವು ಭಾರತೀಯರೆಂಬ ಗುರುತನ್ನು ಮರೆಯಬಾರದು ಎಂದು ವಿವೇಕಾನಂದ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಶ್ರೀಪತಿ ಕಲ್ಲೂರಾಯ ನುಡಿದರು.



ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ (ಸ್ವಾಯತ್ತ) ಕಾಲೇಜಿನ ಗೂಗಲ್ ಡೆವಲಪ್‌ಮೆಂಟ್ ಗ್ರೂಪ್, ಗಣಕಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಘಟಕದ ವತಿಯಿಂದ ನಡೆದ 'ಬಿಲ್ಡ್ ವಿಥ್ ಎಐ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ್ ಭಟ್ ಮಾತನಾಡಿ, ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಇದೊಂದು ಉತ್ತಮ ಅವಕಾಶ. ಈಗಿನ ಸಮಾಜ ಇಂತಹ ಕೌಶಲ್ಯಗಳನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಬಯಸುತ್ತಿದೆ. ಹಾಗಾಗಿ ಯುವಜನತೆ ಇಂತಹ ಕಾರ್ಯಕ್ರಮಗಳನ್ನು ಉತ್ತಮವಾಗಿ ಉಪಯೋಗಿಸಿಕೊಳ್ಳಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಗೂಗಲ್ ಕ್ಲೌಡ್ ಫೆಸಿಲಿಟೇಟರ್ ವಿ. ಶ್ರೀನಿವಾಸ್ ಮತ್ತು ಅಸೋಸಿಯೇಟ್ ಪ್ರೋಗ್ರಾಮ್ ಮ್ಯಾನೇಜರ್ ಹ್ಯಾಕ್2ಸ್ಕಿಲ್‌ನ ಕುಶಾಗ್ರ ಟಂಡನ್, ಕಾಲೇಜಿನ ಪರೀಕ್ಷಾಂಗ ವಿಭಾಗದ ಕುಲಸಚಿವ ಪ್ರಕಾಶ್ ಕುಮಾರ್, ಉಪನ್ಯಾಸಕಿ ಹೇಮಾ ಶುಭಾಷಿನಿ ಹಾಗೂ ಜಿಡಿಜಿಓಸಿ ಸಂಘಟಕ ಸಚಿನ್ ಉಪ್ಪರ್ಣ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಶ್ರೀಜಾ ಸ್ವಾಗತಿಸಿ, ಬಿ. ಜಯಂತ್ ಸುಧಾನ್ವ ಪೈ ವಂದಿಸಿದರು. ಕಂಪ್ಯೂಟರ್ ಲ್ಯಾಬ್ ಸಹಾಯಕಿ ನಿರೀಕ್ಷಾ ಎಚ್. ಪ್ರಾರ್ಥಿಸಿದರು.

ವಿದ್ಯಾರ್ಥಿನಿ ದಿಶಾ ಕೆ. ಕಾರ್ಯಕ್ರಮ ನಿರ್ವಹಿಸಿದರು. ಉದ್ಘಾಟನಾ ಕಾರ್ಯಕ್ರಮದ ನಂತರ ಗೂಗಲ್ ಕ್ಲೌಡ್ ಫೆಸಿಲಿಟೇಟರ್ ವಿ. ಶ್ರೀನಿವಾಸ್ ಮತ್ತು ಹ್ಯಾಕ್ 2 ಸ್ಕಿಲ್‌ನ ಕುಶಾಗ್ರ ಟಂಡನ್ ವಿದ್ಯಾರ್ಥಿಗಳಿಗೆ ಕಾರ್ಯಾಗಾರ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ 425ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಹಳೆ ವಿದ್ಯಾರ್ಥಿ ಸಂಘ ಕರಂಬಾರು ವತಿಯಿಂದ ₹1.5 ಲಕ್ಷ ಮೌಲ್ಯದ ಉಚಿತ ಸಮವಸ್ತ್ರ ವಿತರಣೆ

ಮಂಗಳೂರು: ಹಳೆ ವಿದ್ಯಾರ್ಥಿ ಸಂಘ ಕರಂಬಾರು ವತಿಯಿಂದ 1.5 ಲಕ್ಷ ರೂ. ಮೌಲ್ಯದ ಉಚಿತ ಸಮವಸ್ತ್ರ ವಿತರಣೆ ಶಾಲಾ ಸಭಾಂಗಣದಲ್ಲಿ ನಡೆಯಿತು.



ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸತೀಶ್ ದೇವಾಡಿಗ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಯಾಗಿದ್ದ ಸಮಾಜ ಸೇವಕ ಆರ್ಥರ್ ಪಿರೇರ ಮಾತನಾಡಿ, ಕರಂಬಾರು ಶಾಲೆಯನ್ನು ಉಳಿಸಿ ಬೆಳೆಸುವಲ್ಲಿ ಹಳೆ ವಿದ್ಯಾರ್ಥಿ ಸಂಘ ಕೆಲಸ ಮಾಡಿದೆ. 40 ಮಕ್ಕಳಿದ್ದ ಶಾಲೆಯಲ್ಲಿ 350 ಮಕ್ಕಳ ಗಡಿ ದಾಟಿರುವುದು ನಿಜವಾಗಿ ಅದ್ಭುತ ಸಾಧನೆ. ಉತ್ತಮ ಮೂಲಭೂತ ಸೌಕರ್ಯ ಶಾಲೆಯಲ್ಲಿದೆ ಎಂದರು.

ದಕ್ಷಿಣ ಕನ್ನಡ ಜಿಲ್ಲಾ ಫ್ಲವರ್ ಡೆಕೊರೇಶನ್ ಮಾಲಕರ ಸಂಘದ ಸ್ಥಾಪಕ ಅಧ್ಯಕ್ಷ ಆಶ್ವಿತ್ ಕೊಟ್ಟಾರಿ , ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಗುಣಪಾಲ ದೇವಾಡಿಗ, ಹಳೆ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ರಾಕೇಶ್ ಕುಂದರ್, ಪ್ರಧಾನ ಕಾರ್ಯದರ್ಶಿ ಪ್ರವೀಣ್ ಆಚಾರ್ಯ, ಶಿಕ್ಷಣ ಕಾರ್ಯದರ್ಶಿ ಕೃಷ್ಣಾನಂದ ಡಿ., ಸಾಂಸ್ಕೃತಿಕ ಕಾರ್ಯದರ್ಶಿ ಲೋಕೇಶ್ ಎಂ.ಬಿ., ಅಕ್ಷಿತ್ ಶೆಟ್ಟಿ, ಜೊತೆ ಕಾರ್ಯದರ್ಶಿಗಳಾದ ನೇತ್ರಾಕ್ಷಿ, ಉಮೇಶ್, ಗೌರವ ಸಲಹೆಗಾರರಾದ ಶಂಕರ್ ಶೆಟ್ಟಿ, ಪದ್ಮನಾಭ ಅಮೀನ್ ಉಪಸ್ಥಿತರಿದ್ದರು.

ಶಾಲಾ ಮುಖ್ಯ ಶಿಕ್ಷಕಿ ಸೀತಮ್ಮ ಜೆ. ಸ್ವಾಗತಿಸಿದರು. ಬಬಿತಾ ನಿರೂಪಿಸಿದರು. ಪವಿತ್ರ ಪ್ರಕಾಶ್ ವಂದಿಸಿದರು.

9ನೇ ಕರ್ನಾಟಕ ರಾಜ್ಯ ಸ್ಕೂಲ್ಸ್ ಚೆಸ್ ಚಾಂಪಿಯನ್ ಶಿಪ್



ಕಾಪು: ಶ್ರೀ ನಾರಾಯಣ ಗುರು ಸ್ಕೂಲ್ ಆಫ್ ಚೆಸ್ ಕಾಪು, ಶ್ರೀ ನಾರಾಯಣ ಗುರು ಸ್ಪೋರ್ಟ್ಸ್ ಮತ್ತು ಎಜುಕೇಶನ್ ಟ್ರಸ್ಟ್ ಕಾಪು ಇದರ ಅಂಗಸಂಸ್ಥೆಯ ಆಯೋಜನೆಯಲ್ಲಿ ಉಡುಪಿ ಜಿಲ್ಲಾ ಚೆಸ್ ಅಸೋಸಿಯೇಷನ್, ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇಷನ್, ಶ್ರೀ ಹಳೇ ಮಾರಿಯಮ್ಮ ದೇವಸ್ಥಾನ ಕಾಪು ಹಾಗೂ ಅಖಿಲಿಯನ್ಸ್ ಟೆಕ್ನಾಲಜಿ, ಮಂಗಳೂರು ಇವರ ಸಹಕಾರದಲ್ಲಿ ಶನಿವಾರ ಕಾಪು ಶ್ರೀ ಹಳೆ ಮಾರಿಯಮ್ಮ ಸಭಾಭವನದಲ್ಲಿ 9ನೇ ಕರ್ನಾಟಕ ರಾಜ್ಯ ಸ್ಕೂಲ್ಸ್ ಚೆಸ್ ಚಾಂಪಿಯನ್ ಶಿಪ್ – 2026 ರ ಉದ್ಘಾಟನಾ ಸಮಾರಂಭ ನಡೆಯಿತು.

ಕಾರ್ಯಕ್ರಮವನ್ನು ಕಾಪು ಶ್ರೀ ಹೊಸ ಮಾರಿಗುಡಿ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ವಾಸುದೇವ ಶೆಟ್ಟಿ ಉದ್ಘಾಟಿಸಿ ಮಾತನಾಡಿ, ಕಾಪುವಿನ ಚೆಸ್ ಸಂಸ್ಥೆಯು ಕಳೆದ ಇಪ್ಪತ್ತು ವರ್ಷಗಳಿಂದ ಸ್ಪರ್ಧೆ ನಡೆಸಿಕೊಂಡು ಬರುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಚೆಸ್ ಪಂದ್ಯಾಟದ ಉದ್ಘಾಟನೆಯನ್ನು ಕಾಪು ಶ್ರೀ ಜನಾರ್ಧನ ದೇವಸ್ಥಾನ ಆಡಳಿತ ಮೊಕ್ತೇಸರ ಮನೋಹರ್ ಶೆಟ್ಟಿ ನೆರವೇರಿಸಿದರು.

ಕಾರ್ಯಕ್ರಮದ ಸಭಾಧ್ಯಕ್ಷತೆಯನ್ನು ಎಂ. ಆರ್.ಪಿ.ಎಲ್, ಸಿ.ಎಸ್. ಆರ್, ಜನರಲ್ ಮ್ಯಾನೇಜರ್ ಮಂದಾರ ವಿ. ಕಾಳೆ ವಹಿಸಿದ್ದರು.

ಉಡುಪಿ ಗಾಂಧಿ ಆಸ್ಪತ್ರೆಯ ಆಡಳಿತ ನಿರ್ದೇಶಕ ಡಾ. ವ್ಯಾಸರಾಜ್ ತಂತ್ರಿ ಮಂಗಳೂರು, ಅಖಿಲಿಯನ್ಸ್ ಟೆಕ್ನಾಲಜಿ, ಸ್ಥಾಪಕರಾದ ಅವಿನಾಶ್ ಶೆಟ್ಟಿ, ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇಷನ್ ಬೆಂಗಳೂರು ಇದರ ಅಧ್ಯಕ್ಷರಾದ ಮಧುಕರ್ ಟಿ. ಎನ್, ಉಡುಪಿ ಉಜ್ವಲ್ ಸಂಸ್ಥೆಯ ಮಾಲೀಕ ಅಜಯ್ ಪುರುಷೋತ್ತಮ ಶೆಟ್ಟಿ, ಕಾಪು ಶ್ರೀ ಹಳೇ ಮಾರಿಯಮ್ಮ ಗುಡಿಯ ಮಾಜಿ ಆಡಳಿತ ಮೊಕ್ತಸರ ಶ್ರೀಧರ ಶೆಣೈ, ಅಸೋಸಿಯೇಷನ್ ಆಫ್ ಸರ್ಜರಿ ಆಫ್ ಇಂಡಿಯಾ ಚೇರ್ಮನ್ ಡಾ. ರಾಜಗೋಪಾಲ್ ಶೆಣೈ ಮುಖ್ಯ ಅತಿಥಿಗಳಾಗಿದ್ದರು.

ಶ್ರೀ ನಾರಾಯಣ ಗುರು ಸ್ಪೋರ್ಟ್ಸ್ ಮತ್ತು ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಉಮಾನಾಥ ಕಾಪು ಸ್ವಾಗತಿಸಿದರು. ಸ್ಥಾಪಕರಾದ ಸಾಕ್ಷಾತ್ ಯು.ಕೆ. ವಂದಿಸಿದರು. ನಿರ್ದೇಶಕಿ ಸೌಂದರ್ಯ ಯು.ಕೆ ನಿರೂಪಿಸಿದರು.

ಕಡಬದಲ್ಲಿ ಮರಳಿನ ಕೃತಕ ಅಭಾವ ಸೃಷ್ಟಿಸಿ ಲೂಟಿ

ನ್ಯಾಯಯುತ ದರದಲ್ಲಿ ಮರಳು ಪೂರೈಸದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ

ಕಟ್ಟಡ ನಿರ್ಮಾಣ ಗುತ್ತಿಗೆದಾರರ ಆಕ್ರೋಶ

ಕಡಬ: ಕಡಬ ತಾಲೂಕಿನಲ್ಲಿ ಮರಳಿನ ಕೃತಕ ಅಭಾವ ಸೃಷ್ಟಿಸಿ ಅವೈಜ್ಞಾನಿಕವಾಗಿ ಹೆಚ್ಚಿನ ದರ ವಸೂಲಿ ಮಾಡಲಾಗುತ್ತಿದ್ದು, ಅದರಿಂದ ಸ್ಥಳೀಯ ಕಟ್ಟಡ ಗುತ್ತಿಗೆದಾರರು ಹಾಗೂ ಕಾರ್ಮಿಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಂಬಂಧಪಟ್ಟವರು ನ್ಯಾಯಯುತ ದರದಲ್ಲಿ ಮರಳು ಪೂರೈಸದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಕಡಬದ ಕಟ್ಟಡ ಗುತ್ತಿಗೆದಾರರ ಬಳಗದ ಮುಂದಾಳು ಕ್ಲೆವಿಯರ್ ಬೇಬಿ ಎಚ್ಚರಿಸಿದರು.

ಅವರು ಶನಿವಾರ ಕಡಬದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಾಲೂಕಿನ ಸುಮಾರು 60ರಿಂದ 70 ಮಂದಿ ಸಣ್ಣ ಪ್ರಮಾಣದ ಕಟ್ಟಡ ಸೇರಿದಂತೆ ಇತರ ನಿರ್ಮಾಣ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರತಿದಿನ 15ರಿಂದ 20 ಮಂದಿ ಕಾರ್ಮಿಕರಿಗೆ ಉದ್ಯೋಗ ನೀಡುತ್ತಿರುವ ಸ್ಥಳೀಯ ಗುತ್ತಿಗೆದಾರರ ಮೇಲೆ ಸುಮಾರು 1,500ಕ್ಕೂ ಹೆಚ್ಚು ಕುಟುಂಬಗಳು ಜೀವನೋಪಾಯಕ್ಕಾಗಿ ಅವಲಂಬಿತವಾಗಿವೆ. ಆದರೆ, ಮರಳು ದಂಧೆಯಿಂದಾಗಿ ಕಾಮಗಾರಿಗಳು ಸ್ಥಗಿತಗೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಕಾರ್ಮಿಕರಿಗೂ ಕೆಲಸದ ಅಭಾವ ಉಂಟಾಗಿದೆ ಎಂದರು.

50ರಿಂದ 60 ಕಿ.ಮೀ. ದೂರದಿಂದ ಕಲ್ಲು ತಂದು, ಬೋಲ್ಡ್ರಸ್ ಮಾಡಿ, ಕ್ರಷರ್‌ನಲ್ಲಿ ವಿದ್ಯುತ್ ಅಥವಾ ಜನರೇಟರ್ ಬಳಸಿ ತಯಾರಿಸುವ ಒಂದು ಯೂನಿಟ್ ಜಲ್ಲಿ ಕೇವಲ ರೂ.4 ಸಾವಿರದಿಂದ ರೂ.5 ಸಾವಿರಕ್ಕೆ ದೊರೆಯುತ್ತದೆ. ಆದರೆ, ಕಡಬ ವ್ಯಾಪ್ತಿಯಲ್ಲೇ 5ರಿಂದ 6 ಕಿ.ಮೀ. ದೂರದಲ್ಲಿ ಹೊಳೆಯಲ್ಲಿ ಯಥೇಚ್ಛವಾಗಿ ಲಭ್ಯವಾಗುವ ಒಂದು ಯೂನಿಟ್ ಮರಳಿಗೆ ರೂ.8 ಸಾವಿರದಿಂದ 9 ಸಾವಿರದವರೆಗೆ ವಸೂಲಿ ಮಾಡಲಾಗುತ್ತಿದೆ. ಇದು ಸಂಪೂರ್ಣ ಅವೈಜ್ಞಾನಿಕ ದರವಾಗಿದ್ದು, ಸಾರ್ವಜನಿಕರಿಂದ ಹಗಲು ದರೋಡೆಯಾಗಿದೆ ಎಂದು ಅವರು ತಿಳಿಸಿದರು.

ಸ್ಥಳೀಯ ಗುತ್ತಿಗೆದಾರರು ಮರಳು ಕೇಳಿದಾಗ ಮರಳು ಲಭ್ಯವಿಲ್ಲ ಎಂಬ ಉತ್ತರ ಉಡಾಫೆಯ ನೀಡಲಾಗುತ್ತಿದೆ. ಆದರೆ, ಕಡಬ ವ್ಯಾಪ್ತಿಯಿಂದ ಪ್ರತಿನಿತ್ಯ 30ರಿಂದ 40 ಲೋಡ್ ಮರಳು ಸಾಗಾಟವಾಗುತ್ತಿರುವುದು ಕಂಡು ಬರುತ್ತಿದ್ದು, ಮರಳಿನ ಟೆಂಡರ್ ಪಡೆದವರು ಯಾವ ಉದ್ದೇಶದಿಂದ ಈ ರೀತಿಯ ವ್ಯವಸ್ಥೆ ಮಾಡುತ್ತಿದ್ದಾರೆ ಎಂಬುದು ಅನುಮಾನಕ್ಕೆ ಕಾರಣವಾಗಿದೆ. ಈ ಪರಿಸ್ಥಿತಿಗೆ ಸ್ಥಳೀಯ ಪೊಲೀಸ್ ಇಲಾಖೆ, ಕಂದಾಯ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳೇ ನೇರ ಹೊಣೆಗಾರರು. ಅಧಿಕಾರಿಗಳ ಕಣ್ಣೆದುರೇ ಈ ದಂಧೆ ನಡೆಯುತ್ತಿದ್ದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಎಂದು ಕ್ಲೆವಿಯರ್ ಬೇಬಿ ಹೇಳಿದರು.

ಜಲ್ಲಿಕಲ್ಲಿಗಿಂತ ಮರಳಿನ ದರ ಕಡಿಮೆಯಾಗಿರಬೇಕು. ಸರ್ಕಾರವೇ ಮರಳಿಗೆ ನಿಗದಿತ ದರ ನಿಗದಿಪಡಿಸಿ, ಅದೇ ದರದಲ್ಲಿ ಗ್ರಾಹಕರಿಗೆ ಪೂರೈಕೆಯಾಗುವಂತೆ ಕ್ರಮ ಕೈಗೊಳ್ಳಬೇಕು. ಮರಳು ಮಾರಾಟಗಾರರು ಕಡ್ಡಾಯವಾಗಿ ದರಪಟ್ಟಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸಬೇಕು. ಮರಳು ದಾಸ್ತಾನು ಕೇಂದ್ರಗಳಲ್ಲಿ ತೂಕದ ಮಾಪಕ ಅಳವಡಿಸಿ, ಪ್ರತಿಯೊಬ್ಬ ಗ್ರಾಹಕರಿಗೂ ತೂಕದ ಪ್ರಮಾಣಪತ್ರ ನೀಡುವುದನ್ನು ಕಡ್ಡಾಯಗೊಳಿಸಬೇಕು ಎಂದು ಅವರು ಆಗ್ರಹಿಸಿದರು.

ಮರಳಿನ ಟೆಂಡರ್ ಪಡೆದವರು ನಡೆಸುತ್ತಿರುವ ಅಕ್ರಮ ದಂಧೆಯನ್ನು ನಿಲ್ಲಿಸಿ, ಸ್ಥಳೀಯ ಗುತ್ತಿಗೆದಾರರಿಗೆ ನ್ಯಾಯಯುತ ದರದಲ್ಲಿ ಮರಳು ದೊರೆಯುವಂತೆ ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆಗಳು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಕಡಬ ತಾಲೂಕಿನ ಎಲ್ಲಾ ಗುತ್ತಿಗೆದಾರರು ಹಾಗೂ ಕಾರ್ಮಿಕರು ಒಗ್ಗೂಡಿ ಉಗ್ರ ಹೋರಾಟ ಮಾಡಲಾಗುವುದು ಎಂದು ಅವರು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಗುತ್ತಿಗೆದಾರರಾದ ವಿನೋದ್ ಪಿ.ಎ., ಸತೀಶ್ ರೈ ಕರ್ಮೇಣ, ಮಹಮ್ಮದ್ ರಫೀಕ್, ಅಬೂಬಕ್ಕರ್ ಪಿ., ಬಾಲಚಂದ್ರ ಮರ್ದಾಳ ಉಪಸ್ಥಿತರಿದ್ದರು.

ಪುತ್ತೂರು ಮಾರುಕಟ್ಟೆ ಧಾರಣೆ

27-06-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	420 - 470
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಟೋರ	330 - 380
ಹಳೆ ಪಟೋರ	350 - 380
ಹೊಸ ಉಳ್ಳಿ	140 - 280
ಹಳೆ ಉಳ್ಳಿ	130 - 280
ಹೊಸ ಕೋಕಾ	310 - 330
ಹಳೆ ಕೋಕಾ	310 - 330
ಹೊಸ ಕರಿಗೋಟು	235 - 265
ಹಳೆ ಕರಿಗೋಟು	235 - 265
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 320
ಕಾಳುಮೆಣಸು ಧಾರಣೆ	
ಕಾಳುಮೆಣಸು	450 - 680
ರಬ್ಬರ್ ಧಾರಣೆ : ಗ್ರೇಡ್	
ಆರ್‌ಎಸ್‌ಎಸ್ 1	268.50
ಆರ್‌ಎಸ್‌ಎಸ್ 2	224.00
ಸ್ಕ್ರಾಪ್ 1	154.00
ಸ್ಕ್ರಾಪ್ 2	145.00

IN THE COURT OF THE II ADDITIONAL CIVIL JUDGE SENIOR DIVISION AT MANGALURU

RA No. 65/2023

Between:
Saguna Bai
... Appellant
And
Mrs. Vasanthi and Others
...Respondents

Respondent No.3
Mrs. Sarojini
W/o Late Subraya, Hindu, Adult Residing at Sudharshan Bantwal Road, Jyothinagar, Moodabidri.

Respondent No.4
Miss Vijayalaxmi
D/o. Gulabi alias Vimala
Aged about 74 years, Residing at No.IV HUDCO Colony, Mahaveer Nagar, Moodabidri.

Respondent No.8
Mr. Naveen Kumar
S/o. K. Shivarao,
Aged about 45 years,
Residing at No. IV HUDCO Colony, Mahaveer Nagar, Moodabidri.

NOTICE

Please take notice, that the appellant has instituted a case against you stands posted to your appearance. If you fail to appear on **27-08-2026 at 11 a.m.** the said date before the above said court either in person or through counsel, the same will be proceeded with by setting your exparte.

Given under my hand and seal of the court this the

(By the order of the court)
Sd/- Chief Ministerial Officer
Court of Senior Civil Judge
& CJM Mangaluru, D.K.

(K. Mahabala Shetty)
Advocate for Appellant
Mangaluru
16.06.2026

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-759) ಡ್ರಾ ಜೂನ್ 27ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KV 372230 (ERNAKULAM)

Consolation Prize Rs.5,000/-
KN 372230 KO 372230 KP 372230 KR 372230
KS 372230 KT 372230 KU 372230 KW 372230
KX 372230 KY 372230 KZ 372230

2nd Prize Rs.25,00,000/- [25 Lakhs]
KO 634959 (ALAPPUZHA)

3rd Prize Rs.10,00,000/- [10 Lakhs]
KZ 498708 (GURUVAYOOR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0427 0825 0980 1168 1311 2417 3322 4710 5444 5451
6378 6443 6546 6853 7933 8877 9005 9292 9899

5th Prize Rs.2,000/-
4265 5460 6995 7125 8105 9471

6th Prize Rs.1,000/-
0352 0539 0862 1065 2001 2690 3006 3263 4248 4278
4341 5038 5056 5874 5880 7040 7844 8006 8169 8187
8212 8234 8756 9180 9798

7th Prize Rs.500/-
0059 0159 0282 0534 0838 0920 1078 1143 1179 1184
1231 1551 1586 1644 1650 1791 1812 1890 1918 1972
2131 2448 2800 2927 2961 2963 3010 3338 3353 3360
3387 3483 3530 3805 4001 4006 4481 4628 4841 4911
4914 4986 5032 5113 5184 5411 5510 5600 5677 5745
6000 6276 6308 6343 6356 6381 6772 7068 7391 7445
7951 8000 8108 8323 8467 8511 8977 9127 9251 9316
9654 9737 9812 9969 9977 9983

8th Prize Rs.200/-
0058 0078 0185 0224 0356 0367 0400 0431 0513
0585 0596 0605 0715 0758 1162 1466 1510 1558
1597 1639 1673 1741 1917 1982 2041 2206 2276
2434 2567 2744 3465 3485 3556 3620 3944 3986
4243 4344 4489 4650 4779 4809 4901 4970 5163
5233 5394 5480 5488 5535 5559 5596 5680 5741
5773 5790 5826 5873 5984 6221 6439 6582 6824
6971 7143 7221 7316 7327 7632 7695 7749 7810
7875 8081 8083 8245 8305 8446 8469 8534 8558
8566 8570 8600 8817 8842 8850 8893 9236 9374
9508 9954

9th Prize Rs.100/-
0034 0196 0263 0342 0436 0466 0575 0595 0683 0727
0762 0809 0849 0926 0927 1015 1020 1102 1113 1118
1120 1193 1224 1295 1340 1494 1519 1536 1593 1630
1727 1830 1835 1973 2089 2193 2196 2398 2405 2469
2503 2635 2720 2793 2803 2819 2837 2847 2990 3048
3092 3101 3145 3146 3289 3383 3417 3418 3535 3597
3601 3698 3701 3745 3763 3837 3877 3911 3959 3964
4023 4079 4166 4237 4250 4467 4499 4507 4522 4613
4621 4641 4819 4961 5054 5118 5260 5591 5715 5724
5857 5912 5924 6002 6097 6209 6265 6271 6281 6440
6492 6551 6612 6667 6708 6743 6899 6943 6990 7126
7242 7303 7668 7736 7756 7899 7940 8119 8132 8177
8220 8383 8389 8499 8591 8598 8646 8853 8936 8952
9061 9116 9133 9185 9193 9318 9465 9566 9746 9779
9815 9836 9934 9979

ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮುಂಭಾಗದ ಗುಡಿಗಳ ತೆರವು ಹಿನ್ನೆಲೆಯಲ್ಲಿ ಧಾರ್ಮಿಕ ಕಾರ್ಯಕ್ರಮ

ಪುತ್ತೂರು: ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ಭಾಗವಾಗಿ ಪ್ರಶ್ನಾ ಚಿಂತನೆಯಲ್ಲಿ ಕಂಡುಬಂದಂತೆ ದೇವಸ್ಥಾನ ಮುಂಭಾಗದ ಅಯ್ಯಪ್ಪ ಗುಡಿಯನ್ನು ತೆರವು ಮಾಡುವ ನಿಟ್ಟಿನಲ್ಲಿ ನಾಗಪ್ರತಿಷ್ಠೆ, ನವಗ್ರಹ ಪ್ರತಿಷ್ಠೆ ಹಾಗೂ ಶ್ರೀ ಅಯ್ಯಪ್ಪ ದೇವರ ಬಾಲಾಲಯ ಪ್ರತಿಷ್ಠೆ ಧಾರ್ಮಿಕ ಕಾರ್ಯಗಳು ಶನಿವಾರ ಬ್ರಹ್ಮಶ್ರೀ ಕುಂಟಾರು ಶ್ರೀ ರವೀಶ ತಂತ್ರಿಯವರ ನೇತೃತ್ವದಲ್ಲಿ ನಡೆಯಿತು.



ಶುಕ್ರವಾರ ಸಂಜೆ ವಾಸ್ತುಹೋಮ, ವಾಸ್ತುಬಲಿ, ರಾಕ್ಷೋಘ್ನ ಹೋಮ ನಡೆದು ಶನಿವಾರ ಬೆಳಗ್ಗೆ ಗಣಹೋಮ, ಮೂಲ ನಾಗ ಸನ್ನಿಧಿಯಲ್ಲಿ ನಾಗಪ್ರತಿಷ್ಠೆ, ಆಶ್ಲೇಷ ಬಲಿ, ವಟು ಆರಾಧನೆ, ದೇವಸ್ಥಾನದ ಒಳಾಂಗಣದಲ್ಲಿ ನವಗ್ರಹ ಪ್ರತಿಷ್ಠೆ, ಶ್ರೀ ಶಾರದಾ ಭಜನಾ ಮಂದಿರದಲ್ಲಿ ಶ್ರೀ ಅಯ್ಯಪ್ಪ ದೇವರ ಬಾಲಾಲಯ ಪ್ರತಿಷ್ಠೆ ಸಹಿತ ಧಾರ್ಮಿಕ ವಿಧಿಗಳು ನಡೆದವು.

ಕಾರ್ಯಕ್ರಮದಲ್ಲಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ, ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಮಾತನಾಡಿ, ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಸಂಬಂಧಿಸಿ ಶ್ರೀ ಮಹಾಲಿಂಗೇಶ್ವರ ದೇವರು ನಮಗೆ ಮನಸ್ಸು ಕೊಟ್ಟಿದ್ದಾರೆ. ನಾವು ಕೆಲಸ ಮಾಡಿ ತೋರಿಸಿದಾಗ ಭಕ್ತರಿಗೂ ದೇಣಿಗೆ ನೀಡುವ ಮನಸ್ಸನ್ನೂ ದೇವರೇ ಕೊಡುತ್ತಾರೆ. ದೇಣಿಗೆ ಬಂದ ಬಳಿಕ ಕೆಲಸ ಮಾಡುತ್ತೇವೆ ಎಂದರೆ ಅದು ಸಾಧ್ಯವಾಗುವುದಿಲ್ಲ ಎಂದರು.

ದೇವರ ಸ್ವರ್ಣ ಕವಚಕ್ಕೆ ದೇಣಿಗೆ ಬರುತ್ತಿದ್ದು, ಈವರೆಗೆ 160 ಗ್ರಾಂ. ಚಿನ್ನ ಸಮರ್ಪಣೆಯಾಗಿದೆ. ಈ ವರ್ಷಾಂತ್ಯದೊಳಗೆ ಒಂದು ಕೆ.ಜಿ. ಚಿನ್ನ ಸಂಗ್ರಹ ಮಾಡುವಂತೆ ವ್ಯವಸ್ಥಾಪನಾ ಸಮಿತಿಗೆ ತಿಳಿಸಿದ್ದೇನೆ. ಎಲ್ಲರೂ ಸೇರಿ ಜೀರ್ಣೋದ್ಧಾರ ಕಾರ್ಯ ಮಾಡಿದ್ದೇವೆ ಎನ್ನುವ ಕಾರಣಕ್ಕೆ ಬಡವರು ಅವರ ಸಾಮರ್ಥ್ಯಕ್ಕೆ ತಕ್ಕಂತೆ ದೇಣಿಗೆ ನೀಡಬಹುದು ಎಂದರು.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಮಾತನಾಡಿ, ಜೀರ್ಣೋದ್ಧಾರ ಕಾರ್ಯದ ಭಾಗವಾಗಿ ಕೆಲಸ ಕಾರ್ಯಗಳು ಆರಂಭಗೊಂಡಿದ್ದು, ಜೂ. 28ರಂದು ಮುಂಭಾಗದ ಅಯ್ಯಪ್ಪ ಗುಡಿಯನ್ನು ತೆರವು ಕಾರ್ಯ ನಡೆಯಲಿದೆ. ವ್ಯವಸ್ಥಾಪನಾ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಮುಂದೆ ಪ್ರತಿ ಮನೆಗಳಿಗೂ ಭೇಟಿ ನೀಡಿ ವಿಜ್ಞಾಪನಾ ಪತ್ರ ಕೊಟ್ಟು ಸಾಮರ್ಥ್ಯ ಇರುವವರಲ್ಲಿ ಕನಿಷ್ಠ ರೂ.10 ಸಾವಿರ ಜೀರ್ಣೋದ್ಧಾರ ಕಾರ್ಯಕ್ಕೆ ದೇಣಿಗೆ ನೀಡುವಂತೆ ವಿನಂತಿ ಮಾಡಲಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಪ್ರಧಾನ ಅರ್ಚಕ ವಸಂತ ಕುಮಾರ್ ಕೆದಿಲಾಯ, ಅರ್ಚಕ ವೃಂದ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿದರು. ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಬಿ. ಈಶ್ವರ ಬೆಡೇಕರ್, ಕೃಷ್ಣವೇಣಿ, ನಳಿನಿ ಪಿ. ಶೆಟ್ಟಿ, ದಿನೇಶ್ ಕುಲಾಲ್ ಪಿ.ವಿ., ಮಹಾಬಲ ರೈ ಒಳತ್ತಡ್ಕ, ಸುಭಾಷ್ ರೈ ಬೆಳ್ಳಿಪ್ಪಾಡಿ ಮತ್ತಿತರರು ಉಪಸ್ಥಿತರಿದ್ದರು.

ಆರ್ಥಿಕ ಭದ್ರತೆ ಆತ್ಮವಿಶ್ವಾಸದ ಕೊಂಡಿಯಾಗಲಿದೆ

ಬ್ರಹ್ಮಾವರ: ಗ್ರಾಮಾಭಿವೃದ್ಧಿ ಮತ್ತು ಸ್ವ ಉದ್ಯೋಗ ತರಬೇತಿ (ರುಡ್ ಸೆಟ್) ಸಂಸ್ಥೆ, ಬ್ರಹ್ಮಾವರ ಇವರ ಆಶ್ರಯದಲ್ಲಿ ವಸ್ತ್ರ ಚಿತ್ರ ಕಲಾ ಲಘು ಉದ್ಯಮಿ (ಎಂಬ್ರಾಯ್ಡರಿ) ತರಬೇತಿಯ ಉದ್ಘಾಟನಾ ಸಮಾರಂಭವು ಸಂಸ್ಥೆಯ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ರಾಜ್ಯ ಟೈಲರಿಂಗ್ ಅಸೋಸಿಯೇಷನ್‌ನ ಉಡುಪಿ ಜಿಲ್ಲಾಧ್ಯಕ್ಷ ದಯಾನಂದ ಕೋಟ್ಯಾನ್, ಮಾತನಾಡಿ, ಮಹಿಳೆಯರು ತಮ್ಮ ಆಸಕ್ತಿಯ ಕ್ಷೇತ್ರವಾಗಿರುವ ಟೈಲರಿಂಗ್ ಹಾಗೂ ಎಂಬ್ರಾಯ್ಡರಿ ಉದ್ಯಮವು ಅತ್ಯಂತ ಲಾಭದಾಯಕ ಹಾಗೂ ಬಹಳ ಬೇಡಿಕೆಯಿರುವ ಕ್ಷೇತ್ರವಾಗಿದೆ. ಇದರಿಂದ ಮಹಿಳೆಯರಿಗೆ ಸ್ವ ಉದ್ಯೋಗವನ್ನು ಕೈಗೊಂಡು ಆರ್ಥಿಕವಾಗಿ ಸಬಲತೆಯನ್ನು ಹೊಂದಲು ಸಾಧ್ಯವಾಗುತ್ತದೆ. ಸ್ವಾಭಿಮಾನದಿಂದ ಬದುಕಲು ಪ್ರೇರಣೆ ನೀಡುತ್ತದೆ. ಸ್ವ ಉದ್ಯೋಗ ಆರ್ಥಿಕ ಭದ್ರತೆ ಜೊತೆಗೆ ಆತ್ಮವಿಶ್ವಾಸದ ಕೊಂಡಿಯಾಗಲಿದೆ ಎಂದರು.



ಸಮಾಜದಲ್ಲಿ ಗೌರವಯುತವಾದ ಸ್ಥಾನ ಮಾನವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದ ಯುವ ಜನತೆಗೆ ಸ್ವ ಉದ್ಯೋಗವನ್ನು ಪ್ರಾರಂಭಿಸಲು ಸಂಸ್ಥೆ ನೆರವಾಗುತ್ತಿದೆ. ಒಂದು ತಿಂಗಳು ತಮ್ಮ ಇತರೆ ಕೆಲಸಗಳನ್ನು ಬದಿಗಿರಿಸಿ, ಸಂಸ್ಥೆಯು ನೀಡುವ ತರಬೇತಿಯನ್ನು ಉತ್ತಮ ರೀತಿಯಲ್ಲಿ ಪಡೆದು ಯಶಸ್ವಿ ಉದ್ಯಮಗಳಾಗಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರುಡ್ ಸೆಟ್ ಸಂಸ್ಥೆಯ ಹಿರಿಯ ಉಪನ್ಯಾಸಕ ಸಂತೋಷ್ ಶೆಟ್ಟಿ, ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡಿ, ಸಂಸ್ಥೆಯಲ್ಲಿ ಸಿಗುವ ತರಬೇತಿಯನ್ನು ಶ್ರದ್ಧೆಯಿಂದ ಪಡೆದುಕೊಂಡು, ಇಲ್ಲಿನ ಸವಲತ್ತುಗಳನ್ನು ನಿಮ್ಮ ಪ್ರೀತಿಪಾತ್ರರಲಿ ಹಂಚಿಕೊಂಡು ದೇಶದ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸೋಣ ಎಂದು ಶಿಬಿರಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮವನ್ನು ಉಪನ್ಯಾಸಕಿ ಚೈತ್ರ ಕೆ. ನಿರೂಪಿಸಿ, ಸ್ವಾಗತಿಸಿದರು. ಹಿರಿಯ ಕಚೇರಿ ಸಹಾಯಕ ರವಿ ವಂದಿಸಿದರು.

ಕಥಾಸಂಕಲನ ಬಿಡುಗಡೆ



ಕಥೆಗಾರ್ತಿ ಸಿರಿ ಮೂರ್ತಿ ಕಾಸರವಳ್ಳಿ ಅವರ ಮಂಟಪ ಮತ್ತು ಕಾಶಿ ಗಿಂಡಿ ಕಥಾಸಂಕಲನವನ್ನು ಹಿರಿಯ ಪತ್ರಕರ್ತ ದು.ಗು.ಲಕ್ಷ್ಮಣ ಅವರು ಶನಿವಾರ ಬಿಡುಗಡೆ ಮಾಡಿದರು. ಈ ವೇಳೆ ಕಾದಂಬರಿಕಾರ ಗಜಾನನ ಶರ್ಮಾ, ಕೊರಗಿ ಶಂಕರನಾರಾಯಣ ಉಪಾಧ್ಯಾಯ, ಸಾಹಿತಿಗಳಾದ ಪ್ರೇಮಾ ಭಟ್, ಗಣೇಶಯ್ಯ, ಪ್ರಭಾಕರ ಕಾರಂತ, ಹಿರಿಯ ಪತ್ರಕರ್ತ ಜಯರಾಮ ಅಡಿಗ, ಲೇಖಕಿ ನೇಮಿಚಂದ್ರ ಇದ್ದರು.

ಕಿರುಸುದ್ದಿ

ಬಿಲ್ ಕಲೆಕ್ಟರ್‌ಗಳ ಪದೋನ್ನತಿ ಪರಿಗಣನೆಯಲ್ಲಿ ತಾರತಮ್ಯ

ಬೆಂಗಳೂರು: ಬಿಲ್ ಕಲೆಕ್ಟರ್‌ಗಳು ಸರ್ಕಾರದ ಆಧಾರಸ್ತಂಭ, ಆದರೆ ಸರ್ಕಾರದ ಕೆಲ ಆದೇಶಗಳು ಅವರುಗಳಿಗೆ ಮಾರಕವಾಗಿವೆ. ಜೇಷ್ಠತೆ ಮತ್ತು ಪದೋನ್ನತಿಯ ಪರಿಗಣನೆಯಲ್ಲಿ ಸಾಕಷ್ಟು ತಾರತಮ್ಯವನ್ನು ಎದುರಿಸುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ನೌಕರರ ಸಂಘದ ಅಧ್ಯಕ್ಷ ನಾರಾಯಣ್ ಬೇಸರ ವ್ಯಕ್ತಪಡಿಸಿದರು. ಸಚಿವಾಲಯ ಕ್ಲಬ್ ಸಭಾಂಗಣದಲ್ಲಿ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್‌ಗಳ ಸಮಾಲೋಚನ ಸಭೆಯ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ನಮಗೆ ವೇತನ ಶ್ರೇಣಿಯ ಸರಿಯಾದ ವ್ಯವಸ್ಥೆ ಈವರೆಗೆ ನಿಗದಿಯಾಗಿಲ್ಲ. ಸರ್ಕಾರದ ಅಂಗ ಸಂಸ್ಥೆಯ ಅಡಿಯಲ್ಲಿ ಪೂರ್ಣಾವಧಿ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದರು ಸಹ ಕಾರ್ಮಿಕ ಇಲಾಖೆಯ ವೇತನ ಶ್ರೇಣಿಯ ಅನ್ವಯ ವೇತನವನ್ನು ಪಾವತಿ ಮಾಡಲಾಗುತ್ತಿದೆ. ಈ ತಾರತಮ್ಯವನ್ನು ಒಪ್ಪಲು ಸಾಧ್ಯವಿಲ್ಲ ಎಂದು ತಿಳಿಸಿದರು. ಪ್ರಧಾನ ಕಾರ್ಯದರ್ಶಿ ಮಧು ದೇಶಿ ಮಾತನಾಡಿ, ಸರ್ಕಾರ ನಮ್ಮೆಲ್ಲರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂಬ ನಿಟ್ಟಿನಲ್ಲಿ ನಿರಂತರ ಹೋರಾಟವನ್ನು ನಡೆಸುತ್ತಿದ್ದು, ಅವರಿಗೆ ಸಭೆಯಲ್ಲಿ ಸಂಪೂರ್ಣ ಬೆಂಬಲ ಸೂಚಿಸಲಾಗಿದೆ. ಎಂದು ಹೇಳಿದರು. ಈ ವೇಳೆ ಬಿಲ್ ಕಲೆಕ್ಟರ್‌ಗಳ ಸಂಘದ ಗೌರವಾಧ್ಯಕ್ಷ ಗೋವಿಂದಪ್ಪ, ಉಪಾಧ್ಯಕ್ಷ ರವಿಕುಮಾರ್ ಕೆ., ರಂಗಸ್ವಾಮಿ, ಖಜಾಂಚಿ ಬಸವರಾಜೇಗೌಡ, ಸಹ ಕಾರ್ಯದರ್ಶಿ ಮಲ್ಲೇಶ್ ಪೂಜಾರ್, ಪಿಡಿಒ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ದಿಲೀಪ್ ಸೇರಿದಂತೆ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಾಮರ ಶಾಲೆ ವಿರುದ್ಧ ಕಠಿಣ ಕ್ರಮ

ಬೆಂಗಳೂರು: 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವರ್ಗಾವಣೆ ಪತ್ರ (ಟಿಸಿ) ನೀಡದೆ, ಹೈಕೋರ್ಟ್ ಹಾಗೂ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿರುವ ಧಣಿಸಂದ್ರದ ಸಾಮರ ಇಂಟರ್‌ನ್ಯಾಷನಲ್ ಇಸ್ಲಾಮಿಕ್ ಸ್ಕೂಲ್ ವಿರುದ್ಧ, ಶಾಲಾ ಶಿಕ್ಷಣ ಇಲಾಖೆ ಕಠಿಣ ಕ್ರಮ ಕೈಗೊಂಡಿದೆ. ಈ ಸಂಬಂಧ ಬೆಂಗಳೂರು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ರಾಘವೇಂದ್ರ ಸ್ವಾಮಿ ಅವರು ಕೊತ್ತನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಶಾಲೆಯ ಮುಖ್ಯ ಆಡಳಿತಾಧಿಕಾರಿ ಖಾಲಿದ್ ಮುಷ್ರಫ್ ಅವರು ಇಲಾಖೆಯ ಆದೇಶಗಳನ್ನು ಪಾಲಿಸದೇ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಧಕ್ಕೆ ಉಂಟುಮಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಶಾಲೆಯ ಮಾನ್ಯತೆ ರದ್ದುಗೊಂಡ ಹಿನ್ನೆಲೆಯಲ್ಲಿ 350 ವಿದ್ಯಾರ್ಥಿಗಳಿಗೆ ಮಾತ್ರ ಟಿಸಿ ವಿತರಿಸಲಾಗಿದ್ದು, ಉಳಿದ 400ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಇನ್ನೂ ವರ್ಗಾವಣೆ ಪತ್ರ ನೀಡಲಾಗಿಲ್ಲ ಎಂದು ತಿಳಿಸಲಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ನಿರ್ದೇಶಕರು ಏ.10 ಹಾಗೂ ಮೇ.15 ಮತ್ತು 30 ರಂದು ಪೋಷಕರ ಸಭೆ ನಡೆಸಿ, ಶಾಲೆಯ ಮಾನ್ಯತೆ ಮತ್ತು ನೋಂದಣಿ ರದ್ದುಗೊಂಡಿರುವ ಬಗ್ಗೆ ಮಾಹಿತಿ ನೀಡಿದ್ದರು. ಜತೆಗೆ, ಎಲ್ಲಾ ಶೈಕ್ಷಣಿಕ ದಾಖಲೆಗಳನ್ನು ಸರ್ಕಾರಿ ಶಾಲೆಗೆ ಹಸ್ತಾಂತರಿಸುವಂತೆ ಸೂಚನೆ ನೀಡಿದ್ದರೂ, ಆಡಳಿತ ಮಂಡಳಿ ಅದನ್ನು ಪಾಲಿಸಿಲ್ಲ ಎಂದು ತಿಳಿದುಬಂದಿದೆ. ಇದರ ನಡುವೆಯೇ, ನಕಲಿ ಶಿಕ್ಷಣ ಸಂಸ್ಥೆಯ ಹೆಸರಿನಲ್ಲಿ 2026–27ನೇ ಶೈಕ್ಷಣಿಕ ಸಾಲಿಗೆ ಜಾಮೀಯ ಮಹಮ್ಮದೀಯ ಮಂಸೂರ್ ಹೆಸರಿನಲ್ಲಿ ರಾಜ್ಯ ಪಠ್ಯಕ್ರಮದ ಶಾಲೆಯಾಗಿ ಜಾಹೀರಾತು ನೀಡಿ ದಾಖಲಾತಿ ಪ್ರಕ್ರಿಯೆ ಆರಂಭಿಸಿರುವುದು ಬೆಳಕಿಗೆ ಬಂದಿದೆ. ಶಾಲಾ ಆಡಳಿತ ಮಂಡಳಿಯವರು ಸಂಪರ್ಕಕ್ಕೆ ಸಿಗದೇ ಇರುವುದರಿಂದ ಇಲಾಖಾ ಆದೇಶಗಳ ಅನುಷ್ಠಾನಕ್ಕೆ ಅಡಚಣೆ ಉಂಟಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ ದೇಸಿ ಜಾತಿಯ ಸಸಿ ನೆಡುವ ಕಾರ್ಯಕ್ರಮ

15 ಲಕ್ಷ ಸಸಿ ನೆಟ್ಟು ಜಿಬಿಎ ದಾಖಲೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ ಶನಿವಾರ ನಗರದ ವಿವಿಧೆಡೆ ಒಂದೇ ದಿನದಲ್ಲಿ ಸುಮಾರು 15 ಲಕ್ಷ ದೇಸಿ ಜಾತಿಯ ಸಸಿಗಳನ್ನು ನೆಡುವ ಮೂಲಕ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ಇತಿಹಾಸ ನಿರ್ಮಿಸಿದೆ. ಇದರೊಂದಿಗೆ ಭಾರತದ ಅತಿದೊಡ್ಡ ಹಸಿರು ಆವರಣ ಅಭಿಯಾನಗಳಲ್ಲಿ ಒಂದಾಗಿ ಕರ್ನಾಟಕದ ಸುಸ್ಥಿರ ಭವಿಷ್ಯದ ಬದ್ಧತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದ ಮಹತ್ವದ ಹೆಜ್ಜೆಯಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆ, ವಿವಿಧ ಸರ್ಕಾರಿ ಇಲಾಖೆ ಹಾಗೂ ಸಾರ್ವಜನಿಕ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ಬೆಂಗಳೂರು ನಗರ ಪುನಶ್ಚೇತನ ಮಿಷನ್ 2026–30ರ ಅಂಗವಾಗಿ, ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ 2026 ಶನಿವಾರ ನಗರದ ವಿವಿಧ ಭಾಗಗಳಲ್ಲಿ 15 ಲಕ್ಷ ಸ್ಥಳೀಯ ತಳಿ ಸಸಿಗಳನ್ನು ಸುಮಾರು 65 ಸಾವಿರಕ್ಕೂ ಹೆಚ್ಚಿನ ಮಂದಿ ನೆಡುವ ಮೂಲಕ ಗಿನ್ನಿಸ್ ದಾಖಲೆ ಬರೆದಿದ್ದಾರೆ.

ಈ ಕಾರ್ಯಕ್ರಮದ ಅಂಗವಾಗಿ ಬಿಡಿಎ ವತಿಯಿಂದ ಹಮ್ಮಿಕೊಳ್ಳಲಾದ ಕೆಂಪೇಗೌಡ ರನ್–2026 ಸಹ ಯಶಸ್ವಿಯಾಗಿ ನಡೆಯಿತು. 5 ಕಿ.ಮೀ. ಮತ್ತು 10 ಕಿ.ಮೀ. ಓಟಗಳಲ್ಲಿ ಸಾವಿರಾರು ಓಟಗಾರರು ಉತ್ಸಾಹದಿಂದ ಭಾಗವಹಿಸಿದರು. ಓಟವು ನಗರದ ಎಸ್.ಎಂ.ಕೃಷ್ಣ ರಸ್ತೆ, ಚಲ್ಲಘಟ್ಟ ಮೆಟ್ರೋ ನಿಲ್ದಾಣದಿಂದ ಆರಂಭಗೊಂಡು, ಅದೇ ಸ್ಥಳದಲ್ಲಿ ಸಮಾಪ್ತಿಗೊಂಡಿತು.

ಈ ಬೃಹತ್ ಸಸಿ ನೆಡುವ ಅಭಿಯಾನದಲ್ಲಿ ಸಾವಿರಾರು ನಾಗರಿಕರು, ವಿದ್ಯಾರ್ಥಿಗಳು, ಸರ್ಕಾರಿ ಅಧಿಕಾರಿಗಳು, ನಿವಾಸಿಗಳ ಕಲ್ಯಾಣ ಸಂಘಗಳು, ಸ್ವಯಂಸೇವಾ ಸಂಸ್ಥೆಗಳು, ಕಾರ್ಪೊರೇಟ್ ಸ್ವಯಂಸೇವಕರು ಹಾಗೂ ಪರಿಸರ ಸಂಘಟನೆಗಳು ಉತ್ಸಾಹದಿಂದ ಪಾಲ್ಗೊಂಡು ಹಸಿರು ಹಾಗೂ ಸುಸ್ಥಿರ ಬೆಂಗಳೂರಿನ ನಿರ್ಮಾಣಕ್ಕೆ ಕೈಜೋಡಿಸಿದರು. ಈ ಕಾರ್ಯಕ್ರಮವನ್ನು ಬೆಂಗಳೂರಿನ ನಾಡಪ್ರಭು ಕೆಂಪೇಗೌಡ ಬಡಾವಣೆ, ಬನಶಂಕರಿ 6ನೇ ಹಂತ, ಶಿವರಾಮ ಕಾರಂತ ಬಡಾವಣೆ, ಆಕ್ಸಿಜನ್ ಟ್ರೀ ಪಾರ್ಕ್‌ಗಳು, ಮಿಯಾವಾಕಿ ಅರಣ್ಯಗಳು ಸೇರಿದಂತೆ ಬಿಡಿಎ ಅಭಿವೃದ್ಧಿಪಡಿಸಿರುವ ವಿವಿಧ ಹಸಿರು ಪ್ರದೇಶಗಳಲ್ಲಿ ಕೈಗೊಳ್ಳಲಾಯಿತು. ಈ ಮಹತ್ವಾಕಾಂಕ್ಷಿ ಕಾರ್ಯಕ್ರಮವು ಬೆಂಗಳೂರಿನ ಹಸಿರು ಆವರಣವನ್ನು ಗಣನೀಯವಾಗಿ ವಿಸ್ತರಿಸುವುದು, ವಾಯು ಗುಣಮಟ್ಟವನ್ನು ಸುಧಾರಿಸುವುದು, ಜೀವ ವೈವಿಧ್ಯತೆಯನ್ನು ಸಂರಕ್ಷಿಸುವುದು, ಹವಾಮಾನ ಬದಲಾವಣೆಯ ದುಷ್ಪರಿಣಾಮಗಳನ್ನು ತಗ್ಗಿಸುವುದು ಹಾಗೂ ಮುಂದಿನ ಪೀಳಿಗೆಗೆ ಆರೋಗ್ಯಕರ ಸಾರ್ವಜನಿಕ ಪರಿಸರವನ್ನು ನಿರ್ಮಿಸುವ ಉದ್ದೇಶ ಹೊಂದಿದೆ.



ಮಾದರಿ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಬೇಕು

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಗರಡಿಯಲ್ಲಿ ಬೆಳೆದಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಬೆಂಗಳೂರು ನಗರವನ್ನು ಅಭಿವೃದ್ಧಿಪಡಿಸಬೇಕು ಎಂಬ ಆಶಯದೊಂದಿಗೆ ನಾಡಪ್ರಭು ಕೆಂಪೇಗೌಡ ಮತ್ತು ಎಸ್.ಎಂ.ಕೃಷ್ಣ ಅವರು ಆದರ್ಶಗಳನ್ನು ಮೈಗೂಡಿಸಿಕೊಂಡು ರಾಜ್ಯದ ಹಿತ ಕಾಪಾಡುವ ಮೂಲಕ ಮಾದರಿ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಬೇಕು ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಆಶಿಸಿದರು.

ಆರೋಗ್ಯಕರ ಪರಿಸರ ನಿರ್ಮಿಸಲು ದೃಢಸಂಕಲ್ಪ

15 ಲಕ್ಷ ವಿವಿಧ ಸಸಿಗಳನ್ನು ನಡುವ ಮೂಲಕ ಬೆಂಗಳೂರು ನಗರವನ್ನು ಗ್ರೀನ್ ಸಿಟಿಯಾಗಿ ಪರಿವರ್ತಿಸುವ ಮೂಲಕ ನಗರದ ಜನತೆಗೆ ಉತ್ತಮ ವಾತಾವರಣ ನಿರ್ಮಾಣ ಮಾಡುವ ಮೂಲಕ ಉತ್ತಮ ಆರೋಗ್ಯಕರ ಪರಿಸರ ನಿರ್ಮಿಸಲು ನಾವೆಲ್ಲರೂ ದೃಢಸಂಕಲ್ಪ ಮಾಡಬೇಕಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಈ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇವತ್ತು 15 ಲಕ್ಷ ದೇಸಿ ಸಸಿಗಳ ನೆಡುವ ಕಾರ್ಯಕ್ರಮವು ಕರ್ನಾಟಕದ ಸುಸ್ಥಿರ ಅಭಿವೃದ್ಧಿಯ ಪಯಣದಲ್ಲಿ ಐತಿಹಾಸಿಕ ಮೈಲಿಗಲ್ಲಾಗಿದೆ. ಬೆಂಗಳೂರು ಬೆಳೆಯುತ್ತಿರುವಂತೆ ಅದರ ಹಸಿರು ಆವರಣವನ್ನು ಸಂರಕ್ಷಿಸುವುದು ಮತ್ತು ವಿಸ್ತರಿಸುವುದು ನಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ನಗರಾಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ನಡುವೆ ಸಮತೋಲನ ಸಾಧಿಸುವ ಸರ್ಕಾರದ ಬದ್ಧತೆಯನ್ನು ಈ ಕಾರ್ಯಕ್ರಮ ಪ್ರತಿಬಿಂಬಿಸುತ್ತದೆ. ಇಂದು ನೆಡಲಾದ ಪ್ರತಿಯೊಂದು ಸಸಿಯೂ ಶುದ್ಧ ಗಾಳಿ, ಉತ್ತಮ ಪರಿಸರ ಸಮತೋಲನ ಹಾಗೂ ಮುಂದಿನ ಪೀಳಿಗೆಗೆ ಆರೋಗ್ಯಕರ ಭವಿಷ್ಯಕ್ಕಾಗಿ ಮಾಡಿದ ಅಮೂಲ್ಯ ಹೂಡಿಕೆಯಾಗಿದೆ ಎಂದು ಹೇಳಿದರು.

ಕೆಂಪೇಗೌಡರ ಕಾರ್ಯ ಶಾಶ್ವತ: ಎಂ.ರುದ್ರೇಶ್



ಬೆಂಗಳೂರು: ಅತ್ಯಾಧುನಿಕ ಮೂಲ ಸೌಕರ್ಯಗಳ ನಗರ ಎಂದು ಖ್ಯಾತಿ ಪಡೆದಿರುವ, ವಿಶ್ವವೇ ಬೆಂಗಳೂರು ಕಡೆ ಮುಖ ಮಾಡುವಂತೆ ನಗರವನ್ನು ಕಟ್ಟಿ ಬೆಳೆಸಿದ ನಾಡಪ್ರಭು ಕೆಂಪೇಗೌಡರು ಈ ಭೂಮಿ ಇರುವ ತನಕ ಶಾಶ್ವತ ಎಂದು ಕೆ.ಆರ್.ಐ.ಡಿ.ಎಲ್. ಮಾಜಿ ಅಧ್ಯಕ್ಷ ಎಂ.ರುದ್ರೇಶ್ ಅಭಿಪ್ರಾಯಪಟ್ಟರು.

ನಾಗದೇವನಹಳ್ಳಿಯ ಜಿ. ತಿಮ್ಮಯ್ಯ ಬಡಾವಣೆಯ ಶಂಕರ್ ನಾಗ್ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಕೆಂಪೇಗೌಡರ 517 ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರು ಮಾರೇಗೌಡಕೆರೆ, ಕುಂಟೆ, ಪೇಟೆಗಳ ನಿರ್ಮಾಣ, ದೊಡ್ಡ ಗಣೇಶ ದೇವಸ್ಥಾನ, ಗವಿ ಗಂಗಾಧರೇಶ್ವರ, ಸೋಮೇಶ್ವರ ಹೀಗೆ ಹಲವಾರು ದೇವಸ್ಥಾನ ನಿರ್ಮಾಣ ಮಾಡಿ ಸರ್ವಧರ್ಮಿಯರು ಬದುಕು ಕಟ್ಟಿಕೊಳ್ಳಲು ಮುಂದಾಗಿದ್ದರು ಎಂದು ಬಣ್ಣಿಸಿದರು.

ಬೆಂಗಳೂರಿನಲ್ಲಿ ಯಾವುದೇ ನದಿಯ ಸಂಪರ್ಕ ಇಲ್ಲದಿದ್ದರೂ ಕೆರೆ, ಕುಂಟೆ ನಿರ್ಮಿಸಿ ಐತಿಹಾಸಿಕ ನಗರ ನಿರ್ಮಿಸಿದ ನಾಡಪ್ರಭು ಕೆಂಪೇಗೌಡರು ಎಲ್ಲ ಜಾತಿ, ಧರ್ಮದವರಿಗೂ ಅನ್ನದಾತ, ಉದ್ಯೋಗ, ಶಿಕ್ಷಣ ನೀಡಿದ ಒಬ್ಬ ಅವತಾರ ಪುರುಷ ಎಂದು ಪುರಸಭೆ ಮಾಜಿ ಉಪಾಧ್ಯಕ್ಷ ಜಿ. ಮುನಿರಾಜು ಅವರು ಬಣ್ಣಿಸಿದರು.

ಮಧ್ಯಸ್ಥಿಕೆ ಪ್ರಕ್ರಿಯೆ ಪರಿಣಾಮಕಾರಿ ವ್ಯವಸ್ಥೆ

ಬೆಂಗಳೂರು: ಮಧ್ಯಸ್ಥಿಕೆ ಪ್ರಕ್ರಿಯೆಯು ಯಾವುದೇ ಪಕ್ಷಕ್ಕೂ ಬೇಸರ ಉಂಟುಮಾಡದೆ ನ್ಯಾಯ ಒದಗಿಸುವ ಪರಿಣಾಮಕಾರಿ ವ್ಯವಸ್ಥೆಯಾಗಿದ್ದು, ನ್ಯಾಯಾಂಗದಲ್ಲಿ ಇದರ ಬಳಕೆ ಇನ್ನಷ್ಟು ಹೆಚ್ಚಾಗಬೇಕು ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅಭಿಪ್ರಾಯಪಟ್ಟರು.

ಬೆಂಗಳೂರು ಇಂಟರ್‌ನ್ಯಾಷನಲ್ ಮೀಡಿಯೇಷನ್, ಆರ್ಬಿಟ್ರೇಷನ್ ಮತ್ತು ಕಾನ್ಸಿಲಿಯೇಷನ್ ಸೆಂಟರ್ ಹಾಗೂ ಜೈನ್ (ಡೀಮ್ಡ್–ಟು–ಬಿ ಯೂನಿವರ್ಸಿಟಿ) ಸಹಯೋಗದಲ್ಲಿ ಮಧ್ಯಸ್ಥಿಕೆ ಚಳವಳಿಯ ಎರಡು ದಶಕಗಳ ಸ್ಮರಣಾರ್ಥ ಆಯೋಜಿಸಿದ್ದ ರಾಷ್ಟ್ರೀಯ ಕಾನೂನು ಸಮ್ಮೇಳನವನ್ನು ಉದ್ಘಾಟಿಸಿ ಅಮಾತನಾಡಿದ ಅವರು, ಮಧ್ಯಸ್ಥಿಕೆ ಪ್ರಕ್ರಿಯೆಯಲ್ಲಿ ಸಮರ್ಪಣೆ, ವಿಶ್ವಾಸಾರ್ಹತೆ ಹಾಗೂ ಉತ್ತ ಷ್ಷತೆ ಅಡಕವಾಗಿದ್ದು, ಕಾನೂನು ಜಾರಿಯ ಜತೆಗೆ ಸಮಾಜದಲ್ಲಿ ಸಂವಾದ, ಸಮಾಧಾನ ಮತ್ತು ಸಮನ್ವಯವನ್ನು ಬೆಳೆಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದರು. ಎಲ್ಲರೂ ಒಟ್ಟಾಗಿ ಸಾಗಬೇಕು ಮತ್ತು ಒಂದೇ ಮನೋಭಾವದಿಂದ ಆಲೋಚಿಸಬೇಕು ಎಂಬ ಭಾರತೀಯ ಸಂಸ್ಕೃ ತಿ ಹಾಗೂ ಮೌಲ್ಯಗಳಿಗೆ ಮಧ್ಯಸ್ಥಿಕೆ ವ್ಯವಸ್ಥೆ ಪೂರಕವಾಗಿದೆ.



ನಮ್ಮ ಪ್ರಾಚೀನ ಪಂಚಾಯತ್ ವ್ಯವಸ್ಥೆಯಲ್ಲಿಯೂ ಮಧ್ಯಸ್ಥಿಕೆಗೆ ಮಹತ್ವದ ಸ್ಥಾನವಿತ್ತು. ವಿವಾದಗಳನ್ನು ಬಗೆಹರಿಸುವುದರ ಜತೆಗೆ ಪರಸ್ಪರ ಸಂಬಂಧಗಳನ್ನು ಉಳಿಸಿಕೊಳ್ಳುವ ಶಕ್ತಿಯೂ ಮಧ್ಯಸ್ಥಿಕೆಗೆಯಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್, ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಮುಂಬೈ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್, ಜೈನ್ ವಿವಿ ಕುಲಾಧಿಪತಿ ಡಾ. ಚೆನ್ರಾಜ್ ಜೈನ್ ಸೇರಿದಂತೆ ಇತರರಿದ್ದರು.



ಗೋವಿಂದರಾಜ ನಗರದ ಸಂಪಿಗೆ ಬಡಾವಣೆಯ ಬಾಳಯ್ಯನಕೆರೆ ಉದ್ಯಾನವನದಲ್ಲಿ ನಾಡಪ್ರಭು ಕೆಂಪೇಗೌಡ ಉದ್ಯಾನವನದ ನಡಿಗೆದಾರರ ಬಳಗದಿಂದ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಆಚರಿಸಲಾಯಿತು.

ಗ್ರಾಹಕರ ಸೆಳೆದ ಸಂತೆ

ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯದ ಜಿಕೆವಿಕೆ ಆವರಣದ ಗಣಪತಿ ದೇವಸ್ಥಾನದ ಹತ್ತಿರ ಈ ಬಾರಿ ವಿಭಿನ್ನ ಹಾಗೂ ವಿಶೇಷವಾದ ರೈತ ಸಂತೆಯನ್ನು ಹಮ್ಮಿಕೊಳ್ಳಲಾಗಿತ್ತು. ಆರೋಗ್ಯ, ಪೌಷ್ಟಿಕತೆ, ಮೌಲ್ಯವರ್ಧನೆ ಹಾಗೂ ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ್ದ ಈ ಸಂತೆಯು ಗ್ರಾಹಕರನ್ನು ದೊಡ್ಡ ಮಟ್ಟದಲ್ಲಿ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ರೈತ ಸಂತೆಯಲ್ಲಿ ನೈಸರ್ಗಿಕ ಬೆಲ್ಲದಿಂದ ತಯಾರಿಸಲಾಗಿದ್ದ ತಾಜಾ ಗೋಧಿ ಪಾಯಸಕ್ಕೆ ಗ್ರಾಹಕರಿಂದ ಅಭೂತಪೂರ್ವ ಬೇಡಿಕೆ ವ್ಯಕ್ತವಾಯಿತು.



ಕೆಂಪೇಗೌಡ ಜಯಂತಿ ಅಂಗವಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ವಿಧಾನಸೌಧದ ಮುಂಭಾಗದಲ್ಲಿರುವ ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿದರು. ಈ ವೇಳೆ ಸಚಿವ ಕೆ.ಎಚ್ ಮುನಿಯಪ್ಪ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೇರಿದಂತೆ ಇನ್ನಿತರರಿದ್ದರು.

ಕೆಂಪೇಗೌಡರ ಹಾದಿಯಲ್ಲೇ ನಡೆಯೋಣ: ಡಿ.ಕೆ. ಶಿವಕುಮಾರ್

ವಿಶ್ವಮಾನವರಾಗಿ ಬೆಳೆದ ಕೆಂಪೇಗೌಡ

ಬೆಂಗಳೂರು: ಕೆಂಪೇಗೌಡರು ಹುಟ್ಟಿದ್ದು ಒಕ್ಕಲಿಗನಾಗಿ ಬೆಳೆದಿದ್ದು ವಿಶ್ವಮಾನವನಾಗಿ. ಇದನ್ನು ಯಾರೂ ಸಹ ಮರೆಯಬಾರದು. ಈ ಹಾದಿಯಲ್ಲಿಯೇ ನಾವೆಲ್ಲರೂ ನಡೆಯಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕರೆ ನೀಡಿದರು. ಯಲಹಂಕದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಒಕ್ಕಲಿಗರ ಸಮಿತಿ ಶನಿವಾರ ಆಯೋಜಿಸಿದ್ದ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿದರು. ಇಡೀ ವಿಶ್ವ ಬೆಂಗಳೂರನ್ನು ನೋಡುತ್ತಿದೆ. ಈ ನಗರ ನಿರ್ಮಾಣ ಮಾಡುವಾಗ ಇದು ಇಷ್ಟು ದೊಡ್ಡಮಟ್ಟಕ್ಕೆ ಬೆಳೆಯುತ್ತದೆ ಎನ್ನುವುದು ಅವರಿಗೆ ಗೊತ್ತಿರಲಿಲ್ಲ. ಆದರೆ ಅವರ ದೂರದೃಷ್ಟಿ ಇಲ್ಲಿ ಕೆಲಸ ಮಾಡಿದೆ ಎಂದರು.



ನಗರವು ವರ್ಟಿಕಲ್ ಬೆಳವಣಿಗೆಗೆ ಚಿಂತನೆ

ಈ ನಗರಕ್ಕೆ ಬರುವವರನ್ನು ನಾವು ತಡೆಯಲು ಸಾಧ್ಯವಿಲ್ಲ. ಆದಕ್ಕೆ ವರ್ಟಿಕಲ್ ಬೆಳವಣಿಗೆ ಬಗ್ಗೆ ನಾನು ಆಲೋಚನೆ ಮಾಡುತ್ತಿದ್ದೇನೆ. ನಗರದ ಆಸ್ತಿ ಮಾಲೀಕರ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ಇ-ಖಾತ ಮೂಲಕ ಭೂ ಗ್ಯಾರಂಟಿ ನೀಡಲಾಗಿದೆ. ಈ ನಗರಕ್ಕೆ ಬಂದು ಕಷ್ಟ ಪಟ್ಟು ಆಸ್ತಿ ಸಂಪಾದಿಸಿದ್ದಾರೆ ಅವರ ಪರವಾಗಿ ನಮ್ಮ ಸರ್ಕಾರ ನಿಂತಿದೆ. ಬಿ ಖಾತೆಯಿಂದ ಎ ಖಾತೆ ಮಾಡಿಕೊಡಲಾಗುತ್ತಿದೆ. ಕಷ್ಟಕಟ್ಟು ಆಸ್ತಿ ಸಂಪಾದಿಸಿದವರ ಪರವಾಗಿ ನಮ್ಮ ಸರ್ಕಾರವಿದೆ ಎಂದರು.

ನಗರದ ಅಭಿವೃದ್ಧಿಗೆ 1.25 ಲಕ್ಷ ಕೋಟಿ ರೂ.ಯೋಜನೆ

ನಗರದ ಅಭಿವೃದ್ಧಿಗೆ 1.25 ಲಕ್ಷ ಕೋಟಿ ರೂ.ಗಳ ಕಾರ್ಯಕ್ರಮ ರೂಪಿಸಿದ್ದೇನೆ. ಕೃಷ್ಣ ಬೈರೇಗೌಡರು ವಿಮಾನ ನಿಲ್ದಾಣ ರಸ್ತೆಯಲ್ಲೇ ಬೆಂಗಳೂರು ಉತ್ತರದ ಕಚೇರಿಯನ್ನು ಬಹಳ ವಿಜೃಂಭಣೆಯಿಂದ ಕಟ್ಟಬೇಕು ಎಂದು ಜಾಗವನ್ನು ನಿಗದಿ ಮಾಡಿದ್ದಾರೆ. ಅದನ್ನೂ ಆದಷ್ಟು ಬೇಗನೇ ಕೈಗೊಳ್ಳಲಾಗುವುದು ಎಂದರು.

ಒಕ್ಕಲಿಗರ ಸಂಘಕ್ಕೆ ರಿಯಾಯಿತಿ ದರದಲ್ಲಿ ಕೆಎಚ್‌ಬಿ ನಿವೇಶನ

ಕೆಎಚ್‌ಬಿಯಿಂದ ಬೆಂಗಳೂರು ಉತ್ತರ ತಾಲ್ಲೂಕು ಒಕ್ಕಲಿಗರ ಸಂಘಕ್ಕೆ ನೀಡಿರುವ ನಿವೇಶನಕ್ಕೆ 3.5 ಕೋಟಿ ಕಟ್ಟಬೇಕು ಎಂದು ಹೇಳಲಾಗಿತ್ತು. ಇದರ ಬಗ್ಗೆ ಸಂಸದ ಸುಧಾಕರ್ ಅವರು, ಮಾಜಿ ಶಾಸಕರಾದ ಗಂಟಿಗಾನಹಳ್ಳಿ ಕೃಷ್ಣಪ್ಪ ಅವರು ದರ ಕಡಿಮೆಗೆ ಮನವಿ ಮಾಡಿದ್ದಾರೆ. ಎಲ್ಲರ ಮನವಿಯಂತೆ ಈ ಜಾಗಕ್ಕೆ ಶೇ. 10 ರಷ್ಟು ದರ ನಿಗದಿ ಮಾಡಲಾಗುವುದು ಎಂದು ವೇದಿಕೆಯಲ್ಲೇ ಸಿಎಂ ಅವರು ರಿಯಾಯಿತಿ ಘೋಷಣೆ ಮಾಡಿದರು.



ಬರಗಾಲ ಎದುರಿಸೋಣ

ಕಳೆದ ಮೂರು ವರ್ಷಗಳಿಂದ ಉತ್ತಮವಾಗಿ ಮಳೆ ಬಂದಿತ್ತು. ಆದರೆ ಈ ವರ್ಷ ಇಡೀ ದೇಶದಲ್ಲಿ ಬರಗಾಲದ ಲಕ್ಷಣವಿದೆ. ನಾವೆಲ್ಲರೂ ಸೇರಿ ಬರಗಾಲ ಎದುರಿಸಬೇಕು. ರೈತರನ್ನು ಉಳಿಸಬೇಕು ಎಂದು ತಿಳಿಸಿದರು. ತುಂಗಭದ್ರಾ ಅಣೆಕಟ್ಟು ಉಳಿಸಲು ಮೂರು ರಾಜ್ಯದ ಮುಖ್ಯಮಂತ್ರಿಗಳು ಸೇರಿ ಕೇಂದ್ರ ಜಲಶಕ್ತಿ ಸಚಿವರ ಸಮ್ಮುಖದಲ್ಲಿ ತೀರ್ಮಾನ ಮಾಡಿದ್ದೇವೆ ಎಂದರು. ಈ ಹಿಂದೆ ಇಂದಿರಾಗಾಂಧಿ ಅವರ ನೇತೃತ್ವದಲ್ಲಿ ಕಾವೇರಿ ಕುಡಿಯುವ ನೀರಿನ ಬಗ್ಗೆ ತೀರ್ಮಾನ ಮಾಡಲಾಗಿತ್ತು. ಅದೇ ರೀತಿ ಕೇಂದ್ರ ಜಲಶಕ್ತಿ ಸಚಿವರ ನೇತೃತ್ವದಲ್ಲಿ ನಾನು, ಚಂದ್ರಬಾಬು ನಾಯ್ಡು ಹಾಗೂ ರೇವಂತ್ ರೆಡ್ಡಿ ಮೂವರು ಸೇರಿ ಒಂದು ಒಪ್ಪಂದಕ್ಕೆ ಬಂದಿದ್ದೇವೆ. ಈ ನೆಲ ಜಲಕ್ಕಾಗಿ ನಾವುಗಳೇ ಸಂಘರ್ಷ ಮಾಡಿಕೊಳ್ಳಬಾರದು ಎಂದು ತೀರ್ಮಾನಿಸಿದ್ದೇವೆ ಎಂದು ಸಿಎಂ ಡಿ.ಕೆ.ಶಿವಕುಮಾರ ತಿಳಿಸಿದರು.

ಒಡ್ಯ ಶಾಲಾ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿ ವಿತರಣೆ

ನಿಡ್ಪಳ್ಳಿ: ಒಡ್ಯದ ಸರಕಾರಿ ಉನ್ನತ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಹಾಗೂ ಅಂಗನವಾಡಿಯ ಎಲ್ಲಾ ಪುಟಾಣಿಗಳಿಗೆ ವಿವೇಕ ಹೈಸ್ಕೂಲ್ ಬಳಗ–2002 ಕೋಟ, ಉಡುಪಿ ಇವರ ವತಿಯಿಂದ ಬರೆಯುವ ಪುಸ್ತಕ ಹಾಗೂ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಈ ಸಂದರ್ಭ ಗ್ರೂಪ್‌ನ ಮುಖ್ಯಸ್ಥ ಪ್ರವೀಣ್ ಶುಭ ಹಾರೈಸಿದರು. ಶಾಲೆಯ ಮುಖ್ಯ ಗುರು ಜನಾರ್ದನ ಅಲ್ಜಾರು ಪ್ರಾಸ್ತಾವಿಸಿದರು. ಎಸ್.ಡಿ.ಎಂ.ಸಿ. ಅಧ್ಯಕ್ಷೆ ಪ್ರೇಮ ಪಡ್ಯಂಬೆಟ್ಟು, ಮುಖ್ಯ ಅತಿಥಿ ಭರತ್ ಪಡುಬಿದ್ರಿ ಉಪಸ್ಥಿತರಿದ್ದರು. ಶಿಕ್ಷಕಿ ದಿವ್ಯಾ ಪಡುಬಿದ್ರಿ ವಂದಿಸಿದರು. ಶಿಕ್ಷಕಿ ಸ್ವರ್ಣಲತಾ ಕಾರ್ಯಕ್ರಮ ನಿರ್ವಹಿಸಿದರು.

ಕಿರುಸುದ್ದಿ

ಡಾ. ಟಿ.ಎಂ.ಎ. ಪೈ ಪಾಲಿಟೆಕ್ನಿಕ್: ಪ್ರವೇಶ ಪ್ರಕ್ರಿಯೆ

ಉಡುಪಿ: ಮಣಿಪಾಲದ ಡಾ. ಟಿ.ಎಂ.ಎ. ಪೈ ಪಾಲಿಟೆಕ್ನಿಕ್‌ನಲ್ಲಿ 2026– 27ನೇ ಸಾಲಿನ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಾತಿ ಪ್ರಕ್ರಿಯೆ ಮುಂದುವರಿದಿದ್ದು, ಪ್ರಥಮ ವರ್ಷದ ಡಿಪ್ಲೊಮಾ ಕೋರ್ಸ್‌ಗಳಾದ ಆಟೋಮೊಬೈಲ್ ಇಂಜಿನಿಯರಿಂಗ್, ಸಿವಿಲ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಕ್ಲೌಡ್ ಕಂಪ್ಯೂಟಿಂಗ್ ಮತ್ತು ಬಿಗ್ ಡೇಟಾ, ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಮೆಕಾನಿಕಲ್ ಇಂಜಿನಿಯರಿಂಗ್, ಮೆಕಾಟ್ರಾನಿಕ್ಸ್ ಇಂಜಿನಿಯರಿಂಗ್ ಹಾಗೂ ಪ್ರಿಂಟಿಂಗ್ ತಂತ್ರಜ್ಞಾನ ವಿಭಾಗಗಳಲ್ಲಿ ಕೆಲವೇ ಸೀಟುಗಳು ಉಳಿದಿವೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರಥಮ ವರ್ಷದ ಡಿಪ್ಲೊಮಾ ಪ್ರವೇಶಕ್ಕೆ ಅರ್ಹರಾಗಿರುತ್ತಾರೆ. ಹಾಗೆಯೇ, 2ನೇ ಪಿಯುಸಿ (ವಿಜ್ಞಾನ ವಿಭಾಗ) ಅಥವಾ ಐಟಿಐ ಉತ್ತೀರ್ಣರಾದ ವಿದ್ಯಾರ್ಥಿಗಳು ಲ್ಯಾಟರಲ್ ಎಂಟ್ರಿ ಮೂಲಕ ನೇರವಾಗಿ ದ್ವಿತೀಯ ವರ್ಷದ ಡಿಪ್ಲೊಮಾ ಪ್ರವೇಶ ಪಡೆಯಬಹುದು. ಆಸಕ್ತ ವಿದ್ಯಾರ್ಥಿಗಳು ಹಾಗೂ ಪೋಷಕರು ಹೆಚ್ಚಿನ ಮಾಹಿತಿಗಾಗಿ ಡಾ. ಟಿ.ಎಂ.ಎ. ಪೈ ಪಾಲಿಟೆಕ್ನಿಕ್, ಮಣಿಪಾಲವನ್ನು ಸಂಪರ್ಕಿಸಿ. ಹೆಚ್ಚಿನ ಮಾಹಿತಿಗಾಗಿ 98447 29291, 94805 75730 ಹಾಗೂ 94807 32223 ಸಂಖ್ಯೆಗೆ ಕರೆ ಮಾಡಬಹುದು.

ನಿರ್ಮಾಣ ಹಂತದ ಚರಂಡಿಗೆ ಬಿದ್ದ ಪಿಕ್‌ಅಪ್ ವಾಹನ

ಮಂಜೇಶ್ವರ: ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆ ಬದಿಯ ಚರಂಡಿಗೆ ಪಿಕ್‌ಅಪ್ ವಾಹನ ಮಗುಚಿ ಬಿದ್ದಿದ್ದು, ಅದೃಷ್ಟವಶಾತ್ ಅದರಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ. ಉಪ್ಪಳ ಗೇಟ್ ಬಳಿ ಶುಕ್ರವಾರ ರಾತ್ರಿ ಈ ಅಪಘಾತ ನಡೆದಿದೆ. ಇಲ್ಲಿನ ನಿರ್ಮಾಣ ಹಂತದ ಚರಂಡಿಗೆ ಮಂಜೇಶ್ವರದಿಂದ ಉಪ್ಪಳ ಭಾಗಕ್ಕೆ ಆಗಮಿಸುತ್ತಿದ್ದ ವಾಹನ ಬಿದ್ದಿದೆ. ಈ ವಾಹನದಲ್ಲಿ ಕೆಎಸ್‌ಇಬಿ ಇಲಾಖೆಯ ಸಾಮಗ್ರಿಗಳಿದ್ದವು. ಇಲ್ಲಿ ಚರಂಡಿ ನಿರ್ಮಾಣವಾಗುತ್ತಿರುವುದರಿಂದ ರಸ್ತೆ ಬದಿಗೆ ತಡೆ ಹಾಗೂ ಸೂಚನಾ ಫಲಕ ಇರಿಸಲಾಗಿದೆ. ಆದರೆ ಅಪಾರ ವೇಗದಲ್ಲಿ ಬರುವ ವಾಹನಗಳು ಅವುಗಳನ್ನು ಲೆಕ್ಕಿಸದೆ ಮುಂದೆ ಸಾಗುತ್ತಿರುವುದೇ ಅವಘಡಕ್ಕೆ ಕಾರಣವೆನ್ನಲಾಗಿದೆ. ಇದೇ ಭಾಗದಲ್ಲಿ ಇತ್ತೀಚೆಗೆ ಮದ್ಯ ಸಾಗಾಟದ ಕಾರೊಂದು ಅಪಘಾತಕ್ಕೀಡಾಗಿತ್ತು.

ನಿಧನ ಸುದ್ದಿ

ಹಿಲ್ಡಾ ಆಳ್ವ



ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆಯ ಮಾಜಿ ಮೇಯರ್, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕಿಯಾಗಿದ್ದ ಹಿಲ್ಡಾ ಆಳ್ವ (72) ಅವರು ದೀರ್ಘಕಾಲದ ಅಸೌಖ್ಯದಿಂದ ಗುರುವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಮೃತರು ಪತಿ, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ. 1983ರಿಂದ 2001ರ ವರೆಗೆ ಮಂಗಳೂರು ಮಹಾನಗರ ಪಾಲಿಕೆಯ ಸದಸ್ಯೆಯಾಗಿದ್ದ ಅವರು, 1998–99ರಲ್ಲಿ ಮೇಯರ್ ಆಗಿ ಕಾರ್ಯನಿರ್ವಹಿಸಿದ್ದರು. ಪಚ್ಚನಾಡಿ ಮತ್ತು ಕಾವೂರು ವಾರ್ಡ್‌ನ ಸದಸ್ಯೆಯಾಗಿದ್ದರು. ಪಾಲಿಕೆಯ ಎರಡನೇ ಮಹಿಳಾ ಮೇಯರ್ ಎನ್ನುವ ಹೆಸರನ್ನೂ ಪಡೆದಿದ್ದರು. ದ.ಕ. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷೆ ಸಹಿತ, ಪಕ್ಷದಲ್ಲಿಯೂ ವಿವಿಧ ಜವಾಬ್ದಾರಿಗಳನ್ನು ಅವರು ನಿರ್ವಹಿಸಿದ್ದರು. ಬೊಂದೇಲ್ ಚರ್ಚ್ ವ್ಯಾಪ್ತಿಗೆ ಒಳಪಟ್ಟಿದ್ದ ಅವರು ಕಾವೂರಿನಲ್ಲಿ ವಾಸವಿದ್ದರು. ಕೆಥೋಲಿಕ್ ಮಹಿಳಾ ಸಹಕಾರಿ ಸಂಘವನ್ನು ಸ್ಥಾಪಿಸಿ, ಪ್ರಥಮ ಅಧ್ಯಕ್ಷೆಯಾಗಿದ್ದರು. ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಕೊಂಕಣಿ ಅಕಾಡೆಮಿ ಅಧ್ಯಕ್ಷ ಜೋಕೀಂ ಸ್ಟ್ಯಾನಿ ಅಲ್ವಾರಿಸ್, ಮಾಜಿ ಮೇಯರ್ ಶಶಿಧರ ಹೆಗ್ಡೆ ಸೇರಿದಂತೆ ಹಲವರು ಸಂತಾಪ ವ್ಯಕ್ತಪಡಿಸಿದ್ದಾರೆ.

ವೆಂಕಟೇಶ್ ಭಟ್



ವಿಟ್ಲ: ವಿಟ್ಲದ ಹೃದಯ ಭಾಗದಲ್ಲಿರುವ ಹನುಮಾನ್ ಪ್ರಿಂಟರ್ಸ್ (ಜನತಾ ಪವರ್ ಪ್ರೆಸ್) ಮಾಲಕ ವೆಂಕಟೇಶ್ ಭಟ್ (88) ಅವರು ಜೂ.26ರಂದು ಅಸೌಖ್ಯದಿಂದ ಪುತ್ತೂರು ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಮೂಲತಃ ಕೇರಳದ ಕುಂಬಳೆ ಸಮೀಪದ ಗದ್ದೆಮಠ ನಿವಾಸಿ ವೆಂಕಟೇಶ್ ಭಟ್ ಅವರು 1956ರಲ್ಲಿ ವಿಟ್ಲದಲ್ಲಿ ಜನತಾ ಬುಕ್ ಸ್ಟಾಲ್ ಆರಂಭಿಸಿ, ಉದ್ಯಮ ಕ್ಷೇತ್ರಕ್ಕೆ ಕಾಲಿಟ್ಟರು. ಆಗ ಮೊಳೆ ಜೋಡಿಸುವ ಜನತಾ ಪವರ್ ಪ್ರೆಸ್ ಹೆಸರಿನ ಮುದ್ರಣ ಉದ್ಯಮವನ್ನು ಆರಂಭಿಸಿದರು. ಕೆಲ ವರ್ಷಗಳ ಹಿಂದೆ ಹನುಮಾನ್ ಪ್ರಿಂಟರ್ಸ್ ಅಂತ ಹೆಸರು ಬದಲಾಯಿಸಿ ನಡೆಸಿಕೊಂಡು ಬರುತ್ತಿದ್ದರು.



ಬಜಪೆಯಲ್ಲಿ ದುಷ್ಕರ್ಮಿಗಳ ಮಚ್ಚಿನೇಟಿಗೆ ಬಲಿಯಾದ ಹತ್ಯೆಗೀಡಾದ ಹಿಂದೂ ಮುಖಂಡ ದಿ. ಸುಹಾಸ್ ಶೆಟ್ಟಿ ಕಾರಿಂಜ ಅವರ ಸ್ಮರಣಾರ್ಥ ಕಾವಲಮೂಡೂರು ಗ್ರಾಮದ ಪುಲಿಮಜಲುವಿನಲ್ಲಿ ನಿರ್ಮಿಸಲಾದ ನೂತನ ಮನೆ 'ಸುಹಾಸ್ ನಿವಾಸ'ದ ಗೃಹಪ್ರವೇಶ ಕಾರ್ಯಕ್ರಮ ಶನಿವಾರ ನೆರವೇರಿತು. ಗೃಹಪ್ರವೇಶ ಕಾರ್ಯಕ್ರಮದಲ್ಲಿ ಸಂಸದ ಕ್ಯಾ. ಬ್ರಿಜೇಶ್ ಚೌಟ, ಜಿಲ್ಲೆಯ ಶಾಸಕರು, ಬಿಜೆಪಿ ಮುಖಂಡರು, ಸಂಘ ಪರಿವಾರದ ಪ್ರಮುಖರು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಭಾಗವಹಿಸಿ ಶುಭ ಹಾರೈಸಿದರು.

ದೇಶಾದ್ಯಂತ ಕಿಡ್ನಿ ಕಸಿ ಪ್ರಕ್ರಿಯೆ ಫಲಿತಾಂಶಗಳ ಬಹಿರಂಗಕ್ಕೆ ಸೂಚನೆ

ಮಂಗಳೂರು: ದೇಶದಲ್ಲಿ ಮೂತ್ರಪಿಂಡ (ಕಿಡ್ನಿ) ಸೇರಿದಂತೆ ಅಂಗಾಂಗ ಕಸಿ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆ ಮತ್ತು ಆಸ್ಪತ್ರೆಗಳ ಹೊಣೆಗಾರಿಕೆಯನ್ನು ಹೆಚ್ಚಿಸಲು ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ ಮಹತ್ವದ ಕ್ರಮ ಕೈಗೊಂಡಿದೆ. ದೇಶದ ಎಲ್ಲಾ ನೋಂದಾಯಿತ ಅಂಗಾಂಗ ಕಸಿ ಆಸ್ಪತ್ರೆಗಳು ತಮ್ಮ ವೆಬ್‌ಸೈಟ್‌ಗಳ ಮುಖಪುಟದಲ್ಲಿ ಕಸಿ ಪ್ರಕ್ರಿಯೆಯ ಫಲಿತಾಂಶಗಳ ದತ್ತಾಂಶಗಳನ್ನು ಕಡ್ಡಾಯವಾಗಿ ದಾಖಲು ಮಾಡಬೇಕು ಎಂದು ಕೇಂದ್ರ ಆರೋಗ್ಯ ಇಲಾಖೆ ವ್ಯಾಪ್ತಿಯ ನೋಟೋ ಸಂಸ್ಥೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಅಂಗಾಂಗ ಕಸಿ ಪ್ರಕರಣಗಳಲ್ಲಿ ಪಾರದರ್ಶಕತೆ ತರಲು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಮತ್ತು ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ ನಿರ್ದೇಶಕ ಡಾ. ಅನಿಲ್ ಕುಮಾರ್ ಅವರಿಗೆ ಪತ್ರ ಬರೆದ ಪರಿಣಾಮ ದೇಶದ ಎಲ್ಲಾ ನೋಂದಾಯಿತ ಅಂಗಾಂಗ ಕಸಿ ಆಸ್ಪತ್ರೆಗಳಿಗೆ ಹೊಸ ನಿಯಮ ಅನ್ವಯವಾಗಲಿದೆ. ಡಾ. ಅನಿಲ್ ಕುಮಾರ್ ಅವರು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸೂಕ್ತ ಪ್ರಾಧಿಕಾರಗಳಿಗೆ ಸಂಸದ ಚೌಟ ಅವರ ಪತ್ರ ಉಲ್ಲೇಖಿಸಿ ಈ ಕುರಿತ ಅಧಿಕೃತ ಆದೇಶ ನೀಡಿದ್ದಾರೆ.

ಮಂಗಳೂರಿನ ಆರೋಗ್ಯ ತಜ್ಞರಾದ ಶ್ಯಾಮ್ ಕಾಮತ್ ಮತ್ತು ಡಾ. ಲಿಯೋನೆಲ್ ಡಿಸೋಜ ಅವರು ಸಲ್ಲಿಸಿದ ಸಮಗ್ರ ವರದಿಯೊಂದನ್ನು ಆಧರಿಸಿ ಪತ್ರ ಸಂಸದ ಕ್ಯಾ. ಚೌಟ ಪತ್ರ ಬರೆದಿದ್ದರು. ಅಂಗಾಂಗ ಕಸಿ ಪ್ರಕ್ರಿಯೆಗಳ ನಂತರದ ಮರಣ ಪ್ರಮಾಣ ಮತ್ತು ದೀರ್ಘಕಾಲೀನ ನಿಗಾ ವ್ಯವಸ್ಥೆಯಲ್ಲಿರುವ ನ್ಯೂನತೆಗಳನ್ನು ಈ ವರದಿ ಎತ್ತಿ ತೋರಿಸಿತ್ತು.

ರಾಜ್ಯ ಸರ್ಕಾರಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಸಿ ಆಸ್ಪತ್ರೆಗಳು ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮತ್ತು ರಾಷ್ಟ್ರೀಯ ನೋಂದಣಿಗೆ ಸಕಾಲದಲ್ಲಿ ಸಂಪೂರ್ಣ ದತ್ತಾಂಶ ಸಲ್ಲಿಸುವಂತೆ ನೋಡಿಕೊಳ್ಳಬೇಕು ಎಂದು ನೋಟೋ ಆದೇಶ ನೀಡಿದೆ.

ಅಡಿಕೆ ಸಾಗಾಟ ಕುರಿತು ಗೊಂದಲದ ವಾತಾವರಣ

ಸರಕಾರ ಮಧ್ಯಪ್ರವೇಶಕ್ಕೆ ಆಗ್ರಹ

ಪುತ್ತೂರು: ಭಾರತದ ಅತಿ ದೊಡ್ಡ ಅಡಿಕೆ ಉತ್ಪಾದಕ ರಾಜ್ಯವಾಗಿರುವ ಕರ್ನಾಟಕದಿಂದ ಉತ್ತರ ಭಾರತದ ಹಲವು ರಾಜ್ಯಗಳಿಗೆ ತೆರಳುವ ಅಡಿಕೆಯನ್ನು ಮಹಾರಾಷ್ಟ್ರದ ಆರೋಗ್ಯ ಇಲಾಖೆ ಆಯುಕ್ತರು ಪರಿಶೀಲನೆಯ ನೆಪದಲ್ಲಿ 1000 ಕ್ಕೂ ಅಧಿಕ ಲಾರಿಗಳನ್ನು ತಡೆಹಿಡಿದಿರುವುದು ಮುಖ್ಯವಾಗಿ ಅಡಿಕೆ ಬೆಳೆಗಾರರಲ್ಲಿ ಆತಂಕದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ಕರ್ನಾಟಕ ರಾಜ್ಯ ಸರಕಾರ ತಕ್ಷಣ ಮಧ್ಯ ಪ್ರವೇಶಿಸಿ ನ್ಯಾಯ ಒದಗಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕ (ಸಾಮೂಹಿಕ ನಾಯಕತ್ವ) ಆಗ್ರಹಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದ.ಕ. ಜಿಲ್ಲಾಧ್ಯಕ್ಷ ರೂಪೇಶ್ ರೈ ಅಲಿಮಾರ್, ದ.ಕ. ಜಿಲ್ಲಾಧಿಕಾರಿಯವರು, ಜಿಲ್ಲೆಯ ಶಾಸಕರು, ಸಂಸದರು, ಅಡಿಕೆಗೆ ಸಂಬಂಧಿಸಿದ ಇಲಾಖೆಗಳು, ಸಾಗಾಟ ಯುನಿಟ್, ಎಪಿಎಂಸಿ, ತೆರಿಗೆ ಇಲಾಖೆ, ಅಡಿಕೆ ವರ್ತಕರು ಮೊದಲಾದವರನ್ನೊಳಗೊಂಡು ತಕ್ಷಣ ಸಭೆ ನಡೆಸಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಸುಮಾರು 6.7 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದೆ. ವಾರ್ಷಿಕವಾಗಿ ಸುಮಾರು 10–11 ಲಕ್ಷ ಟನ್ ಅಡಿಕೆ ಉತ್ಪಾದನೆಯಾಗುತ್ತಿದೆ. ಭಾರತದಲ್ಲಿ ಉತ್ಪಾದನೆ ಯಾಗುವ ಅಡಿಕೆ ಮೌಲ್ಯ ಸುಮಾರು ರೂ. 58 ಸಾವಿರ ಕೋಟಿ ಎಂದು ಅಂದಾಜಿಸಲಾಗಿದೆ. ರೈತರು, ಕೂಲಿ ಕಾರ್ಮಿಕರು, ವ್ಯಾಪಾರಿಗಳು, ಸಾಗಾಣೆದಾರರು, ಸಂಸ್ಕರಣೆ ಘಟಕಗಳು ಸೇರಿದಂತೆ ಲಕ್ಷಾಂತರ ಮಂದಿ ಅಡಿಕೆ ಆಧಾರಿತ ಜೀವನ ನಡೆಸುತ್ತಿದ್ದಾರೆ. ದೇಶದ ಸರಿಸುಮಾರು 60 ಲಕ್ಷ ಜನರ ಜೀವನೋಪಾಯ ಅಡಿಕೆ ಕ್ಷೇತ್ರದಿಂದ ಅವಲಂಬಿತವಾಗಿದೆ. ರಾಜ್ಯದಲ್ಲಿ ಉತ್ತರಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಅಡಿಕೆಯೇ ಮುಖ್ಯ ಆದಾಯವಾಗಿರುತ್ತದೆ ಎಂದರು.



▸ 1000 ಕ್ಕೂ ಅಧಿಕ ಲಾರಿಗಳನ್ನು ತಡೆಹಿಡಿದಿರುವುದು ಮುಖ್ಯವಾಗಿ ಅಡಿಕೆ ಬೆಳೆಗಾರರಲ್ಲಿ ಆತಂಕದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ.

▸ ದ.ಕ. ಜಿಲ್ಲಾಡಳಿತದ ಕಡೆಯಿಂದಲೂ ಅಡಿಕೆಗೆ ಸಂಬಂಧಪಡುವ ಎಲ್ಲರ ಜತೆ ಸಭೆ ನಡೆಸಿ ಸಮಸ್ಯೆಗಳನ್ನು ಆಲಿಸಲಿ

ಪ್ರಸ್ತುತ 15–20 ದಿವಸಗಳಿಂದ ಅಡಿಕೆ ಮಾರುಕಟ್ಟೆ ಹಾಗೂ ಸಾಗಾಟದ ಕುರಿತು ಬಹಳಷ್ಟು ಗೊಂದಲಗಳ ವಾತಾವರಣ ನಿರ್ಮಾಣವಾಗಿದೆ. ಮಹಾರಾಷ್ಟ್ರ ಮೂಲಕ ಉತ್ತರಭಾರತದ ಹಲವು ರಾಜ್ಯಕ್ಕೆ ತೆರಳುವ ಅಡಿಕೆಯನ್ನು ಮಹಾರಾಷ್ಟ್ರದ ಆರೋಗ್ಯ ಇಲಾಖಾ ಆಯುಕ್ತರು ಆಹಾರದ ಕಳಪೆ ಮಟ್ಟದ ಪರಿಶೀಲನೆಯ ನೆಪದಲ್ಲಿ 1000ಕ್ಕೂ ಲಾರಿಗಳನ್ನು ತಡೆ ಹಿಡಿದು ಅಡಿಕೆ ಬೆಳೆಗಾರರಲ್ಲಿ ಆತಂಕದ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಈ ಗೊಂದಲಗಳಿಗೆ ರಾಜ್ಯ ಹಾಗೂ ಕೇಂದ್ರ ಸರಕಾರದ ಮಟ್ಟದಲ್ಲಿ ಮಾತುಕತೆ ನಡೆಸಿ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ ಎಂದರು.

ಈಗಾಗಲೇ ಪ್ರತಿಷ್ಠಿತ ಸಹಕಾರ ಸಂಘ ಕ್ಯಾಂಪ್ಕೋ, ರೈತ ಸಂಘಟನೆಗಳು, ವರ್ತಕರು ಗೊಂದಲ ನಿವಾರಣೆಗೆ ಸಂಬಂಧಿಸಿದಂತೆ ಸಂಬಂಧವರಲ್ಲಿ ಮಾತುಕತೆ ನಡೆಸುತ್ತಿದ್ದಾರೆ. ದ.ಕ. ಜಿಲ್ಲಾಡಳಿತದ ಕಡೆಯಿಂದಲೂ ಅಡಿಕೆಗೆ ಸಂಬಂಧಪಡುವ ಎಲ್ಲರ ಜತೆ ಸಭೆ ನಡೆಸಿ ಸಮಸ್ಯೆಗಳನ್ನು ಆಲಿಸಲಿ ಎಂದು ರೂಪೇಶ್ ರೈ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ರೈತ ಸಂಘ ಹಸಿರು ಸೇನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿನೋದ್ ಭಟ್ ಪಾದೆಕಲ್, ಜಿಲ್ಲಾ ಕಾರ್ಯದರ್ಶಿ ಇಬ್ರಾಹಿಂ ಖಲೀಲ್ ಮುಚ್ಚಿರ್ತಡ್ಕ, ಕೋಡಿಂಬಾಡಿ ಗ್ರಾಮ ಸಮಿತಿ ಪ್ರಧಾನ ಕಾರ್ಯದರ್ಶಿ ಕುಮಾರನಾಥ್ ಎಸ್., ಕಾರ್ಯದರ್ಶಿ ಯೋಗೀಶ್ ಎಸ್. ಸಾಮಾನಿ, ಬೆಳ್ಳಿಪ್ಪಾಡಿ ಘಟಕ ಅಧ್ಯಕ್ಷ ಮಾರ್ಷಲ್ ವೇಗಸ್ ಉಪಸ್ಥಿತರಿದ್ದರು.

> ಹೊರ ದೇಶಗಳಿಂದ ಬರುತ್ತಿರುವ ಅಡಿಕೆಗಳಲ್ಲಿ ರಾಸಾಯನಿಕ ಮಿಶ್ರಣ ಇರಬಹುದು. ಆದರೆ, ಇಲ್ಲಿನ ಬೆಳೆಗಾರರು ಗುಣಮಟ್ಟದ ಹಾಗೂ ಔಷಧೀಯ ಅಂಶಗಳನ್ನು ಒಳಗೊಂಡ ಉತ್ತಮ ಅಡಿಕೆಯನ್ನೇ ಪೂರೈಸುತ್ತಾರೆ. ಇಲ್ಲಿನ ಅಡಿಕೆ ಆಗಿಂದಾಗೆ ಮಾರುಕಟ್ಟೆಗೆ ಬರುತ್ತಿದೆ. ಅಷ್ಟಕ್ಕೂ ರಾಸಾಯನಿಕ ಇರುವ ಸಂಶಯವಿದ್ದರೆ ಇಲ್ಲೇ ತಡೆ ಮಾಡಿ ತನಿಖೆ ನಡೆಸಲಿ. ಅವರು, ಕರ್ನಾಟಕ ಸರಕಾರ ಮಹಾರಾಷ್ಟ್ರದ ಜತೆ ಮಾತುಕತೆ ನಡೆಸಿ ಸಾಗಾಟ ಸುಗಮಗೊಳಿಸಲು ಕ್ರಮ ಕೈಗೊಳ್ಳಲಿ.
> ■ ರೂಪೇಶ್ ರೈ ಅಲಿಮಾರ್

ಅವಿವಾಹಿತ ಆತ್ಮಹತ್ಯೆ

ಉಡುಪಿ: ದೀರ್ಘಕಾಲದ ಮೂಲವ್ಯಾಧಿ ಕಾಯಿಲೆಯಿಂದ ಜೀವನದಲ್ಲಿ ಜಿಗುಪ್ಸೆಗೊಂಡಿದ್ದ 55 ವರ್ಷದ ಅವಿವಾಹಿತ ವ್ಯಕ್ತಿಯೊಬ್ಬರು ಗೇರು ಮರದ ಕೊಂಬೆಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಹನೇಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.ಹನೇಹಳ್ಳಿ ಗ್ರಾಮದ ನವಗ್ರಾಮ ಜನತಾ ಕಾಲೋನಿ ನಿವಾಸಿ ವಿಶ್ವನಾಥ (55) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. ಇವರು ಮದುವೆಯಾಗದೆ ತಮ್ಮ ಭಾವ ಕೃಷ್ಣ ಪೂಜಾರಿ ಅವರ ಮನೆಯಲ್ಲಿ ವಾಸವಾಗಿದ್ದರು. ಮೃತ ವಿಶ್ವನಾಥ ಅವರು ಕಳೆದ ಕೆಲವು ಸಮಯದಿಂದ ತೀವ್ರ ಮೂಲವ್ಯಾಧಿ ಕಾಯಿಲೆಯಿಂದ ಬಳಲುತ್ತಿದ್ದರು ಎನ್ನಲಾಗಿದೆ. ಇದೇ ಕಾಯಿಲೆಯ ವಿಚಾರದಲ್ಲಿ ಮನನೊಂದು ಜೀವನದಲ್ಲಿ ಜಿಗುಪ್ಸೆಗೊಂಡಿದ್ದ ಅವರು, ಜೂನ್ 26ರಂದು ಹನೇಹಳ್ಳಿ ಗ್ರಾಮದ ಕಂಬಿಗರ ಕೊಡ್ಲು ಹಾಡಿಯಲ್ಲಿ ಗೇರು ಮರದ ಕೊಂಬೆಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತರ ಭಾವ ಕೃಷ್ಣ ಪೂಜಾರಿ (64) ನೀಡಿದ ಮಾಹಿತಿಯಂತೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂಲ್ಕಿ ರೋಟರಿ ಕ್ಲಬ್‌ಗೆ 'ಪ್ಲಾಟಿನಂ ಪ್ಲಸ್' ಪ್ರಶಸ್ತಿ

ಮೂಲ್ಕಿ: ರೋಟರಿ ಜಿಲ್ಲೆಯಲ್ಲಿ ಅತ್ಯುತ್ತಮ ಸಮಾಜ ಸೇವೆಗಾಗಿ ನೀಡುವ ಪ್ರಶಸ್ತಿಗಳಲ್ಲಿ 'ಪ್ಲಾಟಿನಂ ಪ್ಲಸ್' ಪ್ರಶಸ್ತಿ ಯನ್ನು ಮೂಲ್ಕಿ ರೋಟರಿ ಕ್ಲಬ್‌ಗೆ ನೀಡಲಾಗಿದೆ.

ಮೈಸೂರಿನಲ್ಲಿ ನಡೆದ ರೋಟರಿ ಜಿಲ್ಲಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರೋಟರಿ ಡಿಸ್ಟ್ರಿಕ್ಟ್ ಗವರ್ನರ್ ರಾಮಕೃಷ್ಣ ಪಿ.ಕೆ.ಯವರಿಂದ ಮೂಲ್ಕಿ ರೋಟರಿ ಕ್ಲಬ್ ಅಧ್ಯಕ್ಷರಾದ ಜೇಮ್ಸ್ ಪೀಟರ್ ಡಿಸೋಜಅವರು ಸ್ವೀಕರಿಸಿದರು.

ಈ ಸಂದರ್ಭ ಡಿಜಿಎನ್ ಯಶಸ್ವಿ ಸೋಮಶೇಖರ್, ಪಿಡಿಜಿ ವಿಕ್ರಮ್ ದತ್ತ, ಎಜಿ ರಾಬರ್ಟ್ ಫ್ರಾಂಕ್ಲಿನ್ ರೇಗೊ, ಎಜಿಎನ್ ಜೋಯಲ್ ಹೆರಾಲ್ಡ್ ಡಿಸೋಜ ಮತ್ತು ಪಿಎಜಿ ಡಾ. ಅರವಿಂದ್ ಭಟ್ ಅವರು ಉಪಸ್ಥಿತರಿದ್ದರು.

ಚಿಗುರುಪಾದೆ:ಬಡ ಕುಟುಂಬದ ವ್ಯಕ್ತಿಯ ಅಂತ್ಯಕ್ರಿಯೆ ನೆರವೇರಿಸಿದ ಸೇವಾ ಭಾರತಿ

ಕಾಸರಗೋಡು: ಕಾಯಿಲೆಗೆ ತುತ್ತಾಗಿ ಕಲ್ಲಿಕೋಟೆವೈದ್ಯಕೀಯಕಾಲೇಜುಆಸ್ಪತ್ರೆಯಲ್ಲಿ ಸಾವಿಗೀಡಾದ ಮೀಯಪದವು ಸಮೀಪದ ಚಿಗುರುಪಾದೆ ನಿವಾಸಿ ನಾರಾಯಣ ಅವರ ಮೃತದೇಹದ ಅಂತ್ಯಸಂಸ್ಕಾರವನ್ನು ಸೇವಾ ಭಾರತಿ ನೇತೃತ್ವದಲ್ಲಿ ನಡೆಸಲಾಯಿತು.

ನಾರಾಯಣ ಅವರ ಕುಟುಂಬ ಬಡ ಕುಟುಂಬವಾಗಿದ್ದ ಹಿನ್ನೆಲೆಯಲ್ಲಿ ಅವರ ಅಂತ್ಯಕ್ರಿಯೆಯನ್ನು ಸೇವಾ ಭಾರತಿ ವತಿಯಿಂದ ನೆರವೇರಿಸಲಾಯಿತು.ಸೇವಾ ಭಾರತಿಯ ಪ್ರಮುಖ್ ರಘು ಸಿ.ಚೆರುಗೋಳಿ ಹಾಗೂ ಸೇವಾ ಭಾರತಿ ಪದಾಧಿಕಾರಿಗಳ ನೇತೃತ್ವದಲ್ಲಿ ಅಂತಿಮ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು.

ನಾರಾಯಣ ಅವರನ್ನು ಆಸ್ಪತ್ರೆಗೆ ದಾಖಲಿಸುವಲ್ಲಿ ಸಹಕಾರ ನೀಡಿದ ಸ್ಥಳೀಯ ಜಿ.ಪಂ.ಸದಸ್ಯರೂ ಆಗಿರುವ ಕಾಸರಗೋಡು ಜಿಲ್ಲಾಪಂಚಾಯತ್ ಅಭಿವೃದ್ಧಿ ಸಮಿತಿ ಅಧ್ಯಕ್ಷೆ ಇರ್ಫಾನ ಇಕ್ಬಾಲ್ ಮತ್ತು ಇತರರು ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು.

ಸೇವಾ ಭಾರತಿಯ ಸೇವಾ ಬದ್ಧತೆ

ಸೇವಾಭಾರತಿ ಮಂಗಲ್ಪಾಡಿ ಮಾಡುವ ಹಲವಾರು ಸೇವೆಗಳಲ್ಲಿ ಶವ ಸಂಸ್ಕಾರ ಕೂಡಾ ಒಂದಾಗಿದ್ದು, ಇದುವರೆಗೆ ಕುಂಬಳೆ, ಮಂಜೇಶ್ವರ, ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಬಂದ ಎಲ್ಲಾ ಅನಾಥ ಶವಗಳ ಮಾಹಿತಿಯು ನೇರವಾಗಿ ಸೇವಾ ಭಾರತಿ ಮಂಗಲ್ಪಾಡಿಯ ಕಾರ್ಯಕರ್ತರಿಗೆ ಬರುತ್ತದೆ. ಅದರ ಖರ್ಚು,ವ್ಯವಸ್ಥೆ ಎಲ್ಲವನ್ನೂ ಸೇವಾ ಭಾರತಿಯೇ ವಹಿಸುತ್ತಾ ಬಂದಿದೆ.



ಚೆರುಗೋಳಿ ಹಾಗೂ ಐಲ ಕಡಪ್ಪರದಲ್ಲಿ ಸಾಮಾನ್ಯವಾಗಿ ಶವ ಸಂಸ್ಕಾರ ನಡೆಯುತ್ತದೆ. ಆದರೆ ಸೇವಾ ಭಾರತಿ ಈ ಬಗ್ಗೆ ಇದುವರೆಗೂ ಯಾವುದೇ ಪ್ರಚಾರ, ಫೋಟೋ, ಪತ್ರಿಕೆ ಲೇಖನ,ಟಿ. ವಿ. ನ್ಯೂಸ್ ಗಳನ್ನು ನೀಡದೆ , ನಿಸ್ವಾರ್ಥದಿಂದ ಕರ್ತವ್ಯ ಮತ್ತು ಮಾನವೀಯ ನೆಲೆಯಲ್ಲಿ ಈ ಸೇವೆಯನ್ನು ನೀಡುತ್ತಾ ಬಂದಿದೆ.

ಸೇವಾಶ್ರಮ ದೈಗೋಳಿಯ ಎಲ್ಲಾ ಅನಾಥ ಶವಗಳನ್ನು ಸೇವಾ ಭಾರತಿ ಮಂಗಲ್ಪಾಡಿಯ ಸದಸ್ಯರು ಚೆರುಗೋಳಿಯ ರುದ್ರಭೂಮಿಯಲ್ಲಿ ಸಂಸ್ಕಾರ ಮಾಡುವುದು ದಶಕಗಳಿಂದಲೂ ನಡೆದು ಬಂದಿದೆ. ಇದೇ ರೀತಿ ತೀರಾ ಬಡ ಕುಟುಂಬದ ನಾರಾಯಣ ಚಿಗುರುಪಾದೆ ಅವರ ಅಂತ್ಯಕ್ರಿಯೆಯನ್ನೂ ಸೇವಾ ಭಾರತೀ ಇದೇ ಭಾವ ಮತ್ತು ಸೇವಾ ಬದ್ಧತೆಯಿಂದ ನಡೆಸಿದೆ.ಚಿತೆಗೆ ಕಾಷ್ಠ ಇಡುವುದರಿಂದ ಹಿಡಿದು ಚಿತೆಗೆ ಅಗ್ನಿಸ್ಪರ್ಶ(ಸೇವಾ ಭಾರತೀಯ ಅಧ್ಯಕ್ಷರೇ ಚಿತೆಗೆ ಅಗ್ನಿಸ್ಪರ್ಶಗೈದರು)ದ ವರೆಗೆ ಶವಸಂಸ್ಕಾರದ ಪೂರ್ಣ ವಿಧಿಗಳನ್ನು ಮತ್ತು ವೆಚ್ಚವನ್ನು ಸೇವಾ ಭಾರತಿಯೇ ಭರಿಸಿದೆ.

ಯಾವುದೇ ಪ್ರಚಾರ ಬಯಸದೇ ಮಂಗಲ್ಪಾಡಿ ಸೇವಾ ಭಾರತಿಯು ಇನ್ನು ಮುಂದೆಯೂ ತನ್ನ ಸೇವಾ ಕಾರ್ಯಕ್ರಮವನ್ನು ಮುಂದುವರಿಸುತ್ತದೆ ಎಂದು ಸೇವಾ ಭಾರತಿ ಪದಾಧಿಕಾರಿಗಳು ತಿಳಿಸಿದ್ದಾರೆ.ಈ ನಡುವೆ ನಾರಾಯಣ ಅವರ ಅಂತ್ಯಕ್ರಿಯೆಗೆ ರಾಜಕೀಯ ಬಣ್ಣ ನೀಡುವ ಯತ್ನವೂ ನಡೆದಿರುವುದು ಚರ್ಚೆಗೆ ಕಾರಣವಾಗಿದೆ.

ಸಿಯುಇಟಿನ ಜೀವಶಾಸ್ತ್ರದಲ್ಲಿ 100 ಪರ್ಸೆಂಟೈಲ್

ಎಕ್ಸ್‌ಪರ್ಟ್ ವಿದ್ಯಾರ್ಥಿನಿಯ ರಾಷ್ಟ್ರಮಟ್ಟದ ಸಾಧನೆ



ಮಂಗಳೂರು: ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ)ಯು ಕೇಂದ್ರ ವಿಶ್ವವಿದ್ಯಾಲಯ ಹಾಗೂ ದೇಶದ ಪ್ರಮುಖ ಖಾಸಗಿ ವಿಶ್ವವಿದ್ಯಾಲಯಗಳ ಪದವಿ ಕೋರ್ಸ್‌ನ ಪ್ರವೇಶಕ್ಕಾಗಿ ನಡೆಸಿದ ರಾಷ್ಟ್ರಮಟ್ಟದ ಪ್ರವೇಶ ಪರೀಕ್ಷೆಯಾದ ಕಾಮನ್ ಯೂನಿವರ್ಸಿಟಿ ಪ್ರವೇಶ ಪರೀಕ್ಷೆಯಲ್ಲಿ ಎಕ್ಸ್‌ಪರ್ಟ್‌ನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಅದ್ವಿತೀಯ ಎಂ. ಜೀವಶಾಸ್ತ್ರದಲ್ಲಿ 100 ಪರ್ಸೆಂಟೈಲ್ ಪಡೆದು ರಾಷ್ಟ್ರಮಟ್ಟದ ಸಾಧನೆ ಮಾಡಿದ್ದಾರೆ.

ಉಳಿದಂತೆ ರಸಾಯನಶಾಸ್ತ್ರದಲ್ಲಿ 99.4708415, ಫಿಸಿಕ್ಸ್‌ನಲ್ಲಿ 98.4715435 ಪರ್ಸೆಂಟೈಲ್ ಅಂಕವನ್ನು ಅದ್ವಿತೀಯ ಎಂ. ಪಡೆದಿದ್ದಾರೆ. ಸಮನ್ಯು ಎಸ್. ಶೆಟ್ಟಿ ಅವರು ಭೌತಶಾಸ್ತ್ರದಲ್ಲಿ 99.8861006, ಕೆಮೆಸ್ಟ್ರಿಯಲ್ಲಿ 99.8540253, ಜೀವಶಾಸ್ತ್ರದಲ್ಲಿ 95.8375186, ಇಂಗ್ಲೀಷ್‌ನಲ್ಲಿ 95.2214065, ಮ್ಯಾಥಮೆಟಿಕ್ಸ್‌ನಲ್ಲಿ 93.811691 ಪರ್ಸೆಂಟೈಲ್ ಪಡೆದರೆ, ದಾನ್ಯಾಲ್ ಎ. ಮಣಿಪಾಡಿ ಅವರು ಭೌತಶಾಸ್ತ್ರದಲ್ಲಿ 97.9428184, ಜೀವಶಾಸ್ತ್ರ ದಲ್ಲಿ 97.207995, ಮ್ಯಾಥಮೆಟಿಕ್ಸ್‌ನಲ್ಲಿ 96.4300491, ರಸಾಯನಶಾಸ್ತ್ರದಲ್ಲಿ 92.43828, ಇಂಗ್ಲೀಷ್‌ನಲ್ಲಿ 82.9525978, ಪರ್ಸೆಂಟೈಲ್ ಪಡೆದ್ದಾರೆ. ದೀಕೇಶ್ ಎಂ.ಓ. ಜೀವಶಾಸ್ತ್ರದಲ್ಲಿ 93.7076962, ಎಸ್. ಎನ್. ಹೃತಿಕ್ ರಸಾಯನಶಾಸ್ತ್ರದಲ್ಲಿ 81.0050361 ಪಡೆದು ಉತ್ತಮ ಸಾಧನೆ ತೋರಿದ್ದಾರೆ.

ಈ ಪರೀಕ್ಷೆಯು ಯುನಿವರ್ಸಿಟಿ ಆಫ್ ಡೆಲ್ಲಿ, ಬನಾರಸ್ ಹಿಂದೂ ಯುನಿವರ್ಸಿಟಿ, ಯುನಿವರ್ಸಿಟಿ ಆಫ್ ಹೈದರಾಬಾದ್ ಸೇರಿದಂತೆ ಕೇಂದ್ರದ ಅಧೀನದಲ್ಲಿರುವ ಎಲ್ಲ ಯುನಿವರ್ಸಿಟಿಯೊಂದಿಗೆ ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಪದವಿ ಶಿಕ್ಷಣ ಪಡೆಯುವ ಅವಕಾಶವನ್ನು ಒದಗಿಸುವ ರಾಷ್ಟ್ರೀಯ ಪ್ರವೇಶ ಪರೀಕ್ಷೆಯಾಗಿದೆ. ಪರೀಕ್ಷೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಸಾಧನೆ ಸಂಸ್ಥೆಯ ಶೈಕ್ಷಣಿಕ ಗುಣಮಟ್ಟವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ಸಂಸ್ಥೆಯ ಅಧ್ಯಕ್ಷ ಪ್ರೊ. ನರೇಂದ್ರ ಎಲ್. ನಾಯಕ್ ತಿಳಿಸಿದ್ದಾರೆ.

ಆರಂಭವಾಗಿದೆ 'ಹರ್ಷ ಮಾನ್ಸೂನ್ ಮ್ಯಾಜಿಕ್'

ಉಡುಪಿ: ನಿಮ್ಮ ಕನಸಿನ ಜೀವನಶೈಲಿಗೆ ಮುನ್ನುಡಿಯಾಗಿ ಹರ್ಷ ಮಾನ್ಸೂನ್ ಮ್ಯಾಜಿಕ್ ಆರಂಭಗೊಂಡಿದ್ದು, ನಿಮ್ಮ ನೆಚ್ಚಿನ ಗೃಹೋಪಕರಣಗಳನ್ನು ಕೊಡುಗೆಗಳ ಮಹಾಪೂರದೊಂದಿಗೆ ಮನೆಗೊಯ್ಯಬಹುದು. ಮಳೆಗಾಲದಲ್ಲಿ ಶಾಪಿಂಗ್ ಉತ್ಸಾಹ ಚಿಮ್ಮಿಸುವ 'ಹರ್ಷ ಮಾನ್ಸೂನ್ ಮ್ಯಾಜಿಕ್' ಜೂನ್19ರಿಂದ ಹರ್ಷದ ಎಲ್ಲಾ ಮಳಿಗೆಗಳಲ್ಲಿ ಆರಂಭಗೊಂಡಿದ್ದು, ಜುಲೈ 27ರ ವರೆಗೆ ನಡೆಯಲಿದೆ.

ಮ್ಯಾಜಿಕ್ ಕ್ಯಾಶ್ ಪಡೆಯಿರಿ

ಮಾನ್ಸೂನ್ ಮ್ಯಾಜಿಕ್‌ನ ವಿಶೇಷತೆಯೇ ಸ್ಕ್ರಾಚ್ ಎಂಡ್ ವಿನ್, ಎಲ್‌ಇಡಿ ಟಿವಿ, ವಾಶಿಂಗ್ ಮಶಿನ್, ರೆಫ್ರಿಜರೇಟರ್, ಏರ್ ಕಂಡೀಷನರ್, ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್‌ಸಹಿತ ಆಯ್ದ ಗೃಹೋಪಕರಣಗಳ ಖರೀದಿಯೊಂದಿಗೆ 'ಮ್ಯಾಜಿಕ್ ಕ್ಯಾಶ್' ಯೋಜನೆಯಡಿ ಸ್ಥಳದಲ್ಲೇ ಸ್ಕ್ರಾಚ್ ಮಾಡಿ 10,000ದವರೆಗೆ ಖಚಿತ ಕ್ಯಾಶ್‌ಬ್ಯಾಕ್ ಗೆಲ್ಲುವ ಅವಕಾಶ ನಿಮ್ಮದಾಗಲಿದೆ.

ಇಎಮ್‌ಐ ಹಾಗೂ ಕ್ಯಾಶ್‌ಬ್ಯಾಕ್ ಕೊಡುಗೆಗಳು

ಗ್ರಾಹಕರ ಶಾಪಿಂಗ್‌ಗೆ ಇನ್ನಷ್ಟು ಸಹಕಾರಿ ಯಾಗುವಂತೆ ವಿವಿಧ ಇಎಮ್‌ಐ ಯೋಜನೆ ಮುಖೇನ ತಮಗೆ ಸೂಕ್ತ ಹೊಂದುವ



ಯೋಜನೆಗಳನ್ನು ಆಯ್ಕೆ ಮಾಡಿ ಬಡ್ಡಿರಹಿತ ಸುಲಭ ಕಂತುಗಳಲ್ಲಿ ಪಾವತಿಸುವ ಮೂಲಕ ತಮ್ಮ ನೆಚ್ಚಿನ ವಸ್ತುಗಳನ್ನು ಮನೆಗೊಯ್ಯಬಹುದಾಗಿದೆ. ಇದರ ಜೊತೆಗೆ ಬಜಾಜ್ ಇಎಮ್‌ಐ ಯೋಜನೆಯಡಿ ಖರೀದಿಸಿದಲ್ಲಿ 15,000ದ ವರೆಗಿನ ಕ್ಯಾಶ್‌ಬ್ಯಾಕ್, ಹೆಚ್‌ಡಿಎಫ್‌ಸಿ 12,000ದ ವರೆಗೆ ಇನ್‌ಸ್ಟಂಟ್ ಡಿಸ್ಕೌಂಟ್ ಹಾಗೂ ಎಸ್‌ಬಿಐ ಕಾರ್ಡ್ ಇಎಮ್‌ಐ ಶಾಪಿಂಗ್‌ಗೆ 15,000ದ ವರೆಗೆ ಇನ್‌ಸ್ಟಂಟ್ ಡಿಸ್ಕೌಂಟ್ ದೊರೆಯಲಿದೆ.ಇದರೊಂದಿಗೆ ಹಳೆಯ ಗೃಹೋಪಕರಣಗಳನ್ನು ವಿನಿಮಯಗೊಳಿಸಿ ಹೊಸ ಗೃಹೋಪಕರಣಗಳನ್ನು ಖರೀದಿಸಿ ಹಾಗೂ 10,000 ವರೆಗಿನ ಅಪ್‌ಗ್ರೇಡ್ ಬೋನಸ್ ಪಡೆಯಿರಿ.

> **ಹಲವು ಉಳಿತಾಯ ಕೊಡುಗೆಗಳು**
>
> ಪ್ರತಿಯೊಬ್ಬರ ಅಗತ್ಯಗಳಿಗೆ ಅನುಗುಣವಾದಂತಹ ಲ್ಯಾಪ್‌ಟಾಪ್‌ಗಳ ಸಂಗ್ರಹ ಹರ್ಷದಲ್ಲಿದೆ. ನಿಮ್ಮ ಅನುಕೂಲಕ್ಕೆ ತಕ್ಕಂತಹ ಇಎಮ್‌ಐ ಯೋಜನೆ, 10,000 ವರೆಗಿನ ಇನ್ಸ್ಟಂಟ್ ಡಿಸ್ಕೌಂಟ್, ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ ಖರೀದಿಯೊಂದಿಗೆ 10,000 ವರೆಗೆ ಕ್ಯಾಶ್ ಬ್ಯಾಕ್, ಸ್ಪೀಕರ್, ಕೀಬೋರ್ಡ್, ಮೌಸ್, ಹಾರ್ಡ್‌ಡಿಸ್ಕ್ ಸೇರಿದಂತೆ ವಿವಿಧ ಆಕ್ಸೆಸರೀಸ್ ಮೇಲೆ 50%ವರೆಗಿನ ರಿಯಾಯಿತಿ ಹೀಗೆ ಹಲವು ಯೋಜನೆಗಳು ದೊರೆಯಲಿವೆ. ಹಲವು ಹೊಸ ಫೀಚರ್‌ಗಳೊಂದಿಗೆ ಲಭ್ಯವಿರುವ ಐಫೋನ್, ಸ್ಯಾಮ್‌ಸಂಗ್, ಗೂಗಲ್ ಪಿಕ್ಸೆಲ್ ಎಮ್‌ಐ, ವಿವೋ, ಒಪ್ಪೋ, ರೆಡ್ಮಿ, ಒನ್ ಪ್ಲಸ್, ನಥಿಂಗ್ ಸೇರಿದಂತೆ ಹಲವು ಬ್ರ್ಯಾಂಡ್‌ಗಳ ಸ್ಮಾರ್ಟ್‌ಫೋನ್‌ಗಳು ಹರ್ಷದಲ್ಲಿದೆ. 24 ತಿಂಗಳವರೆಗಿನ ಇಎಮ್‌ಐ ಯೋಜನೆ, ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್‌ಗಳ ಮೇಲೆ 10,000ದ ವರೆಗೆ ಕ್ಯಾಶ್‌ಬ್ಯಾಕ್, 9,000ದ ವರೆಗಿನ ಅಪ್ ಗ್ರೇಡ್ ಬೋನಸ್, ಕಾಂಬಿ ಕೊಡುಗೆಗಳು, ಖಚಿತ ಉಡುಗೊರೆಗಳು, ಪವರ್ ಬ್ಯಾಂಕ್, ಕೇಸ್, ಹೆಡ್‌ಫೋನ್, ಇಯರ್ ಬಡ್ಸ್, ಸ್ಮಾರ್ಟ್‌ವಾಚ್ ಮೇಲೆ ವಿಶೇಷ ಕಾಂಬಿ ಕೊಡುಗೆಗಳು ಸೇರಿದಂತೆ ಹಲವು ಯೋಜನೆಗಳೊಂದಿಗೆ ಖರೀದಿಸಬಹುದು.

ಹೊಸ ತಂತ್ರಜ್ಞಾನದ ಗೃಹೋಪಕರಣಗಳು ಜೊತೆಗೆ ಆಕರ್ಷಕ ಕೊಡುಗೆಗಳು

ನೂತನ ತಂತ್ರಜ್ಞಾನದ ಹೊಚ್ಚ ಹೊಸ ಗೃಹೋಪಕರಣಗಳ ವಿಶಾಲ ಸಂಗ್ರಹವೇ ಹರ್ಷದಲ್ಲಿದ್ದು, ಮಾನ್ಸೂನ್ ಮ್ಯಾಜಿಕ್‌ನ ಲಾಭದಾಯಕ ಕೊಡುಗೆಗಳೊಂದಿಗೆ ಖರೀದಿಸಲು ಇದುವೇ ಸೂಕ್ತ ಸಮಯ. ಮನೆಯಲ್ಲೇ ಫಿಫಾ ವರ್ಲ್ಡ್‌ಕಪ್‌ನ ಅದ್ಭುತ ಅನುಭವ ಪಡೆಯಲು 100 ಸೈಜಿನ ಎಲ್‌ಇಡಿ ಟಿವಿಯನ್ನು ಕೇವಲ 2,66,990 ಖರೀದಿಸಿ, 25,900ರ ಆ್ಯಪಲ್ ವಾಚ್ ಉಚಿತವಾಗಿ ಪಡೆಯಿರಿ. ಎಲ್ಲಾ ಬಗೆಯ ಆಹಾರೋತ್ಪನ್ನಗಳನ್ನು ತಾಜಾತನದೊಂದಿಗೆ ಸಂರಕ್ಷಿಸಲು ಸೈಡ್–ಬೈ–ಸೈಡ್ ಹಾಗೂ ವಿಶಾಲ ಸ್ಥಳಾವಕಾಶವಿರುವ ರೆಫ್ರಿಜರೇಟರ್‌ಗಳನ್ನು 34,990ರ ವರೆಗಿನ ಆಕರ್ಷಕ ಮಾನ್ಸೂನ್ ಮ್ಯಾಜಿಕ್ ಲಾಭಗಳೊಂದಿಗೆ ಖರೀದಿಸಿ. ಸುಲಭವಾಗಿ ಅಡುಗೆಯ ಪಾತ್ರೆಗಳನ್ನು ತೊಳೆಯಲು ಡಿಶ್ ವಾಶರ್ ಖರೀದಿಸಿ, 8 ಇಎಮ್‌ಐಗಳಲ್ಲಿ ನಂತರ ಪಾವತಿಸಿ. ಮಳೆಗಾಲದ ಬಟ್ಟೆ ಒಣಗಿಸುವ ಚಿಂತೆ ದೂರವಾಗಿಸಲು ವಾಶರ್ ಕಮ್ 100% ಡ್ರೈಯರ್ ಖರೀದಿಸಿ, ಕೇವಲ 1,994 ಇಎಮ್‌ಐನಲ್ಲಿ. ಬೇಸಿಗೆಗಾಗಿ ಕಾಯದೇ, ಇಂದೇ ಏರ್ ಕಂಡೀಷನರ್ ಖರೀದಿಸಿ, ಯಾವುದೇ ಮುಂಗಡ ಪಾವತಿಯಿಲ್ಲದೆ.ಶುದ್ಧ ಕುಡಿಯುವ ನೀರಿಗಾಗಿ ವಾಟರ್ ಪ್ಯೂರಿಫೈಯರ್ ಖರೀದಿಸಿ, ಕೆಟಲ್ ಉಚಿತವಾಗಿ ಪಡೆಯಿರಿ.ಮನೆಯ ಒಳಾಂಗಣವನ್ನು ಶುಚಿಯಾಗಿರಿಸುವ ಸಲುವಾಗಿ ಸ್ವಯಂಚಾಲಿತ ರೋಬೋಟಿಕ್ ವ್ಯಾಕ್ಯೂಮ್ ಕ್ಲೀನರ್, ಟವರ್ ವ್ಯಾಕ್ಯೂಮ್ ಕ್ಲೀನರ್, ತಿನಿಸುಗಳನ್ನು ಕಡಿಮೆ ಎಣ್ಣೆ ಅಥವಾ ಎಣ್ಣೆ ಬಳಸದೆ ಕರಿಯುವ ಏರ್ ಫ್ರೈಯರ್, ತಾಜಾತನದ ಜ್ಯೂಸ್ ತಯಾರಿಸಲುವ ಸ್ಲೋ ಜ್ಯೂಸರ್, ಫುಡ್ ಪ್ರೊಸೆಸರ್, ಹೀಗೆ ನಿಮ್ಮ ಜೀವನವನ್ನು ಸುಲಭ ಹಾಗೂ ಸರಳವಾಗಿಸುವ ಹೊಸ ತಂತ್ರಜ್ಞಾನದ ಹಲವು ಗೃಹೋಪಕರಣಗಳು ಹರ್ಷ ಮಾನ್ಸೂನ್ ಮ್ಯಾಜಿಕ್‌ನಲ್ಲಿ ಲಭ್ಯವಿದೆ.

ನಿಮ್ಮ ನೆಚ್ಚಿನ ಅಡುಗೆಯ ಸಾಧನಗಳನ್ನು ಖರೀದಿಸಿ, ಇಎಮ್‌ಐನಲ್ಲಿ ಪಾವತಿಸಿ

ಕೇವಲ ಎಲ್‌ಇಡಿ ಟಿವಿ, ಏಸಿ, ರೆಫ್ರಿಜರೇಟರ್, ವಾಶಿಂಗ್ ಮಶಿನ್ ಹಾಗೂ ಇನ್ನಿತರ ಗೃಹೋಪಕರಣಗಳು ಮಾತ್ರವಲ್ಲದೇ, ಎಲ್ಲಾ ರೀತಿಯ ಅಡುಗೆಯ ಸಾಧನಗಳು ಜೊತೆಗೆ ಇಲೆಕ್ಟ್ರಿಕ್ ಉಪಕರಣಗಳನ್ನೂ ಸಹ ನಿಮ್ಮ ಆಯ್ಕೆಯ ಇಎಮ್‌ಐ ಯೋಜನೆಯಡಿ ಖರೀದಿಸಬಹುದಾಗಿದೆ. ವಿಶಾಲ ಶ್ರೇಣಿಯ ಮಿಕ್ಸರ್, ಗ್ರೈಂಡರ್, ಪ್ರೆಶರ್ ಕುಕ್ಕರ್, ಗ್ಯಾಸ್ ಸ್ಟವ್, ಚಿಮ್ನಿ, ಹಾಬ್, ವಾಟರ್ ಹೀಟರ್, ವಾಟರ್ ಪ್ಯೂರಿಫೈಯರ್, ಕುಕ್‌ವೇರ್ ಸೆಟ್, ಫ್ಯಾನ್, ಕೂಲರ್, ಐರನ್ ಬಾಕ್ಸ್, ಕೆಟಲ್, ಓಟಿಜಿ, ಹಲವು ಬಗೆಯ ಪರ್ಸನಲ್ ಹಾಗೂ ಬ್ಯೂಟಿ ಕೇರ್ ಉತ್ಪನ್ನಗಳು ಸೇರಿದಂತೆ ನಿಮ್ಮ ಆವಶ್ಯಕತೆಯ ಒಂದಕ್ಕಿಂತ ಹೆಚ್ಚು ಉತ್ಪನ್ನಗಳನ್ನು ನಿಮಗೆ ಸರಿಹೊಂದುವ ಇಎಮ್‌ಐ ಯೋಜನೆಯಡಿ ಖರೀದಿಸಬಹುದಾಗಿದೆ.

ನಿಮಗಿಷ್ಟವಾದ ವಸ್ತು–ವೈವಿಧ್ಯಗಳನ್ನು ಖರೀದಿಸಲು ಇದುವೇ ಸರಿಯಾದ ಸಮಯ. ಇಂದೇ ಸಮೀಪದ 'ಹರ್ಷ' ಮಳಿಗೆಗೆ ಭೇಟಿ ನೀಡಿ, 'ಮಾನ್ಸೂನ್ ಮ್ಯಾಜಿಕ್'ನ ಹತ್ತು–ಹಲವು ಆಕರ್ಷಕ ಕೊಡುಗೆಗಳೊಂದಿಗೆ ಶಾಪಿಂಗ್ ಮಾಡಿ.

ಭಾನುವಾರದ ಪಂದ್ಯ

ಕೊಲಂಬಿಯಾ-ಪೋರ್ಚುಗಲ್ (ಬೆಳಗ್ಗೆ 5:00)
ಡಿಆರ್ ಕಾಂಗೊ-ಉಜ್ಬೇಕಿಸ್ತಾನ (ಬೆಳಗ್ಗೆ 5:00)
ಅಲ್ಜೀರಿಯಾ-ಆಸ್ಟ್ರಿಯಾ (ಬೆಳಗ್ಗೆ 7:30)
ಜಾರ್ಡನ್-ಅರ್ಜೆಂಟಿನಾ (ಬೆಳಗ್ಗೆ 7:30)
ದ.ಆಫ್ರಿಕಾ-ಕೆನಡಾ(ನಾಕೌಟ್) (ಮಧ್ಯರಾತ್ರಿ 12:30)

ಕಿರು ಸುದ್ದಿ

ಕಿರಿಯರ ಏಷ್ಯನ್ ಕುಸ್ತಿ: ಭಾರತಕ್ಕೆ 5 ಪದಕ

ಹೊಸದಿಲ್ಲಿ: 15 ವರ್ಷದೊಳಗಿನವರ ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನ ಮೊದಲ ದಿನದಂದು ಭಾರತದ ಗ್ರೀಕೋ-ರೋಮನ್ ತಂಡ ಐದು ಪದಕಗಳನ್ನು ಗೆದ್ದುಕೊಂಡಿತು, ಭಾರತೀಯ ಕುಸ್ತಿಪಟು ದರ್ಪಣ್ ರಾಜು ಚೌಧರಿ ಚಿನ್ನದ ಪದಕ ಗೆದ್ದರು. 62 ಕೆಜಿ ತೂಕ ವಿಭಾಗದಲ್ಲಿ ಸ್ಪರ್ಧಿಸಿದ ದರ್ಪಣ್ ಚೌಧರಿ ಫೈನಲ್‌ನಲ್ಲಿ ತಜಿಕಿಸ್ತಾನದ ಅಮ್ರಿದಿನ್ ಕುರ್ಬೊನೊವ್ ವಿರುದ್ಧ 5-0 ಅಂತರದ ಸುಲಭ ಜಯ ಸಾಧಿಸಿ ಭಾರತಕ್ಕೆ ದಿನದ ಏಕೈಕ ಚಿನ್ನ ತಂದುಕೊಟ್ಟರು. ಭಾರತ ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕವನ್ನೂ ಗೆದ್ದಿತು. 75 ಕೆಜಿ ವಿಭಾಗದಲ್ಲಿ, ಗೌರವ್ ಗುಂಡಾಜಿ ಪಾಟೀಲ್ ಅಗ್ರ ಬಹುಮಾನವನ್ನು ತಪ್ಪಿಸಿಕೊಂಡರು. ಯಶ್ (48 ಕೆಜಿ) ಮತ್ತು ಜತಿನ್ (85 ಕೆಜಿ) ಕರ್ಘಾಕಿಸ್ತಾನದ ರೋಲನ್ ಕಿಮ್ ಮತ್ತು ಯೆರಾಲಿ ಮುರಾಟೋವ್ ವಿರುದ್ಧ 0-8 ಅಂತರದಿಂದ ಸೋತ ನಂತರ ಬೆಳ್ಳಿ ಪದಕಗಳಿಗೆ ತೃಪ್ತಿಪಟ್ಟರು.

ಅಂಜು ದಾಖಲೆ ಮುರಿದ ಆನ್ಸಿ

ಭುವನೇಶ್ವರ್: ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನಡೆದ 65ನೇ ರಾಷ್ಟ್ರೀಯ ಅಂತರ-ರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಅಂಜು ಬಾಬಿ ಜಾರ್ಜ್ ಅವರ ಮಹಿಳಾ ಲಾಂಗ್ ಜಂಪ್ ರಾಷ್ಟ್ರೀಯ ದಾಖಲೆಯನ್ನು ಕೇರಳದ ಆನ್ಸಿ ಸೋಜನ್ ಮುರಿದರು. 25 ವರ್ಷದ ಆನ್ಸಿ ಸೋಜನ್ 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಸ್ಥಾಪಿಸಲಾದ ಅಂಜು ಅವರ 6.83 ಮೀಟರ್ ದೂರವನ್ನು +0.7 ಮೀ/ಸೆಕೆಂಡ್‌ನೊಂದಿಗೆ 6.88 ಮೀಟರ್ ಜಿಗಿದು ಉತ್ತಮ ಸಾಧನೆ ಮಾಡಿದರು. ಈ ದಾಖಲೆ ಸುಮಾರು 22 ವರ್ಷಗಳ ಕಾಲ ಹಾಗೆಯೇ ಇತ್ತು.

ಭಾರತಕ್ಕೆ ಭರ್ಜರಿ ಮುನ್ನಡೆ

ಗಾಲೆ: ಶ್ರೀಲಂಕಾ ತಂಡವನ್ನು 330 ರನ್‌ಗಳಿಗೆ ಆಲೌಟ್ ಮಾಡಿರುವ ಭಾರತ ಎ ತಂಡವು ದೊಡ್ಡ ಮುನ್ನಡೆ ಸಾಧಿಸಿದ್ದು, ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಗೆಲುವಿನತ್ತ ಸಾಗಿದೆ. ಬ್ಯಾಟಿಂಗ್ ಆಯ್ದುಕೊಂಡಿದ್ದ ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ 452 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಬಳಿಕ ಶ್ರೀಲಂಕಾ ತಂಡವನ್ನು 330 ರನ್‌ಗಳಿಗೆ ಆಲೌಟ್ ಮಾಡಿ ಮೊದಲ ಇನ್ನಿಂಗ್ಸ್‌ನಲ್ಲಿ 122 ರನ್ ಮುನ್ನಡೆ ಸಾಧಿಸಿತು. ಎರಡನೇ ಇನ್ನಿಂಗ್ಸ್ ಬ್ಯಾಟಿಂಗ್ ಆರಂಭಿಸಿರುವ ಭಾರತ ಯಾವುದೇ ವಿಕೆಟ್ ಕಳೆದುಕೊಳ್ಳದೆ 48 ರನ್ ಗಳಿಸಿದೆ. ಶ್ರೀಲಂಕಾ ಎ ತಂಡವನ್ನು ಕಟ್ಟಿ ಹಾಕುವಲ್ಲಿ ಆಕಿಬ್ ನಬಿ ಮಹತ್ವದ ಪಾತ್ರ ವಹಿಸಿದರು. 58 ರನ್ ನೀಡಿ 4 ವಿಕೆಟ್ ಕಿತ್ತರು. ಯಶ್, ಹರ್ಷ 2 ವಿಕೆಟ್ ಕಿತ್ತರು.

ನೆದರ್ಲೆಂಡ್ಸ್‌ಗೆ ಸೋಲು

ಬ್ರಿಸ್ಟಲ್: ಗುಲ್ ಫಿರೋಜಾ ಅವರ 62ರನ್‌ಗಳ ಬ್ಯಾಟಿಂಗ್ ಮತ್ತು ಫಾತಿಮಾ ಸನಾ, ಆಯೇಶಾ ಅವರ ಪ್ರಖರ ಬೌಲಿಂಗ್ ದಾಳಿಯೊಂದಿಗೆ ಪಾಕಿಸ್ತಾನ ನೆದರ್ಲೆಂಡ್ಸ್ ಮಹಿಳೆಯರ ತಂಡದೊಂದಿಗೆ 37 ರನ್‌ಗಳ ಗೆಲುವು ಸಾಧಿಸಿದೆ. ಪಂದ್ಯಾವಳಿಯಿಂದ ಬಹುತೇಕ ಹೊರಬಿದ್ದಿರುವ ಪಾಕಿಸ್ತಾನ ಈ ಗೆಲುವಿನೊಂದಿಗೆ ಅಭಿಯಾನ ಮುಗಿಸಿದೆ. ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಪಾಕ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 126 ರನ್ ಗಳಿಸಿತು. ಗುಲ್ 52 ಬಾಲ್‌ಗಳಲ್ಲಿ ಔಟಾಗದೇ 62 ರನ್ ಗಳಿಸಿದರು. ನೆದರ್ಲೆಂಡ್ಸ್ ಪರ ಇರಿಸ್ 19 ರನ್‌ಗೆ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ 86 ರನ್‌ಗಳಿಗೆ ಆಲೌಟ್ ಆಯಿತು. ಲೀಡ್ 30 ರನ್ ಗಳಿಸಿದರು. ಪಾಕ್ ಪರ ಫಾತೀಮಾ ಮತ್ತು ಆಯೇಶಾ ತಲಾ 2 ವಿಕೆಟ್ ಕಿತ್ತರು.

ಶ್ರೀಲಂಕಾಗೆ ಗೆಲುವು

ಬ್ರಿಸ್ಟಾಲ್: ಸಾಂಘಿಕ ಬ್ಯಾಟಿಂಗ್ ಮತ್ತು ಕರಾರುವಾಕ್ ಬೌಲಿಂಗ್ ದಾಳಿ ಸಂಘಟಿಸಿದ ಶ್ರೀಲಂಕಾ ಮಹಿಳೆಯರ ತಂಡವು ಟಿ20 ವಿಶ್ವಕಪ್‌ನಲ್ಲಿ ಸ್ಕಾಟ್ಲೆಂಡ್ ವಿರುದ್ಧ ಗೆಲುವು ಸಾಧಿಸಿ ಸೆಮಿ ಆಸೆ ಜೀವಂತವಾಗಿರಿಸಿದೆ. ಶುಕ್ರವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಸ್ಕಾಟ್ಲೆಂಡ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 151 ರನ್ ಗಳಿಸಿತು. ಬ್ರೇಸ್ 47 ರನ್ ಗಳಿಸಿದರು. ಲಂಕಾ ಪರ ಮಿಥಾಲಿ 2, ಸುಗಂಧಿಕಾ ಮತ್ತು ಕವೀಶಾ ತಲಾ 1 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಶ್ರೀಲಂಕಾ 19.5 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 157 ರನ್ ಗಳಿಸಿತು. ಚಮಾರಿ 33, ಹರ್ಷಿತಾ 27 ರನ್ ಗಳಿಸಿದರು. ಮೂರು ಆಟಗಾರ್ತಿಯರು 20ಕ್ಕೂ ಅಧಿಕ ಸ್ಕೋರ್ ಮಾಡಿದ್ದರಿಂದ ಶ್ರೀಲಂಕಾ ಗೆಲುವು ಸಾಧಿಸಿದೆ.

ಮೊದಲ ವಿಶ್ವಕಪ್‌ನಲ್ಲೇ ನಾಕೌಟ್‌ಗೆ | ಅಜೇಯ ತಂಡವಾಗಿ ದಾಖಲೆ

ಕೇಪ್ ವರ್ದೆ ಕಮಾಲ್!

ಹ್ಯೂಸ್ಟನ್: ಫುಟ್‌ಬಾಲ್ ಲೋಕದಲ್ಲಿ ಮಿಂಚಿ ಹವಾ ಎಬ್ಬಿಸಿರುವ ದ್ವೀಪ ಕೇಪ್ ವರ್ದೆ ವಿಶ್ವವೇ ಎಂದೆಂದಿಗು ನೆನಪಿಡುವ ಸಾಧನೆಯೊಂದನ್ನು ಮಾಡಿದೆ. ಫಿಫಾ ವಿಶ್ವಕಪ್‌ನಲ್ಲಿ ಚೊಚ್ಚಲ ಬಾರಿಗೆ ಆಡುತ್ತಿರುವ ಕೇಪ್ ವರ್ದೆ, ಮತ್ತೊಮ್ಮೆ ಅಚ್ಚರಿ ಮೂಡಿಸಿ ನಾಕೌಟ್ ಹಂತಕ್ಕೇರಿದೆ. ಶುಕ್ರವಾರ ನಡೆದ ತನ್ನ ಕೊನೆಯ ಗುಂಪು ಹಂತದ ಪಂದ್ಯದಲ್ಲಿ ಸೌದಿ ಅರೇಬಿಯಾದ ವಿರುದ್ಧ 0-0 ಗೋಲುರಹಿತ ಡ್ರಾ ಸಾಧಿಸಿದ ಕೇಪ್ ವರ್ದೆ, ಮೂರು ಪಂದ್ಯಗಳಲ್ಲೂ ಅಜೇಯವಾಗಿ ಗುಂಪು ಹಂತವನ್ನು ಮುಗಿಸಿತು. ಆ ಮೂಲಕ ಜಗತ್ತಿನ ಕೆಲವೇ ರಾಷ್ಟ್ರಗಳು ಮಾಡಿರುವ ದಾಖಲೆಯೊಂದನ್ನು ಮಾಡಿತು.

ಸ್ಪೇನ್ ವಿರುದ್ಧ 0-0 ಡ್ರಾ ಮತ್ತು ಉರುಗ್ವೆ ವಿರುದ್ಧ 2-2 ಸಮಬಲ ಸಾಧಿಸಿದ್ದ ಕೇಪ್ ವರ್ದೆ, ಸೌದಿ ಅರೇಬಿಯಾದ ವಿರುದ್ಧವೂ ಸೋಲದೆ ಒಂದು ಅಂಕ ಗಳಿಸಿ ಒಟ್ಟು ಮೂರು ಅಂಕಗಳೊಂದಿಗೆ ಗುಂಪಿನಲ್ಲಿ ದ್ವಿತೀಯ ಸ್ಥಾನ ಪಡೆದು ರೌಂಡ್ ಆಫ್ 32ಕ್ಕೆ ಪ್ರವೇಶಿಸಿತು.

ಮೊದಲ ವಿಶ್ವಕಪ್‌ನಲ್ಲಿ ಸಾಧನೆ: ಸುಮಾರು ಐದು ಲಕ್ಷ ಜನಸಂಖ್ಯೆಯ ಪುಟ್ಟ ದ್ವೀಪ ರಾಷ್ಟ್ರವಾಗಿರುವ ಕೇಪ್ ವರ್ದೆ, ತನ್ನ ಮೊದಲ ವಿಶ್ವಕಪ್‌ನಲ್ಲೇ ಈ ಸಾಧನೆ ಮಾಡಿದ್ದು ಫುಟ್‌ಬಾಲ್ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದಿದೆ. ಈಗ ನಾಕೌಟ್ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ವಿರುದ್ಧ ಜುಲೈ 3ರಂದು ಮೈಯಾಮಿಯಲ್ಲಿ ಸೆಣಸಲಿದೆ.

ವೋಜಿನ್ಹಾ ಅಮೋಘ ಗೋಲ್‌ಕೀಪಿಂಗ್: ಕೇಪ್ ವರ್ದೆಯ ಯಶಸ್ಸಿನ ಹಿಂದಿನ ಪ್ರಮುಖ ಶಕ್ತಿ ಅನುಭವಿ ಗೋಲ್‌ಕೀಪರ್ ವೋಜಿನ್ಹಾ. 40 ವರ್ಷದ ಗೋಲ್‌ಕೀಪರ್ ಮೊದಲಾರ್ಧದ ಇಂಜುರಿ ಸಮಯದಲ್ಲಿ ಮೊಹಮ್ಮದ್ ಕನ್ನೋ ಅವರ ಹೆಡರ್ ಅನ್ನು ಅದ್ಭುತವಾಗಿ ತಡೆದರು. ಬಳಿಕ 66ನೇ ನಿಮಿಷದಲ್ಲಿ ಮೊಹಮ್ಮದ್ ಅಬು ಅಲ್-ಶಮಾತ್ ಅವರ ಬಲಿಷ್ಠ ಪ್ರಯತ್ನವನ್ನೂ, 92ನೇ ನಿಮಿಷದಲ್ಲಿ ಅಬ್ದುಲ್ಲಾ ಅಲ್-ಹಮ್ದಾನ್ ಅವರ ಶಾಟ್‌ನನ್ನೂ ತಡೆದು ತಂಡಕ್ಕೆ ಅಮೂಲ್ಯ ಡ್ರಾ ತಂದುಕೊಟ್ಟರು.

ಮುಂದಿನ ಪಂದ್ಯ: ಜುಲೈ 3ರಂದು ಕೇಪ್ ವರ್ದೆ, ಹಾಲಿ ವಿಶ್ವಚಾಂಪಿಯನ್ ಅರ್ಜೆಂಟೀನಾ ವಿರುದ್ಧ ರೌಂಡ್ ಆಫ್ 32ರಲ್ಲಿ ಸೆಣಸಲಿದೆ.





ಇರಾಕ್ ಮೇಲೆ ಹರಿಹಾಯ್ದ ಸೆನೆಗಲ್

ಇರಾಕ್ ಮೇಲೆ ಹರಿಹಾಯ್ದಿರುವ ಸೆನೆಗಲ್ ತಂಡವು 5-0 ಅಂತರದ ಭರ್ಜರಿ ಗೆಲುವು ದಾಖಲಿಸಿದೆ. ಪಂದ್ಯದ ಪ್ರತಿ ಕ್ಷಣವೂ ಇರಾಕ್ ಮೇಲೆ ಒತ್ತಡ ಹೇರಿದ ಸೆನೆಗಲ್ ಹಬಿಬ್ ದಿಯಾರಾ ಅವರ ನಾಲ್ಕನೇ ನಿಮಿಷದ ಗೋಲಿನೊಂದಿಗೆ ಆರಂಭ ಪಡೆಯಿತು. 13ನೇ ನಿಮಿಷಕ್ಕೆ ಆತ್ಮಘಾತಿ ಗೋಲು ಗಳಿಸಿದ ರೇಬಿನ್ ಇರಾಕ್‌ಗೆ ಮತ್ತಷ್ಟು ಹಿನ್ನಡೆ ತಂದರು. ಇಸ್ಮೈಲಾ 56ನೇ ನಿಮಿಷಕ್ಕೆ ಮತ್ತೊಂದು ಗೋಲು ಗಳಿಸಿ ಮುನ್ನಡೆ ತಂದರು. 71ನೇ ನಿಮಿಷಕ್ಕೆ ಪೇಪ್, 82ನೇ ನಿಮಿಷಕ್ಕೆ ಇಲಿಮನ್ ಗೋಲು ಗಳಿಸಿದರು.

ಡೆಂಬೆಲೆ ಹ್ಯಾಟ್ರಿಕ್ ಮ್ಯಾಜಿಕ್

ನಾರ್ವೆ ವಿರುದ್ಧ ಫ್ರಾನ್ಸ್‌ಗೆ 4-1 ಭರ್ಜರಿ ಜಯ

ಫಾಕ್ಸ್‌ಬೊರೋ (ಅಮೆರಿಕ): ಓಸ್ಮಾನ್ ಡೆಂಬೆಲೆ ಮೊದಲಾರ್ಧದಲ್ಲೇ ಹ್ಯಾಟ್ರಿಕ್ ಸಿಡಿಸಿ ಮಿಂಚಿದರೆ, ಕೈಲಿಯನ್ ಎಂಬಾಪ್ಪೆ ಮತ್ತೊಮ್ಮೆ ತನ್ನ ಸೃಜನಾತ್ಮಕ ಆಟದ ಮೂಲಕ ಮೆರುಗು ನೀಡಿದರು. ಇವರ ಅಮೋಘ ಪ್ರದರ್ಶನದ ನೆರವಿನಿಂದ ಫ್ರಾನ್ಸ್ 4-1 ಅಂತರದಲ್ಲಿ ನಾರ್ವೆಯನ್ನು ಮಣಿಸಿ ವಿಶ್ವಕಪ್‌ನ ಗುಂಪು ಹಂತವನ್ನು ಅಗ್ರಸ್ಥಾನಿಯಾಗಿ ಮುಗಿಸಿತು.

ಬ್ಯಾಲನ್ ಡಿಓರ್ ವಿಜೇತ ಡೆಂಬೆಲೆ 7ನೇ, 20ನೇ ಹಾಗೂ 32ನೇ ನಿಮಿಷಗಳಲ್ಲಿ ಗೋಲು ಬಾರಿಸಿ ಮೊದಲಾರ್ಧದಲ್ಲೇ ಹ್ಯಾಟ್ರಿಕ್ ಪೂರ್ಣಗೊಳಿಸಿದರು. 1994ರ ವಿಶ್ವಕಪ್‌ನಲ್ಲಿ ರಷ್ಯಾದ ಒಲೆಗ್ ಸಲೆಂಕೊ ಬಳಿಕ ವಿಶ್ವಕಪ್‌ನಲ್ಲಿ ಮೊದಲಾರ್ಧದಲ್ಲೇ ಹ್ಯಾಟ್ರಿಕ್ ದಾಖಲಿಸಿದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಡೆಂಬೆಲೆ ಪಾತ್ರರಾದರು. ದ್ವಿತೀಯಾರ್ಧದ ಇಂಜುರಿ ಸಮಯದಲ್ಲಿ ಡಿಸೈರ್ ಡೌಯೆ ನಾಲ್ಕನೇ ಗೋಲು ದಾಖಲಿಸಿ ಫ್ರಾನ್ಸ್ ಜಯ ಖಚಿತಪಡಿಸಿದರು.

ಎಂಬಾಪ್ಪೆ-ಡೆಂಬೆಲೆ ಜೋಡಿ ಮಿಂಚು: ಫ್ರಾನ್ಸ್ ಆರಂಭದಿಂದಲೇ ದಾಳಿಯ ಆಟ ಪ್ರದರ್ಶಿಸಿತು. ಪಂದ್ಯ ಆರಂಭವಾಗಿ ಕೇವಲ 21 ಸೆಕೆಂಡ್‌ಗಳಲ್ಲಿ ಎಂಬಾಪ್ಪೆಯ ಶಾಟ್ ಕ್ರಾಸ್‌ಬಾರ್‌ಗೆ ತಾಗಿದರೂ,



ಏಳನೇ ನಿಮಿಷದಲ್ಲಿ ಅವರೇ ನೀಡಿದ ಪಾಸ್ ಅನ್ನು ಡೆಂಬೆಲೆ ಗೋಲಾಗಿ ಪರಿವರ್ತಿಸಿ ಮುನ್ನಡೆ ತಂದರು. 20ನೇ ನಿಮಿಷದಲ್ಲಿ ಮೂವರು ರಕ್ಷಣಾ ಆಟಗಾರರನ್ನು ಮೀರಿಸಿ ಡೆಂಬೆಲೆ ಎರಡನೇ ಗೋಲು ಗಳಿಸಿದರು. ನಾರ್ವೆಯ ಥೆಲೊ ಆಸ್ಗಾರ್ಡ್ 21ನೇ ನಿಮಿಷದಲ್ಲಿ ಗೋಲು ಬಾರಿಸಿ ಅಂತರ ಕಡಿಮೆ ಮಾಡಿದರೂ, 32ನೇ ನಿಮಿಷದಲ್ಲಿ ಡೆಂಬೆಲೆ ತನ್ನ ಮೂರನೇ ಗೋಲು ದಾಖಲಿಸಿ ಫ್ರಾನ್ಸ್‌ಗೆ 3-1 ಮುನ್ನಡೆ ನೀಡಿದರು.

ಬೆಲ್ಜಿಯಂಗೆ ಗೆಲುವು

ವ್ಯಾಂಕೂರ್ವ/ಸಿಯೊಟಲ್: ಲಿಯಾಂಡ್ರೊ ಟ್ರೊಸಾರ್ಡ್ ಅವರ ದ್ವಿಗೋಲು ಹಾಗೂ ಕೆವಿನ್ ಡಿ ಬ್ರೂಯ್ನೆ, ರೊಮೆಲು ಲುಕಾಕು ಮತ್ತು ಅಲೆಕ್ಸಿಸ್ ಸಲೇಮೇಕರ್ಸ್ ಅವರ ಗೋಲುಗಳ ನೆರವಿನಿಂದ ಬೆಲ್ಜಿಯಂ, ನ್ಯೂಜಿಲೆಂಡ್ ವಿರುದ್ಧ 5-1 ಅಂತರದ ಭರ್ಜರಿ ಜಯ ಸಾಧಿಸಿ ಜಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ವಿಶ್ವಕಪ್‌ನ ನಾಕೌಟ್ ಹಂತ ಪ್ರವೇಶಿಸಿತು. ಇದೇ ವೇಳೆ ಸಿಯಾಟಲ್‌ನಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಈಜಿಪ್ಟ್ ಮತ್ತು ಇರಾನ್ 1-1ರಿಂದ ಸಮಬಲ ಸಾಧಿಸಿದ್ದು, ಈಜಿಪ್ಟ್ ತನ್ನ ಇತಿಹಾಸದಲ್ಲೇ ಮೊದಲ ಬಾರಿಗೆ ವಿಶ್ವಕಪ್‌ನ ಗುಂಪು ಹಂತ ದಾಟಿತು.

ಬೆಲ್ಜಿಯಂ ಭರ್ಜರಿ ಪುನರಾಗಮನ: ಮೊದಲ ಎರಡು ಪಂದ್ಯಗಳಲ್ಲಿ ಈಜಿಪ್ಟ್ ವಿರುದ್ಧ 1-1 ಹಾಗೂ ಇರಾನ್ ವಿರುದ್ಧ ಗೋಲುರಹಿತ ಡ್ರಾ ಸಾಧಿಸಿದ್ದ ಬೆಲ್ಜಿಯಂ, ನಿರ್ಣಾಯಕ ಪಂದ್ಯದಲ್ಲಿ ತನ್ನ ನೈಜ ಸಾಮರ್ಥ್ಯ ಪ್ರದರ್ಶಿಸಿತು. ಲಿಯಾಂಡ್ರೊ ಟ್ರೊಸಾರ್ಡ್ ಎರಡು ಗೋಲುಗಳ ಮೂಲಕ ಗೆಲುವಿನ ಅಡಿಪಾಯ ಹಾಕಿದರೆ, ಕೆವಿನ್ ಡಿ ಬ್ರೂಯ್ನೆ, ರೊಮೆಲು ಲುಕಾಕು ಮತ್ತು ಅಲೆಕ್ಸಿಸ್ ಸಲೇಮೇಕರ್ಸ್ ತಲಾ ಒಂದು ಗೋಲು ದಾಖಲಿಸಿದರು. ನ್ಯೂಜಿಲೆಂಡ್ ಪರ ಎಲಿಜಾ ಜಸ್ಟ್ ಏಕೈಕ ಸಮಾಧಾನದ ಗೋಲು ಗಳಿಸಿದರು. ಈ ಸೋಲಿನೊಂದಿಗೆ ನ್ಯೂಜಿಲೆಂಡ್ ವಿಶ್ವಕಪ್ ಇತಿಹಾಸದಲ್ಲೇ ಮೊದಲ ಗೆಲುವಿನ ಕನಸನ್ನು ನನಸಾಗಿಸಿಕೊಳ್ಳದೆ ಟೂರ್ನಿಯಿಂದ ನಿರ್ಗಮಿಸಿತು.

ಈಜಿಪ್ಟ್ ಐತಿಹಾಸಿಕ ಸಾಧನೆ

ಸಿಯಾಟಲ್‌ನಲ್ಲಿ ನಡೆದ ಪಂದ್ಯದಲ್ಲಿ ಇರಾನ್ ವಿರುದ್ಧ ಐದನೇ ನಿಮಿಷದಲ್ಲೇ ಮಹ್ಮೂದ್ ಸಾಬರ್ ಗೋಲು ಬಾರಿಸಿ ಈಜಿಪ್ಟ್‌ಗೆ ಮುನ್ನಡೆ ತಂದುಕೊಟ್ಟರು. ಮೊಹಮದ್ ಸಲಾಹ್ ಅವರ ಚತುರ ಆಟದಿಂದ ರೂಪುಗೊಂಡ ಅವಕಾಶವನ್ನು ಸಾಬರ್ ಯಶಸ್ವಿಯಾಗಿ ಗೋಲಾಗಿ ಪರಿವರ್ತಿಸಿದರು. ಆದರೆ ಇರಾನ್ ಕೇವಲ ಒಂಬತ್ತು ನಿಮಿಷಗಳಲ್ಲೇ ರಮೀನ್ ರೆಜಾಯಿಯನ್ ಗೋಲಿನ ಮೂಲಕ ಸಮಬಲ ಸಾಧಿಸಿತು.

ವಿಎಆರ್‌ನಿಂದ ಇರಾನ್‌ಗೆ ನಿರಾಸೆ: ಇಂಜುರಿ ಸಮಯದ 93ನೇ ನಿಮಿಷದಲ್ಲಿ ಶೋಜಾ ಖಲೀಲ್‌ಜಾದೆಹ್ ಗೋಲು ಬಾರಿಸಿ ಇರಾನ್‌ಗೆ ಗೆಲುವು ತಂದುಕೊಟ್ಟಂತೆ ಕಂಡಿತು. ಆದರೆ ವೀಡಿಯೊ ಪರಿಶೀಲನೆ ಬಳಿಕ ಆ ಗೋಲನ್ನು ಆಫ್‌ಸೈಡ್ ಎಂದು ತಿರಸ್ಕರಿಸಲಾಯಿತು. ಆ ಗೋಲು ಮಾನ್ಯವಾಗಿದ್ದರೆ ಇರಾನ್ ನೇರವಾಗಿ ನಾಕೌಟ್ ಹಂತಕ್ಕೇರಬಹುದಾಗಿತ್ತು. ಈಗ ಇರಾನ್‌ನ ಭವಿಷ್ಯ ಇತರ ಗುಂಪುಗಳ ಫಲಿತಾಂಶಗಳ ಮೇಲೆ ಅವಲಂಬಿತವಾಗಿದೆ.

ಸ್ಪೇನ್ ವಿನ್, ಮನೆಗೆ ಉರುಗ್ವೆ

ಗ್ವಾಡಲಜಾರಾ (ಮೆಕ್ಸಿಕೊ): ಅನುಭವಿ ಗೋಲ್‌ಕೀಪರ್ ಫರ್ನಾಂಡೊ ಮುಸ್ಲೆರಾ ಅವರ ಮತ್ತೊಂದು ದುಬಾರಿ ತಪ್ಪಿನ ಲಾಭ ಪಡೆದ ಸ್ಪೇನ್, ಉರುಗ್ವೆಯನ್ನು 1-0 ಗೋಲುಗಳಿಂದ ಮಣಿಸಿ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಭರ್ಜರಿಯಾಗಿ ಪ್ರವೇಶಿಸಿತು. ಈ ಸೋಲಿನೊಂದಿಗೆ ಎರಡು ಬಾರಿ ವಿಶ್ವಚಾಂಪಿ ಯನ್ ಉರುಗ್ವೆ ಗುಂಪು ಹಂತದಲ್ಲೇ ಟೂರ್ನಿಯಿಂದ ಹೊರಬಿದ್ದಿತು. ಯುರೋಪಿಯನ್ ಚಾಂಪಿಯನ್ ಸ್ಪೇನ್ ಮೂರು ಪಂದ್ಯಗಳಿಂದ ಏಳು ಅಂಕ ಗಳನ್ನು ಗಳಿಸಿ ಗುಂಪು ಎಚ್‌ನಲ್ಲಿ ಅಗ್ರಸ್ಥಾನ ಪಡೆದುಕೊಂಡಿತು. ರೌಂಡ್ ಆಫ್ 32ರಲ್ಲಿ ಸ್ಪೇನ್, ಜೆ ಗುಂಪಿನ ದ್ವಿತೀಯ ಸ್ಥಾನಿ ಆಸ್ಟ್ರಿಯಾ ಅಥವಾ ಅಲ್ಜೀರಿಯಾ ವಿರುದ್ಧ ಸೆಣಸಲಿದೆ.

ಮುಸ್ಲೆರಾ ತಪ್ಪು ದುಬಾರಿ: 42ನೇ ನಿಮಿಷದಲ್ಲಿ ಅಲೆಕ್ಸ್ ಬಯೇನಾ ಹೊಡೆದ ಶಾಟ್ ಅನ್ನು 40 ವರ್ಷದ ಗೋಲ್‌ಕೀಪರ್ ಫರ್ನಾಂಡೊ ಮುಸ್ಲೆರಾ ಸರಿಯಾಗಿ ತಡೆಯಲು ವಿಫಲರಾದರು. ಚೆಂಡು ಅವರ ಕೈಯಿಂದ ಜಾರಿಗೋಲಿನೊಳಗೆ ಸೇರಿತು. ಇದೇ ಗೋಲು ಪಂದ್ಯದ ನಿರ್ಣಾಯಕ ಕ್ಷಣವಾಯಿತು.

ಭಾರತಕ್ಕೆ ನಿರ್ಣಾಯಕ ಪಂದ್ಯ

ಲಾರ್ಡ್ಸ್: ಸೆಮಿ ಫೈಟ್ ನಡೆಸಿರುವ ಭಾರತ ಮಹಿಳಾ ತಂಡವು ಗೆಲ್ಲಲೇಬೇಕಾದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಹಿಂದಿನ ಪಂದ್ಯದಲ್ಲಿ ಬಾಂಗ್ಲಾ ವಿರುದ್ಧ ಗೆದ್ದರೂ ದ.ಆಫ್ರಿಕಾ ವಿರುದ್ಧದ ಸೋಲು ಭಾರತಕ್ಕೆ ದೊಡ್ಡ ಹೊಡೆತ ನೀಡಿದಂತಿದೆ.

ಪಂದ್ಯದ ವಿವರ
ಎಲ್ಲಿ: ಲಾರ್ಡ್ಸ್,ಯಾವಾಗ: ಭಾನುವಾರ
ಸಮಯ: ಸಂಜೆ 7:00

ಮಹಿಳೆಯರ ಟಿ20 ವಿಶ್ವಕಪ್‌ನಲ್ಲಿ ಎರಡು ಗುಂಪುಗಳಿವೆ. ಮೊದಲನೇ ಗುಂಪಿನಿಂದ ವಿಂಡೀಸ್ ಹಾಗೂ ಇಂಗ್ಲೆಂಡ್ ತಂಡಗಳು ಸಮರ್ಥ ಪ್ರದರ್ಶನ ನೀಡಿವೆ. ಇತ್ತ ಇನ್ನೊಂದು ಗುಂಪಿನಲ್ಲಿ ಆಸ್ಟ್ರೇಲಿಯಾ ಈಗಾಗಲೇ ಸೆಮಿಫೈನಲ್‌ಗೇರಿದೆ. ಇನ್ನೊಂದು ತಂಡ ಯಾವುದೆಂಬ ಪ್ರಶ್ನೆಗೆ ಭಾನುವಾರದ ಪಂದ್ಯ ಉತ್ತರ ಕೊಡಲಿದೆ. ಶನಿವಾರ ತಡರಾತ್ರಿಯೇ ದ.ಆಫ್ರಿಕಾ ಮತ್ತು ಬಾಂಗ್ಲಾದೇಶ ತಂಡಗಳು ಎದುರಾಗಲಿವೆ. ಇಲ್ಲಿ ದ.ಆಫ್ರಿಕಾ ಸೋತು ಬಿಟ್ಟರೆ ಭಾರತ ಸೆಮಿಗೆ ಲೀಲಾಜಾಲವಾಗಿ ಲಗ್ಗೆ ಹಾಕಲಿದೆ. ಆದರೆ, ದ.ಆಫ್ರಿಕಾ ದೊಡ್ಡ ಮೊತ್ತದಿಂದ ಗೆದ್ದು ಭಾರತಕ್ಕಿಂತ ಹೆಚ್ಚು ರನ್‌ರೇಟ್ ಏನಾದರೂ ಪಡೆದುಕೊಂಡರೆ, ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಭಾರತ ಗೆಲ್ಲಲೇಬೇಕಾದ ಒತ್ತಡಕ್ಕೆ ಸಿಲುಕಿಕೊಳ್ಳುತ್ತೆ. ಸದ್ಯ ಎರಡನೆ ಸ್ಥಾನದಲ್ಲಿರುವ ಭಾರತ ಉತ್ತಮ ರನ್‌ರೇಟ್ ಹೊಂದಿದೆ. ಆದರೆ 4 ಪಂದ್ಯಗಳಲ್ಲಿ 6 ಅಂಕಗಳನ್ನು ಗಳಿಸಿದೆ. ಈ ನಡುವೆ ಸೆಮಿಗೇರಲು ಹೆಚ್ಚುವರಿ ಅಂಕವೇನಾದರೂ ಬೇಕಿದ್ದರೆ ಭಾರತ ಈ ಪಂದ್ಯದಲ್ಲಿ ಗೆಲ್ಲಲೇಬೇಕು.

ವಿಶ್ವಾಸದಲ್ಲಿ ಭಾರತ: ಮೂರು ಪಂದ್ಯಗಳಲ್ಲಿ ಮಂಧಾನ ಉತ್ತಮ ಪ್ರದರ್ಶನ ನೀಡಿದ್ದಾರೆ. ಆದರೆ ಕಳೆದೆರಡು ಪಂದ್ಯಗಳಲ್ಲಿ ಅವರೂ ಹಿನ್ನಡೆ ಅನುಭವಿಸಿದ್ದರು. ಅತ್ತ ಸ್ಫೋಟಕ ಬ್ಯಾಟರ್ ಶೆಫಾಲಿ ವರ್ಮಾ ಬೌಲಿಂಗ್ ಮತ್ತು ಬ್ಯಾಟಿಂಗ್ ಎರಡರಲ್ಲೂ ಮಿಂಚುತ್ತಿರುವುದು ತಂಡಕ್ಕೆ ವಿಶ್ವಾಸ ತಂದಿದೆ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ರಾಡ್ರಿಗ್ಸ್ ಕೂಡ ಲಯಕ್ಕೆ ಮರಳಿರುವುದು ತಂಡಕ್ಕೆ ಬಲ ತಂದಿದೆ. ಇತ್ತ ಹರ್ಮನ್ ಪ್ರೀತ್ ಕೌರ್ ಸ್ಫೋಟಕ ಬ್ಯಾಟಿಂಗ್ ಮಾಡಬೇಕಿದೆ. ಸ್ಕೋರ್ ಹಿಗ್ಗಿಸುವ ರಿಚಾ ಘೋಷ್ ರನ್ ಮಿಂಚಿದರೆ ಭಾರತಕ್ಕೆ ಕಟ್ಟಿಹಾಕುವವರೆ ಯಾರಿಲ್ಲ. ಅತ್ತ ಬೌಲಿಂಗ್‌ನಲ್ಲೂ ಬಲಾಢ್ಯ ಪಡೆಯನ್ನು ಹೊಂದಿರುವ ಭಾರತ ದಾಖಲೆ ಮಾಡಿರುವ ಶ್ರೀ ಚಾರಣಿ, ಆಲ್‌ರೌಂಡರ್ ದೀಪಿಕಾ ಮಿಂಚುತ್ತಿದ್ದಾರೆ.

ಗ್ಲೋಬಲ್ ಚೆಸ್ ಲೀಗ್‌ಗೆ ಸಕಲ ಸಿದ್ಧತೆ

ಬೆಂಗಳೂರು: ಗ್ಲೋಬಲ್ ಚೆಸ್ ಲೀಗ್‌ನ ನಾಲ್ಕನೇ ಆವೃತ್ತಿಗೆ ವೇದಿಕೆ ಸಜ್ಜಾಗಿದ್ದು, ಸೋಮವಾರದಂದು ಮುಂಬೈನಲ್ಲಿ ಆಟಗಾರರ ಡ್ರಾಫ್ಟ್ ನಡೆಯಲಿದೆ. ಸೆಪ್ಟೆಂಬರ್ 3ರಿಂದ 13ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ಟೂರ್ನಿಗಾಗಿ ಆರು ಫ್ರಾಂಚೈಸಿಗಳು ತಮ್ಮ ತಂಡಗಳನ್ನು ಇದೇ ಡ್ರಾಫ್ಟ್ ಮೂಲಕ ಆಯ್ಕೆ ಮಾಡಲಿವೆ. ಒಂದು ಆವೃತ್ತಿಯ ವಿರಾಮದ ಬಳಿಕ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತೆ ಲೀಗ್‌ಗೆ ಮರಳುತ್ತಿದ್ದು, ಇತ್ತೀಚಿನ ಮಹಿಳಾ ವಿಶ್ವಕಪ್ ಚಾಂಪಿಯನ್ ದಿವ್ಯಾ ದೇಶಮುಖ್ ಮೊದಲ ಬಾರಿಗೆ ಗ್ಲೋಬಲ್ ಚೆಸ್ ಲೀಗ್‌ನಲ್ಲಿ ಆಡಲಿದ್ದಾರೆ. ಈ ಬಾರಿ ಒಟ್ಟು 36 ಗ್ರ್ಯಾಂಡ್‌ಮಾಸ್ಟರ್‌ಗಳು ಆಟಗಾರರ ಪಟ್ಟಿಯಲ್ಲಿದ್ದಾರೆ. ವಿಶ್ವ ಚಾಂಪಿಯನ್‌ಗಳು, ವಿಶ್ವಕಪ್ ವಿಜೇತರು, ಒಲಿಂಪಿಯಾಡ್ ಪದಕ ವಿಜೇತರು ಹಾಗೂ ಉದಯೋನ್ಮುಖ ಪ್ರತಿಭೆಗಳು ಡ್ರಾಫ್ಟ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಪ್ರತಿ ತಂಡವು ಒಬ್ಬ ಐಕಾನ್, ಇಬ್ಬರು ಸೂಪರ್‌ಸ್ಟಾರ್ ಪುರುಷರು, ಇಬ್ಬರು ಸೂಪರ್ ಸ್ಟಾರ್ ಮಹಿಳೆಯರು ಮತ್ತು ಒಬ್ಬ ಪ್ರಾಡಿಜಿ ಸೇರಿ ಆರು ಸದಸ್ಯರ ತಂಡವನ್ನು ರಚಿಸಲಿದೆ. ಕೂಟದಲ್ಲಿ ಒಟ್ಟು 6 ಫ್ರಾಂಚೈಸಿಗಳು ಇರಲಿವೆ. ಡ್ರಾಫ್ಟ್‌ನ ಪ್ರಮುಖ ಆಟಗಾರರಲ್ಲಿ ವಿಶ್ವನಾಥನ್ ಆನಂದ್, ಇಯಾನ್ ನೆಪೊಮ್ನಿಯಾಚ್ಚಿ, ಲೆವೊನ್ ಅರೋನಿಯನ್, ಕೊನೆರು ಹಂಪಿ, ಅಲೆಕ್ಸಾಂಡ್ರಾ ಕೋಸ್ಟೆನಿಯುಕ್, ಜಾವೋಖಿರ್ ಸಿಂದರೋವ್, ಭಾರತದ ಲಿಯೊನ್ ಸೇರಿದ್ದಾರೆ.

ಸರಣಿ ಉಳಿಸಲು ಭಾರತ ಕಾದಾಟ

ಬೆಲ್‌ಫಾಸ್ಟ್: ಮೊದಲ ಪಂದ್ಯದಲ್ಲಿ ಅಚ್ಚರಿಯ ಸೋಲನುಭವಿಸಿರುವ ಭಾರತ ಪುರುಷರ ತಂಡ ಇಂದು ಐರ್ಲೆಂಡ್ ಸರಣಿಯ ಕೊನೆಯ ಮತ್ತು ಎರಡನೆ ಪಂದ್ಯದಲ್ಲಿ ಪರೀಕ್ಷೆ ಎದುರಿಸಲಿದೆ.

ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ಪ್ರವಾಸ ಮಾಡಿರುವ ಭಾರತ ತಂಡ ಇಂಗ್ಲೆಂಡ್ ಸರಣಿಗೂ ಮುನ್ನ ಭಾನುವಾರ ಐರ್ಲೆಂಡ್ ವಿರುದ್ಧ ಮತ್ತೊಂದು ಪಂದ್ಯದಲ್ಲಿ ಎದುರಿಸಬೇಕಿದೆ. ಶುಕ್ರವಾರ ನಡೆದ ಪಂದ್ಯದಲ್ಲಿ ಅಚ್ಚರಿಯ ಸೋಲನುಭವಿಸಿದ್ದ ಶ್ರೇಯಸ್ ಪಡೆ ಈ ಪಂದ್ಯದಲ್ಲಿ ಸೋತರೆ ಐತಿಹಾಸಿಕ ಹಿನ್ನಡೆ ಅನುಭವಿಸಲಿದೆ. ಶುಕ್ರವಾರದ ಪಂದ್ಯಕ್ಕೂ ಮುನ್ನ ಭಾರತ ಐರ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಗೆಲ್ಲಲೇಬೇಕಾದ ಒತ್ತಡ ಎದುರಿಸಬೇಕಿದೆ. ತೀವ್ರ ಬ್ಯಾಟಿಂಗ್ ವೈಫಲ್ಯ ಎದುರಿಸಿದ್ದ ಭಾರತ 34 ರನ್‌ಗಳ ಸೋಲನುಭವಿಸಿದೆ. ಅಭಿಷೇಕ್ ಶರ್ಮ ಅವರನ್ನು ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟರ್ ಕೂಡ ನಿಲ್ಲಲೂ ಇಲ್ಲ. ಶಿವಂ ದುಬೆ ಹೋರಾಟಕ್ಕೂ ಸರಳವಾಗಿ ತಡೆಯೊಡ್ಡಿತ್ತು. ಈ ನಡುವೆ ಐರ್ಲೆಂಡ್ ವಿರುದ್ಧದ ಎರಡನೇ ಪಂದ್ಯದಲ್ಲಿ ಭಾರತ ಬ್ಯಾಟಿಂಗ್ ಬಲ ಹೆಚ್ಚಿಸಿಕೊಂಡೇ ಹೋಗಬೇಕಿದೆ. ಅಭಿಷೇಕ್ ಶರ್ಮ ಅವರು ಲಯದಲ್ಲೇ ಇದ್ದಾರೆ. ಇನ್ನೋರ್ವ ಆರಂಭಿಕ ಸಂಜು ಸ್ಯಾಮ್ಸನ್ ಬ್ಯಾಟ್‌ನಿಂದ ರನ್ ಬರಬೇಕಿದೆ. ಈ ನಡುವೆ ಇಶಾನ್ ಕಿಶನ್ ಕೂಡ ವಿಫಲರಾಗಿದ್ದರು. ಮಧ್ಯಮ ಕ್ರಮಾಂಕದಲ್ಲಿ ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್ ಅವರನ್ನು ಆಡಿಸಲಾಗಿದೆ. ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗಬೇಕಿದೆ. ಫಿನಿಶಿಂಗ್‌ನಲ್ಲಿ ಅಲ್ಪ ಪ್ರಯತ್ನ ಪಟ್ಟಿರುವ ಶಿವಂ ದುಬೆ ಮಿಂಚಬೇಕಿದೆ. ಬೌಲಿಂಗ್ ವಿಭಾಗದಲ್ಲಿ ಹರ್ಷಿತ್ ರಾಣಾ ಕಂಬ್ಯಾಕ್ ಮಾಡಿದ್ದರೂ ಪ್ರಸಿದ್ಧ ಕೃಷ್ಣ ಸೇರಿದಂತೆ ವಿವಿಧ ಆಟಗಾರರು ದುಬಾರಿಯಾಗಿದ್ದಾರೆ.

ಪಂದ್ಯದ ವಿವರ
ಯಾವಾಗ: ಭಾನುವಾರ, ಎಲ್ಲಿ:
ಬೆಲ್‌ಫಾಸ್ಟ್, ಸಮಯ: ಸಂಜೆ 8:30

ಬೆಂಗಳೂರು ಬ್ಲಾಸ್ಟರ್ಸ್‌ಗೆ ಭರ್ಜರಿ ಜಯ

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಬೆಂಗಳೂರು ತಂಡದ ರೋಹನ ಪಾಟೀಲ ಅವರ ಅರ್ಧ ಶತಕ (62, 46ಎ, 4ಹಿ5, 6ಹಿ2) ಹಾಗೂ ಆಲ್‌ರೌಂಡರ್ ಪ್ರವೀಣ್ ದುಬೆ(39,15,4ಹಿ3,6ಹಿ3) ಆಕರ್ಷಕ ಬ್ಯಾಟಿಂಗ್‌ಗೆ ಶಿವಮೊಗ್ಗ ಯೋಧಾಸ್ ತತ್ತರಿಸಿದ್ದು, ಇಲ್ಲಿಯ ನೃಪತುಂಗ ಬೆಟ್ಟದ ತಪ್ಪಲಿನಲ್ಲಿರುವ ರಾಜನಗರ ಕೆಎಸ್‌ಸಿಎ ಮೈದಾನದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಪಂದ್ಯದಲ್ಲಿ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡ 7 ವಿಕೆಟ್ ಅಂತರದಿಂದ ಅಧಿಕಾರಯುತ ಗೆಲುವು ದಾಖಲಿಸಿತು.

ಶಿವಮೊಗ್ಗ ಯೋಧಾಸ್ ನೀಡಿದ 174 ರನ್ ಗುರಿ ಬೆನ್ನಟ್ಟಿದ ಬೆಂಗಳೂರ ಬ್ಲಾಸ್ಟರ್ಸ್ 19 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಪೇರಿಸಿ ಗೆದ್ದಿತು.

ದುಬೆ, ರೋಹನ್ ಅಬ್ಬರ: ಗುರಿ ಬೆನ್ನತ್ತುವಾಗ ಭುವನ್ ರಾಜ್ ಹಾಗೂ ರೋಹನ ಪಾಟೀಲ ಜೊತೆಯಾಗಿ 65 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿದರು. ಭುವನ್ ರಾಜ್ ಔಟಾದ ನಂತರ ಇನ್ನೊಂದೆಡೆ ರೋಹನ ಪಾಟೀಲ ಕೂಡ ಮಿಂಚಿ 32 ಎಸೆತದಲ್ಲಿ ಅರ್ಧ ಶತಕ ಪೂರೈಸಿದರು. ಬ್ಯಾಟಿಂಗ್ ಮುಂದುವರಿಸಿ ಶ್ರೀಜೀತ್ ಅವರೊಂದಿಗೆ ಜೊತೆ ಸೇರಿ 54ರನ್ ರನ್‌ಗಳ ಜೊತೆಯಾಟ ನಿರ್ಮಿಸಿದರು. ಅವರಿಬ್ಬರೂ ವಿಕೆಟ್ ಒಪ್ಪಿಸಿದ ನಂತರ ಆಲ್‌ರೌಂಡರ್ ಪ್ರವೀಣ ದುಬೆ ಬಿರುಸಿನ ಆಟವಾಡಿದರು. ಬೌಲಿಂಗ್‌ನಲ್ಲಿ ಪ್ರಮುಖ ಒಂದು ವಿಕೆಟ್ ಪಡೆದು ಮಿಂಚಿದ್ದ ಪ್ರವೀಣ ಕೇವಲ 15 ಬೌಲ್‌ಗೆ 39 ರನ್ ಗಳಿಸಿ ಪಂದ್ಯ ಗೆಲ್ಲಿಸಿದರು.



ಚಿತ್ರ: ಮಂಜುನಾಥ ಜರತಾರಘರ

ಸಂಕ್ಷಿಪ್ತ ಸ್ಕೋರ್
ಶಿವಮೊಗ್ಗ ಯೋಧಾಸ್ 20 ಓವರ್‌ಗಳಲ್ಲಿ 173/6: ಲವನೀತ 51, ಸ್ಮರಣ ಆರ್.36★; ರೋಹನ 21/3.
ಕಲ್ಯಾಣಿ ಬೆಂಗಳೂರ ಬ್ಲಾಸ್ಟರ್ಸ್ 19 ಓವರ್‌ಗಳಲ್ಲಿ 177/3: ರೋಹನ 62, ಪ್ರವೀಣ 39★; ಶ್ರೀಶ 34/1

ಇದಕ್ಕೂ ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ ತಂಡ ಆರಂಭಿಕ ಲವನೀತ್ ಸಿಸೋಡಿಯಾ (51, 32ಎ, 4ಹಿ6, 6ಹಿ2) ಅವರನ್ನು ಬಿಟ್ಟರೆ ಉಳಿದ ಆಟಗಾರರಿಂದ ಹೆಚ್ಚು ರನ್ ಮೂಡಿ ಬರಲಿಲ್ಲ.

ವಿಂಬಲ್ಡನ್‌ಗೆ ವೇದಿಕೆ ಸಿದ್ಧ

ಲಂಡನ್: ವಿವಿಧ ಕನಸುಗಲನ್ನು ಹೊತ್ತು ಇಂಗ್ಲೆಂಡ್‌ಗೆ ಬಂದಿರುವ ವಿಶ್ವದ ಮೂಲೆ ಮೂಲೆಯ ಟೆನಿಸ್ ಆಟಗಾರರು ಸೋಮವಾರದಿಂದ ಆರಂಭವಾಗಲಿರುವ ವಿಂಬಲ್ಡನ್ ಪಂದ್ಯಾವಳಿಗೆ ಸಜ್ಜಾಗಿದ್ದಾರೆ.

ಫ್ರೆಂಚ್ ಓಪನ್‌ನ ನಂತರ ಹಾಗೂ ಯುಎಸ್ ಓಪನ್‌ನ ಮೊದಲು ನಡೆಯುವ ಗ್ರ್ಯಾಂಡ್‌ಸ್ಲಾಮ್ ಟೂರ್ನಿಯಾದ ವಿಂಬಲ್ಡನ್ ಪಂದ್ಯಾವಳಿಗೆ ಭರಪೂರ ಸಿದ್ಧತೆಗಳು ನಡೆದಿದ್ದು ಪಂದ್ಯಗಳು ಸೋಮವಾರ ಶುರುವಾಗಲಿದೆ. ಅರ್ಹತಾ ಸುತ್ತಿನ ಪಂದ್ಯಗಳು ಈಗಾಗಲೇ ನಡೆಯುತ್ತಿದ್ದು, ಪ್ರಮುಖ ಆಟಗಾರರು ಪಂದ್ಯಾವಳಿಯ ಮುಖ್ಯ ಡ್ರಾಗೆ ಮುನ್ನಡೆಯುತ್ತಾರೆ. 2023, 2024ರ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಇರುವುದಿಲ್ಲ. ಗಾಯದಿಂದ ಇನ್ನೂ ಚೇತರಿಸಿಕೊಳ್ಳದ ಅವರು ಪಂದ್ಯಾವಳಿಯಿಂದ ದೂರ ಉಳಿಯುವುದಾಗಿ ಈಗಾಗಲೇ ಹೇಳಿದ್ದಾರೆ.

ಪ್ಲೇಆಫ್‌ನಲ್ಲೇ ದೊಡ್ಡ ಫೈಟ್, ಇದು ಟೂರ್ನಿಯ ವಿಶೇಷ: ಸಾಮಾನ್ಯದಂತೆ ಈ ಟೂರ್ನಿಯಲ್ಲಿ ಮೊದಲಿಗೆ ದೊಡ್ಡ ದೊಡ್ಡ ಆಟಗಾರರು ಮುಖಾಮುಖಿಯಾಗುವುದಿಲ್ಲ. ಆರು ಸುತ್ತುಗಳಲ್ಲಿ ಮೂರು ಸುತ್ತುಗಳನ್ನು ಲೀಗ್ ಉಳಿದ ಪಂದ್ಯಗಳನ್ನು



ಪ್ಲೇಆಫ್ ಎಂದು ಕರೆಯಲಾಗುತ್ತದೆ. ಮುಖ್ಯವಾಗಿ 32 ಆಟಗಾರರ ಪಟ್ಟಿಯೊಂದನ್ನು ಮಾಡಲಾಗುತ್ತದೆ. ಅದರಲ್ಲಿರುವ ಆಟಗಾರರು ಒಬ್ಬರಿಗೊಬ್ಬರು ಪ್ಲೇಆಫ್‌ನಲ್ಲೇ ಮುಖಾಮುಖಿಯಾಗುತ್ತಾರೆ.

128 ಪಟುಗಳ ಮುಖ್ಯ ಡ್ರಾ: ಟೆನಿಸ್ ವೇಳಾಪಟ್ಟಿ ಮತ್ತು ಪಂದ್ಯಾಟಗಳನ್ನು ವಿಭಿನ್ನ ರೀತಿಯಲ್ಲಿ ಆಡಿಸಲಾಗುತ್ತದೆ. ಮುಖ್ಯವಾಗಿ ರ್‍ಯಾಂಕಿಂಗ್ ಆಧಾರಿತ ಆಟಗಾರರು ನೇರ ಅರ್ಹತೆ ಪಡೆದಿರುತ್ತಾರೆ. ಉಳಿದ ಆಟಗಾರರನ್ನು ಅರ್ಹತಾ ಸುತ್ತಿನ ಮೂಲಕ ಆಯ್ಕೆ ಮಾಡಿಕೊಂಡು 128 ಜನರ ಡ್ರಾ ಅನ್ನು ಮಾಡಲಾಗುತ್ತದೆ.


ಮೊದಲ ದಿನವೇ ಬಿಗ್ ಫೈಟ್: ಸೋಮವಾರ ಆರಂಭಿಕ ದಿನದಂದೆ ವಿವಿಧ ಟೆನಿಸ್ ದಿಗ್ಗಜರು ಸೆಣಸಾಟ ನಡೆಸಲಿದ್ದಾರೆ. ಹಾಲಿ ಚಾಂಪಿಯನ್ ಎನ್ನಿಸಿರುವ ಯಾನಿಕ್ ಸಿನ್ನರ್, ಮಿಯೋಮಿರ್ ಅವರನ್ನು ಎದುರಿಸಲಿದ್ದಾರೆ. ನೋವಾಕ್ ಜೊಕೊವಿಚ್ ವೈ.ಬಿ. ವು ಅವರನ್ನು ಎದುರಿಸಲಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದ ವಿಶ್ವ ನಂ.1 ಆಟಗಾರ್ತಿ ಆರ್ನಾ ಸೆಬಲೆಂಕಾ ಅವರು ಕೊಸ್ಟವಿಕ್ ಅವರನ್ನು ಎದುರಿಸಲಿದ್ದಾರೆ.

ವಿಲಿಯಮ್ಸ್ ಸಂಚಲನ

ವಿಂಬಲ್ಡನ್ ಪಂದ್ಯಾವಳಿಯ ವಿಶೇಷವೆಂದರೆ ಈ ಬಾರಿ ಅಮೆರಿಕದ ದಿಗ್ಗಜ ಆಟಗಾರ್ತಿ ಸೆರೇನಾ ವಿಲಿಯಮ್ಸ್ ಕಂಬ್ಯಾಕ್ ಮಾಡಿದ್ದಾರೆ. ಕಳೆದ ಕೆಲವು ಪಂದ್ಯಾವಳಿಗಳಿಂದ ದೂರ ಉಳಿದಿದ್ದ ಅವರು, ಸಂಪೂರ್ಣ ಫಿಟ್ ಆಗಿದ್ದು 44ನೇ ವಯಸ್ಸಿನಲ್ಲಿ ಕಂಬ್ಯಾಕ್ ಮಾಡಲಿದ್ದಾರೆ. ಈ ಬಗ್ಗೆ ಟೆನಿಸ್ ಜಗತ್ತೇ ಖುಷಿ ಮತ್ತು ಅಭಿನಂದನೆ ವ್ಯಕ್ತಪಡಿಸಿದ್ದು, ಜೊಕೊವಿಚ್, ಸೆಬಲೆಂಕಾ ಸೇರಿದಂತೆ ಟೆನಿಸ್ ದಿಗ್ಗಜರು ಸ್ವಾಗತಿಸಿದ್ದಾರೆ. ವಿಲಿಯಮ್ಸ್ ಮೊದಲನೇ ಸುತ್ತಿನಲ್ಲಿ ಎಮ್ ಜಾಯಿಂಟ್ ಅವರನ್ನು ಎದುರಿಸಲಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6028

ಎಡದಿಂದ ಬಲಕ್ಕೆ
1.ಕೋಲಿನಂತೆ ದೇಹ ಚಾಚಿ ನಮಸ್ಕರಿಸುವುದು (5)
3.ಉದಾತ್ತ ಗುಣವುಳ್ಳ ದೊಡ್ಡ ಮನುಷ್ಯ (3)
4.ಮೂಕನ ನಡುವೆ ಇರುವ ಇಲಿ (3)
5.ಇದು ಶಾಸನಸಭೆ-ಪಾರ್ಲಿಮೆಂಟು (3)
9.ತಪ್ಪಿಸಿಕೊಳ್ಳಲಾಗದ ಕಾಲನ ಹಗ್ಗ (4)
11.ಕರ್ನಾಟಕ ಸಂಗೀತವನ್ನು ಹೀಗೂ ಕರೆಯುತ್ತಾರೆ (4)
13.ಈ ಶ್ರೀಗಂಧದ ಮರ ಒಂದು ವಾಹಿನಿಯ ಹೆಸರಾಗಿದೆ (3)
15.ಎರಡನೆಯ ತೀರ್ಥಂಕರರ ಹೆಸರು (3)
16.ಕೇಳದೆ ಉಪಯೋಗಿಸಿಕೊಳ್ಳುವುದು (3)
17.ಕನಸಿನಲ್ಲಿ ನಿದ್ದೆಯಲ್ಲಿ ಮಾತನಾಡುವಿಕೆಯಿದೆ (5)

ಮೇಲಿನಿಂದ ಕೆಳಕ್ಕೆ
1.ಹಲ್ಲಿನ ಮೂಲಪ್ರದೇಶದಿಂದ ಹುಟ್ಟುವ ವರ್ಣ (5)
2.ಉಲ್ಟಾ ಮೂಡಿದ ಉತ್ಸಾಹ-ಅಧಿಕವಾದ ಸಂತೋಷ (3)
3.ಮತ್ತು ಇದರ ನಡುವೆ ಶ್ರೇಷ್ಠವಾದದ್ದಿದೆ (3)
6.ಅಂತಃಕರುಣೆ-ಸಹಾನುಭೂತಿಯುಳ್ಳವನು (4)
7.ಗಣಿತದಲ್ಲಿ ಭಿನ್ನರಾಶಿಯಲ್ಲಿ ಭಾಗಗಳು (4)
8.ಬಿಲ್ಲಿಗೆ ಹೂಡಿದ ಶರ ಕಡೆಯಲ್ಲಿ ದೀರ್ಘವಾಗಿದೆ (2)
10.ಚರ್ಮದ ಮೇಲಿನ ಕಪ್ಪುಬಣ್ಣದ ಗುರುತು (2)
12.ದಾರಿ ಕಾಣದಂತೆ ಮಾಡುವಿಕೆ (5)
13.ಜುಟ್ಟು-ಶಿಖೆಯ ಸಮಾನಪದ (3)
14.ಪಾಪಿಗಳನ್ನು ಶಿಕ್ಷಿಸುವ ಲೋಕ (3)

6027 ಉತ್ತರ

ಎಡದಿಂದ ಬಲಕ್ಕೆ:
1.ಪದವೀಧರ 5.ಸಾಟಿ
6.ಆವೇಶ 7.ಸುಲಕ್ಷಣ
8.ನಿಗರ್ವ 10.ತಿಲಕ
12.ಗಣಾಗ್ರಣಿ
14.ಸಂಗಮ 16.ಚಾಳಿ
17.ರಕ್ತಸಂಚಾರ

ಮೇಲಿನಿಂದ ಕೆಳಕ್ಕೆ
: 1.ಪದವಿಪೂರ್ವ
2.ಲಕ್ಷಿಸು 3.ರಸಾತಲ
4.ಪ್ರವೇಶ 6.ಆಣತಿ
9.ನಿಗಮ 11.ಕಮಲಾಕರ
13.ಗ್ರಹಚಾರ
14.ಸಂದೇಹ
15.ಸಂಗೀತ

ಕಿರುಸುದ್ದಿ

ಜೂ.29: ಕುಕ್ಕೆ ದೇವಾಲಯಕ್ಕೆ ಮುಜರಾಯಿ ಆಯುಕ್ತರ ಭೇಟಿ

ಸುಬ್ರಹ್ಮಣ್ಯ: ರಾಜ್ಯದ ನಂಬರ್ ವನ್ ಆದಾಯದ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಜೂ. 29ರಂದು ಸೋಮವಾರ ರಾಜ್ಯ ಧಾರ್ಮಿಕ ದತ್ತಿ ಆಯುಕ್ತ ಶರತ್ ಬಿ. ಭೇಟಿ ನೀಡಲಿದ್ದಾರೆ. ಭಾನುವಾರ ರಾತ್ರಿ 7.30ಕ್ಕೆ ಕ್ಷೇತ್ರಕ್ಕೆ ಆಗಮಿಸುವ ಆಯುಕ್ತರು ರಾತ್ರಿ ಕುಕ್ಕೆಯಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಸೋಮವಾರ ಬೆಳಗ್ಗೆ ಶ್ರೀ ದೇವರ ದರುಶನ ಪಡೆದ ಬಳಿಕ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ. ಮುಂದೆ ನಡೆಯಲಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅಧಿಕಾರಿಗಳಿಂದ ವಿವರ ಪಡೆದುಕೊಂಡು ಪರಿಶೀಲಿಸಿ ಮಾರ್ಗದರ್ಶನ ನೀಡಲಿದ್ದಾರೆ ಎಂದು ತಿಳಿದು ಬಂದಿದೆ.

ಕೊಲ್ಲೂರಿಗೆ

ಇಂದು ಧಾರ್ಮಿಕ ದತ್ತಿ ಆಯುಕ್ತರು ಕೊಲ್ಲೂರಿಗೆ ಭೇಟಿ ನೀಡಲಿದ್ದಾರೆ. ಶನಿವಾರ ಕ್ಷೇತ್ರಕ್ಕೆ ಆಗಮಿಸಿ ವಾಸ್ತವ್ಯ ಹೂಡಲಿದ್ದು ಭಾನುವಾರ ಕೊಲ್ಲೂರಿನಲ್ಲಿ ಪ್ರಗತಿ ಪರಿಶೀಲನೆ ಮಾಡಲಿದ್ದಾರೆ. ಬಳಿಕ ಮದ್ಯಾಹ್ನ 2 ಗಂಟೆಗೆ ಕೊಲ್ಲೂರಿನಿಂದ ಹೊರಟು ರಾತ್ರಿ 7.30ಕ್ಕೆ ಕುಕ್ಕೆಗೆ ಆಗಮಿಸಲಿದ್ದಾರೆ.

ನೇಣು ಬಿಗಿದು ವ್ಯಕ್ತಿ ಆತ್ಮಹತ್ಯೆ

ಮುಳ್ಳೇರಿಯ: ಕೆಲಸಕ್ಕೆ ತೆರಳುವುದಾಗಿ ಮನೆಯವರಿಗೆ ತಿಳಿಸಿ ಹೋಗಿದ್ದ ವ್ಯಕ್ತಿಯೋರ್ವ ಕಾಡಿನೊಳಗೆ ನೇಣು ಬಿಗಿದು ಆತ್ಮಹತ್ಯೆಗೈದ ಘಟನೆ ವರದಿಯಾಗಿದೆ. ಮೂಲತಃ ಆಡೂರು ಬಳವಂತಡ್ಕ ನಿವಾಸಿ, ಪ್ರಸ್ತುತ ಮಣಿಯೂರಿನಲ್ಲಿ ವಾಸಿಸುತ್ತಿದ್ದ ಬಿ.ಸಿ.ಚಂದ್ರ ನಾಯ್ಕ್ (56) ಸಾವಿಗೀಡಾದವರು. ಅವರು ಕಲ್ಲುಕಟ್ಟುವ ಮೇಸ್ತ್ರಿಯಾಗಿದ್ದರು. ಶುಕ್ರವಾರ ಬೆಳಗ್ಗೆ ಎಂದಿನಂತೆ ತೆರಳಿದ್ದರು. ಸಂಜೆ ಕಟ್ಟಿಗೆ ಸಂಗ್ರಹಿಸುವ ಯಾರೋ ಅವರ ಮೃತದೇಹವನ್ನು ಕಾಡಿನಲ್ಲಿ ಗಮನಿಸಿದ್ದಾರೆನ್ನಲಾಗಿದೆ. ಬಳಿಕ ಆದೂರು ಪೊಲೀಸರಿಗೆ ಮತ್ತು ಸ್ಥಳೀಯರಿಗೆ ಮಾಹಿತಿ ನೀಡಲಾಯಿತು. ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ದಿ.ಚನಿಯ ನಾಯ್ಕ್ ಮತ್ತು ಲಕ್ಷ್ಮಿ ದಂಪತಿಯ ಪುತ್ರನಾದ ಮೃತರು ಪತ್ನಿ ಭವಾನಿ, ಮಕ್ಕಳಾದ ಸಂಧ್ಯಾ, ಅರುಣ್, ಸತೀಶ, ರೋಹಿತ್, ಸರಿತ್ ಅವರನ್ನು ಅಗಲಿದ್ದಾರೆ.

ಬೈಕ್- ಬಸ್ ಡಿಕ್ಕಿ: ಸವಾರ ಗಂಭೀರ

ಮಡಿಕೇರಿ: ಬೈಕ್ ಹಾಗೂ ಬಸ್ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡ ಘಟನೆ ಪಾಲಿಬೆಟ್ಟ ಸಮೀಪದ ಹಂಚಿ ಕಾಡು ಪ್ರದೇಶದಲ್ಲಿ ಶನಿವಾರ ನಡೆದಿದೆ. ಅಪಘಾತದ ತೀವ್ರತೆಗೆ ಬೈಕ್ ಸವಾರ ಮಿಲನ್ ಅವರಿಗೆ ತಲೆ ಸೇರಿದಂತೆ ದೇಹದ ವಿವಿಧ ಭಾಗಗಳಿಗೆ ಗಂಭೀರ ಗಾಯಗಳಾಗಿವೆ. ಸ್ಥಳೀಯರು ತಕ್ಷಣ ನೆರವಿಗೆ ಧಾವಿಸಿ ಅವರನ್ನು ಅಮ್ಮತ್ತಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಬಳಿಕ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ. ಘಟನೆಯ ಮಾಹಿತಿ ತಿಳಿದು ಸಿದ್ದಾಪುರ ಠಾಣಾ ಅಧಿಕಾರಿ ಮಂಜುನಾಥ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

16 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯ ಬಂಧನ

ಉಪ್ಪಿನಂಗಡಿ: ಕಳೆದ 16 ವರ್ಷಗಳಿಂದ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಉಪ್ಪಿನಂಗಡಿ ಪೊಲೀಸರು ದಸ್ತಗಿರಿ ಮಾಡಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.



ತಮಿಳುನಾಡಿನ ತಿರುಣವೇಲಿ ನಿವಾಸಿ ಮಾಡ ಸ್ವಾಮಿ ಬಂಧಿತ ಆರೋಪಿ. ಈತನ ಮೇಲೆ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆದರೆ ಕಳೆದ 16 ವರ್ಷದಿಂದ ಈತ ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದ. ಈತನನ್ನು ಉಪ್ಪಿನಂಗಡಿ ಪೊಲೀಸರು ಕೃಷ್ಣನಗರ ಎಂಬಲ್ಲಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಲಯವು ಈತನಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

ಮದ್ಯ ಸಾಗಾಟ ಪತ್ತೆ

ವಿಟ್ಲ: ಮಂಗಿಲಪದವಿನ ಬಸ್ ತಂಗುದಾಣದಲ್ಲಿ ಅನುಮಾನಾಸ್ಪದ ರೀತಿಯಲ್ಲಿರುವುದನ್ನು ಕಂಡು ವಿಚಾರಿಸಿದಾಗ ಆತ ಬಳಿಯಿದ್ದ ಚೀಲದಲ್ಲಿ 4.5 ಲೀಟರ್ ಮದ್ಯ ಪತ್ತೆಯಾಗಿದ್ದು, ಈ ಬಗ್ಗೆ ಪ್ರಕರಣ ದಾಖಲಾಗಿದೆ. ಮಂಗಿಲಪದವು ಬಸ್ ತಂಗುದಾಣದ ಬಳಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಮೇರೆಗೆ ವಿಟ್ಲ ಪೊಲೀಸ್ ಠಾಣಾ ಪೊಲೀಸ್ ನಿರೀಕ್ಷಕ ಪ್ರಕಾಶ ದೇವಾಡಿಗ ತಂಡ ತೆರಳಿದ್ದು, ಅನುಮಾನಾಸ್ಪದ ರೀತಿಯಲ್ಲಿ ಪತ್ತೆಯಾದ ವಿಟ್ಲ ಕಸಬಾ ನಿವಾಸಿ ಲಕ್ಷ್ಮಣ ಗೌಡ (54) ವಿಚಾರಿಸಿದಾಗ ವಿವಿಧ ಮಾದರಿಯ ಮದ್ಯ ಹಾಗೂ ಮದ್ಯ ಮಾರಾಟದಿಂದ ಸಂಗ್ರಹವಾದ 300 ರೂ. ಪತ್ತೆಯಾಗಿದೆ. ಯಾವುದೇ ಪರವಾನಿಗೆ ಇಲ್ಲದೇ ಗಿರಾಕಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ದೃಢಪಟ್ಟಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ.

ಕಾಸರಗೋಡು ಜಿಲ್ಲಾ ಅಭಿವೃದ್ಧಿ ಸಮಿತಿ ಸಭೆ | ಜಿಲ್ಲಾಧಿಕಾರಿ, ಶಾಸಕರು, ಅಧಿಕಾರಿಗಳ ಉಪಸ್ಥಿತಿ

ಭೂಕುಸಿತ ತಡೆಗೆ ವಿಶೇಷ ಗಮನವಿರಲಿ

ಕಾಸರಗೋಡು: ಜಿಲ್ಲೆಯ ರಾ.ಹೆದ್ದಾರಿಯಲ್ಲಿನ ಸರ್ವೀಸ್ ರಸ್ತೆಗಳನ್ನು ಪೂರ್ಣಗೊಳಿಸಬೇಕು. ಮಳೆನೀರು ಸಂಗ್ರಹವನ್ನು ಸರಿಪಡಿಸಬೇಕು ಮತ್ತು ಭೂಕುಸಿತಗಳನ್ನು ತಡೆಗಟ್ಟುವಲ್ಲಿ ರಾ.ಹೆ. ಪ್ರಾಧಿಕಾರವು ವಿಶೇಷವಾಗಿ ಜಾಗರೂಕತೆ ವಹಿಸಬೇಕು ಎಂದು ಕಾಸರಗೋಡು ಜಿಲ್ಲಾ ಅಭಿವೃದ್ಧಿ ಸಮಿತಿ ಸಭೆಯು ನಿರ್ದೇಶನ ನೀಡಿದೆ.

ಮಾತ್ರವಲ್ಲದೆ ನಿರ್ಮಾಣ ಗುತ್ತಿಗೆ ಕಂಪೆನಿಗಳು ಸಕಾಲಿಕವಾಗಿ ನಿರ್ಮಾಣ ಕಾರ್ಯವನ್ನು ಕೈಗೊಳ್ಳಬೇಕು. ಚೆರ್ಕಳ ಮತ್ತು ಬೇವಿಂಜೆಯಲ್ಲಿನ ರಾ.ಹೆ.ಯಲ್ಲಿ ಸಂಭವಿಸಿರುವ ಸಮಸ್ಯೆಗಳನ್ನು ಕೂಡಲೇ ಪರಿಹರಿಸಬೇಕು ಎಂದು ಸೂಚಿಸಲಾಗಿದೆ.

ಕಾಸರಗೋಡು ಕಲೆಕ್ಟರೇಟ್‌ನ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ನಡೆದ ಜಿಲ್ಲಾ ಅಭಿವೃದ್ಧಿ ಸಮಿತಿ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ವಹಿಸಿದ್ದರು. ಶಾಸಕರಾದ ಎ.ಕೆ.ಎಂ.ಅಶ್ರಫ್, ಕಲ್ಲಟ್ರ ಮಾಹಿನ್, ಕೆ.ನೀಲಕಂಠನ್, ಗೋವಿಂದನ್ ಪಳ್ಳಿಕಾಪಿಲ್, ಜಿ.ಸಂದೀಪ್ ವಾರಿಯರ್ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಜಿಲ್ಲಾ ಯೋಜನಾಧಿಕಾರಿ ಟಿ.ರಾಜೇಶ್ ಸ್ವಾಗತಿಸಿ, ವಂದಿಸಿದರು. ಎಡಿಎಂ ಉದಯಕುಮಾರ್ ಮತ್ತು ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಸೋಂಕು ನಿಯಂತ್ರಣ ಜಾರಿಗೊಳಿಸಬೇಕು

ಬೇರೆ ರಾಜ್ಯಗಳಿಂದ ವಲಸೆ ಬಂದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಕೇಂದ್ರಗಳಲ್ಲಿ ಸಾಂಕ್ರಾಮಿಕ ರೋಗ ನಿಯಂತ್ರಣವನ್ನು ಬಿಗುಗೊಳಿಸಬೇಕು ಎಂದು ಶಾಸಕ ಎ.ಕೆ.ಎಂ.ಅಶ್ರಫ್ ಹೇಳಿದರು. ಈ ನಿಟ್ಟಿನಲ್ಲಿ ವಿಶೇಷ ತಂಡವನ್ನು ರಚಿಸಲಾಗಿದ್ದು, ಅದರಂತೆ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದು ಜಿಲ್ಲಾ ವೈದ್ಯಾಧಿಕಾರಿ ಮತ್ತು ಆರೋಗ್ಯ ಅಧಿಕಾರಿಗಳು ಮಾಹಿತಿ ನೀಡಿದರು. ಪ್ರತಿ ತಿಂಗಳು ಅಂತಹ ಕೇಂದ್ರಗಳಲ್ಲಿ ತಪಾಸಣೆ ನಡೆಸಲಾಗುತ್ತಿದೆ. ಟೈಫಾಯ್ಡ್, ಮಲೇರಿಯಾ ಮತ್ತು ಕುಷ್ಠರೋಗದಂತಹ ಸಾಂಕ್ರಾಮಿಕ ರೋಗಗಳು ವರದಿಯಾಗಿವೆ ಎಂಬುದನ್ನು ಉಲ್ಲೇಖಿಸಲಾಯಿತು.

ನೀರಿನ ಬವಣೆ ಪರಿಹರಿಸಬೇಕು

ಉಪ್ಪಳ ಗೇಟ್ ಮತ್ತು ಹೊಸಂಗಡಿಯ ರಸ್ತೆಯಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕು. ಅನಂತಪುರ ಕೈಗಾರಿಕಾ ಉದ್ಯಾನವನದಲ್ಲಿ ತೈಲ ಮರುಬಳಕೆ ಕಂಪೆನಿಯಿಂದ ಉಂಟಾಗುತ್ತಿರುವ ಪರಿಸರ ಮತ್ತು ಆರೋಗ್ಯ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆಯೂ ಶಾಸಕರು ಪ್ರಸ್ತಾಪಿಸಿದರು. ಜಿಲ್ಲಾಧಿಕಾರಿಗಳು ಈ ಹಿಂದೆ ಕಂಪೆನಿಯನ್ನು ಮುಚ್ಚಲು ಆದೇಶಿಸಿದ್ದರು.

ಜಿಲ್ಲಾಡಳಿತದಿಂದ ಅನುಮತಿ ಸಿಗುವವರೆಗೆ ತೈಲ ಮರುಬಳಕೆ ಘಟಕದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವಂತೆ ಜಿಲ್ಲಾಧಿಕಾರಿ ಮಾಲಿನ್ಯ ನಿಯಂತ್ರಣ ಮಂಡಳಿಗೆ ನಿರ್ದೇಶಿಸಿರುವುದನ್ನು ಉಲ್ಲೇಖಿಸಿದರು.

ಮಹಿಳಾ ಹಾಸ್ಟೆಲ್ ನಿರ್ಮಾಣ

ಕಾಸರಗೋಡು ವಿಧಾನಸಭಾ ಕ್ಷೇತ್ರದ ವಿವಿಧ ಸಮಸ್ಯೆಗಳನ್ನು ಶಾಸಕ ಕಲ್ಲಟ್ರ ಮಾಹಿನ್ ಪ್ರಸ್ತಾಪಿಸಿದರು. ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿನ ಬಳಿ ನರ್ಸಿಂಗ್ ಕಾಲೇಜು ಮಹಿಳಾ ಹಾಸ್ಟೆಲ್ ನಿರ್ಮಾಣದ ಕುರಿತು ಶಾಸಕರ ಪ್ರಶ್ನೆಗೆ ಉತ್ತರಿಸಿದ ಪಿಡಬ್ಲ್ಯೂಡಿ ಕಟ್ಟಡ ಕಾರ್ಯನಿರ್ವಾಹಕ ಇಂಜಿನಿಯರ್ ಮಾತನಾಡಿ, ಹಾಸ್ಟೆಲ್ ನಿರ್ಮಾಣವನ್ನು ತ್ವರಿತಗೊಳಿಸಲು ಈ ತಿಂಗಳು ಹಾಸ್ಟೆಲ್‌ನ ರೇಖಾಚಿತ್ರಗಳನ್ನು ಲಭ್ಯವಾಗುವಂತೆ ಮಾಡಲಾಗುವುದು ಎಂದು ತಿಳಿಸಿದರು. ಕಾಸರಗೋಡು ವೈದ್ಯಕೀಯ ಕಾಲೇಜಿನಲ್ಲಿ ಅಧ್ಯಯನ ಸೌಲಭ್ಯಗಳನ್ನು ಸುಧಾರಿಸಲು ಜಿಲ್ಲಾಧಿಕಾರಿಗಳು ಪ್ರತಿ ತಿಂಗಳು ಸಭೆ ನಡೆಸುತ್ತಿದ್ದಾರೆ ಎಂಬುದನ್ನು ತಿಳಿಸಲಾಯಿತು.

ಪ್ರಯೋಗಾಲಯ ಉಪಕರಣಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದ ಕೆಡಿಪಿ ನಿಧಿಯನ್ನು ಬಳಸಿಕೊಂಡು ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಮೂರು ಪ್ರಯೋಗಾಲಯಗಳ ಕಾರ್ಯಾಚರಣೆಯನ್ನು ಪೂರ್ಣಗೊಳಿಸಲಾಗಿದೆ ಮತ್ತು ಉಳಿದ ಒಂಭತ್ತು ಪ್ರಯೋಗಾಲಯಗಳ ಕಾರ್ಯಾಚರಣೆಯನ್ನು ಪ್ರಾರಂಭಿಸಲು ಕೆಸಿಎಂಎಲ್ ಶೀಘ್ರದಲ್ಲೇ ಕ್ರಮ ಕೈಗೊಳ್ಳಲಿದೆ ಎಂದು ವೈದ್ಯಕೀಯ ಕಾಲೇಜು ಪ್ರಾಂಶುಪಾಲರು ಸಭೆಯಲ್ಲಿ ಹೇಳಿದರು.

ಚೆರ್ಕಳ ರಾಷ್ಟ್ರೀಯ ಹೆದ್ದಾರಿಯಲ್ಲಿನ ಸರ್ವೀಸ್ ರಸ್ತೆ ಹಾನಿಗೊಳಗಾಗಿ ನೀರು ಕಟ್ಟಿ ನಿಂತಿರುವುದರಿಂದ ಚೆರ್ಕಳ ಬಸ್ ನಿಲ್ದಾಣಕ್ಕೆ ಬಸ್‌ಗಳು ಪ್ರವೇಶಿಸದಿರುವ ಸಮಸ್ಯೆಯ ಬಗ್ಗೆ ಶಾಸಕರು ಸಭೆಗೆ ಮಾಹಿತಿ ನೀಡಿದರು. ಬೀರಂತಬೈಲು ಸುನಾಮಿ ಫ್ಲಾಟ್‌ನ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಶಾಸಕರು ಪ್ರಸ್ತಾಪಿಸಿದರು ಮತ್ತು ಸೆಪ್ಟಿಕ್ ಟ್ಯಾಂಕ್‌ನ್ನು ಸ್ವಚ್ಛಗೊಳಿಸಲಾಗಿದೆ ಮತ್ತು ಸುನಾಮಿ ಫ್ಲಾಟ್ ಕಟ್ಟಡ ಯೋಜನೆಯ ಕೆಲಸವನ್ನು ತಕ್ಷಣ ಪ್ರಾರಂಭಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು. ತಳಂಗರೆ ಸ್ಮಾರ್ಟ್ ವಿಲೇಜ್ ಕಚೇರಿಯನ್ನು ನಿರ್ಮಿಸುವ ನಿಟ್ಟಿನಲ್ಲಿ ಸ್ಥಳವನ್ನು ಹುಡುಕಲು ಅಧ್ಯಯನ ನಡೆಸಿ ವರದಿ ಸಲ್ಲಿಸಲು ತಹಶೀಲ್ದಾರ್‌ಗೆ ಸೂಚಿಸಲಾಗಿದೆ ಎಂದು ಎಡಿಎಂ ಸಭೆಗೆ ಮಾಹಿತಿ ನೀಡಿದರು. ಉದುಮ ಕ್ಷೇತ್ರದ ಕುಟುಂಬ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆಯ ಸಮಸ್ಯೆಯನ್ನು ಪರಿಹರಿಸಬೇಕು ಉದುಮ ಕ್ಷೇತ್ರದ ವಿವಿಧ ಕುಟುಂಬ ಆರೋಗ್ಯ ಕೇಂದ್ರಗಳಲ್ಲಿ ಮಧ್ಯಾಹ್ನದ ನಂತರ ವೈದ್ಯರು ಲಭ್ಯವಿಲ್ಲದಿರುವ ಸಮಸ್ಯೆ ಬಗ್ಗೆ ಶಾಸಕ ಕೆ.ನೀಲಕಂಠನ್ ಗಮನ ಸೆಳೆದರು. ವೈದ್ಯರನ್ನು ನೇಮಿಸುವ ಮೂಲಕ ಸಮಸ್ಯೆಯನ್ನು ಪರಿಹರಿಸಬಹುದು ಎಂದು ಜಿಲ್ಲಾ ವೈದ್ಯಾಧಿಕಾರಿ ಸಭೆಗೆ ತಿಳಿಸಿದರು.

ಚಟ್ಟಂಚಾಲ್ ಟಾಟಾ ಕೋವಿಡ್ ಆಸ್ಪತ್ರೆಯ ಪ್ರಸ್ತುತ ಪರಿಸ್ಥಿತಿಗೆ ಸಂಬಂಧಿಸಿದಂತೆ ಟಾಟಾ ಟ್ರಸ್ಟ್ ಸರಕಾರಿ ಆಸ್ಪತ್ರೆಯು ನಿರ್ಣಾಯಕ ಆರೈಕೆ ಘಟಕದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದೆ ಮತ್ತು ಕೆಲಸವು ಬಹಳ ವೇಗವಾಗಿ ಪ್ರಗತಿಯಲ್ಲಿದೆ ಎಂದು ಜಿಲ್ಲಾ ವೈದ್ಯಾಧಿಕಾರಿ ಸಭೆಗೆ ಮಾಹಿತಿಯಿತ್ತರು.

ತೃಕ್ಕನ್ನಾಡು ಕರಾವಳಿಯಲ್ಲಿ ಸಮುದ್ರ ಕೊರೆತವನ್ನು ತಡೆಗಟ್ಟಲು 50 ಲಕ್ಷ ರೂ. ಅನುದಾನದಲ್ಲಿ 128 ಮೀಟರ್ ಉದ್ದದ ಗ್ರಾನೈಟ್ ಡಂಪಿಂಗ್ ಕೆಲಸ ಪ್ರಗತಿಯಲ್ಲಿದೆ ಮತ್ತು ಸುಮಾರು ಶೇಕಡಾ 50ರಷ್ಟು ಕೆಲಸ ಪೂರ್ಣಗೊಂಡಿದೆ ಎಂದು ಪ್ರಮುಖ ನೀರಾವರಿ ಕಾರ್ಯನಿರ್ವಾಹಕ ಇಂಜಿನಿಯರ್ ಹೇಳಿದರು.



ಕುಳಂಗಟ್ ಗುಡ್ಡ: ವಿಪತ್ತು ಪರಿಹಾರ ಸಮಿತಿ ರಚನೆ

ಕಳೆದ ಮಳೆಗಾಲದಲ್ಲಿ ಕುಳಂಗಟ್ ಗುಡ್ಡಗಳಲ್ಲಿ ಸಂಭವಿಸಿದ ಭೂಕುಸಿತ ಹಿನ್ನೆಲೆಯಲ್ಲಿ ಕೈಗೊಂಡಿರುವ ಚಟುವಟಿಕೆಗಳ ಬಗ್ಗೆ ಶಾಸಕ ಜಿ.ಸಂದೀಪ್ ವಾರಿಯರ್ ವಿಚಾರಿಸಿದರು. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಕಾಞಂಗಾಡು ಆರ್‌ಡಿಒ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು. ವಿವಿಧ ಇಲಾಖೆಗಳ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು. ನಂತರ ಭೂಕುಸಿತ ಮತ್ತು ನೀರಿನ ಹರಿವಿನಿಂದ ಉಂಟಾಗುವ ಅಪಾಯವನ್ನು ಕಡಿಮೆ ಮಾಡಲು ವಿವಿಧ ಯೋಜನೆಗಳನ್ನು ರೂಪಿಸಲಾಗಿದ್ದು, ಆ ಕೆಲಸ ಪ್ರಗತಿಯಲ್ಲಿದೆ. ಒಳಚರಂಡಿ ನಿರ್ಮಿಸುವ ಅಂದಾಜು ಯೋಜನೆಯನ್ನು ಪರಿಶಿಷ್ಟ ಜಾತಿ ಅಭಿವೃದ್ಧಿ ಇಲಾಖೆಗೆ ಹಸ್ತಾಂತರಿಸಲಾಗಿದೆ ಎಂದು ಎಲ್‌ಎಸ್‌ಜಿಡಿ ಜಂಟಿ ನಿರ್ದೇಶಕರು ಮಾಹಿತಿ ನೀಡಿದರು. ಈ ನಿಟ್ಟಿನಲ್ಲಿ ನೀಲೇಶ್ವರ ಬ್ಲಾಕ್ ಇಂಜಿನಿಯರಿಂಗ್ ಇಲಾಖೆ ಅಧಿಕಾರಿಗಳು ಸ್ಥಳ ಸಂದರ್ಶಿಸಿದ್ದರು ಎಂಬುದನ್ನು ವಿವರಿಸಲಾಯಿತು.

ಕೆಎಸ್‌ಆರ್‌ಟಿಸಿ ಸೇವೆ

ಚಂದ್ರಗಿರಿ ಮತ್ತು ಪೆರಿಯ ಮಾರ್ಗಗಳ ಮೂಲಕ ಕಾಸರಗೋಡು – ಕಾಞಂಗಾಡು ರೂಟ್‌ನಲ್ಲಿ ಕೆಎಸ್‌ಆರ್‌ಟಿಸಿ ಬಸ್ ಸೇವೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸಬೇಕು ಎಂದು ಶಾಸಕ ಗೋವಿಂದನ್ ಪಳ್ಳಿಕಾಪಿಲ್ ತಿಳಿಸಿದರು. ಕಾಞಂಗಾಡಿನಿಂದ ಕಾಸರಗೋಡಿಗೆ ರಾತ್ರಿ 9 ಗಂಟೆಯ ನಂತರ ಆಗಮಿಸಲು ಬಸ್ ಸೌಲಭ್ಯವಿಲ್ಲದ ಪರಿಸ್ಥಿತಿಯಿದೆ. ಸಾರ್ವಜನಿಕ ಸಾರಿಗೆಯನ್ನು ಹೆಚ್ಚಾಗಿ ಅವಲಂಬಿಸಿರುವ ಜನರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬೇಕು ಮತ್ತು ರಾತ್ರಿ 9 ಗಂಟೆಯ ನಂತರವೂ ಆ ಸೇವೆಯ ಅಗತ್ಯವಿದೆ ಎಂದು ಶಾಸಕರು ನುಡಿದರು. ತಾಲೂಕು ಅಭಿವೃದ್ಧಿ ಸಮಿತಿ ಸಭೆಗಳಲ್ಲಿ ವಿವಿಧ ಇಲಾಖೆಗಳ ಪ್ರತಿನಿಧಿಗಳು ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರತಿನಿಧಿಗಳು ಕಡ್ಡಾಯವಾಗಿರಬೇಕು ಎಂದು ಶಾಸಕರು ಹೇಳಿದರು. ಪನತ್ತಡಿಯಲ್ಲಿರುವ ಎಂಡೋಸಲ್ಫಾನ್ ಆಂಬ್ಯುಲೆನ್ಸ್ ಮೂರು ವರ್ಷಗಳಿಂದ ನಿಷ್ಫಲವಾಗಿದ್ದು, ಈ ಸಮಸ್ಯೆಯನ್ನು ಪರಿಹರಿಸಲು ಶಾಸಕರು ಸೂಚಿಸಿದರು. ಅಜಾನೂರು ಕುಟುಂಬ ಆರೋಗ್ಯ ಕೇಂದ್ರದ ಡಯಾಲಿಸಿಸ್ ಘಟಕಕ್ಕೆ ಆಗಮಿಸುವ ರೋಗಿಗಳಿಗೆ ಹೆಚ್ಚಿನ ವ್ಯವಸ್ಥೆ ಒದಗಿಸಲಾಗಿದೆ ಮತ್ತು ಈಗ ಕೇಂದ್ರವು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಡಿಎಂಒ ಮಾಹಿತಿ ನೀಡಿದರು.

ನೀರಕಟ್ಟೆಯಲ್ಲಿ ಸಾಗರ್ ಪವರ್ ಪ್ರಾಜೆಕ್ಟ್: ಮತ್ತೆ ವಿದ್ಯುತ್ ಉತ್ಪಾದನೆಗೆ ಸಿದ್ಧ



ಉಪ್ಪಿನಂಗಡಿ: 2019ರಲ್ಲಿ ಭೀಕರ ನೆರೆಗೆ ಸಿಲುಕಿ ಕಾರ್ಯ ಸ್ಥಗಿತಗೊಳಿಸಿದ್ದ ನೀರಕಟ್ಟೆಯ ಸಾಗರ್ ಪವರ್ ಪ್ರಾಜೆಕ್ಟ್ ಎಲ್ಲಾ ಅಡೆತಡೆಗಳನ್ನು ದಾಟಿ 2026ರ ಈ ಮಳೆಗಾಲದಲ್ಲಿ ಮತ್ತೆ ವಿದ್ಯುತ್ ಉತ್ಪಾದನೆಗೆ ಸಿದ್ಧವಾಗಿದೆ.

2019ರಲ್ಲಿ ನೇತ್ರಾವತಿ ನದಿಯಲ್ಲಿ ಉಂಟಾದ ಭಾರೀ ನೀರಿನ ಪ್ರವಾಹದಿಂದಾಗಿ ಡಿಢೀರ್ ನೆರೆಯುಂಟಾಗಿ ನೆರೆ ನೀರು ವಿದ್ಯುತ್ ಉತ್ಪಾದನಾ ಘಟಕದೊಳಗೆ ನುಗ್ಗಿ ಹಾನಿಯುಂಟಾಗಿತ್ತು. ತತ್ಪರಿಣಾಮ ವಿದ್ಯುತ್ ಉತ್ಪಾದನಾ ವ್ಯವಸ್ಥೆ ಸ್ಥಗಿತಗೊಂಡಂತಾಗಿತ್ತು. ಆ ಬಳಿಕ ಆಡಳಿತಾತ್ಮಕ ಸಮಸ್ಯೆಗಳು ಎದುರಾಗಿ ಕಳೆದ ಐದಾರು ವರ್ಷಗಳಲ್ಲಿ ವಿದ್ಯುತ್ ಉತ್ಪಾದನಾ ಘಟಕ ಸಂಪೂರ್ಣ ಸ್ತಬ್ಧಗೊಂಡು ಅಣೆಕಟ್ಟಿನ ಎಲ್ಲಾ ಗೇಟುಗಳು ತೆರಯಲ್ಪಟ್ಟು ನದಿ ನೀರು ಸರಾಗವಾಗಿ ಹರಿಯುವಂತಾಗಿತ್ತು. ಒಂದು ಹಂತದಲ್ಲಿ ಕೋಟ್ಯಾಂತರ ರೂಪಾಯಿ ವ್ಯಯಿಸಿ ನಿರ್ಮಿಸಲಾದ ಈ ಯೋಜನೆ ನಿಷ್ಪ್ರಯೋಜಕವಾಯಿತೇ ಎಂಬ ಪ್ರಶ್ನೆ ಮೂಡಿತ್ತು. ಸಾಲದಕ್ಕೆ ಈ ಘಟಕದ ನಿರ್ಮಾಣದ ಸಮಯದಲ್ಲೇ ವಿದ್ಯುತ್ ಉತ್ಪಾದನಾ ಘಟಕದಲ್ಲಿ ಕುಸಿತವುಂಟಾಗಿ ನಾಲ್ವರು ಸಾವನ್ನಪ್ಪಿದ ಹಿನ್ನೆಲೆಯನ್ನೂ ಈ ಘಟಕ ಹೊಂದಿತ್ತು.

ಈ ಅವಧಿಯಲ್ಲಿ ಬ್ಯಾಂಕಿಂಗ್ ವ್ಯವಹಾರದ ಸೂಕ್ಷ್ಮತೆಯನ್ನು ಬಗೆಹರಿಸಲಾಗಿ, ಹೊಸದಾದ ಆಡಳಿತ ವ್ಯವಸ್ಥೆ ರೂಪುಗೊಂಡು ವಿದ್ಯುತ್ ಉತ್ಪಾದನಾ ಘಟಕವನ್ನು ಪುನರಾರಂಭಿಸಲು ಮುಂದಾಗಿದೆ. ಅದರಂತೆ ಘಟಕದ ಯಂತ್ರೋಪಕರಣಗಳನ್ನು ಸುಸ್ಥಿತಿಗೊಳಪಡಿಸುವ ಕಾರ್ಯ ಭರದಿಂದ ನಡೆದಿದ್ದು, ಈ ಬಾರಿಯ ಮಳೆಗಾಲದಲ್ಲಿ ವಿದ್ಯುತ್ ಉತ್ಪಾದನೆಯ ಗುರಿಯನ್ನು ಹೊಂದಲಾಗಿದೆ.

ಪ್ರಸಕ್ತ ನೇತ್ರಾವತಿ ನದಿಯಲ್ಲಿ ಅಣೆಕಟ್ಟನ್ನು ನಿರ್ಮಿಸಿ ಚಾರ್ಮಾಡಿ, ದೊಂಡೊಳೆ, ನೆರಿಯ, ಹಣೆಯೂರು, ನೀರಕಟ್ಟೆ, ಶಂಭೂರು ಹೀಗೆ ಆರು ಕಡೆಗಳಲ್ಲಿ ಜಲ ವಿದ್ಯುತ್ ಘಟಕಗಳನ್ನು ನಿರ್ಮಿಸಲಾಗಿದ್ದು, ನದಿಯ ನೀರನ್ನು ಬಳಸಿ ವಿದ್ಯುತ್ ಉತ್ಪಾದಿಸುವ ಮೂಲಕ ಪ್ರಾಕೃತಿಕ ಸಂಪತ್ತಿನ ಸದ್ಬಳಕೆಯ ಗುರಿಯನ್ನು ಹೊಂದಲಾಗಿದೆ. ನೀರಕಟ್ಟೆಯ ಘಟಕದಿಂದ 15 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದ್ದು, ಅದನ್ನು ಗುರುವಾಯನಕೆರೆ ಸಬ್ ಸ್ಟೇಷನ್‌ಗೆ ವಿತರಿಸಲಾಗುತ್ತಿತ್ತು. ನೀರಕಟ್ಟೆಯಲ್ಲಿನ ಜಲ ವಿದ್ಯುತ್ ಸ್ಥಾವರದ ಅಣೆಕಟ್ಟಿನಲ್ಲಿ 8 ಗೇಟುಗಳಿದ್ದು, 3 ಟರ್ಮಿನಲ್ ಮೂಲಕ ನೀರು ಹಾಯಿಸಿ ವಿದ್ಯುತ್ ಉತ್ಪಾದನೆಯನ್ನು ಮಾಡಲಾಗುತ್ತಿದೆ. ಕಳೆದ ಎರಡು ದಿನಗಳಿಂದ ಅಣೆಕಟ್ಟಿನ ಗೇಟು ಅಳವಡಿಸಲಾಗಿದೆ.

ಈ ಬಗ್ಗೆ ಸ್ಥಾವರದ ಮೇನೇಜರ್ ಸುರೇಶ್ ಬಂಗೇರ ಮಾಧ್ಯಮದ ಜತೆ ಮಾತನಾಡುತ್ತಾ, ಈ ವರ್ಷದ ಮಳೆಗಾಲದಲ್ಲಿ ವಿದ್ಯುತ್ ಉತ್ಪಾದನೆಯ ಗುರಿಯನ್ನು ಹೊಂದಲಾಗಿದೆ. ಕಳೆದ ಐದಾರು ವರ್ಷಗಳಲ್ಲಿ ಸ್ಥಾವರ ಸ್ಥಗಿತಗೊಂಡ ಕಾರಣಕ್ಕೆ ತಾಂತ್ರಿಕ ವ್ಯವಸ್ಥೆಯಲ್ಲಿ ಸಮರ್ಪಕತೆಯನ್ನು ಸಾಧಿಸಿದ ತಕ್ಷಣ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಲಾಗುವುದು. ಈ ಕಾರಣಕ್ಕೆ ಕಳೆದ ಎರಡು ದಿನಗಳ ಹಿಂದೆ ಅಣೆಕಟ್ಟಿನ ಎಲ್ಲಾ ಗೇಟುಗಳನ್ನು ಹಾಕಲಾಗಿದ್ದು, ಸಮುದ್ರ ಮಟ್ಟದಿಂದ 38 ಮೀಟರ್ ಎತ್ತರದವರೆಗೆ ನೀರಿನ ಸಂಗ್ರಹವನ್ನು ಈ ಸ್ಥಾವರದಲ್ಲಿ ಹೊಂದುತ್ತೇವೆ. ಅದಕ್ಕಿಂತ ಹೆಚ್ಚಿಗೆ ನೀರು ನದಿಯಲ್ಲಿ ಬಂದಲ್ಲಿ ಗೇಟು ತೆರೆದು ನೀರಿನ ಮಟ್ಟವನ್ನು ಅಗತ್ಯಕ್ಕೆ ತಕ್ಕಂತೆ ಕಾಯ್ದುಕೊಳ್ಳಲಾಗುವುದೆಂದು ತಿಳಿಸಿದ್ದಾರೆ.

» 2019ರಲ್ಲಿ ನೇತ್ರಾವತಿ ನದಿಯಲ್ಲಿ ಉಂಟಾದ ಭಾರೀ ನೀರಿನ ಪ್ರವಾಹದಿಂದಾಗಿ ಡಿಢೀರ್ ನೆರೆಯುಂಟಾಗಿ ನೆರೆ ನೀರು ವಿದ್ಯುತ್ ಉತ್ಪಾದನಾ ಘಟಕದೊಳಗೆ ನುಗ್ಗಿ ಹಾನಿಯುಂಟಾಗಿತ್ತು.

» ಘಟಕದ ಯಂತ್ರೋಪಕರಣಗಳನ್ನು ಸುಸ್ಥಿತಿಗೊಳಪಡಿಸುವ ಕಾರ್ಯ ಭರದಿಂದ ನಡೆದಿದ್ದು, ಈ ಬಾರಿಯ ಮಳೆಗಾಲದಲ್ಲಿ ವಿದ್ಯುತ್ ಉತ್ಪಾದನೆಯ ಗುರಿಯನ್ನು ಹೊಂದಲಾಗಿದೆ.

ನಾಟೆಕಲ್‌ನಲ್ಲಿ ನಿಯಂತ್ರಣ ತಪ್ಪಿ ಧರೆಗೆ ಎರಗಿದ ಕಾಲೇಜು ಬಸ್

ಬಸ್ಸಿನ ಅಡಿಗೆ ಸಿಲುಕಿ ಬೈಕ್ ಸವಾರ ಸಾವು; ಸವಾರೆ ಗಾಯ



ಕೊಣಾಜೆ: ಕೊಣಾಜೆ ಠಾಣಾ ವ್ಯಾಪ್ತಿಯ ನಾಟೆಕಲ್ ತಿರುವು ಬಳಿ ವಿದ್ಯಾರ್ಥಿಗಳನ್ನು ಕರೆದುಕೊಂಡು ಮಂಗಳೂರು ಕಡೆಗೆ ಸಂಚರಿಸುತ್ತಿದ್ದ ಖಾಸಗಿ ಕಾಲೇಜೊಂದರ ಬಸ್ ಓವರ್ ಟೇಕ್ ಮಾಡುವ ಭರದಲ್ಲಿ ನಿಯಂತ್ರಣ ತಪ್ಪಿ ರಸ್ತೆ ಬದಿಯ ಕಮರಿಗೆ ಮಗುಚಿದ ಪರಿಣಾಮ ಹಲವು ವಿದ್ಯಾರ್ಥಿಗಳು ಗಾಯಗೊಂಡಿದ್ದು, ಇದೆ ಸಂದರ್ಭದಲ್ಲಿ ಬಸ್‌ನ ಅಡಿಗೆ ಸಿಲುಕಿದ್ದ ಬೈಕ್ ಸವಾರ ದಾರುಣವಾಗಿ ಮೃತಪಟ್ಟ ಘಟನೆ ಶನಿವಾರ ಸಂಭವಿಸಿದೆ. ಸಹ ಸವಾರೆ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.



ಮೃತಪಟ್ಟ ಬೈಕ್ ಸವಾರನನ್ನು ಮುಡಿಪು ಇನ್ಫೋಸಿಸ್ ಉದ್ಯೋಗಿ, ಚಿಕ್ಕಮಗಳೂರು ಮೂಲದ ಪ್ರಜ್ವಲ್ ಅರ್ನಾಲ್ಡ್ (30) ಎಂದು ಗುರುತಿಸಲಾಗಿದೆ. ಇದೇ ಬೈಕ್‌ನಲ್ಲಿ ಸಹ ಸವಾರೆಯಾಗಿದ್ದ ಸಹೋದ್ಯೋಗಿ ಗೆಳತಿ ಅಕ್ಷತಾ ಗಾಯಗಳೊಂದಿಗೆ ಆಸ್ಪತ್ರೆಗೆ ದಾಖಲಾಗಿದ್ದು ಅಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದು ಬಂದಿದೆ.

ವಾಲಿ ನಿಂತ ಬಸ್

ಪಿ.ಎ. ಕಾಲೇಜು ಬಸ್ ವಿದ್ಯಾರ್ಥಿಗಳನ್ನು ಕರೆದುಕೊಂಡು ಮಂಗಳೂರು ಕಡೆಗೆ ಸಂಚರಿಸುತ್ತಿದ್ದಾಗ ನಾಟೆಕಲ್ ಬಳಿ ಬೈಕನ್ನು ಓವರ್ ಟೇಕ್ ಮಾಡಿಕೊಂಡು ಹೋಗುತ್ತಿದ್ದಾಗ ಬಸ್ ವಾಲಿ ಸಮೀಪದ ಧರೆಗೆ ಒರಗಿ ನಿಂತಿದೆ. ಇದೇ ಸಂದರ್ಭದಲ್ಲಿ ಬಸ್‌ನಡಿ ದ್ವಿಚಕ್ರ ವಾಹನವೂ ಸಿಲುಕಿ ಹಾಕಿಕೊಂಡಿತ್ತು. ಇದರೊಂದಿಗೆ ಬೈಕ್ ಸವಾರ ಹಾಗೂ ಸಹಸವಾರೆ ಕೂಡಾ ಬಸ್ ನಡಿ ಸಿಲುಕಿಕೊಂಡಿದ್ದರು. ಕೂಡಲೇ ಸ್ಥಳದಲ್ಲಿದ್ದ ಸಾರ್ವಜನಿಕರು ತಕ್ಷಣ ಕ್ರೇನ್ ತರಿಸಿ ಬಸ್‌ನ್ನು ಮೇಲಕ್ಕೆತ್ತಿ ಸವಾರನನ್ನು ಹೊರತೆಗೆದರು. ಗಂಭೀರ ಗಾಯಗೊಂಡ ಇವರಿಬ್ಬರನ್ನೂ ತಕ್ಷಣವೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಬೈಕ್ ಸವಾರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಸಹ ಸವಾರೆ ಪ್ರಾಣ ಅಪಾಯದಿಂದ ಪಾರಾಗಿದ್ದಾರೆ.

ಘಟನೆಯ ಸಂದರ್ಭದಲ್ಲಿ ಸ್ಥಳದಲ್ಲಿ ಭಾರೀ ಸಂಖ್ಯೆಯಲ್ಲಿ ಸಾರ್ವಜನಿಕರು ಜಮಾಯಿಸಿದ್ದರು, ಕೆಲವು ಹೊತ್ತು ಸಂಚಾರಕ್ಕೂ ಅಡಚಣೆ ಉಂಟಾಯಿತು. ಮಂಗಳೂರು ದಕ್ಷಿಣ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಕ್ಷಿಣ ಭಾರತದ ಏಕೈಕ ನೈಸರ್ಗಿಕ ಬಿಸಿ ನೀರಿನ ಚೆಲುಮೆ | ವಾರಕ್ಕೊಮ್ಮೆ ಧನ ಸಂಗ್ರಹ | ಮಾದರಿಯಾದ ಯುವಕರು

ಶಿವಾಜಿ ಯುವಸೇನೆಯಿಂದ ಇರ್ದೆ 'ಬೆಂದ್ರ್ ತೀರ್ಥ ಕ್ಷೇತ್ರ'ದ ಪುನಶ್ಚೇತನ

ನಿಡ್ಪಳ್ಳಿ: ದಕ್ಷಿಣ ಭಾರತದ ಏಕೈಕ ನೈಸರ್ಗಿಕ ಬಿಸಿ ನೀರಿನ ಚಿಲುಮೆ ಎಂಬ ಖ್ಯಾತಿಯ ಇರ್ದೆ ಗ್ರಾಮದ ಬೆಂದ್ರ್ ತೀರ್ಥ ಕ್ಷೇತ್ರ ಶಿಥಿಲಾವಸ್ಥೆಯಲ್ಲಿದ್ದು, ಸ್ಥಳೀಯ ಶಿವಾಜಿ ಯುವ ಸೇನೆ ಬೆಂದ್ರ್ ತೀರ್ಥ ಇರ್ದೆ ಸಂಘಟನೆಯ ಯುವಕರು ಸ್ವಂತ ಶ್ರಮದಿಂದ ಅಭಿವೃದ್ಧಿಪಡಿಸಿ ಮಾದರಿಯಾಗಿದ್ದಾರೆ.

ಸಂಘಟನೆ 10 ವರ್ಷ ಪೂರೈಸಿದ ಸಂದರ್ಭದಲ್ಲಿ ಕೈಗೊಂಡ ಈ ಅಭಿವೃದ್ಧಿ ಕಾರ್ಯ 2026ರ ಜ.15ರಂದು ಆರಂಭವಾಗಿ ಜೂ.25ಕ್ಕೆ ಪೂರ್ಣಗೊಂಡಿದೆ. 3 ಹಂತಗಳಲ್ಲಿ ನಡೆದ ಕಾಮಗಾರಿಗೆ ಸುಮಾರು ರೂ.3 ಲಕ್ಷಕ್ಕೂ ಅಧಿಕ ವೆಚ್ಚವಾಗಿದ್ದು, ಯುವಕರು ವಾರಕ್ಕೊಮ್ಮೆ ಧನ ಸಂಗ್ರಹಿಸಿ, ಊರ ಪರವೂರ ಭಕ್ತರ ಸಹಕಾರದೊಂದಿಗೆ ಕೆಲಸ ನಡೆಸಿದ್ದಾರೆ.

ಧಾರ್ಮಿಕ ಮತ್ತು ವೈಜ್ಞಾನಿಕ ಮಹತ್ವ

ಇರ್ದೆ ಗೋಪಾಲ ಕ್ಷೇತ್ರದ ಶ್ರೀ ವಿಷ್ಣುಮೂರ್ತಿ ದೇವಾಲಯಕ್ಕೆ ನಿಕಟ ಸಂಬಂಧ ಹೊಂದಿರುವ ಬೆಂದ್ರ್ ತೀರ್ಥ ಹಿಂದೂಗಳ ಶ್ರದ್ಧಾ ಕೇಂದ್ರ. ಭಾರತೀಯ ಪುರಾತತ್ವ ಸಂಸ್ಥೆಯ ಅಧ್ಯಯನದ ಪ್ರಕಾರ ಇದು ದಕ್ಷಿಣ ಭಾರತದ ಏಕೈಕ ನೈಸರ್ಗಿಕ ಬಿಸಿ ನೀರಿನ ಚಿಲುಮೆ. ಇಲ್ಲಿನ ನೀರಿನಲ್ಲಿ ಅಧಿಕ ಖನಿಜಾಂಶವಿದ್ದು, ಚರ್ಮ ಸಂಬಂಧಿ ಕಾಯಿಲೆಗಳಿಗೆ ರಾಮಬಾಣ ಎಂಬ ನಂಬಿಕೆ ಇದೆ. ನವ ವಿವಾಹಿತರು ಇಲ್ಲಿಗೆ ಭೇಟಿ ನೀಡುವ ಸಂಪ್ರದಾಯ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ.







ಜಾತಿ-ಪಕ್ಷ ಇಲ್ಲದೆ ಸೇವೆ

ಈ ಪುಣ್ಯಕ್ಷೇತ್ರ ನಶಿಸಬಾರದು, ಭಕ್ತರಿಗೆ ಸರಿಯಾದ ವ್ಯವಸ್ಥೆ ಸಿಗಬೇಕು. ನಮ್ಮೂರಿನ ಇತಿಹಾಸ ಮುಂದಿನ ಪೀಳಿಗೆಗೆ ದಾರಿ ದೀಪವಾಗಬೇಕು ಎಂಬುದೇ ನಮ್ಮ ಉದ್ದೇಶ ಎಂದು ಶಿವಾಜಿ ಯುವಸೇನೆ ಪದಾಧಿಕಾರಿಗಳು ತಿಳಿಸಿದ್ದಾರೆ. ಅಭಿವೃದ್ಧಿ ಕಾರ್ಯದಲ್ಲಿ ಶಾಲಾ ವಿದ್ಯಾರ್ಥಿಗಳಿಂದ ಹಿರಿಯರವರೆಗೆ ಎಲ್ಲರೂ ಒಂದೇ ಮನಸ್ಸಿನಿಂದ ಕೈಜೋಡಿಸಿದ್ದಾರೆ.

ನಮ್ಮ ಉದ್ದೇಶ ಒಂದೇ

ನಮ್ಮೂರ ಇತಿಹಾಸ ಹೊಂದಿರುವ ಈ ಪುಣ್ಯಕ್ಷೇತ್ರ ಮುಂದೆಯೂ ಪವಿತ್ರ ಕ್ಷೇತ್ರವಾಗಿ ಉಳಿಯಬೇಕು. ಅಲ್ಲದೆ ಮುಂದಿನ ಪೀಳಿಗೆಗೆ ಇದು ಒಂದು ದಾರಿದೀಪವಾಗಬೇಕು. ಇದಕ್ಕೆ ಭಕ್ತರ ಸಂಪೂರ್ಣ ಸಹಕಾರ ಮುಂದೆಯೂ ಸಿಗಬೇಕು ಎಂಬುದು ನಮ್ಮೆಲ್ಲರ ಉದ್ದೇಶ.

■ ಶಿವಾಜಿ ಯುವಸೇನೆ, ಬೆಂದ್ರ್ ತೀರ್ಥ, ಇರ್ದೆ

ಪುತ್ತೂರು ಶಾಸಕರಿಂದ ₹10 ಲಕ್ಷ ಭರವಸೆ

ಯುವಕರ ಶ್ರಮವನ್ನು ಮೆಚ್ಚಿರುವ ಪುತ್ತೂರು ಶಾಸಕರು ಕ್ಷೇತ್ರದ ಮುಂದಿನ ಅಭಿವೃದ್ಧಿಗೆ ರೂ.10 ಲಕ್ಷ ನೀಡುವ ಭರವಸೆ ನೀಡಿದ್ದಾರೆ. ಸದ್ಯ ದೇವಾಲಯ ಜೀರ್ಣೋದ್ಧಾರ ಕೆಲಸ ನಡೆಯುತ್ತಿದ್ದು, ಈಗಾಗಲೇ ರೂ.1,60,000ಕ್ಕೂ ಹೆಚ್ಚು ಮೊತ್ತವನ್ನು ವಿವಿಧ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ. ಮುಂದಿನ ವಾರದಲ್ಲಿ ಬೆಂದ್ರ್ ತೀರ್ಥದ ಎಲ್ಲ ಕೆಲಸಗಳು ಪೂರ್ಣಗೊಳ್ಳಲಿವೆ ಎಂದು ಸಂಘಟನೆ ತಿಳಿಸಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 27⁰ 24⁰ | ಉಡುಪಿ 27⁰ 25⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 28, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2
ಮಾಫಲ-ಮೈಕುಳ್ಳಿ ಸಂಪರ್ಕ ರಸ್ತೆಯ ಅಭಿವೃದ್ಧಿಗೆ ಬೇಡಿಕೆ!


ಪುಟ 6
ಪರ್ಕಳ ರಾಷ್ಟ್ರೀಯ ಹೆದ್ದಾರಿಯ ಮುಗಿಯದ ಸಂಕಷ್ಟ

ಕಡಬ 'ಹಲಸು ಮೇಳ' ಕೃಷಿ ಉತ್ಸವದಲ್ಲಿ ಕಂಡಿತು ಉತ್ಸಾಹ





ಜೇಸಿಐ ಕಡಬ ಕದಂಬ ಹಾಗೂ ರೈತ ಕುಡ್ಲ ಪ್ರತಿಷ್ಠಾನದ ಆಶ್ರಯದಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಕಡಬ ಅನುಗ್ರಹ ಸಭಾಭವನದಲ್ಲಿ ನಡೆಯುತ್ತಿರುವ 'ಹಲಸು ಮೇಳ-2026' ಕೃಷಿ ಉತ್ಸವದಲ್ಲಿ ಹಲಸಿನ ಹಣ್ಣು ಹಾಗೂ ಅದರ ವಿವಿಧ ಬಗೆಯ ಖಾದ್ಯಗಳ ಖರೀದಿ ಬಲು ಜೋರಾಗಿತ್ತು. ಅಲ್ಲದೆ ವಿವಿಧ ಸ್ಟಾಲ್‌ಗಳಲ್ಲಿಯೂ ಕೃಷಿ ಉತ್ಪನ್ನಗಳನ್ನು ಗ್ರಾಹಕರು ಆಸಕ್ತಿಯಿಂದ ವೀಕ್ಷಿಸಿ, ಮಾಹಿತಿ ಪಡೆದುಕೊಂಡರು.

ಕಾರ್ನಾಡ್ ಸಂತೆಗೆ ಅಧಿಕಾರಿಗಳ ದಾಳಿ: ಪ್ಲಾಸ್ಟಿಕ್ ವಶ; ದಂಡ



ಮುಲ್ಕಿ: ನಗರ ಪಂಚಾಯತ್ ವ್ಯಾಪ್ತಿಯ ಕಾರ್ನಾಡ್ ವಾರದ ಸಂತೆಯಲ್ಲಿ ನಿಷೇಧಿತ ಪ್ಲಾಸ್ಟಿಕ್ ಚೀಲ ಮಾರಾಟ ಮಾಡುತ್ತಿರುವ ದೂರಿನ ಹಿನ್ನೆಲೆಯಲ್ಲಿ ನ.ಪಂ. ಮುಖ್ಯಾಧಿಕಾರಿ ಮಧುಕರ್ ಸೂಚನೆಯಂತೆ ಅಧಿಕಾರಿಗಳು ಅಂಗಡಿಗೆ ದಾಳಿ ನಡೆಸಿ ನಿಷೇಧಿತ ಪ್ಲಾಸ್ಟಿಕ್ ಕೈ ಚೀಲಗಳ ವಶಪಡಿಸಿಕೊಂಡಿದ್ದಾರೆ ಬೆಳಿಗ್ಗೆ ನ.ಪಂ. ಅಧಿಕಾರಿಗಳು ಶನಿವಾರ ನಡೆಯುವ ಕಾರ್ನಾಡ್ ಸಂತೆ ಪ್ರತೀ ಅಂಗಡಿಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ ಈ ಸಂದರ್ಭ ಅಂಗಡಿಯ ಮಾಲಕರು ನಿಷೇಧಿತ ಪ್ಲಾಸ್ಟಿಕ್ ಕೈ ಚೀಲ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು ಅಂಗಡಿ ಮಾಲಕರಿಗೆ ದಂಡ ವಿಧಿಸುವುದರ ಜೊತೆಗೆ ನಿಷೇಧಿತ ಪ್ಲಾಸ್ಟಿಕ್ ಕೈಚೀಲ ವಶಪಡಿಸಿಕೊಂಡಿದ್ದಾರೆ
ಈ ಸಂದರ್ಭ ಕೆಲ ಅಂಗಡಿ ಮಾಲಕರಿಗೆ , ಅಧಿಕಾರಿಗಳಿಗೆ ಮಾತಿನ ಚಕಮಕಿ ನಡೆಯಿತು. ಮುಲ್ಕಿ ನ.ಪಂ. ಮುಖ್ಯಾಧಿಕಾರಿ ಮಧುಕರ್ ಮಾತನಾಡಿ, ಕಳೆದ ದಿನಗಳ ಹಿಂದೆ ಕಾರ್ನಾಡ್ ವಾರದ ಸಂತೆಯಲ್ಲಿ ಪ್ರತಿ ಅಂಗಡಿಗಳಿಗೆ ಬಟ್ಟೆ ಕೈ ಚೀಲ ವಿತರಿಸಿ ಜಾಗೃತಿ ಮೂಡಿಸಲಾಗಿದೆ. ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದರು.

ಮತ್ತೆ ಏರಿಕೆ ಕಂಡ ತೆಂಗಿನಕಾಯಿ ಧಾರಣೆ
ಬೆಳೆಗಾರರಿಗೆ ಸಂತಸ
ವಾರಾಂತ್ಯದಲ್ಲಿ ಚೇತರಿಕೆಗೊಂಡ ಮಾರುಕಟ್ಟೆ

ಕಾಸರಗೋಡು: ಜಿಲ್ಲೆಯಲ್ಲಿ ತೆಂಗಿನ ಕಾಯಿ ದರ ಮತ್ತೆ ಹೆಚ್ಚಳಗೊಂಡಿದ್ದು ಇದರಿಂದ ಬೆಳೆಗಾರರು ಅಪಾರ ಸಂತಸ ವ್ಯಕ್ತಪಡಿಸಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಇಳಿಕೆಯಾಗುತ್ತಾ ಹೋಗಿದ್ದ ತೆಂಗಿನಕಾಯಿ ಬೆಲೆ ಇದೀಗ ದಿಢೀರನೆ ಚೇತರಿಸಿಕೊಂಡಿದೆ.

ರೂ.45ರ ಗಡಿ ದಾಟಿದೆ

ಕಾಸರಗೋಡಿನ ಸಾಮಾನ್ಯ ಮಾರುಕಟ್ಟೆಯಲ್ಲಿ ಪ್ರತಿ ಕಿಲೋ ತೆಂಗಿನಕಾಯಿ ದರ 45 ರೂ. ಗಡಿ ದಾಟಿದೆ. ಶುಕ್ರವಾರ ಮತ್ತು ಶನಿವಾರ ಸ್ಥಳೀಯ ಮಾರುಕಟ್ಟೆಯಲ್ಲಿ 45ರಿಂದ 50ರೂ. ತನಕ ತೆಂಗಿನಕಾಯಿ ಖರೀದಿಸಲಾಗಿದೆ. ಅಲ್ಲದೆ ವಿವಿಧೆಡೆ ತೆಂಗಿನ ಎಣ್ಣೆಯು 350ರಿಂದ 380 ರೂ. ತನಕ ಮಾರಾಟವಾಗುತ್ತಿದೆ.
ಕಳೆದ ವರ್ಷ ಜುಲೈ ತಿಂಗಳಿನಿಂದ ದಾಖಲೆಯ ಗರಿಷ್ಠ ಮಟ್ಟ ತಲುಪಿತ್ತು. ಜೂನ್ ಮೊದಲ ವಾರದಲ್ಲಿ ತೆಂಗಿನಕಾಯಿ ಬೆಲೆ 30–35ರೂ. ನಷ್ಟು ಕುಸಿದು ಕೃಷಿಕರಲ್ಲಿ ಆತಂಕ ಮೂಡುವಂತೆ ಮಾಡಿತ್ತು. ಕಳೆದ ತಿಂಗಳಿನಲ್ಲಿ ಈ ವರ್ಷದ ಮೊದಲ ಬಾರಿಗೆ ಕನಿಷ್ಠ ಮಟ್ಟಕ್ಕೆ ಇಳಿಮುಖಗೊಂಡು ಬಳಿಕ ಏಕಾಏಕಿಯಾಗಿ ಏರಿಕೆಯಾಗತೊಡಗಿದೆ. ಈ ಹಿನ್ನೆಲೆ ಜಿಲ್ಲೆಯ ತೆಂಗು ಬೆಳೆಗಾರರು ಫುಲ್ ಖುಷ್ ಆಗಿದ್ದಾರೆ. »»ಪುಟ 6



ಮಂದಹಾಸ ಮೂಡಿದೆ

ಜೂನ್ ಮೊದಲ ವಾರದಲ್ಲಿ ಗರಿಷ್ಠ ಪ್ರಮಾಣದಲ್ಲಿ ಇಳಿಕೆ ಯಾಗಿದ್ದ ತೆಂಗಿನಕಾಯಿ ಬೆಲೆ ಇದೀಗ ಏಕಾಏಕಿ ಏರಿಕೆ ಗೊಂಡಿ ಕೃಷಿಕರ ಮೊಗದಲ್ಲಿ ಮಂದಹಾಸ ಮೂಡಿದೆ

ಕೊಬ್ಬರಿ ಬೆಲೆಯಲ್ಲೂ ಭಾರೀ ಏರಿಕೆ

ತಮಿಳುನಾಡಿನಲ್ಲಿ ಕೊಬ್ಬರಿ ಬೆಲೆಯಲ್ಲಿ ಉಂಟಾದ ಭಾರೀ ಹೆಚ್ಚಳವೇ ಜಿಲ್ಲೆಯಲ್ಲಿ ತೆಂಗಿನಕಾಯಿ ದರ ಏರಿಕೆಗೆ ಮುಖ್ಯ ಕಾರಣವಾಗಿದೆ. ತಮಿಳುನಾಡಿನಲ್ಲಿ ಕೊಬ್ಬರಿ ಬೆಲೆ ಕೆಜಿಗೆ 110 ರೂ.ಗಳಿಂದ 140ರೂ.ಗಳಿಗೆ ಏರಿಕೆಯಾಗಿದೆ. ಇದರ ನೇರ ಪರಿಣಾಮ ಕಾಸರಗೋಡು ಸಹಿತ ಕೇರಳದ ವಿವಿಧ ಜಿಲ್ಲೆಗಳಲ್ಲಾಗಿದೆ. ಜಿಲ್ಲೆಯಲ್ಲಿ ಕೊಬ್ಬರಿ ಬೆಲೆಯಲ್ಲೂ ಭಾರೀ ಹೆಚ್ಚಳವಾಗಿದೆ. ಪ್ರತಿ ಕಿಲೋ ಕೊಬ್ಬರಿ 130ರಿಂದ 180ರೂ. ವರೆಗೆ ಖರೀದಿಯಾಗುತ್ತಿದೆ.

ಗ್ರಾಹಕರಿಗೆ ದರ ಹೆಚ್ಚಳದ ಬಿಸಿ

ತೆಂಗಿನಕಾಯಿ ಬೆಲೆ ಏರಿಕೆ ದೀರ್ಘಕಾಲದಿಂದ ನಷ್ಟ ಅನುಭವಿಸುತ್ತಿದ್ದ ತೆಂಗು ಬೆಳೆಗಾರರ ಪಾಲಿಗೆ ಆಶಾದಾಯಕವಾಗಿ ಪರಿಣಮಿಸಿದೆ. ಆದರೆ ತೆಂಗಿನಕಾಯಿ ಮತ್ತು ಕೊಬ್ಬರಿ ಬೆಲೆ ಹೆಚ್ಚಳ ಹೀಗೆಯೇ ಮುಂದುವರಿದರೆ ಮುಂದಿನ ದಿನಗಳಲ್ಲಿ ತೆಂಗಿನ ಎಣ್ಣೆಯ ದರದಲ್ಲೂ ವಿಪರೀತ ಏರಿಕೆಯಾಗಲಿದೆ. ಇದರಿಂದಾಗಿ ಜನಸಾಮಾನ್ಯರಿಗೆ ಹಾಗೂ ನಿತ್ಯ ಗ್ರಾಹಕರಿಗೆ ಬಹುದೊಡ್ಡ ಹೊಡೆತ ಬೀಳಲಿದೆ. ಈ ನಿಟ್ಟಿನಲ್ಲಿ ಕೃಷಿ ಇಲಾಖೆ ಹಾಗೂ ಕೇರಳ ಸರಕಾರವು ಸೂಕ್ತ ವ್ಯವಸ್ಥೆಯನ್ನು ಮಾಡಬೇಕಾಗಿದೆ.

ಸಾಲು ಸಾಲು ರಜೆಯ ಹಿನ್ನೆಲೆ
ಕುಕ್ಕೆ ಶ್ರೀ ಕ್ಷೇತ್ರದಲ್ಲಿ ಹೆಚ್ಚಿದ ಭಕ್ತ ಸಂದಣಿ
ಭದ್ರತಾ ಸಿಬ್ಬಂದಿಗಳಿಂದ ಸಕಲ ವ್ಯವಸ್ಥೆ

ಸುಬ್ರಹ್ಮಣ್ಯ: ಸುಬ್ರಹ್ಮಣ್ಯದ ಮಹತೋಭಾರ ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಳಕ್ಕೆ ಶನಿವಾರ ಅತ್ಯಧಿಕ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಶ್ರೀ ದೇವರ ದರುಶನ ಪಡೆದರು. ಶುಕ್ರವಾರ ಸರಕಾರಿ ರಜೆ, 4ನೇ ಶನಿವಾರ, ಭಾನುವಾರ ವಾರಾಂತ್ಯ ರಜೆ ಹಿನ್ನೆಲೆ ಶನಿವಾರ ಕ್ಷೇತ್ರಕ್ಕೆ ಭಕ್ತ ಸಂದೋಹವೇ ಹರಿದು ಬಂದಿತ್ತು. ತ್ರಿವಳಿ ರಜೆಗಳಿಂದ ಕ್ಷೇತ್ರದಲ್ಲಿ ಭಕ್ತ ಸಂದಣಿ ಅತ್ಯಧಿಕವಿತ್ತು.

ಅಧಿಕ ಭಕ್ತರಿಂದ ದರುಶನ

ಗುರುವಾರ ಸಂಜೆಯಿಂದಲೇ ಕ್ಷೇತ್ರಕ್ಕೆ ಅತ್ಯಧಿಕ ಭಕ್ತರು ಆಗಮಿಸಿದ್ದರು. ಶುಕ್ರವಾರ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವರ ದರುಶನ ಪಡೆದರು. ಶನಿವಾರ ಭಕ್ತರ ಸಂಖ್ಯೆ ಮತ್ತಷ್ಟು ಅಧಿಕವಿತ್ತು. ಬೆಳಿಗ್ಗೆ 6 ಗಂಟೆಯಿಂದ ಮಾರುದ್ದದ ಸರತಿ ಸಾಲಿನಲ್ಲಿ ಸಾಗಿ ಭಕ್ತರು ಸಂಕಲ್ಪ ಮಾಡಿ, ಸೇವಾದಿಗಳನ್ನು ನೆರವೇರಿಸಿ ಶ್ರೀ ದೇವರ ದರುಶನ ಮಾಡಿದರು.
ಭಾನುವಾರ ಕ್ಷೇತ್ರಕ್ಕೆ ಅತ್ಯಧಿಕ ಭಕ್ತರ ಆಗಮನ ಸಾಧ್ಯತೆ ಹೆಚ್ಚಿದೆ. ಶಾಲೆ, ಕಾಲೇಜುಗಳು ಆರಂಭವಾಗಿದ್ದರೂ ರಜಾ ದಿನಗಳಲ್ಲಿ ಕ್ಷೇತ್ರಕ್ಕೆ ಭಕ್ತರು ಆಗಮಿಸುವುದು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದಾರೆ. ಕುಕ್ಕೆ ಬಸ್ ನಿಲ್ದಾಣವು ಭಕ್ತರಿಂದ ತುಂಬಿ ತುಳುಕುತ್ತಿತ್ತು.



ವಿವಿಧ ಸೇವೆಗಳು

ಶ್ರೀ ದೇವಳ ರಥಬೀದಿ ಹೊರಾಂಗಣ, ಒಳಾಂಗಣ, ಆದಿಸುಬ್ರಹ್ಮಣ್ಯದಲ್ಲಿ ಭಕ್ತರು ತುಂಬಿದ್ದರು. ಪ್ರಮುಖ ಸೇವೆಗಳಾದ ನಾಗಪ್ರತಿಷ್ಠೆ, ತುಲಾ ಭಾರ, ಮಹಾಪೂಜೆ, ಶೇಷಸೇವೆ, ಕಾರ್ತಿಕ ಪೂಜೆ, ಮಹಾಭಿಷೇಕ ಮೊದಲಾದ ಸೇವೆಗಳನ್ನು ದಾಖಲೆ ಸಂಖ್ಯೆಯಲ್ಲಿ ಭಕ್ತರು ನೆರವೇರಿಸಿದರು. ಅಲ್ಲದೆ ಪ್ರಸಾದ ಭೋಜನ ಸ್ವೀಕರಿಸಿದರು.

ಸುಗಮ ಸಂಚಾರಕ್ಕೆ ಶ್ರೀ ದೇವಳದ ಭದ್ರತಾ ಸಿಬ್ಬಂದಿಗಳು, ಸುಬ್ರಹ್ಮಣ್ಯ ಪೊಲೀಸರು ಸೂಕ್ತ ವ್ಯವಸ್ಥೆಯನ್ನು ಕೈಗೊಂಡಿದ್ದರು.

ಸುತ್ತಮುತ್ತ

ಉಡುಪಿಯಲ್ಲಿ ಮರೆಯಾದ ಮಳೆ: ಬಿಸಿಲಿನ ವಾತಾವರಣ

ಉಡುಪಿ: ಉಡುಪಿಯಾದ್ಯಂತ ಶನಿವಾರ ಇಡೀ ದಿನ ಎಲ್ಲೂ ಮಳೆಯಾಗದೆ ಸಂಪೂರ್ಣ ಬಿಡುವು ನೀಡಿದೆ. ಕಳೆದ ಕೆಲವು ದಿನಗಳಿಂದ ಸತತವಾಗಿ ಸುರಿಯುತ್ತಿದ್ದ ಮಳೆ ದಿಢೀರನೆ ಸ್ತಬ್ಧಗೊಂಡಿದ್ದು, ಬೆಳಗ್ಗಿನಿಂದಲೇ ಮೋಡಗಳ ಅಬ್ಬರವಿಲ್ಲದೆ ತೀವ್ರ ಬಿಸಿಲಿನ ವಾತಾವರಣ ಕಂಡುಬಂದಿದೆ. ಸಾಮಾನ್ಯ ವಾಗಿ ಮುಂಗಾರು ಅವಧಿಯಲ್ಲಿ ಮೋಡ ಕವಿದ ವಾತಾ ವರಣ ಇರುತ್ತಿದ್ದರೂ, ರಾತ್ರಿ ವೇಳೆ ಯಾವುದೇ ಮೋಡಗಳ ಮುನ್ಸೂಚನೆ ಇಲ್ಲದೆ ಆಕಾಶ ಸ್ವಚ್ಛವಾಗಿತ್ತು.

ಅಡಿಕೆ ಮಾರುಕಟ್ಟೆಯಲ್ಲಿ ಸ್ಥಿರವಾದ ಧಾರಣೆ

ಮಂಗಳೂರು: ಹೊರರಾಜ್ಯದಲ್ಲಿ ಕರ್ನಾಟಕದಿಂದ ರಫ್ತು ಆದ ಅಡಿಕೆ ಲಾರಿ ವಶಕ್ಕೆ ಪಡೆಯುತ್ತಿರುವ ಆಘಾತಕಾರಿ ಘಟನೆ ನಡುವೆಯೂ ಅಡಿಕೆ ಮಾರುಕಟ್ಟೆಯಲ್ಲಿ ಧಾರಣೆ ಸ್ಥಿರತೆ ಕಾಯ್ದುಕೊಂಡಿದೆ. ಹೊಸ ಅಡಿಕೆ 470 ರೂ., ಚೋಲ್ ಹಾಗೂ ಡಬಲ್ ಚೋಲ್ ಅಡಿಕೆ ಸ್ಥಿರವಾಗಿದೆ.

ಭರದಿಂದ ಸಾಗಿದೆ ಕುಳಾಯಿ ಕಿರು ಮೀನುಗಾರಿಕಾ ಜೆಟ್ಟಿ ನಿರ್ಮಾಣ ಕಾಮಗಾರಿ
6.43 ಹೆ.ಪ್ರದೇಶದಲ್ಲಿ ರೂಪುಗೊಳ್ಳಲಿದೆ ಯೋಜನೆ

ಸುರತ್ಕಲ್: ಇಲ್ಲಿನ ಕುಳಾಯಿಯಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ನವಮಂಗಳೂರು ಬಂದರು ಪ್ರಾಧಿಕಾರದ ಆರ್ಥಿಕ ಸಹಭಾಗಿತ್ವದಲ್ಲಿ ಕಿರು ಮೀನುಗಾರಿಕಾ ಜೆಟ್ಟಿ ನಿರ್ಮಾಣ ಕಾಮಗಾರಿ ಭರದಿಂದ ಸಾಗಿದೆ.
ಸುಮಾರು 216 ಕೋಟಿ ರೂ. ಅಂದಾಜು ವೆಚ್ಚದಲ್ಲಿ 6.43 ಹೆಕ್ಟೇರ್ ಪ್ರದೇಶದಲ್ಲಿ ಈ ಮಹತ್ವಾಕಾಂಕ್ಷೆ ಯೋಜನೆ ರೂಪುಗೊಳ್ಳುತ್ತಿದೆ. ಪೂರ್ಣಗೊಂಡ ಬಳಿಕ ಸುಮಾರು 300ಕ್ಕೂ ಅಧಿಕ ನಾಡದೋಣಿ, ಯಾಂತ್ರಿಕೃತ ಮೀನುಗಾರಿಕಾ ದೋಣಿಗಳಿಗೆ ಸುರಕ್ಷಿತ ತಂಗುದಾಣ ಲಭ್ಯವಾಗಲಿದೆ.
ಜೆಟ್ಟಿ ಜೊತೆಗೆ ಮೀನು ಇಳಿಸುವಿಕೆ ವೇದಿಕೆ, ಹರಾಜು ಶೆಡ್, ಶೀತಲ ಗೋದಾಮು, ಮಂಜುಗಡ್ಡೆ ಘಟಕ, ದೋಣಿ ದುರಸ್ತಿ ಕೇಂದ್ರ, ವಾಹನ ನಿಲುಗಡೆ ಹಾಗೂ ಮೀನು ಸಂಸ್ಕರಣಾ ಘಟಕ ಸೇರಿದಂತೆ ಎಲ್ಲಾ ಆಧುನಿಕ ಮೂಲ ಸೌಕರ್ಯಗಳು ಇಲ್ಲಿರಲಿವೆ. ಇದರಿಂದ ಸುರತ್ಕಲ್, ಹೊಸಬೆಟ್ಟು, ಕುಳಾಯಿ, ಚಿತ್ರಾಪುರ ಭಾಗದ ಸಾವಿರಾರು ಮೀನುಗಾರ ಕುಟುಂಬಗಳಿಗೆ ನೇರ ಪ್ರಯೋಜನವಾಗಲಿದ್ದು, ಪ್ರದೇಶದ ಮೀನುಗಾರಿಕಾ ಚಟುವಟಿಕೆ ದೊಡ್ಡ ಮಟ್ಟದಲ್ಲಿ ವಿಸ್ತರಿಸುವ ನಿರೀಕ್ಷೆಯಿದೆ. ಆದರೆ ಕಾಮಗಾರಿ ಚುರುಕುಗೊಂಡ ಬೆನ್ನಲ್ಲೇ ರಸ್ತೆ ಸಮಸ್ಯೆ ದೊಡ್ಡ ಸವಾಲಾಗಿ ಎದುರಾಗಿದೆ. »»ಪುಟ 6



ಗಮನ ಸೆಳೆಯುತ್ತೇನೆ

ಕುಳಾಯಿಯಲ್ಲಿ ಕಿರು ಮೀನುಗಾರಿಕಾ ಬಂದರು ನಿರ್ಮಾಣವಾಗುತಿದ್ದು , ವಾಣಿಜ್ಯ ಚಟುವಟಿಕೆಗಾಗಿ ರಸ್ತೆ ವಿಸ್ತರಣೆ ಅಗತ್ಯವಾಗಿ ಆಗಬೇಕಿದೆ. ಈ ನಿಟ್ಟಿನಲ್ಲಿ ಮೀನುಗಾರಿಕಾ ಸಚಿವರನ್ನು ಕಾಮಗಾರಿ ಸ್ಥಳಕ್ಕೆ ಆಹ್ವಾನಿಸಿ ಮೂಲಸೌಕರ್ಯದ ಬಗ್ಗೆ ಗಮನ ಸೆಳೆಯಲು ಯತ್ನಿಸುತ್ತೇನೆ.
● ಡಾ. ಭರತ್ ಶೆಟ್ಟಿ ಶಾಸಕರು

ಅನುದಾನ ಒದಗಿಸಬೇಕು

ಬಂದರು ಕಾಮಗಾರಿ ಜೊತೆಗೇ ರಸ್ತೆ ಅಭಿವೃದ್ಧಿಯನ್ನೂ ಕೈಗೆತ್ತಿಕೊಳ್ಳಬೇಕು. ಕೇವಲ ಜೆಟ್ಟಿ ನಿರ್ಮಾಣವಾದರೆ ಸಾಲದು, ಪೂರಕ ಮೂಲಸೌಕರ್ಯ ಒದಗಿಸಿದಾಗ ಮಾತ್ರ ಕರಾವಳಿಯ ಈ ಮಹತ್ವದ ಯೋಜನೆ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿ ಮೀನುಗಾರರ ಬದುಕಿಗೆ ಆಸರೆಯಾ ಗಲಿದೆ. ಈ ನಿಟ್ಟಿನಲ್ಲಿ ಸರಕಾರ ಅನುದಾನ ಒದಗಿಸಲು ಮುಂದಾಗಬೇಕಿದೆ.

ಕೊಲ್ಲೂರು ಶ್ರೀ ಕ್ಷೇತ್ರದಲ್ಲೂ ಹರಿದು ಬಂದ ಭಕ್ತ ಸಾಗರ



ಸರಣಿ ರಜೆ ಕಾರಣ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಳದಲ್ಲಿ ಶುಕ್ರವಾರ ಶ್ರೀ ದೇವರ ದರುಶನಕ್ಕೆ ಕರ್ನಾಟಕ ಸಹಿತ ವಿವಿಧ ರಾಜ್ಯಗಳಿಂದ ಸುಮಾರು 20,000ಕ್ಕೂ ಮಿಕ್ಕಿ ಭಕ್ತರು ಆಗಮಿಸಿದ್ದರು. ಶನಿವಾರವೂ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ಕ್ಷೇತ್ರದ ಎಲ್ಲಾ ವಸತಿಗೃಹ ತುಂಬಿದ ಕಾರಣ ದೂರದ ಬೈಂದೂರು, ಹೆಮ್ಮಾಡಿ, ಕುಂದಾಪುರ ವಸತಿಗೃಹಗಳನ್ನು ಅವಲಂಭಿಸಬೇಕಾಯಿತು.

ಬಿ.ಸಿ.ರೋಡ್‌ನಲ್ಲಿ ಬಸ್ಸು ನಿಲ್ದಾಣವೇ ಇಲ್ಲ | ಅವ್ಯವಸ್ಥೆ ಬಗ್ಗೆ ಸರಕಾರ, ಸ್ಥಳೀಯ ಆಡಳಿತ ತಕ್ಷಣ ಗಮನ ಹರಿಸಲಿ
ಪ್ರಯಾಣಿಕರಿಗೆ ರಸ್ತೆ ಪಕ್ಕದ ಫುಟ್‌ಪಾತ್, ಅಂಗಡಿಗಳ ಮುಂಭಾಗವೇ ತಂಗುದಾಣ!

ಬಂಟ್ವಾಳ: ಮಂಗಳೂರಿನ ಬಳಿಕ ಬಂಟ್ವಾಳ ತಾಲೂಕಿನ ಹೃದಯ ಭಾಗವಾದ ಬಿ.ಸಿ.ರೋಡು ಬೆಳೆಯುತ್ತಿರುವ ನಗರ ರಾಜಧಾನಿ ಬೆಂಗಳೂರು ಸಹಿತ ಬಹುತೇಕ ಹೊರಜಿಲ್ಲೆಗಳಿಗೆ ಸಂಚರಿಸುವ ಬಸ್‌ಗಳು ಬಿ.ಸಿ.ರೋಡನ್ನು ದಾಟಿಯೇ ಹೋಗಬೇಕು, ಆದರೆ ಸರಕಾರಿ, ಖಾಸಗಿ ಬಸ್‌ಗಳು ಸೇರಿದಂತೆ ಎಲ್ಲಾ ವಾಹನಗಳಿಗೆ ರಸ್ತೆಯೇ ನಿಲ್ದಾಣ. ರಸ್ತೆ ಪಕ್ಕದ ಫುಟ್ ಪಾತ್, ಅಂಗಡಿಗಳ ಮುಂಭಾಗವೇ ಪ್ರಯಾಣಿಕರಿಗೆ ತಂಗುದಾಣವಾಗಿದೆ.



ರಸ್ತೆಯಲ್ಲೇ ಕಾಯಬೇಕು

ಮಳೆಯಿರಲಿ, ಬಿಸಿಲಿರಲಿ ಪ್ರಯಾಣಿಕರು ರಸ್ತೆಯಲ್ಲೇ ನಿಂತು ಬಸ್ಸುಗಳಿಗೆ ಕಾಯಬೇಕು. ಬಸ್ಸುಗಳೂ ರಾಷ್ಟ್ರೀಯ ಹೆದ್ದಾರಿಯಲ್ಲೇ ಪ್ರಯಾಣಿಕರನ್ನು ಇಳಿಸುವುದು, ಹತ್ತಿಸಿಕೊಳ್ಳಬೇಕು. ಹಲ ವರ್ಷದಿಂದ ಈ ಅವ್ಯವಸ್ಥೆ ಬಿ.ಸಿ.ರೋಡಿನಲ್ಲಿ ಪ್ರಯಾಣಿಕರನ್ನು ಕಾಡುತ್ತಿದ್ದರೂ ಇದಕ್ಕೊಂದು ಶಾಶ್ವತ ಪರಿಹಾರ ಕಂಡು ಕೊಳ್ಳಲು ಇಲ್ಲಿನ ಸ್ಥಳೀಯಾಡಳಿತಕ್ಕಾಗಲೀ, ಜನಪ್ರತಿನಿಧಿಗಳಿಗಾಗಲೀ ಸಾಧ್ಯವಾಗಿಲ್ಲ ಎಂಬುದೇ ಸೋಜಿಗದ ಸಂಗತಿ. ಮಂಗಳೂರಿನಿಂದ ಬಿ.ಸಿ.ರೋಡಿಗೆ ಬರುವ ಕೆಎಸ್ಸಾರ್ಟಿಸಿ ಹಾಗೂ ಖಾಸಗಿ ಬಸ್ಸುಗಳು ನಿಲುಗಡೆಯಾಗಲು ರಾಷ್ಟ್ರೀಯ ಹೆದ್ದಾರಿಯನ್ನೇ ಅವಲಂಬಿಸುತ್ತವೆ.
ಪುರಸಭೆಯಿಂದ ನಿರ್ಮಾಣವಾಗಿರುವ ಬಸ್ ನಿಲ್ದಾಣವಿದ್ದರೂ ಇಲ್ಲಿ ಸರ್ವಿಸ್ ಬಸ್‌ಗಳದ್ದೇ ಕಾರುಬಾರು. ಹಾಗಾಗಿ ಸಿ.ಸಿ., ಸರಕಾರಿ ಹಾಗೂ ಇತರೆ ಸರ್ವಿಸ್ ವಾಹನಗಳಿಗೆ ಹೆದ್ದಾರಿಯೇ ತಂಗುದಾಣ, ಇದರ ಮಧ್ಯೆ ಆಟೋರಿಕ್ಷಾ ,ಟಾಂಟಾಂ ಬಾಡಿಗೆ ವಾಹನಗಳು ನಿಲುಗಡೆಗೊಳ್ಳುತ್ತದೆ. ಈ ಸಂದರ್ಭ ಹೆದ್ದಾರಿಯಲ್ಲಿಯೇ ಏಕಕಾಲದಲ್ಲಿ ನಾಲ್ಕೈದು ಬಸ್ಸುಗಳು ಪ್ರಯಾಣಿಕರನ್ನು ಇಳಿಸಲು ಅಥವಾ ಹತ್ತಿಸಿಕೊಳ್ಳಲು ಅಡ್ಡಾದಿಡ್ಡಿ ನಿಂತರೆ ವಾಹನ ಸಂಚಾರ ಅಸ್ತವ್ಯಸ್ತವಾಗುತ್ತದೆ. »»ಪುಟ 6

ನಿಷ್ಪ್ರಯೋಜಕ

ಬಿ.ಸಿ.ರೋಡಿನಲ್ಲಿ ಪುರಸಭೆಯಿಂದ ನಿರ್ಮಾಣಗೊಂಡಿರುವ ಬಸ್ ನಿಲ್ದಾಣ ನಿಷ್ಪ್ರಯೋಜಕವಾಗಿದೆ. ಇದರಿಂದಾಗಿ ಪ್ರಯಾಣಿಕರು ರಸ್ತೆಯಲ್ಲಿ, ಅಂಗಡಿಗಳ ಮುಂಭಾಗದಲ್ಲಿ ನಿಲ್ಲುವಂತಾಗಿದೆ. ಬಸ್ ಮಿಸ್ ಆದರೆ ಇನ್ನೊಂದು ಬಸ್ ಬರುವವರೆಗೆ ಕುಳಿತುಕೊಳ್ಳಲು ಇಲ್ಲಿ ಜಾಗವೇ ಇಲ್ಲ.
● ರಾಜೇಶ್ ಕಾಮಾಜೆ

ಗಮನ ಹರಿಸಲಿ

ಬಿ.ಸಿ.ರೋಡಿನಲ್ಲಿ ಬಸ್ ನಿಲ್ದಾಣವಿಲ್ಲದೆ ಪ್ರಯಾಣಿಕರು ಪರಿತಪಿಸುತ್ತಿದ್ದಾರೆ. ಬೆಳೆಯುತ್ತಿರುವ ನಗರದಲ್ಲಿ ಕಾಡುತ್ತಿರುವುದು ವಿಪರ್ಯಾಸ. ಪ್ರಯಾಣಿಕರು ನಿಲ್ಲುವ ಫುಟ್‌ಪಾತ್ ಅಪಾಯಕಾರಿ ಸ್ಥಿತಿಯಲ್ಲಿದೆ. ಈ ಬಗ್ಗೆ ಸ್ಥಳೀಯಾಡಳಿ, ಜನಪ್ರತಿನಿಧಿಗಳು ಗಮನಹರಿಸಬೇಕು
● ವಸಂತ ಬಿ.ಸಿ.ರೋಡು

ಪರಿಹಾರ ಏನು?

ಬಿ.ಸಿ.ರೋಡಿನಲ್ಲಿ ಹಿಂದಿನಿಂದಲೂ ಬಸ್ ತಂಗುದಾಣ ಎನ್ನುವುದು ಸಮಸ್ಯೆಯೇ ಆಗಿದೆ. ಬಿ.ಸಿ.ರೋಡಿನಿಂದ ವಿವಿಧ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಸರಿಯಾದ ನೆಲೆಯೇ ಇಲ್ಲ, ಇಲ್ಲಿನ ಪ್ರಧಾನ ಬಸ್ ನಿಲ್ದಾಣ ರಸ್ತೆಯಿಂದ ಕೆಳಮಟ್ಟದಲ್ಲಿದೆ. ಹೀಗಾಗಿ ಅಲ್ಲಿಗೆ ಹೋಗಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಬರುವುದು ಕಷ್ಟ, ಜತೆಗೆ ಹೊಸ ಸಂಕೀರ್ಣ ನಿರ್ಮಾಣದ ಬಳಿಕ ಅಷ್ಟು ಜಾಗವೂ ಇಲ್ಲ, ಬಸ್ ನಿಲ್ದಾಣ ಸದ್ಯಕ್ಕಂತೂ ಆಗುವ ಲಕ್ಷಣವಿಲ್ಲ, ಹೀಗಾಗಿ ಸಮರ್ಪಕ ಬಸ್ ಬೇ ಮಾಡಿದರೆ ಇಲ್ಲಿಗೆ ತಾತ್ಕಾಲಿಕ ಪರಿಹಾರ ಸಿಗಬಹುದು. ಆದರೆ ಅದಕ್ಕೂ ಇಲ್ಲಿ ಜಾಗ ಇಲ್ಲ, ನಗರ ಅಭಿವೃದ್ಧಿಯ ಪರಿಕಲ್ಪನೆಯವರು ಇದರ ಬಗ್ಗೆ ಈಗಲೇ ಯೋಚಿಸುವುದು ಉತ್ತಮ.

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಭಾನುವಾರ 28, ಜೂನ್ 2026

ಕಿರಿದಾದ ರಸ್ತೆಯಲ್ಲಿ ವಾಹನ ಸಂಚಾರ ಕಷ್ಟಸಾಧ್ಯ | ಹಲವು ವರ್ಷ ಕಳೆದರೂ ಈಡೇರದ ಭರವಸೆ

ಮಾಫಲ-ಮೈಕುಳ್ಳಿ ಸಂಪರ್ಕ ರಸ್ತೆಯ ಅಭಿವೃದ್ಧಿಗೆ ಬೇಡಿಕೆ

ಬಡಗನ್ನೂರು: ಬಡಗನ್ನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಪಡುವನ್ನೂರು ಗ್ರಾಮದ ಮಾಫಲ-ಮೈಕುಳ್ಳಿ ಸಂಪರ್ಕ ರಸ್ತೆ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದು ಕಚ್ಚಾ ರಸ್ತೆಯಾಗಿ ಉಳಿದಿದ್ದು ಕಳೆದ ಹಲವು ವರ್ಷಗಳಿಂದ ಈ ಭಾಗದ ಜನರ ಬೇಡಿಕೆ ಬೇಡಿಕೆಯಾಗಿ ಉಳಿದು ಮಳೆಗಾಲ ಆರಂಭದ ಬೆನ್ನಲ್ಲೇ ಈ ಭಾಗದ ಜನರಿಗೆ ರಸ್ತೆ ಸಂಚಾರದ ಬಗ್ಗೆ ತಲೆನೋವು ಆರಂಭವಾಗುತ್ತಿದೆ.

20ಕ್ಕೂ ಹೆಚ್ಚು ಕುಟುಂಬಗಳ ವಾಸ

ಮಾಫಲ-ಮೈಕುಳ್ಳಿ ಈ ಪ್ರದೇಶದಲ್ಲಿ ಸುಮಾರು 25ರಿಂದ 30 ಕುಟುಂಬ ವಾಸವಾಗಿದ್ದು ದಿನನಿತ್ಯ ಸಾಮಗ್ರಿ ತರಲು ಕಡಿಮೆ ಅಂದರು 5 ಕಿ.ಮೀ. ಸಂಚಾರ ಮಾಡಬೇಕಾಗುತ್ತದೆ. ಅಗಲ ಕಿರಿದಾದ ಕಚ್ಚಾ ರಸ್ತೆ ಈ ಪ್ರದೇಶದ ರಸ್ತೆ ಅಗಲ ಕಿರಿದಾದ ಕಚ್ಚಾ ರಸ್ತೆಯಾಗಿದ್ದು ವಾಹನ ಸಂಚಾರಕ್ಕೆ ಬಲು ಕಷ್ಟಕರವಾಗಿದೆ. ಅಗಲ ಕಿರಿದಾದ ಈ ರಸ್ತೆಯಲ್ಲಿ ರಾತ್ರಿ ಹೊತ್ತು ವಾಹನ ಸವಾರರು ಸಂಚರಿಸಲು ಹಿಂದೇಟು ಹಾಕುತ್ತಾರೆ. ಇದರಿಂದ ಈ ಭಾಗದ ಜನರಿಗೆ ರಾತ್ರಿ ಹೊತ್ತು ಆರೋಗ್ಯ ಮತ್ತಿತರ ಸಮಸ್ಯೆ



ಉಂಟಾದರೆ ಸಂಕಷ್ಟದಲ್ಲಿ ಸಿಲುಕುವ ಪ್ರಮೇಯ ಎದುರಾಗುತ್ತದೆ. ಮಳೆ ಬಂದರಂತೂ ಈ ರಸ್ತೆಯಲ್ಲಿ ನಡೆದಾಡಲು ಕೂಡ ಕಷ್ಟವಾಗಿದೆ. ಈ ನಿಟ್ಟಿನಲ್ಲಿ ಗ್ರಾಮಸ್ಥರು ರಸ್ತೆ ಅಭಿವೃದ್ಧಿಗಾಗಿ ಆಗ್ರಹಿಸುತ್ತಿದ್ದಾರೆ.

ಶಾಲಾ ಮಕ್ಕಳಿಗೆ ಸಂಕಷ್ಟ

ಮೈಕುಳ್ಳಿ ಈ ಭಾಗದಿಂದ ಶಾಲಾ ಮಕ್ಕಳು ಶಾಲೆಗೆ ಸುಮಾರು ಐದು ಕಿ.ಮೀ. ನಡೆದುಕೊಂಡೇ ಸಂಚರಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಯಾವುದಾದರು ವಾಹನ ಬಂದರೆ ಪಾದಚಾರಿಗಳಿಗೆ ನಡೆದಾಡಲೂ ಕಷ್ಟಕರ ಪರಿಸ್ಥಿತಿ ಎದುರಾಗುತ್ತಿದೆ.

ಮುಂದಿನ ಮತದಾನ ಬಹಿಷ್ಕಾರ ಸಜ್ಜು

ಕಳೆದ ಎರಡು ವರ್ಷದ ಹಿಂದೆ ಈ ಭಾಗದ ಜನರು ಚುನಾವಣಾ ಸಂದರ್ಭ ಮತದಾನ ಬಹಿಷ್ಕಾರ ಬ್ಯಾನರ್ ಹಾಕಿದ್ದರು. ಈ ಸಂದರ್ಭದಲ್ಲಿ ಕೆಲವು ರಾಜಕೀಯ ಪ್ರಮುಖರು ರಸ್ತೆ ಅಭಿವೃದ್ಧಿ ಪಡಿಸುವ ಭರವಸೆ ನೀಡಿದ್ದರು. ಆದರೆ, ಅದು ಪ್ರಯೋಜನವಾಗಿಲ್ಲ. ಇದರಿಂದ ಮುಂದಿನ ದಿನಗಳಲ್ಲಿ ಮಾಫಲ-ಮೈಕುಳ್ಳಿ ಸಂಪರ್ಕ ರಸ್ತೆಯನ್ನು ಅಭಿವೃದ್ಧಿಗೊಳಿಸಬೇಕು ಇಲ್ಲದಿದ್ದಲ್ಲಿ ಮುಂದಿನ ಚುನಾವಣೆ ಸಂದರ್ಭದಲ್ಲಿ ಮತದಾನ ಬಹಿಷ್ಕಾರ ಮಾಡಿ ಧರಣಿ ನಡೆಸುವುದು. ಈ ಬಗ್ಗೆ ಸಂಬಂಧ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಗಮನಿಸಿ ಈ ಭಾಗದ ಜನರ ಹಲವು ವರ್ಷ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದ್ದಾರೆ.

> **ಆಟೋ ಸಂಚಾರಕ್ಕೆ ಕಷ್ಟ**
>
> ಅಗಲ ಕಿರಿದಾದ ಈ ರಸ್ತೆ ಅಭಿವೃದ್ಧಿಗೆ ಕಳೆದ 10 ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಹಗಲು ಹೊತ್ತಿನಲ್ಲಿ ಎಚ್ಚರಿಕೆಯಿಂದ ಆಟೋ ಸಂಚರಿಸಬೇಕಾಗುತ್ತದೆ. ರಾತ್ರಿ ವೇಳೆ ಈ ರಸ್ತೆಯಲ್ಲಿ ಸಂಚರಿಸುವುದು ಬಹಳಷ್ಟು ಕಷ್ಟಕರ. ಇದರಿಂದ ಚಾಲಕರು ರಾತ್ರಿ ಬಾಡಿಗೆ ಕರೆದರೂ ಹೋಗಲು ಹಿಂಜರಿಯುತ್ತಾರೆ. ಈ ಬಗ್ಗೆ ಹೋರಾಟ ಮಾಡಿದರೂ ಯಾವ ಪಕ್ಷದ ನಾಯಕರು ಸ್ಪಂದನೆ ನೀಡುತ್ತಿಲ್ಲ. ಚುನಾವಣಾ ಸಂದರ್ಭದಲ್ಲಿ ಭರವಸೆ ಕೊಡುತ್ತಾರೆ. ಅನಂತರದ ದಿನಗಳಲ್ಲಿ ಆ ವಿಚಾರದ ಬಗ್ಗೆ ಮಾತನಾಡುವುದಿಲ್ಲ. ಈ ರೀತಿ ಮುಂದುವರಿದಲ್ಲಿ ಮುಂದಿನ ಚುನಾವಣೆ ಸಂದರ್ಭದಲ್ಲಿ ಮತದಾನ ಬಹಿಷ್ಕರಿಸಲು ಈ ಭಾಗದ ನೊಂದ ಗ್ರಾಮಸ್ಥರೆಲ್ಲರೂ ತೀರ್ಮಾನಿಸಿದ್ದೇವೆ.
>
> ● ಶ್ರೀಧರ ಕುಲಾಲ್, ಆಟೋ ಚಾಲಕ

ಸುತ್ತ ಮುತ್ತ

ಗಾಳದ ಕೊಂಕಣಿ ಅಭ್ಯುದಯ ಸಂಘ: ಅಧ್ಯಕ್ಷರಾಗಿ ನರಸಿಂಹ

ಉಳ್ಳಾಲ: ಗಾಳದ ಕೊಂಕಣಿ ಅಭ್ಯುದಯ ಸಂಘ ಮಂಗಳೂರು ಇದರ ನೂತನ ಅಧ್ಯಕ್ಷರಾಗಿ ನರಸಿಂಹ ನಾಯಕ್ ಹರೇಕಳ ಹಾಗೂ



ಪ್ರಧಾನಕಾರ್ಯದರ್ಶಿಯಾಗಿ ಮುರಳೀಧರ ನಾಯ್ಕ ಬಬ್ಬುಕಟ್ಟೆ ಪುನರಾಯ್ಕೆಯಾಗಿದ್ದಾರೆ. ಉಳಿದಂತೆ ನೂತನ ಪದಾಧಿಕಾರಿಗಳಾಗಿ ಶ್ರೀರಿಶ್ ನಾಯಕ್ ಕಾಪಿಕಾಡ್, ಆಶಾ ನಾಯಕ್ ಗೋರಿಗುಡ್ಡೆ(ಕಾರ್ಯದರ್ಶಿಗಳು), ಮಿಥಿಲೇಶ್ ಮಣ್ಣುಗುಡ್ಡೆ, ಹೇಮಾ ಕೇಶವ ನಾಯಕ್ ಸಂತೋಷ್ ನಗರ (ಉಪಾಧ್ಯಕ್ಷರು), ಡಾ. ಧನಲಕ್ಷ್ಮಿ ಎಂ.ಮಣ್ಣುಗುಡ್ಡೆ (ಕೋಶಾಧಿಕಾರಿ), ಮಹೇಶ್ ನಾಯಕ್, ರಜನಿ ಆರ್. ನಾಯಕ್ ಬಂಟ್ವಾಳ, ಪ್ರವೀಣ್ ನಾಯಕ್ ಬಂಟ್ವಾಳ (ಸಂಘಟನಾ ಕಾರ್ಯದರ್ಶಿಗಳು) ಆಯ್ಕೆಯಾಗಿದ್ದಾರೆ. ಸಂಘದ ವಾರ್ಷಿಕ ಮಹಾಸಭೆಯ ಬಳಿಕ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ಶ್ರೀ ಕ್ಷೇತ್ರ ಸೋಮನಾಥ ಉಳಿಯ ಆಡಳಿತ ಸಮಿತಿ ಗೌರವಾಧ್ಯಕ್ಷ ಯು.ದಯಾನಂದ ನಾಯಕ್ ನಡೆಸಿಕೊಟ್ಟರು. ಶ್ರೀ ಕ್ಷೇತ್ರ ಸೋಮನಾಥ ಉಳಿಯ ಆಡಳಿತ ಸಮಿತಿ ಅಧ್ಯಕ್ಷ ಉಮಾನಾಥ ನಾಯಕ್ ಉಳ್ಳಾಲ, ಶ್ರೀ ಸೋಮೇಶ್ವರೀ ಮಹಿಳಾ ಮಂಡಲದ ಅಧ್ಯಕ್ಷೆ ಜಯಶೀಲಾ ನಾಯಕ್ ಉಪಸ್ಥಿತರಿದ್ದರು.

ಮೂಡುಬಿದಿರೆ ರೋಟರಿ ಕ್ಲಬ್: ನೂತನ ಪದಾಧಿಕಾರಿಗಳ ಆಯ್ಕೆ

ಮೂಡುಬಿದಿರೆ: ರೋಟರಿ ಕ್ಲಬ್ ಮೂಡುಬಿದಿರೆ ಇದರ 2026-27ನೇ ಸಾಲಿನ ಅಧ್ಯಕ್ಷರಾಗಿ ಶಿರ್ತಾಡಿ ಪ್ರಭಾ ಕ್ಲಿನಿಕ್ ನ ಡಾ. ಅರವಿಂದ್ ಎಂ ಪಿ ಹಾಗೂ ಕಾರ್ಯದರ್ಶಿಯಾಗಿ ಉದ್ಯಮಿ ಪ್ರಜ್ವಲ್ ಅಜಾರ್ ಆಯ್ಕೆಯಾಗಿದ್ದಾರೆ.





ಕ್ಲಬ್ ಉಪಾಧ್ಯಕ್ಷರಾಗಿ ಡಾ. ಅರವಿಂದ್ ಕಿಣಿ, ಕೋಶಾಧಿಕಾರಿಯಾಗಿ ಜಯಪ್ರಕಾಶ ವಿಲ್ಫ್ರೆಡ್ ಪಿಂಟೋ, ಕ್ಲಬ್ ಲರ್ನಿಂಗ್ ಫೆಲಿಸಿಟೇಟರ್ ಆಗಿ ಜಾನ್ ಜೋಸೆಫ್ ಪಿಂಟೋ ಆಯ್ಕೆಗೊಂಡಿದ್ದಾರೆ. ಇತರ ಪದಾಧಿಕಾರಿಗಳಾಗಿ ಡಾ. ಪ್ರಸನ್ನ ಕಾಕುಂಜೆ(ಸಾರ್ಜೆಂಟ್ ಆಟ್ ಆರ್ಮ್ಸ್), ಅಬ್ದುಲ್ ಗಫೂರ್ (ವೊಕೇಷನಲ್ ಸರ್ವಿಸ್), ಡಾ. ಮುರಳಿಕೃಷ್ಣ ಆರ್ ವಿ (ಕ್ಲಬ್ ಫೌಂಡೇಶನ್), ಡಾ. ರಮೇಶ್ (ಸರ್ವಿಸ್ ಪ್ರಾಜೆಕ್ಟ್), ಸಂತೋಷ್ ಕುಮಾರ್ (ಎಕ್ಸಿಕ್ಯೂಟಿವ್ ಸೆಕ್ರೆಟರಿ), ಮಹಮ್ಮದ್ ಆರಿಫ್ (ಸದಸ್ಯತ್ವ), ಅವಿಲ್ ಡಿಸೋಜಾ(ನ್ಯೂ ಜನರೇಷನ್), ಬಾಹುಬಲಿ ಪ್ರಸಾದ್ ಎಂ.(ಪಬ್ಲಿಕ್ ಇಮೇಜ್), ಯತಿಕುಮಾರ ಸ್ವಾಮಿ ಗೌಡ (ಪಲ್ಸ್ ಪೋಲಿಯೋ) ಆಯ್ಕೆಗೊಂಡಿದ್ದಾರೆ. ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಿಶ್ಮಿತಾ ಟವರ್ಸ್ ಪ್ಯಾರಡೈಸ್ ಮಲ್ಟಿ ಪರ್ಪಸ್ ಹಾಲ್ ನಲ್ಲಿ ಜುಲೈ 6ರಂದು ನಡೆಯಲಿದೆ.

ವಿದ್ಯಾರಶ್ಮಿ ವಿದ್ಯಾಲಯ: ಮಾದಕ ವ್ಯಸನ ವಿರೋಧಿ ದಿನಾಚರಣೆ



ಸವಣೂರು: ಇಲ್ಲಿನ ವಿದ್ಯಾರಶ್ಮಿ ವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮಾದಕ ವ್ಯಸನ ವಿರೋಧಿ ದಿನಾಚರಣೆ ನಡೆಯಿತು. ಬೆಳ್ಳಾರೆ ಪೊಲೀಸ್ ಠಾಣೆಯ ಪಿಎಸ್ಸೈ ಈರಯ್ಯ ಡಿ.ಎನ್. ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಗಾಂಜಾ ಮತ್ತು ಅಫೀಮು ಮೊಬೈಲ್ ಬಳಕೆ, ಸೈಬರ್ ಕ್ರೈಂ, ಅಪ್ರಾಪ್ತರ ವಾಹನ ಚಲಾವಣೆ ಮುಂತಾದ ಕುರಿತಾಗಿ ಕಾನೂನು ಮಾಹಿತಿಗಳನ್ನು ವಿವರವಾಗಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಆಡಳಿತಾಧಿಕಾರಿ ಅಶ್ವಿನ್ ಎಲ್. ಶೆಟ್ಟಿ ಮಾತನಾಡಿದರು.

ಸಂಸ್ಥೆಯ ಪ್ರಾಂಶುಪಾಲೆ ಶಶಿಕಲಾ ಎಸ್. ಆಳ್ವ ಉಪಸ್ಥಿತರಿದ್ದರು. ದೇಚಮ್ಮ ಮತ್ತು ಬಳಗದವರು ಪ್ರಾರ್ಥಿಸಿದರು. ಶಂತನುಕೃಷ್ಣ ಕೆ.ಎ. ಸ್ವಾಗತಿಸಿ, ಎಚ್.ಎಸ್. ಶ್ರುತಾ ಜೈನ್ ವಂದಿಸಿ, ವಿದ್ಯಾರ್ಥಿನಿ ಆಯಿಷತ್ ಹನ್ನ ನಿರ್ವಹಿಸಿದರು.

ಬೆಳ್ತಂಗಡಿ ಜೈನ್ ಮಿಲನ್‌ನ ಮಾಸಿಕ ಸಭೆ, ಕಾರ್ಯ ಯೋಜನೆಗಳ ಬಗ್ಗೆ ಚರ್ಚೆ



ಬೆಳ್ತಂಗಡಿ: ಬೆಳ್ತಂಗಡಿ ಜೈನ್ ಮಿಲನ್‌ನ ಮಾಸಿಕ ಕಾರ್ಯಕ್ರಮವು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ಜರಗಿತು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಧ.ಮಂ. ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಡಾ. ಮಹಾವೀರ ಜೈನ್ ಮಾತನಾಡಿ, ಜೈನ ಧರ್ಮದ ಕರ್ಮ, ಅಹಿಂಸೆ, ಅನೇಕಾಂತಗಳೆಂಬ ಮೂರು ಪ್ರಮುಖ ಸಿದ್ಧಾಂತಗಳನ್ನು ಪ್ರಸ್ತಾಪಿಸುತ್ತದೆ, ಇದರಲ್ಲಿ ಕರ್ಮಸಿದ್ಧಾಂತ ಪ್ರಧಾನವಾಗಿದೆ. ಜೀವಿಗಳ ಬದುಕಿನ ಎಲ್ಲಾ ಸುಖ, ದುಃಖ ಸಾವು, ನೋವುಗಳ ಅನುಭವಗಳಿಗೆ ಅವರವರ ಆತ್ಮನಿಗೆ ಬಂಧವಾದ ಕರ್ಮವೇ ಕಾರಣವಾಗಿದೆ, ಕರ್ಮಗಳು ಸ್ವಯಾರ್ಜಿತವಾಗಿದೆ. ಎಂಟು ಕರ್ಮಗಳು ಮುಖ್ಯವಾಗಿದ್ದು ಇದನ್ನು 148 ಭೇದಗಳಾಗಿ ವಿಂಗಡಿಸಲಾಗಿದೆ. ಇದರಲ್ಲಿ ಮುಖ್ಯವಾದ ಏಳು ಕರ್ಮಗಳನ್ನು ಜೀವಿಯು ತನ್ನ ಸತ್ಪ್ರಯತ್ನದಿಂದ ಶುಭ ಅಥವಾ ಅಶುಭಗಳಾಗಿ ಪರಿವರ್ತಿಸಬಹುದು ಆದರೆ ಆಯುಕರ್ಮವನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಭಾರತೀಯ ಜೈನ್ ಮಿಲನ್ ವಲಯ -8ರ ನಿರ್ದೇಶಕ ಬಿ. ಸೋಮಶೇಖರ್ ಶೆಟ್ಟಿ ಮಾತನಾಡಿ, ಸಂಘಟನೆಯ ಬಗ್ಗೆ ತಿಳಿಸಿದರು. ಬೆಳ್ತಂಗಡಿ ಜೈನ್ ಮಿಲನ್ ಅಧ್ಯಕ್ಷ ಡಾ. ಸನ್ಮತಿ ಕುಮಾರ್ ಬೆಳ್ತಂಗಡಿ ಜೈನ್ ಮಿಲನಿನ ಮುಂದಿನ ಕಾರ್ಯ ಯೋಜನೆಯು ಬಗ್ಗೆ ತಿಳಿಸಿದರು. ಜ್ಯೋತಿ ಕುಮಾರಿ ಎಂ. ಎನ್ ಹಿಂದಿನ ಸಭೆಯ ವರದಿ ಮಂಡಿಸಿದರು. ರವೀಶ್ ಕುಮಾರ್ ಅತಿಥಿಗಳ ಪರಿಚಯಿಸಿದರು. ಬೆಳ್ತಂಗಡಿ ಜೈನ್ ಮಿಲನ್ ಕಾರ್ಯದರ್ಶಿ ಸುಮನ್ ಯು.ಎಸ್. ನಿರೂಪಿಸಿದರು. ಕಿರಣ್ ಕುಮಾರ್ ಜೈನ್ ವಂದಿಸಿದರು.

ಶ್ರೀ ಮಹಾಲಿಂಗೇಶ್ವರ ದೇವಳ ಬಳಿ ರಸ್ತೆ ನಿರ್ಮಾಣಕ್ಕೆ ಶಾಸಕರಿಂದ ಪರಿಶೀಲನೆ



ಪುತ್ತೂರು: ಒಳಚರಂಡಿ ವ್ಯವಸ್ಥೆ ಇಲ್ಲದೆ ನಗರದ ಅಭಿವೃದ್ಧಿ ಅಸಾಧ್ಯವಾಗಿದ್ದು ಈ ಹಿನ್ನೆಲೆಯಲ್ಲಿ ನೆದರ್‌ಲ್ಯಾಂಡ್ ಮೂಲದ ತಾಂತ್ರಿಕತೆಯನ್ನು ಬಳಸಿಕೊಂಡು ಕಂಪೆನಿಯೊಂದರ ಮೂಲಕ ಸುಮಾರು 6 ಕಿ.ಮೀ. ಸುತ್ತಳತೆಯಲ್ಲಿ ಪುತ್ತೂರು ನಗರದ ಒಳಚರಂಡಿ ವ್ಯವಸ್ಥೆಗೆ ರೂ.50 ಕೋಟಿಗಳ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಅದಕ್ಕೆ ರಾಜ್ಯ ಸರಕಾರ ಮಂಜೂರಾತಿ ನೀಡಲಿದೆ ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಅವರು ಶನಿವಾರ ಪುತ್ತೂರು ದೇವಸ್ಥಾನದ ಬಳಿ ಮಹಿಳಾ ಪೊಲೀಸ್ ಠಾಣಾ ಕಡೆಯಿಂದ ಸ್ಮಶಾನದವರೆಗೆ ನಿರ್ಮಾಣಗೊಳ್ಳಲಿರುವ ಸುಮಾರು ರೂ.3.50 ಕೋಟಿ ವೆಚ್ಚದ 30 ಅಡಿ ಅಗಲದ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಸಂಬಂಧಿಸಿ ಇಂಜಿನಿಯರ್‌ಗಳಿಂದ ಮಾಹಿತಿ ಪಡೆದುಕೊಂಡು ಸ್ಥಳ ಪರಿಶೀಲನೆ ನಡೆಸಿದರು. ಪುತ್ತೂರಿನ ಒಳಚರಂಡಿ ವ್ಯವಸ್ಥೆಗೆ ಸಂಬಂಧಿಸಿ ಈ ಹಿಂದೆ ಸುಮಾರು ರೂ.200 ಕೋಟಿಗಳಲ್ಲಿ ಗ್ರಾವಿಟಿ ನೆಲೆಯಲ್ಲಿ ನೀರು ಹರಿಯುವ ವ್ಯವಸ್ಥೆಯ ಯೋಜನೆಗೆ ಡಿಪಿಆರ್ ಮಾಡಲಾಗಿದೆ. 50 ಕೋ ರೂ. ಪ್ರಸ್ತಾವನೆ ಸಲ್ಲಿಸಿ, ನಗರಾಭಿವೃದ್ಧಿ ಇಲಾಖೆ ಸಚಿವ ಡಾ.ಯತೀಂದ್ರ ಅವರನ್ನು ಭೇಟಿಯಾಗಿ ಮಾತುಕತೆ ಮಾಡಿದ್ದೇನೆ ಎಂದರು.

ದೇವಸ್ಥಾನದ ಮ್ಯಾಸ್ಟರ್ ಪ್ಲಾನ್‌ನಂತೆ ಮಹಿಳಾ ಪೊಲೀಸ್ ಠಾಣಾ ಕಡೆಯಿಂದ ಸ್ಮಶಾನದವರೆಗೆ 30 ಅಡಿ ಅಗಲದ ಕಾಂಕ್ರೀಟ್ ರಸ್ತೆ ನಿರ್ಮಾಣವಾಗಲಿದೆ. ಜತೆಗೆ ಬೊಳುವಾರು ಭಾಗದಿಂದ ಬರುವ 6 ಕಿ.ಮೀ. ವ್ಯಾಪ್ತಿಯ ಕೊಳಚೆ ನೀರಿನ ಒಳಚರಂಡಿ ವ್ಯವಸ್ಥೆಯೂ ಮಾಡಲಿದ್ದೇವೆ ಎಂದರು. ದೇವಸ್ಥಾನದ ಬಳಿ ಇರುವ ಮಹಿಳಾ ಪೊಲೀಸ್ ಠಾಣೆ ಸ್ಥಳಾಂತರಕ್ಕೆ ಸಂಬಂಧಿಸಿ 30 ಸೆಂಟ್ಸ್ ಜಾಗ ಗುರುತಿಸಲಾಗಿದೆ. ಶೀಘ್ರ ಮಂಜೂರಾತಿ ದೊರೆಯಲಿದೆ. ಆ ಬಳಿಕ ಠಾಣೆಯನ್ನು ಸ್ಥಳಾಂತರಿಸುವ ಕಾರ್ಯ ಮಾಡಲಾಗುವುದು ಎಂದರು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ, ಸಮಿತಿ ಸದಸ್ಯರು, ಇಂಜಿನಿಯರ್‌ಗಳು ಉಪಸ್ಥಿತರಿದ್ದರು.

ಸಾರ್ವಜನಿಕ ಶ್ರೀ ಗಣೇಶೋತ್ಸವದ ವಿಜ್ಞಾಪನಾ ಪತ್ರದ ಲೋಕಾರ್ಪಣೆ



ಕೈಕಂಬ: ಅಡ್ಡೂರು ಸಾರ್ವಜನಿಕ ಶ್ರೀ ಗಣೇಶೋತ್ಸವ ಸೇವಾ ಸಮಿತಿಯಿಂದ 40ನೇ ವರ್ಷದಲ್ಲಿ ಆಚರಿಸಲ್ಪಡುವ ಶ್ರೀ ಗಣೇಶನಿಗೆ ಬೆಳ್ಳಿಯ ಪ್ರಭಾವಳಿ ಸಮರ್ಪಿಸಲು ನಿರ್ಧರಿಸಲಾಗಿದ್ದು, ಶ್ರೀ ದೇವರಿಗೆ ಸಮರ್ಪಿಸಲಾಗುವ ಬೆಳ್ಳಿಯ ಪ್ರಭಾವಳಿಗೆ ಸಂಬಂಧಿಸಿದ ವಿಜ್ಞಾಪನಾ ಪತ್ರವನ್ನು ಜೂ.21ಕ್ಕೆ ಭಾನುವಾರ ಅಡ್ಡೂರು ಶ್ರೀ ಮುಖ್ಯಪ್ರಾಣ ದೇವಸ್ಥಾನದಲ್ಲಿ ಬಿಡುಗಡೆಗೊಳಿಸಲಾಯಿತು.

ಧಾರ್ಮಿಕ ಮತ್ತು ಸಾಮಾಜಿಕ ಮುಖಂಡ ಚಂದ್ರಹಾಸ ಶೆಟ್ಟಿ ನಾರಳ ವಿಜ್ಞಾಪನಾ ಪತ್ರವನ್ನು ಬಿಡುಗಡೆಗೊಳಿಸಿದರು. ಈ ಸಂದರ್ಭ ರವಿಶಂಕರ್ ರಾವ್ ನೂಯಿ, ವಿಶ್ವೇಶ್ವರ ಭಟ್ ಕಾಂಜಿಲಕೋಡಿ, ಹಾಗೂ ಶ್ರೀ ಗಣೇಶೋತ್ಸವ ಸಮಿತಿ ಅಧ್ಯಕ್ಷ ಯಶೋಧರ ಅಡ್ಡೂರು ಹಾಗೂ ಸಮಿತಿ ಪದಾಧಿಕಾರಿಗಳು ಹಾಗೂ ಊರ-ಪರವೂರ ಭಕ್ತರು ಉಪಸ್ಥಿತರಿದ್ದರು. ಬಳಿಕ ಸಮಿತಿಯ ಮಹಾಸಭೆ ನಡೆಯಿತು. ಇತ್ತೀಚೆಗೆ ನಿಧನರಾದ ಸುಳ್ಯಗುತ್ತು ಸುಬ್ಬಯ್ಯ ಭಂಡಾರಿ ಅವರಿಗೆ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು. ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿಯ ಪದಾಧಿಕಾರಿಗಳು, ಸರ್ವಸದಸ್ಯರು ಭಾಗವಹಿಸಿ ಸಲಹೆ-ಸೂಚನೆ ನೀಡಿದರು. ನವೀನ್ ಆಚಾರ್ಯ ನಿರೂಪಿಸಿದರು.



ಶ್ರೀ ರಾಮ ಫೈನಾನ್ಸ್ ಸಂಸ್ಥೆಯ ಸಿ.ಎಸ್.ಆರ್ ಯೋಜನೆಯಡಿ ಹಾಗೂ ಪಂಚಾಯತ್‌ನ ಅನುದಾನದಲ್ಲಿ ನೂತನವಾಗಿ ನಿರ್ಮಾಣವಾಗಲಿರುವ ಕೇಪು ಗ್ರಾಮದ ಮೈರ ಅಂಗನವಾಡಿ ಕೇಂದ್ರದ ಕಟ್ಟಡಕ್ಕೆ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಶನಿವಾರ ಶಿಲಾನ್ಯಾಸ ನೆರವೇರಿಸಿದರು. ಪ್ರಮುಖರಾದ ಮುರಲೀಕೃಷ್ಣ ಹಸಂತಡ್ಕ, ಶರತ್‌ಚಂದ್ರ ಭಟ್ ಕಾಕುಂಜೆ, ದಯಾನಂದ ಉಜಿರೆಮಾರ್, ಸಾಜ ರಾಧಾಕೃಷ್ಣ ಆಳ್ವ, ಹರಿಪ್ರಸಾದ್ ಯಾದವ್, ರಾಘವ ಮಣಿಯಾಣಿ, ಪುರುಷೋತ್ತಮ ಮೈರ, ರಾಜೇಶ್ ಬಾಳೆಕಲ್ಲು, ಶಾರದಾ, ಅಡ್ಯನಡ್ಕ ಸೇವಾ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಜನಾರ್ದನ ಭಟ್ ಮತ್ತಿತರರು ಈ ಸಂದರ್ಭ ಉಪಸ್ಥಿತರಿದ್ದರು.

ಕಾರ್ಯಕರ್ತರೇ ಕಾಂಗ್ರೆಸ್ ಪಕ್ಷದ ಬೆನ್ನೆಲುಬು: ರಮಾನಾಥ ರೈ ಹೇಳಿಕೆ



ಕಿನ್ನಿಗೋಳಿ: ಕಾಂಗ್ರೆಸ್ ಪಕ್ಷವನ್ನು ಅಂದಿನಿಂದಲೂ ಇಂದಿನವರೆಗೆ ಬೆಳೆಸಿ, ರಕ್ಷಿಸಿದ ಕಾರ್ಯಕರ್ತರೇ ಪಕ್ಷದ ಬೆನ್ನೆಲುಬು. ಕಾರ್ಯಕರ್ತರು ಪಕ್ಷಕ್ಕೆ ನೀಡಿದ ಸೇವೆಯನ್ನು ಪಕ್ಷ ಎಂದೂ ಮರೆಯುವುದಿಲ್ಲ, ಸಂವಿಧಾನದ ಕೊಲೆ ಮಾಡುತ್ತಿರುವ ರಾಷ್ಟ್ರದ್ರೋಹಿಗಳನ್ನು ಕಾಂಗ್ರೆಸ್ ಪಕ್ಷ ಎಂದು ಸಹಿಸುವುದಿಲ್ಲ, ಇದಕ್ಕಾಗಿ ದೇಶದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರಲು ಕಾರ್ಯಕರ್ತರು ಕಟಿಬದ್ಧರಾಗಬೇಕು ಎಂದು ಕೆಪಿಸಿಸಿ ಉಪಾಧ್ಯಕ್ಷ ಹಾಗೂ ಮಾಜಿ ಸಚಿವ ರಮಾನಾಥ ರೈ ಹೇಳಿದರು

ಅವರು ಕಿನ್ನಿಗೋಳಿ ಸರಾಫ್ ಅಣ್ಣಯ್ಯ ಆಚಾರ್ಯ ಸಭಾಭವನದಲ್ಲಿ ಮುಲ್ಕಿ ಮೂಡುಬಿದಿರೆ ವಿಧಾನಸಭಾ ಕ್ಷೇತ್ರದ ಬಿಎಲ್‌ಎಗಳ ಕಾರ್ಯಾಗಾರ ಮತ್ತು ಮಾಹಿತಿ ಶಿಬಿರದಲ್ಲಿ ಮಾತನಾಡಿದರು.

ಮಾಜಿ ಸಚಿವ ಕೆ. ಅಭಯ್ ಚಂದ್ರ ಜೈನ್ ಅಧ್ಯಕ್ಷತೆ ವಹಿಸಿದ್ದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ಎಂ. ರೈ ಎಸ್‌ಐಆರ್ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ತರಬೇತುದಾರರಾದ ಅಮಿತಾ ತರಬೇತಿ ನಿರ್ವಹಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪದ್ಮರಾಜ್ ಎಸ್, ಮೂಡುಬಿದಿರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರವೀಣ್ ಚಂದ್ರ ಜೈನ್, ಕೆಪಿಸಿಸಿ ಸದಸ್ಯರಾದ ಎಚ್. ವಸಂತ ಬರ್ನಾಡ್ ಮತ್ತು ಚಂದ್ರಹಾಸ ಸನಿಲ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ವಿಲ್ಮಾ ಡಿಕೋಸ್ಟ ಮತ್ತು ಸುಪ್ರಿಯ ಶೆಟ್ಟಿ, ಯುವ ಕಾಂಗ್ರೆಸ್ ಅಧ್ಯಕ್ಷರಾದ ರಕ್ಷಿತ್ ಪೂಜಾರಿ ಮತ್ತು ಅನೀಶ್ ಡಿಸೋಜಾ, ಕಿನ್ನಿಗೋಳಿ ಪ್ರಜಾಪ್ರತಿನಿಧಿ ಅಧ್ಯಕ್ಷ ಪ್ರಮೋದ್ ಕುಮಾರ್, ಪುರಂದರ ದೇವಾಡಿಗ ಮೂಡುಬಿದಿರೆ ಮತ್ತಿತರರು ಉಪಸ್ಥಿತರಿದ್ದರು. ಮುಲ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ್ ಕೋಟ್ಯಾನ್ ಸ್ವಾಗತಿಸಿ, ಬ್ಲಾಕ್ ಪ್ರಧಾನ ಕಾರ್ಯದರ್ಶಿ ಸಫ್ರಾಜ್ ಬಾಳ ವಂದಿಸಿದರು. ಕಿನ್ನಿಗೋಳಿ ಪಟ್ಟಣ ಪಂ. ಸದಸ್ಯ ಪ್ರಕಾಶ್ ಆಚಾರ್ಯ ನಿರೂಪಿಸಿದರು.


ದೈಪಲ ಶಿವಾಜಿನಗರ ಶ್ರೀ ರಾಮ ಭಜನಾ ಮಂದಿರದ ವರ್ಧಂತ್ಯುತ್ಸವ



ಬಂಟ್ವಾಳ: ಬಿ.ಮೂಡ ಗ್ರಾಮದ ಕಾಮಾಜೆ ದೈಪಲ ಶಿವಾಜಿನಗರದ ಶ್ರೀ ರಾಮ ಭಜನಾ ಮಂದಿರ ಶಿವಾಜಿನಗರ ಕಾಮಾಜೆ ದೈಪಲದಲ್ಲಿ 16ನೇ ವರ್ಷದ ಪ್ರತಿಷ್ಠಾ ವರ್ಧಂತ್ಯುತ್ಸವವನ್ನು ಗಣಯಾಗ ಹಾಗೂ ಶ್ರೀ ರಾಮ ದೇವರಿಗೆ ಪ್ರಸನ್ನ ಪೂಜೆಯೊಂದಿಗೆ ಆಚರಿಸಲಾಯಿತು.

ಬಳಿಕ ಶ್ರೀ ರಾಮ ಭಜನಾ ಮಂದಿರದ ಜೀರ್ಣೋದ್ಧಾರಗೊಳಿಸುವ ನಿಟ್ಟಿನಲ್ಲಿ ಮಂದಿರದ ಸಮಿತಿ ಅಧ್ಯಕ್ಷ ಕೇಶವ ದೈಪಲ ಅಧ್ಯಕ್ಷತೆಯಲ್ಲಿ ಸಮಾಲೋಚನಾ ಸಭೆ ನಡೆಸಲಾಯಿತು. ವರ್ಧಂತ್ಯುತ್ಸವದ ಪ್ರಯುಕ್ತ ಮಂದಿರದ ವಠಾರದಲ್ಲಿ ಗಿಡ ನಾಟಿ ಮಾಡುವ ಮೂಲಕ ವನಮಹೋತ್ಸವ ಆಚರಿಸಲಾಯಿತು. ರಾತ್ರಿ ಭಕ್ತರಿಂದ ಭಜನಾ ಸಂಕೀರ್ತನೆ ನಡೆಯಿತು.

ಭಜನಾ ಮಂದಿರದ ಸಮಿತಿ ಅಧ್ಯಕ್ಷ ಕೇಶವ ದೈಪಲ, ಉಪಾಧ್ಯಕ್ಷ ಚಂದಪ್ಪ ರಾಜೀವ ಪಲ್ಕೆ, ಪ್ರಧಾನ ಕಾರ್ಯದರ್ಶಿ ಹರೀಶ ದೈಪಲ, ಕೋಶಾಧಿಕಾರಿ ಯಾದವ ದೈಪಲ, ಜೊತೆ ಕಾರ್ಯದರ್ಶಿ ರಾಘವೇಂದ್ರ ಶಿವಾಜಿನಗರ, ಸೋಮನಾಥ, ಉಮೇಶ್, ಚೇತನ್ ಕುಮಾರ್, ಲೋಕೇಶ್, ಪೊಟ್ಟುಕೋಡಿ, ವಾಮನ, ಪ್ರಕಾಶ್, ರಾಜೇಶ್, ಗೋಪಾಲಕೃಷ್ಣ ಅವಿನಾಶ್, ಪರಮೇಶ್ವರ, ಬಸವರಾಜ್, ಯೋಗೀಶ್, ಉಮೇಶ್, ಅಶೋಕ್ ಕಾಮಾಜೆ, ಗಣೇಶ್ ಕಾಮಾಜೆ, ಜಗದೀಶ್ ಕಾಮಾಜೆ, ಮಧುಕರ ಕಾಮಾಜೆ, ಸೀತಾ ಮಾತಾ ಮಹಿಳಾ ಸಮಿತಿಯ ಅಧ್ಯಕ್ಷೆ ವಾಣಿ ಕೇಶವ ಪದಾಧಿಕಾರಿಗಳಾದ ವಿಜಯಲಕ್ಷ್ಮಿ ದೈಪಲ, ಪ್ರಮಿಳಾ ಕಾಮಾಜೆ, ವೇದಾವತಿ, ಭಾರತಿ, ಪುಷ್ಪಪೊಟ್ಟುಕೋಡಿ, ಸುಶೀಲ ರಾಮ ಶಿವಾಜಿನಗರ, ಗೀತಾ, ಕುಮುದ, ಉಮಾವತಿ, ಪ್ರೇಮ, ಸವಿತಾ, ಸುರೇಖಾ, ಚಂದ್ರಿಕಾ, ಮಮತಾ, ಲಕ್ಷ್ಮೀ, ಯಶೋಧ, ಭಕ್ತರು ಉಪಸ್ಥಿತರಿದ್ದರು.



ಬೆಳ್ತಂಗಡಿ ಇಲ್ಲಿನ ವಾಣಿ ಪದವಿ ಪೂರ್ವ ಕಾಲೇಜಿಗೆ ಎನ್ನೆಸ್ಸೆಸ್ ವಿಭಾಗೀಯ ಅಧಿಕಾರಿ ಸವಿತಾ ಎರ್ಮಾಳ್ ಅವರು ಶನಿವಾರ ಭೇಟಿ ನೀಡಿ, ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಚಟುವಟಿಕೆಗಳ ಕುರಿತು ಪರಿಶೀಲನೆ ನಡೆಸಿದರು. ಈ ಸಂದರ್ಭ ಅವರು ಎನ್ನೆಸ್ಸೆಸ್ ಘಟಕದ ಕಾರ್ಯವೈಖರಿ, ದಾಖಲಾತಿಗಳು ಹಾಗೂ ವಿವಿಧ ಸೇವಾ ಕಾರ್ಯಕ್ರಮಗಳ ಕುರಿತು ಮಾಹಿತಿ ಪಡೆದರು. ಕಾಲೇಜಿನ ಪ್ರಾಂಶುಪಾಲರು ಹಾಗೂ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳು ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಸೇವಾ ಭಾರತಿಯಿಂದ ನರಿಂಗಾನದಲ್ಲಿ ದಿವ್ಯಚೇತನ ಸಂವಹನ ವಿಕಸನ ಕೇಂದ್ರ ನಿರ್ಮಾಣ

ನಮ್ಮಲ್ಲಿ ಪ್ರತ್ಯುಪಕಾರದ ಭಾವನೆ ಅಗತ್ಯ: ಪೇಜಾವರ ಶ್ರೀ

ಕೊಣಾಜೆ: ಸೇವಾ ಭಾರತಿ ಮಂಗಳೂರು ಇದರ ವತಿಯಿಂದ ದಿವ್ಯಾಂಗರ ಪುನರ್ವಸತಿಗಾಗಿ ನರಿಂಗಾನ ಗ್ರಾಮದ ಮೊಂಟೆಪದವಿನ ಮಾಧವ ವನದಲ್ಲಿ ಸೇವಾ ಭಾರತಿ ಯೋಜನೆಯಡಿ ನಿರ್ಮಾಣಗೊಂಡ ದಿವ್ಯಚೇತನ ಸಂವಹನ ವಿಕಸನ ಕೇಂದ್ರ (ಆಟಿಸಂ ಕೇಂದ್ರ)ದ ಉದ್ಘಾಟನೆ ಸಮಾರಂಭ ಶುಕ್ರವಾರ ನಡೆಯಿತು.

ಉಡುಪಿ ಶ್ರೀ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿ, ದಿವ್ಯಾಂಗರ ಪುನರ್ವಸತಿ ಕೇಂದ್ರವು ಸಮಾಜಮುಖಿ ಕಾರ್ಯದೊಂದಿಗೆ ಮುನ್ನಡೆಯುತ್ತಿದೆ. ದೇವರು ನಮಗೆ ಎಲ್ಲವನ್ನೂ ಒದಗಿಸಿಕೊಡುವವನು. ಆದ್ದರಿಂದ ನಾವು ಅವನಿಗೆ ಕೃತಜ್ಞರಾಗಿರಬೇಕಿದೆ. ಆದ್ದರಿಂದ



ನಮ್ಮಲ್ಲಿ ಪ್ರತ್ಯುಪಕಾರದ ಭಾವನೆ ಇರಬೇಕು. ಯಾರಿಗೆ ಅಸಮರ್ಥತೆ ಇರುತ್ತದೆಯೋ ಅವರಿಗೆ ಉಪಕಾರ ಮಾಡಿದರೆ ಅದು ದೇವರು ಮೆಚ್ಚುವ ಕೆಲಸವಾಗುತ್ತದೆ ಎಂದರು.

ಕರ್ಣಾಟಕ ಬ್ಯಾಂಕ್‌ನ ಆಡಳಿತ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಘವೇಂದ್ರ ಎಸ್. ಭಟ್ ತೆಂಗಿನ ಸಸಿಗೆ ನೀರು ಹಾಕುವುದರ ಮತ್ತು ದೀಪ ಬೆಳಗಿಸುವುದರ ಮೂಲಕ ಕೇಂದ್ರವನ್ನು ಉದ್ಘಾಟಿಸಿದರು.

ಸೇವಾ ಭಾರತಿ ಸಂಸ್ಥೆಯ ಗೌರವ ಕಾರ್ಯದರ್ಶಿ ಎಚ್. ನಾಗರಾಜ್ ಭಟ್, ಖಜಾಂಚಿ ವಿನೋದ್ ಶೆಣೈ, ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪೃಥ್ವಿಪಾಲ. ಕೆ, ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ, ಸಲಹಾ ಸಮಿತಿ ಸದಸ್ಯ ಸುಮನಾ ಘಾಟೆ, ಟ್ರಸ್ಟಿಗಳಾದ ಡಾ. ಸತೀಶ್ ರಾವ್, ದಿವ್ಯ ಚೇತನಾ ಸಂವಹನ ವಿಕಸನ ಕೇಂದ್ರದ ಮುಖ್ಯಸ್ಥೆ ರವಿಕಲಾ, ಆದಮ್ಯ ಚೇತನ ವಸತಿಯುತ ಶಾಲೆಯ ಮುಖ್ಯ ಶಿಕ್ಷಕಿ ವರ್ಷ, ಸಂಸ್ಥೆಯ ವಿಶ್ವಸ್ಥರು, ಸ್ವಯಂ ಸೇವಕರು, ಪೋಷಕರು, ಶಾಲಾ ಸಿಬ್ಬಂದಿಗಳು ಇದ್ದರು.

ಜುಲೈ 6ರಂದು ಸುಳ್ಯದಲ್ಲಿ ಕಾರ್ಯಕ್ರಮ: ಮುಂಡೋಡಿ

ಸಚಿವ ಖಾದರ್‌ಗೆ ಸಾರ್ವಜನಿಕ ಸನ್ಮಾನ

ಸುಳ್ಯ: ಸುಳ್ಯಕ್ಕೆ ಪ್ರಥಮ ಬಾರಿಗೆ ಆಗಮಿಸುತ್ತಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರಿಗೆ ಜು.6ರಂದು ಸಚಿವರಿಗೆ ಸಾರ್ವಜನಿಕ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ಸಾರ್ವಜನಿಕ ಸನ್ಮಾನ ಸಮಿತಿ ಮುಖಂಡ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕರಾವಳಿಯ ಏಕೈಕ ಸಚಿವ ಯು.ಟಿ. ಖಾದರ್‌ಗೆ ಸುಳ್ಯ ಕ್ಷೇತ್ರ ಶಾಸಕಿ ಭಾಗೀರಥಿ ಮುರುಳ್ಯ ಅಧ್ಯಕ್ಷತೆಯಲ್ಲಿ ಜಾನಕಿ ವೆಂಕಟರಮಣ ಸಭಾಂಗಣದಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ ಹೀಗೆ ಮೂರು ಧರ್ಮದ ಪ್ರಮುಖರ ಸಮ್ಮುಖದಲ್ಲಿ ರಾಜ್ಯ ಸರಕಾರದ ಶಿಷ್ಟಾಚಾರದಂತೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಪಕ್ಷಾತೀತವಾಗಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಅಭಿನಂದನಾ ಕಾರ್ಯಕ್ರಮದಿಂದ ಸುಳ್ಯ ತಾಲೂಕಿನ ಸಮಗ್ರ ಅಭಿವೃದ್ಧಿಯ ಜೊತೆಗೆ ಸುಳ್ಯ 60ರ ಸಂಭ್ರಮದಲ್ಲಿ ಆಗ್ರಹಿಸಿದಂತೆ ಅಭಿವೃದ್ಧಿ ಕಾರ್ಯಗಳಿಗಾಗಿ ಈ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದು ಹೇಳಿದರು.

ಅಹವಾಲು ಸಲ್ಲಿಕೆಗೆ ಅವಕಾಶ

ಕಾರ್ಯಕ್ರಮದ ದಿನದಂದು ಸಭಾಂಗಣದಲ್ಲಿ ಪ್ರತ್ಯೇಕ ಕೌಂಟರ್ ವ್ಯವಸ್ಥೆಯ ಮೂಲಕ ಸಾರ್ವಜನಿಕ ಹಾಗೂ ವೈಯಕ್ತಿಕ ಸರಕಾರಿ ಕೆಲಸಗಳ ಅರ್ಜಿಗಳನ್ನು ಸ್ವೀಕರಿಸಿ ಅರ್ಜಿದಾರರ ಎಲ್ಲಾ ಮಾಹಿತಿ ಪಡೆದು ಹಿಂಬರಹದೊಂದಿಗೆ ಕೆಲಸ, ಕಾಮಗಾರಿಗಳು ಆಗುವಂತೆ ನೋಡಿಕೊಳ್ಳಲಾಗುವುದು ಜೊತೆಗೆ ಇದರ ಸದುಪಯೋಗ ತಾಲೂಕಿನ ಜನತೆ ಪಡೆದುಕೊಳ್ಳಬೇಕು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಅರೆಭಾಷೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು, ಕಾಂಗ್ರೆಸ್ ಮುಖಂಡ ಮೂಸೆ ಕುಂಞ ಪೈಂಬಚ್ಚಾಲು, ಡಾ.ಎನ್.ಎ. ಜ್ಞಾನೇಶ್ ಉಪಸ್ಥಿತರಿದ್ದರು.

ಸುತ್ತ ಮುತ್ತ

ಮತಾಂತರ ಪ್ರಕರಣ: ಉನ್ನತ ಮಟ್ಟದ ತನಿಖೆಗೆ ಮಹಿಳಾ ಬಿಜೆಪಿ ಒತ್ತಾಯ

ಮಡಿಕೇರಿ: ಕುಶಾಲನಗರದ ನಿಸರ್ಗಧಾಮ ವ್ಯಾಪ್ತಿಯಲ್ಲಿ ನಡೆದಿರುವ ಮತಾಂತರ ಪ್ರಕರಣದ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು



ಕೊಡಗು ಜಿಲ್ಲಾ ಮಹಿಳಾ ಬಿಜೆಪಿ ಒತ್ತಾಯಿಸಿದೆ.

ಪತ್ರಿಕಾ ಪ್ರಕಟಣೆ ನೀಡಿರುವ ಮಹಿಳಾ ಬಿಜೆಪಿ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ ಅವರು, ಮಹಿಳೆಯೊಬ್ಬರು ಹಾಗೂ ಆಕೆಯ ಪುತ್ರನ ಮತಾಂತರ ಪ್ರಕರಣ ಖಂಡನೀಯವಾಗಿದ್ದು ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಮತಾಂತರ ಪ್ರಕರಣವನ್ನು ವಿರೋಧಿಸಿ ಹಿಂದು ಸಂಘಟನೆಗಳ ವತಿಯಿಂದ ಜೂ.30 ರಂದು ಕುಶಾಲನಗರದಲ್ಲಿ ನಡೆಯುವ ಜನಾಂದೋಲನಕ್ಕೆ ಮಹಿಳಾ ಬಿಜೆಪಿ ಸಂಪೂರ್ಣ ಬೆಂಬಲವನ್ನು ನೀಡಲಿದೆ ಎಂದು ತಿಳಿಸಿದ್ದಾರೆ.ಕಾವೇರಿ ನಾಡು ಕೊಡಗಿನಲ್ಲಿ ಮತಾಂತರ ಮತ್ತು ಲವ್ ಜಿಹಾದ್ ನಂತಹ ವಿಷಬೀಜಗಳನ್ನು ಬಿತ್ತುತ್ತಿರುವವರನ್ನು ಪೊಲೀಸ್ ಇಲಾಖೆ ತಕ್ಷಣ ಪತ್ತೆ ಹಚ್ಚಬೇಕು. ಜಿಲ್ಲೆಯಲ್ಲಿ ಇಲ್ಲಿಯವರೆಗೆ ನಡೆದಿರುವ ಪ್ರಕರಣಗಳ ಕುರಿತು ರಾಜ್ಯಗೃಹ ಇಲಾಖೆ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು. ರಾಜ್ಯ ಸರಕಾರ ಮತಾಂತರ ಮತ್ತು ಲವ್ ಜಿಹಾದ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಅದಮಾರು: ವಿದ್ಯಾರ್ಥಿ ಸಂಸತ್ ಉದ್ಘಾಟನೆ

ಪಡುಬಿದ್ರಿ: ಅದಮಾರು ಪೂರ್ಣಪ್ರಜ್ಞ ಕನ್ನಡ ಮಾಧ್ಯಮ ಪ್ರೌಢಶಾಲೆ ಯಲ್ಲಿ ನಮ್ಮ ಪಾರ್ಲಿಮೆಂಟ್ ಹಾಗೂ ಚುನಾವಣಾ ಪ್ರಕ್ರಿಯೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ವಿದ್ಯಾರ್ಥಿ ಸಂಸತ್ತನ್ನು ರೂಪಿಸುವ ಕಾರ್ಯಕ್ರಮ ಜರಗಿತು.

ವಿದ್ಯಾರ್ಥಿ ಸಂಸತ್ತಿನ ನೋಡಲ್ ಶಿಕ್ಷಕಿ ಪ್ರತಿಮಾ ಭಟ್ ಇವರ ಮಾರ್ಗದರ್ಶನದಲ್ಲಿ ಚುನಾವಣೆಯ ಸಂಪೂರ್ಣ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳೇ ಅತ್ಯಂತ ಜವಾಬ್ದಾರಿ ಹಾಗೂ ಶಿಸ್ತುಬದ್ಧವಾಗಿ ನಿರ್ವಹಿಸಿದರು. ಇವಿಎಂನಲ್ಲಿ ಮತದಾನ ಪ್ರಕ್ರಿಯೆಯನ್ನು ನಡೆಸಲಾಯಿತು. ಸಂಸ್ಥೆಯ ಮುಖ್ಯ ಶಿಕ್ಷಕರು ಹಾಗೂ ಇತರ ಶಿಕ್ಷಕರು ಚುನಾವಣೆಯ ಸಂಪೂರ್ಣ ಪ್ರಕ್ರಿಯೆ ಯನ್ನು ವೀಕ್ಷಿಸುತ್ತಿದ್ದರು. ಮುಖ್ಯ ಶಿಕ್ಷಕ ಶ್ರೀಕಾಂತ್ ರಾವ್, ಮತದಾನದಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳ ಸಹಕಾರ ಹಾಗೂ ಚುನಾವಣಾ ಕರ್ತವ್ಯವನ್ನು ಸಮ ರ್ಪಕವಾಗಿ ನಿರ್ವಹಿಸಿದ ವಿದ್ಯಾರ್ಥಿ ಅಧಿಕಾರಿಗಳ ಸೇವೆಯನ್ನು ಅಭಿನಂದಿಸಿದರು.ಈ ಚುನಾವಣೆಯಲ್ಲಿ ವಿದ್ಯಾರ್ಥಿ ನಾಯಕನಾಗಿ ಧನ್ವಿತ್ ಹಾಗೂ ವಿರೋಧ ಪಕ್ಷದ ನಾಯಕಿಯಾಗಿ ಸಾನಿಧ್ಯ ಆಯ್ಕೆಯಾಗಿದ್ದು, ಸಂಸ್ಥೆಯ ವತಿಯಿಂದ ಅಭಿನಂದನೆಗಳನ್ನು ಸಲ್ಲಿಸಲಾಯಿತು.

ಎಸ್‌ಐಆರ್ ಮಾಹಿತಿ ಕಾರ್ಯಾಗಾರ

ಉಪ್ಪಿನಂಗಡಿ: ಸಂವಿಧಾನದ ಮೂಲಕ ಜಾತಿ ಮತಗಳ ಬೇಧವಿಲ್ಲದೆ, ಬಡವ ಬಲ್ಲಿದನೆಂಬ ಬೇಧ ಮಾಡದೇ ಈ ದೇಶದ 18 ವರ್ಷ ಮೇಲ್ಪಟ್ಟ ಅರ್ಹರಿಗೆ ಮತದಾನದ ಹಕ್ಕನ್ನು ನೀಡಿರುವುದು ಕಾಂಗ್ರೆಸ್



ಸರಕಾರ. ಆದರೆ, ಬಿಜೆಪಿ ಸರಕಾರ ಚುನಾವಣಾ ಆಯೋಗದ ಮೂಲಕ ಎಸ್‌ಐಆರ್ ಜಾರಿಗೊಳಿಸುವ ಮೂಲಕ ಬಿಜೆಪಿಯೇತರರನ್ನು ಮತದಾನದಿಂದ ಹೊರಗಿಡಲು ಹುನ್ನಾರ ನಡೆಸಿದಂತಿದೆ ಎಂದು ಜಾಗೃತ ಕರ್ನಾಟಕದ ಸದಸ್ಯ ನಿಸಾರ್ ಅಹ್ಮದ್ ಹೇಳಿದರು.ದ.ಕ. ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಹಾಗೂ ಪುತ್ತೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪ್ರಚಾರ ಸಮಿತಿಯ ಜಂಟಿ ಆಶ್ರಯದಲ್ಲಿ ಉಪ್ಪಿನಂಗಡಿ ರೋಟರಿ ಸಮುದಾಯ ಭವನದಲ್ಲಿ ನಡೆದ ಎಸ್ ಐಆರ್ ಬಗ್ಗೆ ಮಾಹಿತಿ ಕಾರ್ಯಾಗಾರದಲ್ಲಿ ಅವರು ಮಾಹಿತಿ ನೀಡಿದರು.ಮುಂದಿನ 2–3 ತಿಂಗಳು ಕಾಂಗ್ರೆಸ್ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ. 18 ವರ್ಷ ಪೂರ್ಣವಾದವರ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಬೇಕು. ಮ್ಯಾಪಿಂಗ್ ಜೂ.30ರಿಂದ ಜು.29ರ ತನಕ ನಡೆಯಲಿದ್ದು, ಆ ಸಂದರ್ಭ ಮನೆಗೆ ಭೇಟಿ ನೀಡಿ ತಿದ್ದುಪಡಿ ಮಾಡಿಸಬೇಕು ಎಂದರು. ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಚಂದ್ರಹಾಸ ಶೆಟ್ಟಿ, ಕಾಂಗ್ರೆಸ್‌ನ ಜಿಲ್ಲಾ ಪ್ರಚಾರ ಸಮಿತಿಯ ಅಧ್ಯಕ್ಷ ಎಚ್. ಮಹಮ್ಮದ್ ಅಲಿ, ಪುತ್ತೂರು ವಿಧಾನಸಭಾ ಕ್ಷೇತ್ರದ ಪ್ರಚಾರ ಸಮಿತಿಯ ಅಧ್ಯಕ್ಷ ಡಾ. ರಾಜಾರಾಮ್ ಕೆ.ಬಿ., ಉಪ್ಪಿನಂಗಡಿ ವಲಯದ ಪ್ರಚಾರ ಸಮಿತಿಯ ಅಧ್ಯಕ್ಷ ಗಣೇಶ ರಾಜ್, 34 ನೆಕ್ಕಿಲಾಡಿ ವಲಯ ಕಾಂಗ್ರೆಸ್ ಅಧ್ಯಕ್ಷೆ ಅನಿ ಮಿನೇಜಸ್, ಗ್ರಾ.ಪಂ. ಮಾಜಿ ಸದಸ್ಯ ರಾದ ಗೀತಾ ದಾಸರಮೂಲೆ, ಸವಿತಾ ಹರೀಶ್, ಪ್ರಮುಖ ರಾದ ಅಝೀಝ್ ಬಸ್ತಿಕ್ಕಾರ್, ಅಶ್ರಫ್ ಬಸ್ತಿಕ್ಕಾರ್, ಯೊಗೀಶ್ ಸಾಮಾನಿ, ವಿಕ್ರಂ ಶೆಟ್ಟಿ ಮತ್ತಿತರರು ಇದ್ದರು.

ದಕ್ಷಿಣ ಕನ್ನಡ- ಉಡುಪಿ ಜಿಲ್ಲೆಯಾದ್ಯಂತ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ

ಕೆಂಪೇಗೌಡರ ದೂರದೃಷ್ಟಿ ಇಂದಿನ ಆಡಳಿತಕ್ಕೆ ಮಾದರಿ











ಮಂಗಳೂರು/ಉಡುಪಿ/ಮುಲ್ಕಿ/ಬಂಟ್ವಾಳ/ಪುತ್ತೂರು/ಕಡಬ/ಬೆಳ್ತಂಗಡಿ: ನಾಡಪ್ರಭು ಕೆಂಪೇ ಗೌಡ ಜಯಂತಿಯನ್ನು ಶನಿವಾರ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಾದ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವಿಸಲಾಯಿತು.

ಬಲ್ಮಠ ಕಾಲೇಜಿನಲ್ಲಿ ಜಯಂತಿ ಆಚರಣೆ

ದಕ್ಷಿಣ ಕನ್ನಡ ಜಿಲ್ಲಾಡಳಿತ, ದ.ಕ. ಜಿಲ್ಲಾ ಪಂಚಾಯತ್, ದ.ಕ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಸರಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜು ಬಲ್ಮಠ, ದ.ಕ ಜಿಲ್ಲಾ ಒಕ್ಕಲಿಗ ಯಾನೆ ಗೌಡರ ಸೇವಾ ಸಂಘ, ಗೌಡರ ಯಾನೆ ಒಕ್ಕಲಿಗರ ಜಿಲ್ಲಾ ಮಾತೃ ಸಂಘ ಹಾಗೂ ಒಕ್ಕಲಿಗರ ಯಾನೆ ಗೌಡರ ಸೇವಾಸಂಘ ಮಂಗಳೂರಿನ ಸಹಕಾರದೊಂದಿಗೆ ಬಲ್ಮಠ ಕಾಲೇಜಿನಲ್ಲಿ ಕೆಂಪೇಗೌಡ ಜಯಂತಿಯನ್ನು ಶನಿವಾರ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಹೀದ್ ತೆಕ್ಕಿಲ್, ಅಭಿವೃದ್ಧಿ ಮತ್ತು ಜನಸಾಮಾನ್ಯರ ಕ್ಷೇಮದ ಬಗ್ಗೆ ಕೆಂಪೇಗೌಡರ ಚಿಂತನೆ ಮತ್ತು ಕಾಳಜಿ ಇಂದಿನ ಆಡಳಿತಗಾರರಿಗೆ ಮಾದರಿಯಾಗಿದೆ ಎಂದು ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನ ನಿಕಟಪೂರ್ವ ಪ್ರಾಂಶುಪಾಲ ಡಾ. ಗಣಪತಿ ಗೌಡ ಕೆಂಪೇಗೌಡರವರ ಬಗ್ಗೆ ಉಪನ್ಯಾಸ ನೀಡಿ, ಬಹು ಆಯಾಮವನ್ನು ಹೊಂದಿರುವ ಸೃಜನಶೀಲ ವ್ಯಕ್ತಿಯಾಗಿದ್ದ ಕೆಂಪೇಗೌಡ, ಬೆಂಗಳೂರನ್ನು ನಿರ್ಮಿ ಸಲು ಬಹಳಷ್ಟು ಶ್ರಮಪಟ್ಟಿದ್ದಾರೆ. ತಮ್ಮ ಜೀವನವನ್ನೇ ಸಮರ್ಪಿಸಿದ್ದಾರೆ. ಅವರು ಕನ್ನಡ ನಾಡಿನ ಅಸ್ಮಿತೆಯಾಗಿದ್ದಾರೆ. ಎಲ್ಲರ ಬೆಳವಣಿಗೆಗೆ ಶ್ರಮಿಸಿ, ಚಿಂತನೆಯನ್ನು ಬೆಳೆಸಿಕೊಂಡವರಾಗಿದ್ದಾರೆ ಎಂದು ಹೇಳಿದರು.

ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷೆ ಶಾಲೆಟ್ ಲವೀನಾ ಪಿಂಟೊ, ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಡಿ.ಎಸ್. ಗಟ್ಟಿ ಮಾತನಾಡಿದರು.

ಕೆಂಪೇಗೌಡ ಜಯಂತಿಯ ಅಂಗವಾಗಿ ಕಾಲೇಜಿನಲ್ಲಿ ವಿವಿಧ ಸ್ಪರ್ಧೆಗಳನ್ನು ನಡೆಸಲಾಗಿದ್ದು, ವಿಜೇತರಾದವರಿಗೆ ಬಹುಮಾನವನ್ನು ವಿತರಿಸಲಾಯಿತು. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸದಾಶಿವ ಉಲ್ಲಾಳ್, ಜಿ. ಪಂ. ಉಪಕಾರ್ಯದರ್ಶಿ ಜಯಲಕ್ಷ್ಮೀ ರಾಯಕೋಡ್ ಕೆ.ಎಸ್, ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಅನಿಲ್ ಕುಮಾರ್ ಭೂಮರೆಡ್ಡಿ, ದ.ಕ. ಜಿಲ್ಲಾ ಒಕ್ಕಲಿಗ ಯಾನೆ ಗೌಡರ ಸೇವಾ ಸಂಘದ ಅಧ್ಯಕ್ಷ ಬಾಲಕೃಷ್ಣ ಡಿ.ಬಿ., ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘದ ಅಧ್ಯಕ್ಷ ಕಿರಣ್ ಬುಡ್ಲೆಗುತ್ತು, ಸರಕಾರಿ ಪದವಿಪೂರ್ವ ಬಾಲಕಿಯರ ಕಾಲೇಜು ಬಲ್ಮಠದ ಪ್ರಾಂಶುಪಾಲೆ ವನಿತಾ ದೇವಾಡಿಗ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಾಜೇಶ ಜಿ. ಸ್ವಾಗತಿಸಿದರು. ಅರ್ಥಶಾಸ್ತ್ರ ಉಪನ್ಯಾಸಕಿ ವಸುಧಾ ಬಹುಮಾನ ವಿಜೇತರ ಪಟ್ಟಿ ವಾಚಿಸಿದರು. ಕಾಲೇಜಿನ ಇತಿಹಾಸ ಉಪನ್ಯಾಸಕ ಸಂತೋಷ್ ವಂದಿಸಿದರು. ಕನ್ನಡ ಉಪನ್ಯಾಸಕಿ ಯಶೋಧ ಕೆ. ಕಾರ್ಯಕ್ರಮ ನಿರೂಪಿಸಿದರು.

ಕೆಂಪೇಗೌಡ ನಿರ್ಮಿತ ಬೆಂಗಳೂರು ವಿಶ್ವಕ್ಕೆ ಮಾದರಿ: ಯಶ್‌ಪಾಲ್



ಉಡುಪಿ: ಕೆಂಪೇಗೌಡ ನಿರ್ಮಿಸಿದ ಬೆಂಗಳೂರು ಎಲ್ಲಾ ಕ್ಷೇತ್ರದಲ್ಲಿಯೂ ಮುಂಚೂಣಿಯಲಿದ್ದು, ನಾಡಿನ ಭವಿಷ್ಯದ ದೃಷ್ಟಿಯಿಂದ ಹಾಗೂ ಮುಂದಿನ ಪೀಳಿಗೆಯ ಏಳಿಗೆಗಾಗಿ ಜಾರಿಗೆ ತಂದ ಹಲವು ಜನಪ್ರಿಯ ಯೋಜನೆಗಳಿಂದ ಇಂದು ಬೆಂಗಳೂರು ಇಡೀ ವಿಶ್ವದ ಗಮನವನ್ನು ಸೆಳೆದಿದೆ ಎಂದು ಶಾಸಕ ಯಶ್‌ಪಾಲ್ ಎ. ಸುವರ್ಣ ಹೇಳಿದರು.

ನಗರದ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡುತ್ತಿದ್ದರು.

ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ. ಎ. ಗಫೂರ್ ಮಾತನಾಡಿ, ಮೂಲಭೂತ ಸೌಕರ್ಯಗಳನ್ನು ಒದಗಿಸುವುದರೊಂದಿಗೆ ಬೆಂಗ ಳೂರಿನ ಇಂದಿನ ಅಭಿವೃದ್ಧಿಗೆ ಕೆಂಪೇಗೌಡರ ಕೊಡುಗೆ ಅಪಾರವಾಗಿದೆ. ಕೇವಲ ಒಂದೇ ಜಾತಿಗೆ ಸೀಮಿತವಾಗಿರದೇ ಸರ್ವಧರ್ಮಿಯರನ್ನೂ ಸಮಾನವಾಗಿ ಕಾಣುತ್ತಿದ್ದ ಕೆಂಪೇಗೌಡರ ಆದರ್ಶಗಳು ನಮ್ಮೆಲ್ಲರಿಗೂ ಹಾಗೂ ಮುಂದಿನ ಪೀಳಿಗೆಗೂ ಮಾರ್ಗದರ್ಶನವಾಗಲಿ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಉಪನ್ಯಾಸಕ ದಯಾನಂದ ಡಿ. ಕಿದಿಯೂರು ಉಪನ್ಯಾಸ ನೀಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಎಲ್ಲಮ್ಮ, ಉಡುಪಿ ಜಿಲ್ಲಾ ಒಕ್ಕಲಿಗ ಸೇವಾ ಸಂಘ ಉಡುಪಿ ಇದರ ಕಾರ್ಯದರ್ಶಿ ಹೇಮಾನಂದ ಹಲ್ದಡ್ಕ, ಉಡುಪಿ ಜಿಲ್ಲಾ ಒಕ್ಕಲಿಗ ಸೇವಾ ಸಂಘದ ಪದಾಧಿಕಾರಿಗಳು, ಶಾಲೆಯ ವಿದ್ಯಾರ್ಥಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ ಸ್ವಾಗತಿಸಿ, ವರ್ಷಾ ಬಿ. ಕೋಟ್ಯಾನ್ ನಿರೂಪಿಸಿ, ಸರಕಾರಿ ಬಾಲಕಿಯರ ಪ್ರೌಢ ಶಾಲೆಯ ಮುಖ್ಯ ಶಿಕ್ಷಕಿ ಇಂದಿರಾ ಬಿ. ವಂದಿಸಿದರು.

ಮುಲ್ಕಿ: ಕೆಂಪೇಗೌಡ ಸಾಧನೆ ಸ್ಮರಣೀಯ

ಬೆಂಗಳೂರು ನಗರದ ನಿರ್ಮಾಣದ ಜೊತೆಗೆ ಅದರ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ ಕೆಂಪೇಗೌಡರ ಸಾಧನೆ ಇಂದಿಗೂ ಸ್ಮರಣೀಯವಾಗಿದೆ ಎಂದು ಮುಲ್ಕಿ ತಾಲೂಕು ಉಪ ತಹಶಿಲ್ದಾರ್ ದಿಲೀಪ್ ರೋಡ್ಕರ್ ಹೇಳಿದರು.

ಅವರು ಕೆಂಪೇಗೌಡ ಜಯಂತಿ ಪ್ರಯುಕ್ತ ಮುಲ್ಕಿ ತಾಲೂಕು ಪ್ರಜಾಸೌಧ, ಆಡಳಿತ ಕೇಂದ್ರದಲ್ಲಿ ಕೆಂಪೇಗೌಡರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಈ ಸಂದರ್ಭ ಉಪತಹಶಿಲ್ದಾರ್ ವಿಲ್ಮಾ ಡಿಕೋಸ್ಟ, ಕಂದಾಯ ಇಲಾಖೆಯ ಅಧಿಕಾರಿ ಮೋಹನ್ ಹಾಗೂ ಆಡಳಿತ ಕಚೇರಿಯ ಸಿಬ್ಬಂದಿಗಳು ಮತ್ತಿತರರು ಉಪಸ್ಥಿತರಿದ್ದರು.

ಬಂಟ್ವಾಳ ಆಡಳಿತ ಸೌಧದಲ್ಲಿ ಆಚರಣೆ

ಕೆಂಪೇಗೌಡರ ಜನ್ಮದಿನಾಚರಣೆ ಬಂಟ್ವಾಳ ತಾಲೂಕು ಆಡಳಿತ ಸೌಧದಲ್ಲಿ ಶನಿವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ನಡೆಯಿತು.

ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಬಳಿಕ ಮಾತನಾಡಿದ ಬಂಟ್ವಾಳ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಕುಶಾಲಪ್ಪ ಗೌಡ ಮಾತನಾಡಿ, ಕೆಂಪೇಗೌಡರು ನಾಡು ಕಟ್ಟಿದವರು, ಇಂದು ಜನರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿಯಲು ಅವರ ಕೊಡುಗೆಗಳು ಕಾರಣ. ಬೆಂಗಳೂರನ್ನು ನಿರ್ಮಿಸುವ ಮೂಲಕ ಮಾದರಿ ನಗರವೊಂದನ್ನು ಸೃಷ್ಟಿಸಿ ಜಗತ್ತಿನ ಗಮನ ಸೆಳೆಯುವಂತೆ ಮಾಡಿದ್ದಾರೆ ಎಂದರು.

ಉಪತಹಸೀಲ್ದಾರ್ ನರೇಂದ್ರ ನಾಥ್ ಮಿತ್ತೂರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಉಪಾಧ್ಯಕ್ಷರಾದ ವೆಂಕಪ್ಪ ಗೌಡ, ತನಿಯಪ್ಪ ಗೌಡ ಶುಭ ಹಾರೈಸಿದರು. ಜೇನುಕೃಷಿಯಲ್ಲಿಸಾಧನೆಮಾಡಿದ ಇಡ್ಕಿದು ಗ್ರಾಮದ ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು. ರಾಷ್ಟ್ರೀಯ ಹಬ್ಬಗಳ ವಿಷಯ ನಿರ್ವಾಹಕ ವಿಷು ಕುಮಾರ್, ಕಚೇರಿ ಸಿಬಂದಿ ಮತ್ತು ಗ್ರಾಮ ಆಡಳಿತಾಧಿಕಾರಿ, ಗ್ರಾಮ ಸಹಾಯಕರು ಉಪಸ್ಥಿತರಿದ್ದರು. ಗ್ರಾಮ ಸಹಾಯಕರಾದ ಜನಾರ್ದನ ಕಾರ್ಯಕ್ರಮ ನಿರ್ವಹಿಸಿದರು.

ವಿವೇಕಾನಂದ ಶಾಲೆಯಲ್ಲಿ ಆಚರಣೆ

ಪುತ್ತೂರು ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಪುತ್ತೂರು ತಾಲೂಕು ಒಕ್ಕಲಿಗ ಗೌಡ ಸೇವಾ ಸಂಘದ ಆಶ್ರಯದಲ್ಲಿ ಕೆಂಪೇಗೌಡ ಜಯಂತಿಯನ್ನು ತೆಂಕಿಲ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯಲ್ಲಿ ಆಚರಿಸಲಾಯಿತು.

ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಉಪನ್ಯಾಸಕಿ ವಾರಿಜಾ ಬೆಳ್ಯಪ್ಪ ಗೌಡ ಕೆಂಪೇಗೌಡರ ಕುರಿತು ಸಂಸ್ಮರಣಾ ಭಾಷಣ ಮಾಡಿದರು.

ವೇದಿಕೆಯಲ್ಲಿ ಪುತ್ತೂರು ತಹಶೀಲ್ದಾರ್ ಎಸ್.ಬಿ. ಕೂಡಲಗಿ, ಕ್ಷೇತ್ರ ಶಿಕ್ಷಣಾಧಿಕಾರಿ ಮೋನಪ್ಪ ಪೂಜಾರಿ, ಪುತ್ತೂರು ತಾಲೂಕು ಒಕ್ಕಲಿಗ ಗೌಡ ಸೇವಾ ಸಂಘದ ಅಧ್ಯಕ್ಷ ಕೆ. ಸುಂದರ ಗೌಡ ನಡುಮನೆ, ಗೌರವ ಸಲಹೆಗಾರ ಚಿದಾನಂದ ಬೈಲಾಡಿ, ತೆಂಕಿಲ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯ ಆಡಳಿತ ಮಂಡಳಿ ಕೋಶಾಧಿಕಾರಿ ಅಶೋಕ ಕುಂಬಳೆ, ಮುಖ್ಯ ಶಿಕ್ಷಕಿ ಆಶಾ ಬೆಳ್ಳಾರೆ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ರಾಮ ನಾಯ್ಕ್ ಮೊದಲಾದವರು ಉಪಸ್ಥಿತರಿದ್ದರು.

ಕಡಬದಲ್ಲಿ ಆಚರಣೆ

ಕೆಂಪೇಗೌಡರು ಕೇವಲ ಬೆಂಗಳೂರಿನ ನಿರ್ಮಾತೃ ಮಾತ್ರವಲ್ಲ, ಅವರು ದೇಶದ ಉತ್ತಮ ಆಡಳಿತಗಾರರಲ್ಲಿ ಒಬ್ಬರು ಎನ್ನುವ ಹೆಗ್ಗಳಿಕೆ ಪಡೆದವರು. ಅವರ ಜೀವನಾದರ್ಶ, ದೂರದೃಷ್ಟಿ ಎಲ್ಲರಿಗೂ ಅನುಕರಣೀಯವಾದುದು ಎಂದು ಕಡಬ ಸರಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ವಾಸುದೇವ ಗೌಡ ಕೋಲ್ಪೆ ಹೇಳಿದರು.

ಕಡಬ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಕಡಬ ಒಕ್ಕಲಿಗ ಸಮುದಾಯ ಭವನದಲ್ಲಿ ನಡೆದ ಕೆಂಪೇಗೌಡರ ಜಯಂತಿ ಆಚರಣೆ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣ ಮಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಡಬ ತಾಲೂಕು ಕಚೇರಿಯ ಶಿರಸ್ತೇದಾರ್ ಶಾಯದುಲ್ಲ ಖಾನ್ ಶುಭ ಹಾರೈಸಿದರು. ಒಕ್ಕಲಿಗ ಗೌಡ ಸೇವಾ ಸಂಘದ ಕಡಬ ತಾಲೂಕು ಅಧ್ಯಕ್ಷ ಸುರೇಶ್ ಗೌಡಬೈಲು, ಕಡಬ ಪಟ್ಟಣ ಪಂಚಾಯತ್ ಅಧ್ಯಕ್ಷೆ ತಮನ್ನಾ ಜಬೀನ್, ಉಪಾಧ್ಯಕ್ಷೆ ನೀಲಾವತಿ ಶಿವರಾಮ್, ಜಿ.ಪಂ. ಮಾಜಿ ಸದಸ್ಯ ಪಿ.ಪಿ. ವರ್ಗೀಸ್, ಪಟ್ಟಣ ಪಂಚಾಯತ್. ಸ್ಥಾಯಿ ಸಮಿತಿಯ ಅಧ್ಯಕ್ಷ ಹನೀಫ್ ಕೆ.ಎಂ., ಸದಸ್ಯರಾದ ಅಕ್ಷತಾ ಬಾಲಕೃಷ್ಣ ರೋಹಿತ್ ಪಣೆ ಮಜಲು, ದಯಾನಂದ ಗೌಡ ಪಿಜಕ್ಕಳ, ಫೈರುಲ್ ಕಡಬ, ಕೃಷ್ಣಪ್ಪ ಬೈಲಂಗಡಿ ಉಪಸ್ಥಿತರಿದ್ದರು. ದಿನಾಚರಣೆಯ ಪ್ರಯುಕ್ತ ನಡೆದ ತಾಲೂಕು ಮಟ್ಟದ ಸ್ಪರ್ಧೆಯ ವಿಜೇತರನ್ನು ಬಹುಮಾನ ನೀಡಿ ಗೌರವಿಸಲಾಯಿತು.

ಕಡಬ ತಾಲೂಕು ಉಪ ತಹಸೀಲ್ದಾರ್‌ಗೋಪಾಲ್ ಕಲ್ಲುಗುಡ್ಡೆ ಸ್ವಾಗತಿಸಿ, ತಾಲೂಕು ಕಚೇರಿ ಸಿಬ್ಬಂದಿ ಕೌಶಿಕ್ ಕುಳ ವಂದಿಸಿದರು. ಕಡಬ ಪ.ಪಂ. ಸಿಬಂದಿ ಹರೀಶ್ ಬೆದ್ರಾಜೆ ಕಾರ್ಯಕ್ರಮ ನಿರ್ವಹಿಸಿದರು.

ಬೆಳ್ತಂಗಡಿಯಲ್ಲಿ ಕೆಂಪೇಗೌಡ ಜಯಂತಿ

ರಾಷ್ಟ್ರೀಯ ಹಬ್ಬಗಳ ಹಾಗೂ ಮಹಾಪುರುಷರ ಜಯಂತಿ ಆಚರಣಾ ಸಮಿತಿ ಹಾಗೂ ಗೌಡರ ಯಾನೆ ಒಕ್ಕಲಿಗರ ಸೇವಾ ಸಂಘ, ಬೆಳ್ತಂಗಡಿ ತಾಲೂಕು ಒಕ್ಕಲಿಗ ಗೌಡರ ಸಂಘ, ಬೆಳ್ತಂಗಡಿ ತಾಲೂಕು ಒಕ್ಕಲಿಗರ ಗೌಡರ ಸೇವಾ ಟ್ರಸ್ಟ್, ತಾಲೂಕು ಒಕ್ಕಲಿಗರ ಗೌಡರ ಯುವ ವೇದಿಕೆ ಮತ್ತು ಮಹಿಳಾ ವೇದಿಕೆ ಇವರ ಸಹಭಾಗಿತ್ವದಲ್ಲಿ ಬೆಳ್ತಂಗಡಿ ಸಿವಿಸಿ ಹಾಲ್‌ನಲ್ಲಿ ಕೆಂಪೇಗೌಡ ಜಯಂತಿ ಆಚರಣೆ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಹರೀಶ್ ಪೂಂಜ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪಿ ಶ್ರೀನಾಥ್, ಬೆಳ್ತಂಗಡಿ ತಾಲೂಕು ಒಕ್ಕಲಿಗರ ಸೇವಾ ಸಂಘದ ಅಧ್ಯಕ್ಷ ಬಾಲಕೃಷ್ಣ ಕೇರಿಮಾರ್, ಬೆಳ್ತಂಗಡಿ ತಾಲೂಕು ಒಕ್ಕಲಿಗ ಗೌಡರ ಸೇವಾ ಟ್ರಸ್ಟ್ ಅಧ್ಯಕ್ಷ ಮೋಹನ್ ಗೌಡ ಕಲ್ಮಂಜ, ಪ. ಪಂ.ಮುಖ್ಯಾಧಿಕಾರಿ ರಾಜೇಶ್ ಕೆ. ಹಾಗೂ ಇಲಾಖೆಯ ಅಧಿಕಾರಿಗಳು, ಪಂ. ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಕನ್ನಡ ಸಹ ಪ್ರಾಧ್ಯಾಪಕ ದಿವಾಕರ ಕೆ. ಕೆಂಪೇಗೌಡರು ಬೆಂಗಳೂರಿಗೆ ನೀಡಿದಂತಹ ಕೊಡುಗೆಯ ಬಗ್ಗೆ ಮಾತನಾಡಿದರು. ತಾಲೂಕು ಕಚೇರಿಯ ವಿಷಯ ನಿರ್ವಾಹಕ ಪರಮೇಶ್ವರ್ ಕಾರ್ಯಕ್ರಮ ಆಯೋಜನೆ ಮಾಡಿದರು. ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಭವಾನಿ ಶಂಕರ್ ಸ್ವಾಗತಿಸಿ, ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ಹೇಮಲತಾ ಕಾರ್ಯಕ್ರಮ ನಿರೂಪಿಸಿದರು. ತಾ.ಪಂ. ಸಂಯೋಜಕ ಜಯಾನಂದ ಧನ್ಯವಾದವಿತ್ತರು.

ಉಡುಪಿ ಸರ್ಕಾರಿ ತಾಯಿ-ಮಕ್ಕಳ ಆಸ್ಪತ್ರೆಗೆ ಸುಧಾರಿತ ಸಾಧನ ಸಲಕರಣೆಗಳ ಕೊಡುಗೆ



ಉಡುಪಿ: ಇಲ್ಲಿನ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಕೊಠಡಿಗೆ ಅಗತ್ಯವಿದ್ದ 5,01,648 ಮೌಲ್ಯದ ಸುಧಾರಿತ ಸಾಧನ ಸಲಕರಣೆಗಳನ್ನು ಕೋಟದ ಗೀತಾನಂದ ಫೌಂಡೇಶನ್‌ನ ಪ್ರವರ್ತಕರಾದ ಆನಂದ್ ಸಿ. ಕುಂದರ್ ಹಾಗೂ ಗೀತಾ ಕುಂದರ್ ದಂಪತಿ ಕೊಡುಗೆಯಾಗಿ ನೀಡಿದ್ದಾರೆ.

ಈ ಸಂಬಂಧ ಆಸ್ಪತ್ರೆಯಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಕೃತಜ್ಞತಾ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಗೌರವ ಸ್ವೀಕರಿಸಿ ಮಾತನಾಡಿದ ಆನಂದ್ ಸಿ. ಕುಂದರ್, ಶಿಕ್ಷಣ, ಆರೋಗ್ಯ ಹಾಗೂ ಪರಿಸರ ಕ್ಷೇತ್ರಕ್ಕೆ ನಿರಂತರವಾಗಿ ನೆರವಾಗುವುದು ನಮ್ಮ ಆಶಯ. ಹೊಗಳಿಕೆಗಿಂತ ಸದ್ದಿಲ್ಲದೆ ಮತ್ತೊಬ್ಬರಿಗೆ ಸಹಾಯ ಮಾಡುವುದರಲ್ಲಿ ನಮಗೆ ತೃಪ್ತಿಯಿದೆ ಎಂದರು.

ಜಿಲ್ಲಾ ಸರ್ಜನ್ ಡಾ. ಎಚ್. ಅಶೋಕ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಆಸ್ಪತ್ರೆಯ ಆಪರೇಷನ್ ಥಿಯೇಟರ್‌ಗೆ ಸಲಕರಣೆಗಳ ಅವಶ್ಯಕತೆ ಇರುವ ಬಗ್ಗೆ ವಿನಂತಿಸಿದ ತಕ್ಷಣವೇ ಕುಂದರ್ ದಂಪತಿ ಸಹಕರಿಸಿದ್ದಾರೆ ಎಂದು ಶ್ಲಾಘಿಸಿದರು.

ಆಡಳಿತ ವೈದ್ಯಾಧಿಕಾರಿ ಡಾ. ಸಂದೀಪ್ ಮಾತನಾಡಿ, ಈ ಸಲಕರಣೆಗಳಿಂದ ಬಡ ರೋಗಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಹಿರಿಯ ವೈದ್ಯರಾದ ಡಾ. ಅಮರನಾಥ ಶಾಸ್ತ್ರಿ, ಡಾ. ಮಹದೇವ ಭಟ್, ಡಾ. ಶಶಾಂಕ್ ಕಿಣಿ, ನರ್ಸಿಂಗ್ ಅಧಿಕಾರಿ ರೇಣುಕಾ, ಇಂಜಿನಿಯರ್ ಪ್ರಕಾಶ್ ಹಾಗೂ ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು. ಆಪ್ತ ಸಮಾಲೋಚಕ ಮನು ಎಸ್.ಬಿ. ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

ತಲಪಾಡಿಯ ಶಾರದಾ ವಿದ್ಯಾನಿಕೇತನ ಶಾಲೆ: ವಿದ್ಯಾರ್ಥಿ ಪರಿಷತ್‌ನ ಪದಗ್ರಹಣ



ಮಂಗಳೂರು: ತಲಪಾಡಿಯ ಶಾರದಾ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್‌ನಲ್ಲಿ 2026–27ನೇ ಸಾಲಿನ ವಿದ್ಯಾರ್ಥಿ ಪರಿಷತ್ ಸಮಾರಂಭವು ಶನಿವಾರ ಶಾಲಾ ಸಭಾಂಗಣದಲ್ಲಿ ನೆರವೇರಿತು.

ಸಂಸ್ಥೆಯ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕ್, ಮುಖ್ಯ ಅತಿಥಿಗಳಾಗಿ ಜಗದೀಶ್ ಶೇಣವ, ನಿರ್ದೇಶಕ ಸಮೀರ್ ಪುರಾಣಿಕ್, ಪ್ರಾಂಶುಪಾಲ ಸುಷ್ಮಾ ದಿನಕರ್, ಡೇ ಬೋರ್ಡಿಂಗ್ ಪ್ರಾಂಶುಪಾಲ ಮೋಹನದಾಸ್, ಶಾರದಾ ಪಿಯು ಕಾಲೇಜಿನ ಪ್ರಾಂಶುಪಾಲ ವಿನಾಯಕ ಬಿ.ಜಿ., ಉಪಪ್ರಾಂಶುಪಾಲ ಜಯಶ್ರೀ ಹಾಗೂ ರಜನಿ, ಮುಖ್ಯ ಶಿಕ್ಷಕ ಶ್ಯಾಮಲಾ ಮುತ್ತ, ಪಿಟಿಎ ಸದಸ್ಯ ನಿಶಾ, ಆಡಳಿತ ವ್ಯವಸ್ಥಾಪಕ ಪ್ರಫುಲ್ ಹಾಗೂ ಪ್ರವೇಶ ವ್ಯವಸ್ಥಾಪಕ ವಿವೇಕ್ ತಂತ್ರಿ ಅವರು ಉಪಸ್ಥಿತರಿದ್ದರು.

ಇದೇ ಸಂದರ್ಭ ವಿದ್ಯಾರ್ಥಿ ಪರಿಷತ್ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳಿಂದ ನೃತ್ಯ, ಸಮೂಹ ಗಾಯನ, ಜನಪದ ನೃತ್ಯ ಹಾಗೂ ನಾಟಕ ಪ್ರದರ್ಶನ ಸಹಿತ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಸಮಾರಂಭದ ಪ್ರಮುಖ ಶಾಲಾ ವಿದ್ಯಾರ್ಥಿ ನಾಯಕರಾಗಿ ಅದ್ವೈತ್ ಕಿರಣ್ ಪ್ರಮಾಣ ವಚನ ಸ್ವೀಕರಿಸಿದರು. ಬಳಿಕ ಎನ್‌ಸಿಸಿ ಕೆಡೆಟ್‌ಗಳಿಗೆ ಬಹುಮಾನ ವಿತರಿಸಲಾಯಿತು.ಪ್ರಿಶಾ ಕಾರ್ಯಕ್ರನ ನಿರೂಪಿಸಿದರು. ಪೃಥ್ವಿ ಶಾಂತರಾಮ್ ಸ್ವಾಗತಿಸಿದರು. ಅಗ್ನೇಯಾ ವಂದಿಸಿದರು.

ರೋಟರಿ ಕ್ಲಬ್‌ನ ಹಿಲ್ ಸೈಡ್ ಸಂಸ್ಥೆಗೆ ಪ್ರತಿಷ್ಠಿತ 'ಡೈಮಂಡ್ ಪ್ಲಸ್' ಕ್ಲಬ್ ಪ್ರಶಸ್ತಿ



ಮಂಗಳೂರು: ರೋಟರಿ ಸಂಸ್ಥೆಯಲ್ಲಿನ ತನ್ನ ಅಪ್ರತಿಮ ಸೇವಾ ಚಟುವಟಿಕೆಗಳು ಹಾಗೂ ಗಮನಾರ್ಹ ಸಾಧನೆಗಳನ್ನು ಪರಿಗಣಿಸಿ, ರೋಟರಿ ಕ್ಲಬ್ ಮಂಗಳೂರು ಹಿಲ್ ಸೈಡ್ ಸಂಸ್ಥೆಗೆ 2025–2026ನೇ ಸಾಲಿನ ಪ್ರತಿಷ್ಠಿತ 'ಡೈಮಂಡ್ ಪ್ಲಸ್' ಕ್ಲಬ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಮೈಸೂರಿನಲ್ಲಿ ಜರುಗಿದ ರೋಟರಿ ಜಿಲ್ಲಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರಕಟಿಸಲಾಯಿತು.

ರೋಟರಿ ಜಿಲ್ಲಾ ಗವರ್ನರ್ ರಾಮಕೃಷ್ಣ ಪಿ. ಕೆ. ಅವರು ರೋಟರಿ ಕ್ಲಬ್ ಮಂಗಳೂರು ಹಿಲ್ ಸೈಡ್ ಅಧ್ಯಕ್ಷ ಪೀಟರ್ ಆಂಥೋನಿ ಪಿಂಟೊ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಿದರು. ಕ್ಲಬ್‌ನ ನಾಯಕತ್ವ ಮತ್ತು ನಿರಂತರ ಸಮಾಜಮುಖಿ ಕಾರ್ಯಗಳಿಗೆ ಈ ಪ್ರಶಸ್ತಿ ನೀಡಲಾಯಿತು.

ಸಂಸ್ಥೆಯ ಪದಾಧಿಕಾರಿಗಳಾದ ಕಾರ್ಯದರ್ಶಿ ವಾಸುದೇವ ಶೆಟ್ಟಿಗಾರ್, ಮನೀಶ್ ರಾವ್ ಹಾಗೂ ದೀಪಾ ರಾವ್ ಉಪಸ್ಥಿತರಿದ್ದರು. ರಂಗನಾಥ್ ಕಿಣಿ, ಪ್ರಸನ್ನ ಲಕ್ಷ್ಮಿ, ಪ್ರವೀಣ್ ಉಡುಪ, ಪ್ರವೀಣ್ ಚಂದ್ರ ಶರ್ಮ, ವಿನಾಯಕ ಪ್ರಭು, ಗೀತಾನಂದ ಪೈ, ಅರ್ಜುನ್ ಶೇಟ್ ಸೇರಿದಂತೆ ಕ್ಲಬ್‌ನ ಪ್ರಮುಖರು ಭಾಗವಹಿಸಿದ್ದರು.

ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ನೇಮಕಾತಿ

ಕಾಸರಗೋಡು: ಚೀಮೇನಿ ತೃಕ್ಕರೀಪ್ಪುರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ದೈಹಿಕ ಶಿಕ್ಷಣ ಶಾಖೆಗಳಿಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಜುಲೈ 6ರಂದು ಬೆಳಗ್ಗೆ 11 ಗಂಟೆಗೆ ಸಂದರ್ಶನ ನಡೆಯಲಿದೆ. ಮಾಹಿತಿಗೆ 0467 2250377 ಸಂಪರ್ಕಿಸಬಹುದು.

ಶಕ್ತಿ ವಸತಿ ಶಾಲಾ ವಿದ್ಯಾರ್ಥಿ ಸಂಘದ ಪದಗ್ರಹಣ ಸಮಾರಂಭದಲ್ಲಿ ಶಾಂತರಾಮ್ ಶೆಟ್ಟಿ ಅಭಿಮತ

ತಂಡವನ್ನು ವ್ಯವಸ್ಥಿತವಾಗಿ ಮುನ್ನಡೆಸುವವನೇ ನಿಜವಾದ ನಾಯಕ



ಮಂಗಳೂರು: ಶಕ್ತಿನಗರದ ಶಕ್ತಿ ವಸತಿ ಶಾಲೆಯಲ್ಲಿ ಶನಿವಾರ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಕಾರ್ಯಕ್ರಮವನ್ನು ರೇಷ್ಮ ಮೆಮೋರಿಯಲ್ ಸಭಾಂಗಣದಲ್ಲಿ ಆಯೋಜಿಸಲಾಯಿತು.

ಮುಖ್ಯ ಅತಿಥಿಯಾಗಿ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಅಧ್ಯಕ್ಷ ಸಿ.ಎ ಶಾಂತರಾಮ್ ಶೆಟ್ಟಿ ಅವರು ದೀಪವನ್ನು ಬೆಳಗಿಸುವುದರ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಶಿಕ್ಷಣ ಅನ್ನುವುದು ಬಹಳ ಮುಖ್ಯ. ಸಮಾಜದಲ್ಲಿ ಅತ್ಯುನ್ನತ ಹುದ್ದೆಗೆ ಏರಬೇಕಾದರೆ ಶಿಕ್ಷಣ ಬೇಕೇ ಬೇಕು. ನೀವು ಜೀವನದಲ್ಲಿ, ಗುರಿ ತಲುಪುವ ಹಾದಿಯಲ್ಲಿ ಸಮಸ್ಯೆಗಳು ಬಂದರೆ ಯೋಜನೆ ಬದಲಾಯಿಸಿ ಆದರೆ ಗುರಿಯನ್ನಲ್ಲ, ಮಾತು ಹಾಗೂ ಕೆಲಸಗಳೇ ನಾಯಕನ ಸ್ಥಾನವನ್ನು ಮೇಲಕ್ಕೇರಿಸುತ್ತದೆ. ಮತ್ತೊಬ್ಬರಿಗೆ ನೋವಾಗದ ಹಾಗೆ ವರ್ತಿಸಿ ತಂಡವನ್ನು ಮುನ್ನಡೆಸುವವನೇ ನಿಜವಾದ ನಾಯಕ. ಸಮಾಜದಲ್ಲಿ ಎಲ್ಲರು ಗುರುತಿಸುವಂತ ನಾಯಕತ್ವದ ಗುಣ ನಿಮ್ಮಲ್ಲಿ ಬರಲಿ ಎಂದು ಹೇಳಿದರು.

ಶಕ್ತಿ ವಿದ್ಯಾ ಸಂಸ್ಥೆಯ ಪ್ರಧಾನ ಸಲಹೆಗಾರರಾದ ರಮೇಶ್ ಕೆ. ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ನಾಯಕತ್ವ ಅನ್ನೋದು ಉತ್ತಮ ಅವಕಾಶ. ಅದನ್ನು ಬಳಸಿಕೊಂಡು ಶಾಲಾ ನಿಯಮಗಳಿಗೆ ಬದ್ಧರಾಗಿ, ಶಾಲಾ ಸ್ವಚ್ಛತೆಯನ್ನು ಕಾಪಾಡಿಕೊಂಡು ಶಿಕ್ಷಕರಿಗೆ ವಿಧೇಯರಾಗಿ ನಿಮ್ಮ ಕರ್ತವ್ಯದಲ್ಲಿ ಲೋಪದೋಷ ಬರದಂತೆ ಮತ್ತೊಬ್ಬರಿಗೆ ಆದರ್ಶರಾಗಿರಿ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಸಂಸ್ಥಾಪಕ ಡಾ. ಕೆ.ಸಿ. ನ್ಯಾಕ್ ಮಾತನಾಡಿ, ಮಕ್ಕಳು ಭವಿಷ್ಯದ ನಾಯಕರಾಗಲಿ, ಉಜ್ವಲ ಭವಿಷ್ಯ ನಿಮ್ಮದಾಗಲಿ ಎಂದರು.

ಈ ಸಂದರ್ಭ ಶಾಲಾ ಪ್ರಾಂಶುಪಾಲೆ ಸುರೇಖಾ ಭಟ್ , ಮಕ್ಕಳಿಗೆ ಪ್ರತಿಜ್ಞಾ ವಿಧಿ ನೇರವೇರಿಸಿಕೊಟ್ಟರು. ವಿದ್ಯಾರ್ಥಿ ನಾಯಕ ನಾಯಕಿಯರು ಶಾಲಾ ನಿಯಮಾವಳಿಗಳುಳ್ಳ ಕಡತಕ್ಕೆ ರುಜು ಮಾಡಿದರು. ಹಾಗೂ ಚುನಾಯಿತ ವಿದ್ಯಾರ್ಥಿಗಳಿಗೆ ಪದಗ್ರಹಣ ನಡೆಯಿತು.

ಶಕ್ತಿ ಪಿಯು ಕಾಲೇಜಿನ ಪ್ರಾಂಶುಪಾಲ ಪ್ರದೀಪ್ ಕುಮಾರ್ ಶೆಟ್ಟಿ ಉಪಸ್ಥಿತರಿದ್ದರು. ಸಮಾಜ ವಿಜ್ಞಾನ ಶಿಕ್ಷಕಿ ಅಕ್ಷಿತಾ ಶೆಟ್ಟಿ ವಿದ್ಯಾರ್ಥಿ ಸಂಘದ ಚುನಾವಣೆಯ ವರದಿ ವಾಚಿಸಿದರು. ವಿದ್ಯಾರ್ಥಿ ನಾಯಕ ಅಭಿದೇವ್ ಮತ್ತು ನಾಯಕಿ ದೇವ ವರ್ಣಿನಿ ಜವಾಬ್ದಾರಿ ಸ್ವೀಕಾರ ಭಾಷಣವನ್ನು ಮಾಡಿದರು. ವಿದ್ಯಾರ್ಥಿ ವೇದ್ ಪಾಟೀಲ್, ಕಾರ್ಯಕ್ರಮವನ್ನು ನಿರೂಪಿಸಿದನು. ವಿದ್ಯಾರ್ಥಿನಿ ಸನ್ನಿಧಿ ಸ್ವಾಗತಿಸಿದರು. ಆದ್ಯ ಧನ್ಯವಾದ ಸಲ್ಲಿಸಿದರು.

ಕೆನರಾ ನಂದಗೋಕುಲದಲ್ಲಿ ತಂದೆಯಂದಿರ ದಿನಾಚರಣೆ



ಮಂಗಳೂರು: ಕೆನರಾ ನಂದಗೋಕುಲ, ಕೊಡಿಯಾಲ್‌ಬೈಲ್ ಹಾಗೂ ಅದರ ಶಾಖೆಯಾದ ಪದವಿನಂಗಡಿ ಸಂಸ್ಥೆ ವತಿಯಿಂದ ನಗರದ ಟಿ.ವಿ. ರಮಣ್ ಪೈ ಸಭಾಂಗಣದಲ್ಲಿ ತಂದೆಯಂದಿರ ದಿನಾಚರಣೆ ನಡೆಯಿತು. ಮಕ್ಕಳು ಮತ್ತು ತಂದೆಯಂದಿರು ಒಟ್ಟಾಗಿ ವಿವಿಧ ಮನೋರಂಜನಾತ್ಮಕ ಆಟಗಳಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಶಾಲೆಯ ಶೈಕ್ಷಣಿಕ ಮುಖ್ಯೋಪಾಧ್ಯಾಯಿನಿ ಉಜ್ವಲ್ ಮಲ್ಯ ಶುಭ ಹಾರೈಸಿದರು. ಅಪರ್ಣಾ ಅವರು 'ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ತಂದೆಯ ಪಾತ್ರ' ಎಂಬ ವಿಷಯದ ಕುರಿತು ಮಾತನಾಡಿ ತಂದೆಯ ಪ್ರೀತಿ, ಮಾರ್ಗದರ್ಶನ, ಮಗುವಿನ ವ್ಯಕ್ತಿತ್ವ ರೂಪಿಸುವಲ್ಲಿ ಎಷ್ಟು ಮಹತ್ವದ್ದಾಗಿದೆ ಎಂದು ವಿವರಿಸಿದರು.ಅಪಿಟಾ ವಂದಿಸಿದರು. ನಯನಾ ಕಾರ್ಯಕ್ರಮ ನಿರೂಪಿಸಿದರು.

ಸುತ್ತಮುತ್ತ

ಅಂಬಿಕಾ ವಿದ್ಯಾಲಯ: ಯೋಗ ಆಚರಣೆ

ಪುತ್ತೂರು: ಯೋಗ ಭಾರತದ ಕೊಡುಗೆ. ಭಾರತ ಯೋಗವನ್ನು ವಿಶ್ವಕ್ಕೆ ಪರಿಚಯ ಮಾಡುವ ಕೆಲಸವನ್ನು ಮಾಡಿದೆ. ಯೋಗವನ್ನು ಮಾಡುವುದರ ಮೂಲಕ ಪ್ರತಿಯೊಬ್ಬರೂ ಸಂಕಲ್ಪ ಸಿದ್ಧಿ ಪಡೆಯಲು ಸಾಧ್ಯ ಎಂದು ಆರ್ಟ್ ಆಫ್ ಲಿವಿಂಗ್‌ನ ಯೋಗ ಶಿಕ್ಷಕಿ ಶರಾವತಿ ರವಿನಾರಾಯಣ ಹೇಳಿದರು.

ಅವರು ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ನೆಲಿಕಟ್ಟೆ ಪದವಿ ಪೂರ್ವ ವಿದ್ಯಾಲಯದಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ವೇದಿಕೆಯಲ್ಲಿ ಸಂಸ್ಥೆಯ ಪ್ರಾಂಶುಪಾಲ ಸತ್ಯಜಿತ್ ಉಪಾಧ್ಯಾಯ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಶತೋಧರಿ ಸ್ವಾಗತಿಸಿ, ಆಪ್ತಾ ರೈ ವಂದಿಸಿದರು. ವಿದ್ಯಾರ್ಥಿನಿ ಆದ್ಯಾ ಕಾರ್ಯಕ್ರಮ ನಿರ್ವಹಿಸಿದರು.

ಬಂಟ್ವಾಳ: ಮಳೆ ಕೊಯ್ಲು ಅಭಿಯಾನ ಪ್ರಾತ್ಯಕ್ಷಿಕೆ



ಬಂಟ್ವಾಳ: ಕಳ್ಳಿಗೆ ಗ್ರಾಮ ಪಂಚಾಯತ್ ವ್ಯಾಪ್ತಿಯ ತೊಡಂಬಿಲ ಸೇಕ್ರೆಡ್ ಹಾರ್ಟ್ ಚರ್ಚ್ ನ ಕ್ಯಾಥೋಲಿಕ್ ಸಭಾ ಘಟಕದ ವತಿಯಿಂದ ಮಳೆ ಕೊಯ್ಲು ಅಭಿಯಾನ 2026 ಪ್ರಾತ್ಯಕ್ಷಿಕೆ ಕಾರ್ಯಕ್ರಮ ಕನಪಾಡಿ ನೋರ್ಬರ್ಟ್ ಲೋಬೋ ಅವರ ಮನೆ ಪರಿಸರದಲ್ಲಿ ನಡೆಯಿತು. ಅತಿಥಿಯಾಗಿ ಭಾಗವಹಿಸಿದ್ದ ಚರ್ಚ್‌ನ ಧರ್ಮಗುರುಗಳಾದ ಆಂಟನಿ ಲೋಬೊ ಅವರು ಮಾತನಾಡಿ, ಪ್ರಸ್ತುತ ಕಾಲದಲ್ಲಿ ಮಳೆ ನೀರನ್ನು ಬೋರ್ ವೆಲ್‌ಗೆ ಇಂಗಿಸುವ ಹಾಗೂ ಮಳೆ ನೀರನ್ನು ಉಪಯೋಗಿಸುವ ಬಗ್ಗೆ ಜನರಿಗೆ ಮಾಹಿತಿ ನೀಡಿದರು. ಕಳ್ಳಿಗೆ ಗ್ರಾ.ಪಂ.ನ ಪಿಡಿಒ ಚಂದ್ರಾವತಿ ಮಾತನಾಡಿ, ಬೋರ್ ವೆಲ್ ಗಳಿಗೆ ನೀರು ಇಂಗಿಸುವ ಮಹತ್ವವನ್ನು ತಿಳಿಸಿದರಲ್ಲದೆ ಇಂತಹ ಕೆಲಸಗಳಿಗೆ ಪಂಚಾಯತ್ ವತಿಯಿಂದ ಅನುದಾನವನ್ನು ಒದಗಿಸಿ ಕೊಡುವುದಾಗಿ ಭರವಸೆ ನೀಡಿದರು. ಕ್ಯಾಥೋಲಿಕ್ ಸಭಾ ಘಟಕದ ಅಧ್ಯಕ್ಷ ಮೆಲ್ವಿನ್ ಮೊಂತೆರೋ ಸ್ವಾಗತಿಸಿ, ಕಾರ್ಯದರ್ಶಿ ಶಾಲೆಟ್ ಲೋಬೊ ವಂದಿಸಿದರು. ಕ್ಯಾಥೋಲಿಕ್ ಸಭಾ ಸದಸ್ಯರಾದ ಫ್ರಾನ್ಸಿಸ್ ಪ್ರಸ್ತಾವನೆಗೈದರು. ಸದಸ್ಯ ಪ್ರವೀಣ್ ಮೊಂತೆರೋ ಕಾರ್ಯಕ್ರಮ ನಿರೂಪಿಸಿದರು.

ಉಡುಪಿ: ಮೂವರು ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆಲೆ



ಉಡುಪಿ: ಶಾಲೆ ಪ್ರಾರಂಭವಾದಾಗ ಉಡುಪಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಮಹಿಳೆಯೊಬ್ಬರು ತನ್ನ ಅಪ್ರಾಪ್ತ ವಯಸ್ಸಿನ ಮೂವರು ಮಕ್ಕಳ ವಿದ್ಯಾಭ್ಯಾಸಕ್ಕೆ ನೆಲೆ ಕಲ್ಪಿಸುವಂತೆ ವಿಶು ಶೆಟ್ಟಿಯವರಲ್ಲಿ ವಿನಂತಿಸಿದ್ದಾರೆ. ಸ್ಪಂದಿಸಿದ ವಿಶು ಶೆಟ್ಟಿ, ಇಬ್ಬರು ಬಾಲಕರನ್ನು ಕುಕ್ಕಿಕಟ್ಟೆಯ ಬಾಲನಿಕೇತನ ಹಾಗೂ ಬಾಲಕಿಯನ್ನು ಹೆಣ್ಣು ಮಕ್ಕಳ ಪಾಲನೆ ಹಾಗೂ ಶಿಕ್ಷಣ ಕೊಡಿಸುತ್ತಿರುವ ಕಲ್ಯಾಣ್ ಪುರದ ಪ್ಲಾನೆಟ್ ಮಾರ್ಸ್ ಫೌಂಡೇಶನ್ ಗೆ ದಾಖಲಿಸಲಾಗಿದೆ.

ಅರ್ಜಿಗಳ ಆಹ್ವಾನ

ಕಾಸರಗೋಡು: ಕಾಸರಗೋಡು ಸರಕಾರಿ ಐಟಿಐ ಶಿಕ್ಷಣ ಸಂಸ್ಥೆಯಲ್ಲಿ 14 ಎನ್‌ಸಿವಿಟಿ ಟ್ರೇಡ್ ಗಳಿಗೆ ಪ್ರವೇಶಕ್ಕಾಗಿ ಅರ್ಜಿಗಳನ್ನು ಜೂ.30ರ ವರೆಗೆ ಸ್ವೀಕರಿಸಲಾಗುತ್ತದೆ. ಅರ್ಜಿ ಶುಲ್ಕ 100 ರೂ. ಆಗಿದೆ. ಅರ್ಜಿ ಯನ್ನು ಸಲ್ಲಿಸಿದ ನಂತರ ಅಭ್ಯರ್ಥಿಗಳು ಸರಕಾರಿ ಐಟಿಐ ವಿದ್ಯಾಸಂಸ್ಥೆಯಲ್ಲಿ ಮೂಲ ಪ್ರಮಾಣಪತ್ರಗಳೊಂದಿಗೆ ಹಾಜರಾಗಿ ಜುಲೈ 3 ರೊಳಗೆ ಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಮಾಹಿತಿಗೆ 04994 256440 ಕರೆ ಮಾಡಬಹುದು.

ಸಾಹಿತಿ, ಜನಪದ ವಿದ್ವಾಂಸ ಅಮೃತ ಸೋಮೇಶ್ವರ ಸಂಸ್ಮರಣಾ ಕಾರ್ಯಕ್ರಮದಲ್ಲಿ ಡಾ.ಕೆ. ಚಿನ್ನಪ್ಪಗೌಡ ಅಭಿಮತ

ವರ್ತಮಾನದಲ್ಲೂ 'ಅಮೃತ'ರ ಕೃತಿಗಳು ಮಾರ್ಗದರ್ಶಕ

ಉಳ್ಳಾಲ: ರಾಣಿ ಅಬ್ಬಕ್ಕಳು ಉಳ್ಳಾಲವನ್ನು ಕೇಂದ್ರವನ್ನಾಗಿಸಿ ಪೋರ್ಚುಗೀಸರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿ ಮಾದರಿ ಆಡಳಿತ ನೀಡಿದ ಸ್ವಾಭಿಮಾನಿ ಮಹಿಳೆಯಾಗಿದ್ದರೆ, ಅಮೃತ ಸೋಮೇಶ್ವರ ಅವರು ವರ್ತಮಾನದ ಹಿರಿಯ ಸಾಧಕ ಸಾಹಿತಿಯಾಗಿದ್ದಾರೆ. ಇತಿಹಾಸಗಳು ನಮಗೆ ಪಾಠ ಕಲಿಸಿದರೆ, ಸಾಹಿತ್ಯಗಳು ಜೀವನದ ಅನುಭವಗಳನ್ನು ಕಲಿಸುತ್ತದೆಯೆಂದು ಹಾವೇರಿ ವಿಶ್ವವಿದ್ಯಾನಿಲಯದ ವಿಶ್ರಾಂತ ಉಪಕುಲಪತಿ ಡಾ.ಕೆ. ಚಿನ್ನಪ್ಪಗೌಡ ಹೇಳಿದರು.



ಸೋಮೇಶ್ವರ ಪರಿಜ್ಞಾನ ಪದವಿಪೂರ್ವ ಕಾಲೇಜು ಹಾಗೂ ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿಯ ಸಹಯೋಗದಿಂದ ಪರಿಜ್ಞಾನ ಪಿಯು ಕಾಲೇಜಿನ ಸಭಾಂಗಣದಲ್ಲಿ ಶನಿವಾರ ನಡೆದ ಸಾಹಿತಿ, ಜನಪದ ವಿದ್ವಾಂಸರಾದ ದಿ.ಅಮೃತ ಸೋಮೇಶ್ವರ ಸಂಸ್ಮರಣಾ ಕಾರ್ಯಕ್ರಮ ಅಂಗವಾಗಿ ವಿದ್ಯಾರ್ಥಿಗಳಿಗೆ ನಡೆದ ಭಾಷಣ ಸ್ಪರ್ಧೆ, ಬಹುಭಾಷಾ ಕವಿಗೋಷ್ಠಿ ಹಾಗೂ ಕಾವ್ಯಗಾಯನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಬ್ಬಕ್ಕ ಹಾಗೂ ಅಮೃತ ಸೋಮೇಶ್ವರ ಅವರು ಕಾಲಾತೀತ ವ್ಯಕ್ತಿಗಳಾಗಿದ್ದಾರೆ. ಉಳ್ಳಾಲಕ್ಕೆ ಮಹತ್ವದ ಸ್ಥಾನ ತಂದು ಕೊಟ್ಟ ರಾಣಿ ಅಬ್ಬಕ್ಕ ಹಾಗೂ ಸಾಹಿತ್ಯಿಕ, ಸಾಂಸ್ಕೃತಿಕ ಬದುಕು ಕಟ್ಟಿನಾಡಿನ ಅಗ್ರಮಾನ್ಯ ಸಾಹಿತಿ, ಸಂಶೋಧಕರೆಂದು ಪ್ರಸಿದ್ಧಿ ಪಡೆದ ಅಮೃತರು ಇದೇ ಮಣ್ಣಿನಲ್ಲಿ ಓಡಾಡಿ ಗಾಳಿ, ಬೆಳಕನ್ನು ಆಸ್ವಾದಿಸಿದವರಾಗಿದ್ದಾರೆ. ಗುರುಗಳಾಗಿ 24 ವರ್ಷ ಬೋಧನೆ ಮಾಡಿದ್ದಲ್ಲದೆ, ದೇಶ, ವಿದೇಶಗಳ ಅನೇಕ ಸಂಸ್ಕೃತಿ ವಿದ್ವಾಂಸರು, ಅಧ್ಯಯನಕಾರರಿಗೆ ಮಾರ್ಗದರ್ಶನ ನೀಡಿದ್ದರು.ಐವತ್ತು ವರುಷಗಳ ಹಿಂದೆಯೇ ಅವರು ಯಕ್ಷಗಾನ, ತುಳು ಜನಪದ ಅಧ್ಯಯನದ ಭವಿಷ್ಯವನ್ನು ಅರಿತಿದ್ದ ದೂರದೃಷ್ಟಿಯವರಾಗಿದ್ದರು. ನಮ್ಮ ಬದುಕನ್ನು ಕಟ್ಟಿ ಮುನ್ನಡೆಸಲು ದಾರಿಗಳನ್ನು ಸೂಚಿಸುವ ನಿಟ್ಟಿನಲ್ಲಿ ಅಮೃತರ ಸಾಹಿತ್ಯಗಳು ಬಹಳ ಪ್ರಾಮುಖ್ಯವಾಗಿದೆ ಎಂದರು.

ಮಾಜಿ ಶಾಸಕರಾದ ಕೆ.ಜಯರಾಮ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸೋಮೇಶ್ವರ ಪುರಸಭೆಯ ಅಧ್ಯಕ್ಷ ಕಮಲ, ಉಪಾಧ್ಯಕ್ಷ ರವಿಶಂಕರ ಸೋಮೇಶ್ವರ, ಸದಸ್ಯೆ ಸೋನಾ ಸುಭಾಷಿಣಿ, ಸಾರಸ್ವತ ಎಜ್ಯುಕೇಶನ್ ಸೊಸೈಟಿಯ ಕಾರ್ಯದರ್ಶಿ ಡಾ.ರವೀಂದ್ರ ಕಾಯ್ಕಿಣಿ, ಪರಿಜ್ಞಾನ ಪಿಯು ಕಾಲೇಜಿನ ಪ್ರಾಂಶುಪಾಲ ವಿಕ್ರಮ್, ನಿವೃತ್ತ ಪ್ರಾಧ್ಯಾಪಕ ಕೆ.ಆರ್.ಚಂದ್ರ, ಆನಂದಾಶ್ರಮ ಹೈಸ್ಕೂಲ್ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಜೀವನ್ ಸೋಮೇಶ್ವರ, ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿಯ ಗೌರವಾಧ್ಯಕ್ಷ ಸದಾನಂದ ಬಂಗೇರ, ಉಪಾಧ್ಯಕ್ಷ ಯು.ಪಿ. ಆಲಿಯಬ್ಬ, ದೇವಕಿ.ಆರ್ ಉಳ್ಳಾಲ್ ಮೊದಲಾದವರು ಉಪಸ್ಥಿತರಿದ್ದರು.

ಅಬ್ಬಕ್ಕ ಉತ್ಸವ ಸಮಿತಿಯ ಅಧ್ಯಕ್ಷ ದಿನಕರ ಉಳ್ಳಾಲ್ ಸ್ವಾಗತಿಸಿಪ್ರಾಸ್ತಾವಿಕಮಾತುಗಳನ್ನಾಡಿದರು. ಪ್ರ.ಕಾ ಧನಲಕ್ಷ್ಮಿ ಗಟ್ಟಿ ನಿರೂಪಿಸಿದರು. ನಿವೃತ್ತ ಮುಖ್ಯ ಶಿಕ್ಷಕಿ ಸರೋಜ ವಂದಿಸಿದರು.

> **ಸಮಾಜಕ್ಕೆ ಆದರ್ಶರಾಗೋಣ**
> ಉಳ್ಳಾಲದಂತಹ ಸೂಕ್ಷ್ಮ ಪ್ರದೇಶದಲ್ಲಿ ಜಾತ್ಯತೀತ ಮನೋಧರ್ಮದವಳಾದ ರಾಣಿ ಅಬ್ಬಕ್ಕಳ ಉತ್ಸವವನ್ನು ನಡೆಸಲು ಅಮೃತ ಸೋಮೇಶ್ವರ ಅವರೇ ಪ್ರೇರಣೆ ನೀಡಿದ್ದರು. ಅಬ್ಬಕ್ಕ ಮತ್ತು ಅಮೃತರ ಹಾಗೆ ನಾವು ಆಗಲು ಅಸಾಧ್ಯ.. ಅವರ ಬದುಕಿನ ಪ್ರೇರಣೆ ಪಡೆದು ಸಮಾಜಕ್ಕೆ ನಾವು ಆದರ್ಶರಾಗಲು ಸಾಧ್ಯವಿದೆ.
> ● ಡಾ.ಕೆ.ಚಿನ್ನಪ್ಪ ಗೌಡ, ವಿಶ್ರಾಂತ ಉಪಕುಲಪತಿ, ಹಾವೇರಿ ವಿಶ್ವವಿದ್ಯಾನಿಲಯ

> **ಬದುಕು ಬಂಗಾರ**
> ಅಬ್ಬಕ್ಕ ಹಾಗೂ ಅಮೃತರ ಸಾವಿರಾರು ಗುಣಗಳಲ್ಲಿ ಒಂದೆರಡನ್ನಾದರೂ ನಮ್ಮ ಜೀವನದಲ್ಲಿ ಅಳವಡಿಸಿದರೆ ಬದುಕು ಬಂಗಾರವಾಗುವುದರಲ್ಲಿ ಸಂಶಯವಿಲ್ಲ. ವಿದ್ಯಾ ಸಂಸ್ಥೆಗಳಲ್ಲಿ ಇಂತಹ ಕಾರ್ಯಕ್ರಮಗಳು ನಡೆಯುವುದು ವಿರಳ. ವಿದ್ಯಾರ್ಥಿಗಳ ಇಚ್ಛಾ ಶಕ್ತಿ, ಜ್ಞಾನ ಶಕ್ತಿ ವೃದ್ಧಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿ.
> ● ಡಾ.ರವೀಂದ್ರ ಕಾಯ್ಕಿಣಿ, ಕಾರ್ಯದರ್ಶಿ, ಸಾರಸ್ವತ ಎಜ್ಯುಕೇಶನ್ ಸೊಸೈಟಿ

ವ್ಯಕ್ತಿತ್ವ ವಿಕಸನಕ್ಕೆ ಯಕ್ಷಗಾನ ಕಲಿಕೆ ದಾರಿದೀಪ: ರಾಜಶೇಖರ



ಕೋಟ: ಯಕ್ಷಗಾನ ಕಲಿಕೆ ವ್ಯಕ್ತಿತ್ವ ವಿಕಸನಕ್ಕೆ ದಾರಿದೀಪ. ಇಂತಹ ಯಕ್ಷಗಾನವನ್ನು ಮಕ್ಕಳಿಗೆ ಕಲಿಸುವುದರಿಂದ ಸಮಾಜಕ್ಕೆ ಒಳ್ಳೆಯ ವ್ಯಕ್ತಿಯನ್ನು ಕಾಣಿಕೆಯಾಗಿ ನೀಡಬಹುದಾಗಿದೆ ಎಂದು ಯಕ್ಷಗಾನ ಕಲಾಕೇಂದ್ರ ಹಂಗರಕಟ್ಟೆಯ ಕಾರ್ಯ ದರ್ಶಿ ರಾಜಶೇಖರ ಹೆಬ್ಬಾರ್ ಅಭಿಪ್ರಾಯಪಟ್ಟರು.

ಕೋಟದ ವಿವೇಕ ಬಾಲಕಿಯರ ಪ್ರೌಢ ಶಾಲೆ, ವಿವೇಕ ಪದವಿಪೂರ್ವ ಕಾಲೇಜು ಹೈಸ್ಕೂಲ್ ವಿಭಾಗ, ವಿವೇಕ ಆಂಗ್ಲ ಮಾಧ್ಯಮ ಪ್ರೌಢಶಾಲೆ ಜಂಟಿ ಆಶ್ರಯದಲ್ಲಿ ಉಡುಪಿ ಯಕ್ಷ ಶಿಕ್ಷಣ ಟ್ರಸ್ಟ್ ಏರ್ಪಡಿಸುವ ಯಕ್ಷಗಾನ ತರಬೇತಿಯ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ಯಕ್ಷಗಾನ ಕಲಾರಂಗದ ಕಾರ್ಯದರ್ಶಿ ಮುರಳಿ ಕಡೆಕಾರ್, ಯಕ್ಷ ಶಿಕ್ಷಣ ಟ್ರಸ್ಟ್ ನ ಕಾರ್ಯ ಚಟುವಟಿಕೆಗಳ ಬಗ್ಗೆ ಸ್ಥೂಲ ಪರಿಚಯ ನೀಡಿ ವಿದ್ಯಾರ್ಥಿಗಳು ಇದರಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದರು. ವಿವೇಕ ಕಾಲೇಜಿನ ಹಿಂದಿನ ವಿದ್ಯಾರ್ಥಿ ಎಸ್. ವಿಶ್ವೇಶ್ವರ ಭಟ್ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ವಿವೇಕಪ.ಪೂ.ಕಾಲೇಜಿನಪ್ರಾಂಶುಪಾಲ ಜಗದೀಶ ನಾವಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳು ಮಕ್ಕಳ ಬೌದ್ಧಿಕ ಹಾಗೂ ಮಾನಸಿಕ ವಿಕಾಸಕ್ಕೆ ಪೂರಕವಾಗಿದೆ. ಇದೇ ಧ್ಯೇಯ ವಾಕ್ಯದೊಂದಿಗೆನಮ್ಮಸಂಸ್ಥೆನಡೆದು ಬಂದಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭ ಮೂರು ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಯಕ್ಷ ಶಿಕ್ಷಣವನ್ನು ಒದಗಿಸುತ್ತಿರುವ ನರಸಿಂಹ ತುಂಗರನ್ನು ಗೌರವಿಸಲಾಯಿತು.

ವಿವೇಕ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯಿನಿ ಪ್ರೀತಿ ರೇಖಾ ಉಪಸ್ಥಿತಿಯಲ್ಲಿ ಬಾಲಕಿಯರ ಪ್ರೌಢಶಾಲೆ ಮುಖ್ಯೋಪಾಧ್ಯಾಯ ವೆಂಕಟೇಶ ಉಡುಪ ಸ್ವಾಗತಿಸಿದರೆ, ವಿವೇಕ ಕಾಲೇಜು, ಹೈಸ್ಕೂಲ್ ವಿಭಾಗದ ಮುಖ್ಯ ಶಿಕ್ಷಕ ಪ್ರೇಮಾನಂದ ವಂದಿಸಿದರು. ಶಿಕ್ಷಕಿ ಮಹಾಲಕ್ಷ್ಮೀ ಎಂ.ಪಿ . ನಿರೂಪಿಸಿದರು.

ಶಾಲಾ, ಕಾಲೇಜುಗಳಲ್ಲಿ ಪುಸ್ತಕ ಪ್ರದರ್ಶನ ನಡೆಯಲಿ: ಶ್ರೀನಾಥ್



ಬೆಳ್ತಂಗಡಿ: ಗುರುವಾಯನಕೆರೆ ಶ್ರೀ ಶಾರದಾ ಕಲಾ ಮಂಟಪ ಗೆಳೆಯರ ಬಳಗದ ಆಶ್ರಯದಲ್ಲಿ ಪುತ್ತೂರಿನ ಜ್ಞಾನ ಗಂಗಾ ಪುಸ್ತಕ ಮಳಿಗೆ ಸಹಯೋಗದೊಂದಿಗೆ ಜೂ. 26ರಿಂದ28 ರವರೆಗೆನಡೆಯುವ ಗ್ರಾಮೀಣ ಮಟ್ಟದ ಪುಸ್ತಕೋತ್ಸವ, ಪುಸ್ತಕ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮವನ್ನು ದ.ಕ. ಜಿಲ್ಲಾ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಶ್ರೀನಾಥ್ ಎಂ. ಪಿ. ದೀಪ ಬೆಳಗಿಸಿ ಉದ್ಘಾಟಿಸಿದರು.

ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ಪುಸ್ತಕ ಓದುವವರು ವಿರಳವಾಗುತ್ತಿದ್ದಾರೆ. ಇಂತಹ ಕಾಲಘಟ್ಟದಲ್ಲಿ ಗ್ರಾಮೀಣ ಮಟ್ಟದ ಪುಸ್ತಕೋತ್ಸವ ಆಯೋಜನೆಗೊಂಡಿರುವುದು ಶ್ಲಾಘನೀಯವಾಗಿದೆ. ಪ್ರತಿ ಶಾಲಾ ಕಾಲೇಜುಗಳಲ್ಲಿ ಇಂತಹ ಪುಸ್ತಕ ಪ್ರದರ್ಶನ ನಡೆದರೆ ವಿದ್ಯಾರ್ಥಿಗಳು ಓದುವ ಅಭಿರುಚಿಯನ್ನು ಹೊಂದಲು ಸಹಾಯಕವಾಗುತ್ತದೆ. ಗ್ರಾಮೀಣ ಮಟ್ಟದಲ್ಲಿ ಮನೆ ಮನೆಗೆ ಪುಸ್ತಕ ತಲುಪಿಸುವ ಯೋಜನೆ ಕಾರ್ಯಗತವಾಗಬೇಕಾಗಿದೆ ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಪುಂಜಾಲಕಟ್ಟೆ ಪ್ರೌಢಶಾಲಾ ಶಿಕ್ಷಕ ಧರಣೇಂದ್ರ ಜೈನ್, ವಿದ್ಯಾರ್ಥಿಗಳಿಗೆ ಪುಸ್ತಕ ಓದುವ ಅಭಿರುಚಿಯನ್ನು ಹೆಚ್ಚಿಸುವ ಸಲುವಾಗಿ ರಾಜ್ಯ ಸರಕಾರವು ಕೆಲವೊಂದು ಯೋಜನೆಗಳನ್ನು ಹಾಕಿಕೊಂಡಿದ್ದು, ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳು ಭಾಗ ವಹಿಸಿದರೆ ಬರಹಗಾರರು ಹಾಗೂ ಪುಸ್ತಕ ಪ್ರಕಟಿಸುವವರಿಗೆ ಸಹಾಯಕವಾಗುತ್ತದೆ ಎಂದರು.

ಗುರುವಾಯನಕೆರೆ ಶಾರದಾ ಗೆಳೆಯರ ಬಳಗದ ಅಧ್ಯಕ್ಷ ತಿಲಕರಾಜ್, ಶಾರದಾ ಭಜನ ಮಂಡಳಿಯ ನಿಕಟ ಪೂರ್ವ ಅಧ್ಯಕ್ಷೆ ರೀತಾ ವೈ. ಆಚಾರ್ಯ, ಕಾರ್ಯಕ್ರಮದ ಆಯೋಜಕ ದೇವಿಪ್ರಸಾದ್ ಆಚಾರ್ಯ ಗುರುವಾಯನಕೆರೆ, ಡಾ. ವೇಣುಗೋಪಾಲ ಶರ್ಮ, ಕುವೆಟ್ಟು ಗ್ರಾ. ಪಂ. ಮಾಜಿ ಸದಸ್ಯ ಮಂಜುನಾಥ ಕುಂಬಳೆ ಉಪಸ್ಥಿತರಿದ್ದರು. ಆನಂದ ಕೋಟ್ಯಾನ್ ಸ್ವಾಗತಿಸಿ, ಸುಧಾ ಆರ್. ಸಾಲಿಯಾನ್ ವಂದಿಸಿದರು. ಉಪನ್ಯಾಸಕ ಮಹಾಬಲ ಗೌಡ ನಿರ್ವಹಿಸಿದರು.

ನೀರಪಾದೆ ಶ್ರೀ ನಾರಾಯಣ ಗುರು ಮಂದಿರದಲ್ಲಿ ದೃಢಕಲಶ



ಬಂಟ್ವಾಳ: ತಾಲೂಕಿನ ಬಾಳ್ತಿಲ ಗ್ರಾಮದ ನೀರಪಾದೆ ಬ್ರಹ್ಮಶ್ರೀ ನಾರಾ ಯಣ ಗುರು ಮಂದಿರದಲ್ಲಿ ದೃಢಕಲಶ ಸಂಪ್ರೋಕ್ಷಣಾ ಪೂಜೆಯು ಕೇಶವ ಶಾಂತಿಯವರ ನೇತೃತ್ವದಲ್ಲಿ ಶುಕ್ರವಾರ ನಡೆಯಿತು. ಈ ಸಂದರ್ಭ ಭಕ್ತರ ಅವಲೋಕನ ಸಭೆ ನಡೆಸಲಾಯಿತು.

ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ, ಮಾಜಿ ಶಾಸಕ ರುಕ್ಮಯ ಪೂಜಾರಿ, ಬಿಜೆಪಿ ಬಂಟ್ವಾಳ ಮಂಡಲದ ಅಧ್ಯಕ್ಷ ಚೆನ್ನಪ್ಪಆರ್. ಕೋಟ್ಯಾನ್, ನಾರಾಯಣ ಪೂಜಾರಿ ನಿಡ್ಯೆ, ಮಂದಿರದ ಟ್ರಸ್ಟ್ ಕಾರ್ಯದರ್ಶಿ ಮೋಹನ್ ಪಿ. ಎಸ್., ಟ್ರಸ್ಟಿಗಳಾದ ಶರತ್ ಕುಮಾರ್, ಜಯರಾಮ ಕಲ್ಲಪಾಪು, ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷ ಶಿವರಾಜ್ ಕಾಂದಿಲ, ಸುಭಾಷ್ ದಾಸಕೋಡಿ, ಕೃಷ್ಣಪ್ಪ ಜಿ. ಸಾಲಿಯಾನ್, ಮೀನಾಕ್ಷಿ ಆರ್. ಪೂಜಾರಿ, ಯಶೋಧಾ ನಿಡ್ಯೆ, ಮಲ್ಲಿಕಾ ಸೇನೆರೆ ಕೋಡಿ, ಕುಮಾರ ಕಾಂದಿಲ, ಅಶೋಕ್ ಕುಮಾರ್, ತಾರಾನಾಥ, ಗಣೇಶ್ ನಗರ, ರಮೇಶ್ ಅನಂತಾಡಿ ಮೊದಲಾದ ಗಣ್ಯರು ಭಾಗವಹಿಸಿದ್ದರು.

ಈ ವೇಳೆ ನಡೆದ ಅವಲೋಕನಾ ಸಭೆಯಲ್ಲಿ ನಾರಾಯಣ ಗುರು ಗಳ ಮಂದಿರಕ್ಕಾಗಿ ಸ್ವಯಂ ಸೇವಕ ರಾಗಿ ಹಗಲಿರುಳು ಸೇವೆಗೈದ ಜೀರ್ಣೋದ್ಧಾರ ಸಮಿತಿಯ ಕಾರ್ಯಕರ್ತರು, ಭಾಗವಹಿಸಿದ ಸಂಘ ಸಂಸ್ಥೆಗಳು, ತನು, ಮನ, ಧನದ ರೂಪದಲ್ಲಿ ಸಹಕರಿಸಿದ ಪ್ರತಿಯೋರ್ವ ದಾನಿಗಳಿಗೆ, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನಾರಾಯಣ ಗುರು ಸೇವಾ ಟ್ರಸ್ಟ್ ವತಿಯಿಂದ ಕೃತಜ್ಞತೆ ಸಲ್ಲಿಸಲಾಯಿತು.



ಬೆಳ್ತಂಗಡಿ ವಾಣಿ ಪಿಯು ಕಾಲೇಜಿನ ಗರ್ಲ್ಸ್ ಸೇಫ್ಟಿ ಎಂಡ್ ವೆಲ್ಫೇರ್ ಕಮಿಟಿ ವತಿಯಿಂದ ವಿದ್ಯಾರ್ಥಿನಿಯರಿಗಾಗಿ ಆರೋಗ್ಯ ಮತ್ತು ಸುರಕ್ಷತಾ ಜಾಗೃತಿ ಕಾರ್ಯಾಗಾರವನ್ನು ಆಯೋಜಿಸಲಾಯಿತು. ಮಂಗಳೂರಿನ ಎ.ಜೆ. ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯ ಡಾ. ಸಂಸ್ಕೃತಿ ಎಚ್. ಎಸ್. ಶೆಟ್ಟಿ, ಎ.ಜೆ. ಆಸ್ಪತ್ರೆ ಮತ್ತು ರಿಸರ್ಚ್ ಸೆಂಟರ್‌ನ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಅಭಿ ಅಬ್ರಹಾಂ, ಕಾಲೇಜಿನ ಪ್ರಾಂಶುಪಾಲ ವಿಷ್ಣುಪ್ರಕಾಶ್,ಉಪನ್ಯಾಸಕಿರಾದ ರಾಧಿಕಾ ,ರಕ್ಷಾ, ರಾಜಶ್ರೀ ಉಪಸ್ಥಿತರಿದ್ದರು.



ಸೌತ್ ಕೆನರಾ ಫೋಟೋ ಗ್ರಾಫರ್ಸ್ ಅಸೋಸಿಯೇಷನ್‌ನ ಬಂಟ್ವಾಳ ವಲಯದ ವತಿಯಿಂದ ಕೇಂದ್ರ ಸರಕಾರದ ಅಕ್ಷಯ್ ಮಿತ್ರ ಯೋಜನೆಯಡಿ ಕ್ಷಯ ರೋಗಿ ಗೆ ಒಂದು ತಿಂಗಳ ಪೌಷ್ಟಿಕ ಆಹಾರ ಸಾಮಾಗ್ರಿಗಳ ಕಿಟ್ ನ್ನು ಬಿ.ಮೂಡ ಗ್ರಾಮದ ಸ. ಪ್ರಾ.ಆರೋಗ್ಯ ಕೇಂದ್ರದಲ್ಲಿ ವಿತರಿಸಲಾಯಿತು. ವಲಯದ ಅಧ್ಯಕ್ಷ ರಾಜೇಂದ್ರ ಕೆ., ವೈದ್ಯಾಧಿಕಾರಿ ಡಾ, ಅಶ್ವಿನಿ ಬಾಲಕೃಷ್ಣ, ಮಾಜಿ ಅಧ್ಯಕ್ಷರುಗಳಾದ ದಯಾನಂದ್ ಬಂಟ್ವಾಳ್, ಚಿತ್ರ ರಮೇಶ್, ಹರೀಶ್ ಕುಂದರ್, ಉಪಾಧ್ಯಕ್ಷರಾದ ಹರೀಶ್ ನಾಟಿ, ಕಾರ್ಯದರ್ಶಿ ರವಿ ಕಲ್ಲನೆ, ಕೋಶಾಧಿಕಾರಿ ಕೃಷ್ಣರಾಜ್ ರಾವ್, ಛಾಯಾ ಕಾರ್ಯದರ್ಶಿ ಪ್ರಶಾಂತ್ ಕಲ್ಲಡ್ಕ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕೊಯಿಲ: ಬೊಬ್ಬರ್ಯ ದೈವಸ್ಥಾನ ಪುನರ್ ನಿರ್ಮಾಣಕ್ಕೆ ಶಿಲಾನ್ಯಾಸ



ಬಂಟ್ವಾಳ: ತಾಲೂಕಿನ ಕೊಯಿಲ ಗ್ರಾಮದ ಬಬ್ಬರಬೈಲು ಎಂಬಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ಪುನರ್ ನಿರ್ಮಾಣಗೊಳ್ಳಲಿರುವ ಬೊಬ್ಬರ್ಯ ದೈವಸ್ಥಾನಕ್ಕೆ ಆರಳ ಶ್ರೀ ಗರುಡ ಮಹಾಕಾಳಿ ದೇವಳದ ಪ್ರಧಾನ ಅರ್ಚಕ ಎ. ಹರೀಶ ಭಟ್ ಶಿಲಾನ್ಯಾಸ ನೆರವೇರಿಸಿದರು.

ಆಡಳಿ ಸಮಿತಿ ಸಂಚಾಲಕ ವಸಂತ ಕುಮಾರ್ ಅಣ್ಣಳಿಕೆ, ಆಡಳಿತ ಸಮಿತಿ ಅಧ್ಯಕ್ಷ ಹರಿಶ್ಚಂದ್ರ ಶೆಟ್ಟಿ ಬ್ಯಾರಿಕೋಡಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸಂತೋಷ್ ಕುಮಾರ್ ಚೌಟ, ಪ್ರಮುಖರಾದ ದೇರಾಜೆ ಗುತ್ತು ಯಶೋಧರ ರೈ, ಹರ್ಷೇಂದ್ರ ಹೆಗ್ಡೆ ಅಂತರಗುತ್ತು, ಶೇಖರ ಅಂಚನ್ ಪಿಲ್ಕಾಜೆ ಗುತ್ತು, ರಾಜೇಶ್ ಜೈನ್ ಪಡ್ರಾಯಿ ಗುತ್ತು, ರಾಜೇಶ್ ಸಪಲ್ಯ ಗೋವಿಂದಬೆಟ್ಟು ಸುಧೀರ್ ಶೆಟ್ಟಿ ಹೊರಂಗಳ, ರಾಜೇಶ್ ಆಚಾರ್ಯ ಪಟ್ರಾಡಿ, ದಿನೇಶ ಶೆಟ್ಟಿ ಮಡಂದೂರು, ಜಯಂತ ಪೂಜಾರಿ ಪಿಲ್ಕಾಜೆ, ಗಂಗಾಧರ ಪಿಲ್ಕಾಜೆ, ಕಿರಣ್ ಕುಮಾರ್ ಮಂಜಿಲ, ಹರಿಪ್ರಸಾದ್ ಶೆಟ್ಟಿ ಕುರುಡಾಡಿ, ಸಂತೋಷ್ ಕುಮಾರ್ ರಾಯಿಬೆಟ್ಟು, ಪ್ರಭಾಕರ ಪ್ರಭು ಕರ್ಪೆ, ಉಮೇಶ ಸಪಲ್ಯ ಗೋವಿಂದಬೆಟ್ಟು, ಕೇಶವ ಶೆಟ್ಟಿ ಪಿಲ್ಕಾಜೆ, ಜಿ.ದಾಮೋದರ ಬಂಗೇರ, ಚಂದ್ರಶೇಖರ ಶೆಟ್ಟಿ ಆರಳ, ಸುಕುಮಾರ್ ಶೆಟ್ಟಿ ಆರಳ, ಚಂದ್ರಶೇಖರ ಗೌಡ ಕಾರಂಬಡೆ, ಕೆ.ಪರಮೇಶ್ವರ ಪೂಜಾರಿ, ಜಯ ರಾಮ ಅಡಪ, ಪ್ರವೀಣ ಅಂಚನ್, ಜನಾರ್ಧನ ಪೂಜಾರಿ ಪಿಲ್ಕಾಜೆ ಇದ್ದರು.

ಸೌಜನ್ಯ ಮಹಿಳಾ ಮಂಡಲದಲ್ಲಿ ಆರೋಗ್ಯ ಮಾಹಿತಿ ಕಾರ್ಯಕ್ರಮ



ಮಂಗಳೂರು: ಸೌಜನ್ಯ ಮಹಿಳಾ ಮಂಡಲ ಹೊಯ್ಗೆಬೈಲ್ ಉರ್ವ ವತಿಯಿಂದ ಮಹಿಳೆಯರ ಆರೋಗ್ಯದ ದೃಷ್ಟಿಯಿಂದ ನಗರದ ಬೈಕಾಡಿ ಮನೆ ಮಂಜೂಷಾದಲ್ಲಿ ಬುಧವಾರ 'ಮಹಿಳೆ ಯರ ಆರೋಗ್ಯ ಮಾಹಿತಿ' ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಆಯುರ್ವೇದ ತಜ್ಞೆ ಡಾ. ಪ್ರತಿಭಾ ರೈ, ಭಾವುಕ ಮನೋಭಾವನೆಯ ಕಾರಣಗಳಿಂದಾಗಿ ನಮ್ಮ ದೇಹ- ಆರೋಗ್ಯವನ್ನು ನಿರ್ಲಕ್ಷಿಸುವುದು ಸರಿಯಲ್ಲ, ಆಹಾರ, ನಿದ್ರೆ, ವ್ಯಾಯಾಮ ಇವುಗಳ ಮೂಲಕ ನಮ್ಮ ದೇಹದ ಕಡೆಗೂ ಗಮನ ನೀಡಬೇಕು ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಬಳಿಕ ಸಭಿಕರ ಪ್ರಶ್ನೆಗಳಿಗೆ ಉತ್ತರ ನೀಡುವ ಮೂಲಕ ಆರೋಗ್ಯ ಮಾಹಿತಿ ಒದಗಿಸಿದರು. ಈ ಸಂದರ್ಭದಲ್ಲಿ ಡಾ. ಪ್ರತಿಭಾ ರೈ ಅವರನ್ನು ಸನ್ಮಾನಿಸಲಾಯಿತು.

ಗೌರವಾಧ್ಯಕ್ಷೆ ಕೆ.ಎ.ರೋಹಿಣಿ ಪ್ರಸ್ತಾವಿಕವಾಗಿ ಮಾತನಾಡಿದರು. ಉಪಾಧ್ಯಕ್ಷೆ ರತ್ನಾವತಿ ಜೆ.ಬೈಕಾಡಿ ಅತಿಥಿ ಪರಿಚಯ ಮಾಡಿ, ಕಾರ್ಯಕ್ರಮ ನಿರೂಪಿಸಿದರು. ಕಾರ್ಯದರ್ಶಿ ರಾಜೇಶ್ವರಿ ವಂದಿಸಿದರು.

ಉಡುಪಿ ತಾಲೂಕು ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ಸಭೆ | ವಿವಿಧ ಇಲಾಖೆಯ ಅಧಿಕಾರಿಗಳಿಗೆ ಸೂಚನೆ

ಗ್ಯಾರಂಟಿ ಯೋಜನೆಯ ಸೌಲಭ್ಯಗಳು ಅರ್ಹರಿಗೆ ತಲುಪಲಿ: ರಮೇಶ್ ಕಾಂಚನ್

ಉಡುಪಿ: ಗ್ಯಾರಂಟಿ ಯೋಜನೆಯ ಸೌಲಭ್ಯಗಳು ಅರ್ಹ ಫಲನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಿದೆ ಎಂದು ಉಡುಪಿ ತಾಲೂಕು ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಅಧ್ಯಕ್ಷ ರಮೇಶ್ ಕಾಂಚನ್ ಹೇಳಿದರು.

ಉಡುಪಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ಉಡುಪಿ ತಾಲೂಕು ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಸೈಬರ್ ವಂಚಕರ ಬಗ್ಗೆ ಎಚ್ಚರಿಕೆ ಇರಲಿ

ರಾಜ್ಯದ ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳನ್ನು ಗುರಿಯಾಗಿರಿಸಿಕೊಂಡು ಸೈಬರ್ ವಂಚಕರು ಯೋಜನೆಯ ಹಣ ಮಂಜೂರು ಮಾಡುವುದಾಗಿ ಹೇಳಿ ಬ್ಯಾಂಕ್ ಖಾತೆ ಮತ್ತು ಓಟಿಪಿ ಪಡೆದು ಹಣ ಕಬಳಿಸುತ್ತಿರುವ ಪ್ರಕರಣಗಳು ಕೇಳಿ ಬರುತ್ತಿವೆ. ಈ ಬಗ್ಗೆ ಯಾವುದೇ ಅನುಮಾನಾಸ್ಪದ ಕರೆ ಬಂದಾಗ ರಾಷ್ಟ್ರೀಯ ಸೈಬರ್ ಕ್ರೈಮ್ ಸಹಾಯವಾಣಿ ಸಂಖ್ಯೆ 1930ಗೆ ಕರೆ ಮಾಡಿ, ದೂರು ನೀಡಬೇಕು. ವಂಚನೆಗೊಳಗಾದ ಒಂದು ಗಂಟೆಯ ಒಳಗೆ ಸಹಾಯವಾಣಿಗೆ ದೂರು ನೀಡಿದಾಗ ಶೇ. 90ರಷ್ಟು ಹಣ ಮರುಪಾವತಿ ಆಗುವ ಸಾಧ್ಯತೆಗಳಿರುವುದಾಗಿ ತಿಳಿಸಿದರು.



ಉಚಿತ ಬಸ್ ಪಾಸ್‌ಗಾಗಿ ಅರ್ಜಿ ಸಲ್ಲಿಸಿ

ಉಡುಪಿ ತಾಲೂಕಿನ ಕೆಲವು ಹೊಸ ರೂಟ್‌ಗಳಿಗೆ ಹೊಸ ಬಸ್‌ಗಳ ಬೇಡಿಕೆಯನ್ನು ಜಿಲ್ಲಾ ಕಮಿಟಿಗೆ ಕಳುಹಿಸಿದ್ದು, ಆದಷ್ಟು ತ್ವರಿತಗತಿಯಲ್ಲಿ ಬಸ್‌ಗಳು ಸಂಚಾರಗೊಳ್ಳುವ ಭರವಸೆ ಇರುವುದಾಗಿ ತಿಳಿಸಿದ ಅವರು, ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಉಚಿತ ಬಸ್ ಪಾಸ್‌ಗಾಗಿ ಸೇವಾಸಿಂಧು ಪೋರ್ಟಲ್‌ನಲ್ಲಿ ಅಪ್ಲಿಕೇಷನ್ ಪಾರ್ ಸ್ಟೂಡೆಂಟ್ ಪಾಸ್ ಫಾರ್ಮ್ ಡೌನ್‌ಲೋಡ್ ಮಾಡಿಕೊಂಡು, ಇದರಲ್ಲಿ ವಿದ್ಯಾರ್ಥಿ ಹೆಸರು, ಭಾವಚಿತ್ರ, ಪ್ರಯಾಣ ಮಾಡುವ ರೂಟ್‌ನ ವಿವರ, ಶಾಲಾ- ಕಾಲೇಜಿನಿಂದ ನೀಡಲಾದ ಫೀಸ್ ಪೇಮೆಂಟ್ ಸ್ಲಿಪ್- ಸ್ಟಡಿ ಸರ್ಟಿಫಿಕೇಟ್, ಆಧಾರ್‌ಗಳೊಂದಿಗೆ ಅಪ್‌ಲೋಡ್ ಮಾಡಿದಾಗ ಅಕ್ನಾಲೆಡ್ಜ್‌ಮೆಂಟ್ ದೊರೆಯಲಿದೆ. ಕಡಿಯಾಳಿಯಲ್ಲಿರುವ ಏಜೆನ್ಸಿಯಲ್ಲಿ ಈ ಬಸ್ ಪಾಸ್ ಅನ್ನು ಮಾಡಿಕೊಡಲಾಗುವುದು ಎಂದರು.

ಅನಾರೋಗ್ಯದ ಮಾಹಿತಿ ನೀಡಿ

ತುರ್ತು ವೈದ್ಯಕೀಯ ಚಿಕಿತ್ಸೆ ಅವಶ್ಯವಿರುವ ಸಾರ್ವಜನಿಕರು ಹೊಸ ಪಡಿತರ ಚೀಟಿ ಪಡೆಯಲು, ಅವರ ಅನಾರೋಗ್ಯ ಸಂಬಂತ ದಾಖಲಾತಿ, ಸ್ಕ್ಯಾನಿಂಗ್ ರಿಪೋರ್ಟ್, ಆದಾಯ ಪ್ರಮಾಣ ಪತ್ರದೊಂದಿಗೆ ಕರ್ನಾಟಕ ಒನ್ ಸೆಂಟರ್‌ನಲ್ಲಿ ಅಪ್ಲಿಕೇಷನ್ ಹಾಕಿದಾಗ ಅದರಲ್ಲಿ 103 ಕಾಯಿಲೆಗಳ ಪಟ್ಟಿಯನ್ನು ಆಹಾರ ಇಲಾಖೆಯ ತಂತ್ರಾಂಶದಲ್ಲಿ ಅಳವಡಿಸಲಾಗಿರುತ್ತದೆ. ಇದಕ್ಕೆ ಅನುಗುಣವಾಗಿ ಅರ್ಜಿ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಿ, ಪಡಿತರ ಚೀಟಿ ನೀಡಲಾಗುವುದು ಎಂದ ಅವರು, ಆರೋಗ್ಯ ಸಮಸ್ಯೆ ಹೊಂದಿರುವ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ಸಭೆಯಲ್ಲಿ ತಾ.ಪಂ.ನ ಸಹಾಯಕ ನಿರ್ದೇಶಕಿ ಫರ್ಜಾನಾ ಎಂ., ಸಮಿತಿಯ ಸದಸ್ಯರು, ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

> **ಮರಣ ಹೊಂದಿದ ಫಲಾನುಭವಿಗಳ ಮಾಹಿತಿ ನೀಡಿ**
> ಉಡುಪಿ ತಾಲೂಕಿಗೆ ಸಂಬಂಧಿಸಿದಂತೆ ಗೃಹಲಕ್ಷ್ಮೀ ಯೋಜನೆಯಡಿ ಮರಣ ಹೊಂದಿದ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆಯಾಗಿರುವ ಮೊತ್ತದ ಕುರಿತು ಮಾಹಿತಿ ನೀಡುವಂತೆ ರಾಜ್ಯ ಸರ್ಕಾರವು ನಿರ್ದೇಶನ ನೀಡಿದ್ದು, 2318 ಮರಣ ಹೊಂದಿದವರ ಪಟ್ಟಿ ನೀಡಿದ್ದು, ಇವರುಗಳು ಯಾವ ಊರಿನವರು ಎಂಬ ಹೆಸರು ನೀಡಿರುವುದಿಲ್ಲ. ಸಂಬಂಧಪಟ್ಟ ಅಂಗನವಾಡಿ ಶಿಕ್ಷಕರ ಮೂಲಕ ಮರಣ ಹೊಂದಿದವರ ವಿವರ ಸಂಗ್ರಹಿಸುವ ಕೆಲಸವನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸುವಂತೆ ತಿಳಿಸಿದರು.

ಸುತ್ತ ಮುತ್ತ

ಸಾಂದೀಪನಿ ಯೋಗಾಲಯಂ: ಯೋಗ ದಿನಾಚರಣೆ

ಪೆರ್ಲ: ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಸಾಂದೀಪನಿ ಯೋಗಾಲಯಂ ಇದರ ವತಿಯಿಂದ ಪೆರ್ಲ ಭಾರತೀ ಸದನದಲ್ಲಿ ವಿಶ್ವ ಯೋಗ ದಿನವನ್ನು ಹಮ್ಮಿಕೊಳ್ಳಲಾಯಿತು.



ಯೋಗಾಚಾರ್ಯ ಪುಂಡರೀಕಾಕ್ಷ ಬೆಳ್ಳೂರು ಮಾತನಾಡಿ, ಶಾಂತಿ, ಸಮಾಧಾನ, ಸಹಬಾಳ್ವೆ, ಜಗತ್ತೇ ಒಂದು ಕುಟುಂಬ ಎಂಬ ಭಾವನೆಯಿಂದ ನಾವು ಕಾರ್ಯಪ್ರವೃತ್ತರಾಗಲು ಅಷ್ಟಾಂಗ ಯೋಗದ ಮೂಲಪಾಠವಾದ ಭಗವದ್ಗೀತೆಯ ಕರ್ತೃ ಭಗವಾನ್ ಶ್ರೀಕೃಷ್ಣ ಪರಮಾತ್ಮನು ಜಗತ್ತಿಗೆ ತಿಳಿ ಹೇಳಿದ ಧರ್ಮದ 10 ಮುಖಗಳಾದ ಯಮ ನಿಯಮವನ್ನು ಜೀವನದಲ್ಲಿ ಪಾಲಿಸಿ ಇತರರಿಗೂ ಬೋಧಿಸುವ ಸಾಮರ್ಥ್ಯವನ್ನು ಗಳಿಸಿಕೊಂಡಾಗ ನಾವು ಶಾರೀರಿಕ ಹಾಗೂ ಮಾನಸಿಕವಾಗಿ ಸಬಲರಾಗಿ ಕುಟುಂಬಗಳು ಸಮೃದ್ಧಿಯಾಗಲು ಸಾಧ್ಯ ಎಂದರು. ಯೋಗ ಶಿಕ್ಷಕಿ ದಿವ್ಯಾ ಶರ್ಮ ಪಳ್ಳತಡ್ಕ, ಯೋಗ ಸಮಿತಿ ಅಧ್ಯಕ್ಷೆ ಮೋಹಿನಿ ಶೆಟ್ಟಿ, ಕಾರ್ಯದರ್ಶಿ ರಾಜೇಶ್ವರಿ, ಯೋಗಭ್ಯಾಸಿಗಳಾದ ಸುಜಾತ ಪಳ್ಳತ್ತಡ್ಕ, ಗಾಯತ್ರಿ, ಪ್ರೇಮಾ ಪೆರ್ಲ ಉಪಸ್ಥಿತರಿದ್ದರು. ಯೋಗ ಸ್ಪರ್ಧೆಯಲ್ಲಿ ಭಾಗವಹಿಸಿದ ಮಕ್ಕಳಿಗೆ, ಮಹಿಳೆಯರಿಗೆ ಬಹುಮಾನ ನೀಡಲಾಯಿತು.

ವಿವಿಧ ಕೋರ್ಸ್: ಅರ್ಜಿ ಆಹ್ವಾನ

ಕಾಸರಗೋಡು: ಜಿಲ್ಲೆಯ ಚೆರುವತ್ತೂರು, ಬೇಳ ಮತ್ತು ನೀಲೇಶ್ವರದಲ್ಲಿ ಕಾರ್ಯನಿರ್ವಹಿಸುತ್ತಿರುವ ಐಟಿಐ ವಿದ್ಯಾಸಂಸ್ಥೆಗಳಲ್ಲಿ ವಿವಿಧ ಮೆಟ್ರಿಕ್ ಮತ್ತು ಮೆಟ್ರಿಕ್ ಅಲ್ಲದ ಟ್ರೇಡ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 0495 2371451 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಸಂದರ್ಶನ

ಕಾಸರಗೋಡು: ಕಾಸರಗೋಡಿನ ಎಲ್‌ಬಿಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸಯನ್ಸ್ ಮತ್ತು ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ ಮತ್ತು ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗಗಳಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗಾಗಿ ಸಂದರ್ಶನವು ಜುಲೈ 2 ರಂದು ಬೆಳಗ್ಗೆ 10.30ಕ್ಕೆ ಕಾಲೇಜಿನಲ್ಲಿ ನಡೆಯಲಿದೆ. ಸಂಬಂಧಿತ ವಿಷಯದಲ್ಲಿ ಎಂ.ಟೆಕ್ ಪದವಿ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ವಿವರಗಳಿಗೆ 7510655405, 9037667582, 9745306534 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜುಲೈ 3ರಂದು ಪಿಎಸ್‌ಸಿ ಸಂದರ್ಶನ

ಕಾಸರಗೋಡು: ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿ ಫಾರ್ಮಸಿಸ್ಟ್ ಗ್ರೇಡ್–2 (ಐಎನ್‌ಸಿಎ – ಹಿಂದು ನಾಡರ್) (ವರ್ಗ ಸಂಖ್ಯೆ – 155/ 2025) ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂದರ್ಶನವು ಜುಲೈ 3ರಂದು ಕೇರಳ ಲೋಕ ಸೇವಾ ಆಯೋಗದ ಕಾಸರಗೋಡು ಜಿಲ್ಲಾ ಕಚೇರಿಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ 04994 230102 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಕಾಸರಗೋಡು: ಎಸ್‌ಆರ್‌ಸಿ ಸಮುದಾಯ ಕಾಲೇಜು ನೇತೃತ್ವದಲ್ಲಿ ಜುಲೈನಲ್ಲಿ ನಡೆಯಲಿರುವ ಕೌನ್ಸೆಲಿಂಗ್ ಸೈಕಾಲಜಿಯಲ್ಲಿ ಪ್ರಮಾಣಪತ್ರ ಮತ್ತು ಡಿಪ್ಲೊಮಾ ಕೋರ್ಸ್‌ಗೆ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ 9446006641, 7510889333 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಪಡಿತರ ಚೀಟಿ: ಅರ್ಜಿ ಸಲ್ಲಿಕೆ

ಕಾಸರಗೋಡು: ವಿನಾಯಿತಿ ಮಾನದಂಡಗಳಡಿ ಬಾರದ ಕುಟುಂಬಗಳ ಸಾಮಾನ್ಯ ವರ್ಗದ ಪಡಿತರ ಚೀಟಿಗಳನ್ನು ಪಿಎಚ್‌ಎಚ್ ವರ್ಗಕ್ಕೆ ಪರಿವರ್ತಿಸಲು ಅರ್ಜಿಗಳನ್ನು ಅಕ್ಷಯ ಕೇಂದ್ರದ ಮೂಲಕ ಅಥವಾ ಸಿಟಿಜನ್ ಲಾಗಿನ್ ಪೋರ್ಟಲ್ ಮೂಲಕ ಜೂನ್ 27ರಿಂದ ಜುಲೈ 17ರ ವರೆಗೆ ಆನ್‌ಲೈನ್‌ನಲ್ಲಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ 04994 255138 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ. ಪಾಲಿ

ಇಂದು ಬೃಹತ್ ಅಭಿಯಾನ | ಐದು ವರ್ಷದೊಳಗಿನ 1,03,001 ಮಕ್ಕಳಿಗೆ ಲಸಿಕೆ ವಿತರಣೆ ಗುರಿ

ಜಿಲ್ಲೆಯಲ್ಲಿ ಒಟ್ಟು 1,272 ಪೋಲಿಯೋ ಬೂತ್‌ಗಳ ಸ್ಥಾಪನೆ

ಕಾಸರಗೋಡು/ಬದಿಯಡ್ಕ: ಕಾಸರಗೋಡು ಜಿಲ್ಲೆಯಾದ್ಯಂತ ಇಂದು (ಜೂ.28) ಪೋಲೀಯೋ ಲಸಿಕೆ ವಿತರಣಾ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಈ ನಿಟ್ಟಿನಲ್ಲಿ ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ ಎಂದು ಜಿಲ್ಲಾ ಆರೋಗ್ಯ ಇಲಾಖೆಯು ಮಾಹಿತಿ ನೀಡಿದೆ.

ವಿವಿಧೆಡೆ ಲಸಿಕಾ ಕೇಂದ್ರಗಳು

ಕಾಸರಗೋಡು ಜಿಲ್ಲೆಯಲ್ಲಿ ಕಾರ್ಯಕ್ರಮದ ಅಂಗವಾಗಿ ಅಂಗನವಾಡಿಗಳು, ಶಾಲೆಗಳು, ಆರೋಗ್ಯ ಕೇಂದ್ರಗಳು, ಬಸ್ ನಿಲ್ದಾಣಗಳು ಮತ್ತು ರೈಲ್ವೆ ನಿಲ್ದಾಣಗಳು ಸೇರಿದಂತೆ ಮಕ್ಕಳು ಸೇರುವ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಪೋಲಿಯೋ ಹನಿಗಳನ್ನು ನೀಡಲು ವಿಶೇಷ ಬೂತ್‌ಗಳನ್ನು ಸ್ಥಾಪಿಸಲಾಗುವುದು. ಅಲ್ಲದೆ ಐದು ವರ್ಷದೊಳಗಿನ ಅತಿಥಿ ಕಾರ್ಮಿಕರ ಮಕ್ಕಳಿಗೆ ಲಸಿಕೆ ನೀಡಲು ಮೊಬೈಲ್ ಬೂತ್‌ಗಳು ಸೇರಿದಂತೆ ವ್ಯಾಪಕ ವ್ಯವಸ್ಥೆಗಳನ್ನು ಮಾಡಲಾಗಿದೆ. ತರಬೇತಿ ಪಡೆದ ಆರೋಗ್ಯ ಕಾರ್ಯಕರ್ತರು ಜೂ.28ಕ್ಕೆ ಬೆಳಗ್ಗೆ 8 ರಿಂದ ಸಂಜೆ 5ರ ವರೆಗೆ ಬೂತ್ ಗಳಲ್ಲಿ ಪೋಲೀಯೋ ಹನಿಗಳನ್ನು ವಿತರಿಸಲಿದ್ದಾರೆ.



ಬದಿಯಡ್ಕ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಲಸಿಕಾ ವಿತರಣೆಗೆ ಸಂಬಂಧಿಸಿ ನಡೆದ ಸಿದ್ಧತಾ ಸಭೆ.

ಈ ದಿನ ಮಕ್ಕಳು ಲಸಿಕೆ ಪಡೆಯದಿದ್ದರೆ ಮುಂದಿನ ದಿನಗಳಲ್ಲಿ ಅವರನ್ನು ಪತ್ತೆ ಮಾಡಿ ಸ್ವಯಂಸೇವಕರ ಮೂಲಕ ಅವರ ಮನೆಗಳಿಗೆ ಲಸಿಕೆ ತಲುಪಿಸಲು ಆರೋಗ್ಯ ಇಲಾಖೆ ವ್ಯವಸ್ಥೆ ಮಾಡಲಾಗಿದೆ.

ಕಾರ್ಮಿಕರ 646 ಮಕ್ಕಳಿಗೆ ಲಸಿಕೆ

ಕಾಸರಗೋಡು ಜಿಲ್ಲೆಯಲ್ಲಿ ಐದು ವರ್ಷದೊಳಗಿನ 1,02,355 ಮಕ್ಕಳು ಮತ್ತು ಹೊರ ರಾಜ್ಯದ ಕಾರ್ಮಿಕರ 646 ಮಕ್ಕಳು ಸೇರಿದಂತೆ ಒಟ್ಟು 1,03,001 ಮಕ್ಕಳಿಗೆ ಮಕ್ಕಳಿಗೆ ಪೋಲಿಯೋ ಹನಿ ಹಾಕಲು ಒಟ್ಟು 1,272 ಪೋಲಿಯೊ ಬೂತ್‌ಗಳನ್ನು ಸ್ಥಾಪಿಸಲಾಗಿದೆ.

ಬದಿಯಡ್ಕದಲ್ಲಿ ಪೂರ್ವಸಿದ್ಧತಾ ಸಭೆ

ವಿವಿಧ ಕೇಂದ್ರಗಳಲ್ಲಿ ಮಕ್ಕಳಿಗೆ ಪೋಲೀಯೋ ಲಸಿಕೆ ಬದಿಯಡ್ಕ: ಬದಿಯಡ್ಕ ಗ್ರಾಮ ಪಂಚಾಯತ್‌ನ ಆರೋಗ್ಯಕೇಂದ್ರದವತಿಯಿಂದಪಲ್ಸ್‌ಪೋಲೀಯೋ ಲಸಿಕೆಯನ್ನು ಜೂ.28ರಂದು ವಿವಿಧ ಕೇಂದ್ರಗಳಲ್ಲಿ ನೀಡಲಾಗುವುದು. ಈ ನಿಟ್ಟಿನಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯು ಶನಿವಾರ ಬದಿಯಡ್ಕ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಜರಗಿತು.

ಗ್ರಾ.ಪಂ. ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ. ಉದ್ಘಾಟಿಸಿ ಮಾತನಾಡಿ, ಪೋಲಿಯೋ ಎಂಬ ರೋಗವು ಒಂದು ಕಾಲದಲ್ಲಿ ನಮ್ಮ ಮಕ್ಕಳ ಭವಿಷ್ಯವನ್ನು ಕಸಿದು ಕೊಳ್ಳುತ್ತಿದ್ದ ಮಹಾಮಾರಿಯಾಗಿತ್ತು. ಆದರೆ ನಮ್ಮ ಸರಕಾರದ ದೃಢ ಸಂಕಲ್ಪ, ಆರೋಗ್ಯ ಕಾರ್ಯಕರ್ತರ ಅಪ್ರತಿಮ ಶ್ರಮ ಮತ್ತು ಸಾರ್ವಜನಿಕರ ಜಾಗೃತಿಯಿಂದಾಗಿ ಇಂದು ಭಾರತವು ಪೋಲಿಯೋ ಮುಕ್ತ ದೇಶವಾಗಿ ಹೊರಹೊಮ್ಮಿದೆ. ನಾವು ಸದಾ ಜಾಗೃತರಾಗಿರಬೇಕು ಎಂದರು.

ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಅವಿನಾಶ್ ರೈ ವಿ. ಸಭಾಧ್ಯಕ್ಷತೆ ವಹಿಸಿ ಮಾತನಾಡಿ, ಪೋಲಿಯೋ ನಿರ್ಮೂಲನೆಯು ಕೇವಲ ಆರೋಗ್ಯ ಇಲಾಖೆಯ ಕೆಲಸವಲ್ಲ, ಇದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂದು ನುಡಿದರು.

ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ಹಮೀದ್ ಕೆಡೆಂಜಿ, ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ರಜನಿ ಜಿ.ಆರ್., ವಿವಿಧ ವಾರ್ಡ್‌ಗಳ ಸದಸ್ಯರು ಪಾಲ್ಗೊಂಡಿದ್ದರು. ಆರೋಗ್ಯ ಇಲಾಖೆಯ ರಾಜೇಶ್ ಸ್ವಾಗತಿಸಿ, ವಂದಿಸಿದರು. ಅಂಬಿಳಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಕಾಞಂಗಾಡಿನ ಜಿಲ್ಲಾಸ್ಪತ್ರೆಯಲ್ಲಿ ಅಭಿಯಾನ ಉದ್ಘಾಟನೆ

ಕಾಸರಗೋಡು ಜಿಲ್ಲಾ ಮಟ್ಟದ ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮದ ಉದ್ಘಾಟನೆಯು ಜೂ.28ರಂದು ಬೆಳಗ್ಗೆ 8.30ಕ್ಕೆ ಕಾಞಂಗಾಡಿನ ಜಿಲ್ಲಾಸ್ಪತ್ರೆಯಲ್ಲಿ ಜರಗಲಿದೆ. ಕಾಞಂಗಾಡು ಶಾಸಕ ಗೋವಿಂದನ್ ಪಳ್ಳಿಕಾಪಿಲ್ ಉದ್ಘಾಟಿಸುವರು. ಕಾಞಂಗಾಡು ನಗರಸಭೆಯ ಅಧ್ಯಕ್ಷ ವಿ.ವಿ.ರಮೇಶನ್ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಪ್ರಮುಖ ರೋಗನಿರೋಧಕ ಅಭಿಯಾನವನ್ನು ಯಶಸ್ವಿಗೊಳಿಸಲು ಜಿಲ್ಲೆಯ ಎಲ್ಲಾ ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳು ಸಂಪೂರ್ಣ ಸಹಕಾರ ನೀಡಬೇಕೆಂದು ಕಾಸರಗೋಡು ಜಿಲ್ಲಾ ವೈದ್ಯಾಧಿಕಾರಿ ಡಾ.ಬಿ.ಸಂತೋಷ್ ವಿನಂತಿಸಿದ್ದಾರೆ.

ಪೆರ್ಲ ನಾಲಂದ ಕಾಲೇಜಿನಲ್ಲಿ ವ್ಯಕ್ತಿತ್ವ, ಶೈಕ್ಷಣಿಕ ವಿಕಾಸದ ಕುರಿತು ಉಪನ್ಯಾಸ



ಪೆರ್ಲ: ಪೆರ್ಲ ನಾಲಂದ ಕಾಲೇಜಿನಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸ ಮತ್ತು ಶೈಕ್ಷಣಿಕ ಉತ್ಕೃಷ್ಟತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಎಕ್ಸಲೆಂಶಿಯಾ ಕಾರ್ಯಕ್ರಮ ಆಯೋಜಿಸಲಾಯಿತು.

ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನ ಪ್ರಾಂಶುಪಾಲ ಮೊಹಮ್ಮದ್ ಅಲಿ ಪೆರ್ಲ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ, ವೃತ್ತಿ ಅವಕಾಶಗಳು ಹಾಗೂ ಜೀವನದಲ್ಲಿ ಯಶಸ್ಸು ಸಾಧಿಸಲು ಅಗತ್ಯವಾದ ಕೌಶಲ್ಯಗಳ ಕುರಿತು ಪ್ರೇರಣಾದಾಯಕ ಉಪನ್ಯಾಸ ನೀಡಿದರು. ಶೈಕ್ಷಣಿಕ ಸಾಧನೆಯೊಂದಿಗೆ ವ್ಯಕ್ತಿತ್ವ ವಿಕಾಸದ ಮಹತ್ವವನ್ನು ವಿವರಿಸಿದರು. ಕಾಲೇಜು ಪ್ರಾಂಶುಪಾಲ ಡಾ.ಮೋಹನ ಕುಂಟಾರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ಗುರುತಿಸಿ ನಿರಂತರ ಪರಿಶ್ರಮದ ಮೂಲಕ ಸಾಧನೆಯ ಹಾದಿಯಲ್ಲಿ ಮುನ್ನಡೆಯಬೇಕೆಂದು ಸಲಹೆ ನೀಡಿದರು. ಉಪ ಪ್ರಾಂಶುಪಾಲ ಶಂಕರ ಖಂಡಿಗೆ ಶುಭ ಹಾರೈಸಿದರು. ಮಲೆಯಾಳ ವಿಭಾಗದ ಉಪನ್ಯಾಸಕಿ ವಿನೀಶಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ಲಸ್ ಟು, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ಪಂಚಾಯತ್ ವ್ಯಾಪ್ತಿಯ ವಿದ್ಯಾರ್ಥಿಗಳಿಗೆ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು. ಇಂಗ್ಲಿಷ್ ಉಪನ್ಯಾಸಕಿ ಶಿಲ್ಪಾ ಸ್ವಾಗತಿಸಿ, ಉಪನ್ಯಾಸಕಿ ನಿಶ್ಮಿತಾ ವಂದಿಸಿದರು. ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥೆ ಅನುಪಮಾ ನಿರೂಪಿಸಿದರು.

ಮಾದಕ ವ್ಯಸನದ ವಿರುದ್ಧ ಒಟ್ಟಾಗಿ ಹೋರಾಡೋಣ: ಶಾಸಕ ಅಶ್ರಫ್ ಕರೆ



ಮಂಜೇಶ್ವರ: ಉಪ್ಪಳ ಎಜೆಐ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಕೇರಳ ರಾಜ್ಯ ಅಬಕಾರಿ ಇಲಾಖೆ ವಿಮುಕ್ತಿ ಮಿಷನ್ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ ನಡೆಯಿತು.

ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಶನಿವಾರ ಮಂಜೇಶ್ವರ ಶಾಸಕ ಎ.ಕೆ.ಎಂ. ಅಶ್ರಫ್ ಉದ್ಘಾಟಿಸಿ, ಮಾದಕ ಪಿಡುಗು ಸಮಾಜಕ್ಕೆ ಮಾರಕ. ಇದರ ವಿರುದ್ಧ ಒಗ್ಗಟ್ಟಾಗಿ ಹೋರಾಟ ನಡೆಸಬೇಕಿದೆ. ವಿದ್ಯಾರ್ಥಿಗಳು ಹಾಗೂ ಪೋಷಕರು ಈ ಬಗ್ಗೆ ಜಾಗೃತರಾಗಿರಬೇಕು ಎಂದರು.

ವಾರ್ಡ್ ಸದಸ್ಯ ಪಿ.ಎಂ.ಸಲೀಂ ಅಧ್ಯಕ್ಷತೆ ವಹಿಸಿದ್ದರು. ಉಪ್ಪಳ ಪೇಟೆಯಿಂದ ಆರಂಭವಾದ ಮಾರಥಾನ್‌ಗೆ ಕಾಸರಗೋಡು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಚಾಲನೆ ನೀಡಿದರು. ವಿಮುಕ್ತಿ ಜಿಲ್ಲಾ ಸಂಯೋಜಕಿ ಕೆ.ಎಂ.ಸ್ನೇಹಾ ಅವರು ಮಾದಕ ವಸ್ತು ವಿರೋಧಿ ಪ್ರತಿಜ್ಞೆ ಬೋಧಿಸಿದರು. ಸಿವಿಲ್ ಅಬಕಾರಿ ಅಧಿ ಕಾರಿ ಪಿ.ಪ್ರಜಿತ್ ಅವರು ಮಾದಕ ವಸ್ತು ವಿರೋಧಿ ಜಾಗೃತಿ ತರಗತಿ ನಡೆಸಿದರು. ಕಾಸರಗೋಡು ಸರ್ಕಲ್ ಇನ್‌ಸ್ಪೆಕ್ಟರ್ ಸಲೀಂ ಕುಮಾರ್ ದಾಸ್, ಕೆಎಸ್‌ಇಎಸ್‌ಎ ರಾಜ್ಯ ಸಮಿತಿ ಸದಸ್ಯ ಅಬ್ದುಲ್ ಸಲಾಂ, ಎಜೆಐ ಶಾಲೆ ಅಧ್ಯಕ್ಷ ಇಕ್ಬಾಲ್ ಅಬ್ಬಾ ಹಾಜಿ, ಎಜೆಐ ಕಾರ್ಯದರ್ಶಿ ಅಬ್ದುಲ್ಲಾ ಮಲಿಕಾ, ಕೋಶಾಧಿಕಾರಿ ಮುಹಮ್ಮದ್, ಎಜೆಐ ಸಮಿತಿ ಸದಸ್ಯರಾದ ಉಸ್ಮಾನ್ ಹಾಜಿ, ಮೂಸಾ ಮಾಸ್ತರ್ ಮಾತನಾಡಿದರು. ವಿಮುಕ್ತಿ ವ್ಯವಸ್ಥಾಪಕ ಪಿ.ಅನ್ವರ್ ಸಾದತ್ ಸ್ವಾಗತಿಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ವೀಣಾ ಕುಮಾರಿ ವಂದಿಸಿದರು. ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನ ಎನ್‌ಎಸ್ ಎಸ್ ಸ್ವಯಂಸೇವಕರು, ಕುಂಬಳೆ ಐಎಚ್ ಆರ್‌ಡಿ ಕಾಲೇಜು ವಿದ್ಯಾರ್ಥಿಗಳು ಮಾದಕ ದ್ರವ್ಯ ವಿರೋಧಿ ಫ್ಲಾಶ್ ಮಾಬ್ ಅನ್ನು ಆಯೋಜಿಸಿದ್ದರು. ಅಬಕಾರಿ ಇಲಾಖೆ ಅಧಿ ಕಾರಿಗಳು, ವಿದ್ಯಾರ್ಥಿಗಳು, ಪೋಷಕರು, ಸಾರ್ವಜನಿಕರು ಭಾಗವಹಿಸಿದ್ದರು.

ಕಿಂಞಣ್ಣ ರೈ ವಿದ್ಯಾರ್ಥಿಗಳ ಜ್ಞಾನದ ಹಸಿವು ತಣಿಸಿದವರು: ರಾಧಾಕೃಷ್ಣ ಕೆ.



ಕುಂಬಳೆ: ಕಲಾಕುಂಚ ಕೇರಳ ಗಡಿನಾಡ ಘಟಕ, ಧರ್ಮತ್ತಡ್ಕ ಯುವಕ ಸಂಘ ಗ್ರಂಥಾಲಯ ಮತ್ತು ವಾಚನಾಲಯ ಹಾಗೂ ಶಾಲಾ ಎನ್‌ಎಸ್‌ಎಸ್ ಘಟಕಗಳು ಆಯೋಜಿಸಿದ್ದ ಕನ್ನಡ ಕಣ್ಮಣಿ ಕಯ್ಯಾರ ಕಿಂಞಣ್ಣ ರೈ ಎಂಬ ವಿಚಾರ ಸಂಕಿರಣವು ಧರ್ಮತ್ತಡ್ಕದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಿತು.

ಹಿರಿಯ ಲೇಖಕ, ನಿವೃತ್ತ ಪ್ರಾಂಶುಪಾಲ ಪ್ರೊ. ಪಿ.ಎನ್.ಮೂಡಿತ್ತಾಯ ಕಾರ್ಯಕ್ರಮ ಉದ್ಘಾಟಿಸಿದರು. ಚಿಂತಕ ಹಾಗೂ ಕವಿಗಳಾದ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಉಪನ್ಯಾಸ ನೀಡಿ, ಶತಾಯುಷಿ ಕಿಂಞಣ್ಣ ರೈಗಳ ವ್ಯಕ್ತಿತ್ವ ಮತ್ತು ಸಾಧನೆಗಳ ವಿವಿಧ ಮುಖಗಳನ್ನು ಪರಿಚಯಿಸಿದರು. ರೈಗಳು ಅಪ್ಪಟ ದೇಶಾಭಿಮಾನಿ. ಗಾಂಧೀಜಿಯವರ ಭೇಟಿಯಿಂದ ಪ್ರೇರಣೆ ಪಡೆದವರು. ಕವಿಯಾಗಿ ತನ್ನ ಪ್ರದೇಶದ ಪ್ರಕೃತಿ ಸೌಂದರ್ಯವನ್ನು ಕೊಂಡಾಡಿದವರು.

32 ವರ್ಷ ಕಾಲ ಶಿಕ್ಷಕರಾಗಿ ತನ್ನ ಕಂಚಿನ ಕಂಠದಿಂದ ಅಪಾರ ವಿದ್ಯಾರ್ಥಿಗಳ ಜ್ಞಾನದ ಹಸಿವು ತಣಿಸಿದವರು. ಮೊದಲ ಬಾರಿ ಉಪನಿಷತ್ತನ್ನು ಕಾವ್ಯ ರೂಪದಲ್ಲಿ ಕನ್ನಡಕ್ಕೆ ತಂದ ಖ್ಯಾತಿ ಅವರದ್ದು. ರಾಷ್ಟ್ರಧುರೀಣರನ್ನು ವಿಶಿಷ್ಟ ರೀತಿಯಲ್ಲಿ ಪರಿಚಯಿಸಿದವರು. ಪಾಠ ಪುಸ್ತಕಗಳನ್ನು ತಯಾರಿಸಿಕೊಟ್ಟು ಶಿಕ್ಷಣ ರಂಗದಲ್ಲಿ ಪಾಲ್ಗೊಂಡಿದ್ದರು. ಪೈಗಳು ಒಳಗೊಂಡಂತೆ ತನ್ನ ಪ್ರದೇಶದ ಹಿರಿಯ ಸಾಧಕರ ವ್ಯಕ್ತಿ ಚಿತ್ರಗಳನ್ನು ಕಟ್ಟಿ ಕೊಟ್ಟವರು. ಅವರು ಬರೆದ ಆತ್ಮಚರಿತ್ರೆ, ಕಥೆಗಳು, ಮಕ್ಕಳ ಕವಿತೆಗಳು ಹಾಗೂ ಸಣ್ಣಕಥೆಗಳು ಎಲ್ಲಾ ಕನ್ನಡಿಗರಿಗೆ ಸ್ಫೂರ್ತಿ ತುಂಬುವಂತಿದ್ದುವು ಎಂದು ಅವರು ಸಮಗ್ರವಾಗಿ ತಿಳಿಸಿದರು.

ಕಲಾಕುಂಚದ ಸ್ಥಾಪಕಾಧ್ಯಕ್ಷೆ ಜಯಲಕ್ಷ್ಮಿ ಕಾರಂತ ಮಂಗಲ್ಪಾಡಿ ಅಧ್ಯಕ್ಷತೆ ವಹಿಸಿದ್ದರು. ವಿಶ್ರಾಂತ ಪ್ರಾಂಶುಪಾಲ ಎನ್.ರಾಮಚಂದ್ರ ಭಟ್ ಮಾತನಾಡಿದರು. ವಿದ್ಯಾಸಂಸ್ಥೆಯ ಪ್ರಬಂಧಕ ಎನ್.ಶಂಕರನಾರಾಯಣ ಭಟ್ ಹಾಗೂ ಶಾಲಾ ಪ್ರಾಂಶುಪಾಲ ಸತೀಶ್ ಕುಮಾರ್ ಒಡ್ಡಂಬೆಟ್ಟು ಶುಭಕೋರಿ ದರು. ಗ್ರಂಥಾಲಯದ ಅಧ್ಯಕ್ಷ ರಾಮಮೋಹನ ಚೆಕ್ಕೆ ಸ್ವಾಗತಿಸಿ, ವಂದಿಸಿದರು. ಚಿತ್ರಕಲಾ ಮತ್ತು ಆಶಾಲತಾ ಪ್ರಾರ್ಥನೆ ಹಾಡಿದರು. ನಿವೃತ್ತ ಮುಖ್ಯೋಪಾಧ್ಯಾಯ ರಾಜಾರಾಮ ರಾವ್ ಮೀಯಪದವು ಕಾರ್ಯಕ್ರಮ ನಿರೂಪಿಸಿದರು.

ಯುಗಪುರುಷ ನಮೋ ವಿದ್ಯಾಲಯ: ಮಾದಕ ವಸ್ತು ವಿರೋಧಿ ದಿನಾಚರಣೆ



ಕಾಸರಗೋಡು: ಇಲ್ಲಿನ ಅಡ್ಕತ್ತಬೈಲು ಬಳಿಯ ಯುಗಪುರುಷ ನರೇಂದ್ರ ಮೋದಿ ವಿದ್ಯಾಲಯದಲ್ಲಿ ಮಾದಕ ದ್ರವ್ಯ ಮತ್ತು ಮಾದಕ ಪದಾರ್ಥಗಳ ವಿರೋಧಿ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಜನಮೈತ್ರಿ ಬೀಟ್ ಅಧಿ ಕಾರಿ ಮಧು ಕರಕಾಡವತ್ ಭಾಗವಹಿಸಿ, ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಮಾದಕ ದ್ರವ್ಯಗಳ ದುಷ್ಪರಿಣಾಮಗಳ ಬಗ್ಗೆ ವಿವರಿಸಿದರು. ಮಾದಕ ವಸ್ತುಗಳ ಬಳಕೆಯಿಂದ ವ್ಯಕ್ತಿ, ಕುಟುಂಬ ಹಾಗೂ ಸಮಾಜದ ಮೇಲೆ ಉಂಟಾಗುವ ಹಾನಿಗಳ ಬಗ್ಗೆ ನೈಜ ಘಟನೆಗಳ ಮೂಲಕ ಅವರು ಅರಿವು ಮೂಡಿಸಿದರು. ವಿದ್ಯಾರ್ಥಿಗಳು ಮಾದಕ ದ್ರವ್ಯಗಳ ವಿರುದ್ಧ ಜಾಗೃತಿ ಮೂಡಿಸುವ ಉದ್ದೇಶದಿಂದ ನಾಟಕ, ನೃತ್ಯ, ಭಾಷಣ ಹಾಗೂ ಫಲಕ ಪ್ರದರ್ಶನ ನಡೆಸಿದರು. ಈ ಕಾರ್ಯಕ್ರಮಗಳು ಮಾದಕ ದ್ರವ್ಯ ಸೇವನೆಯ ಅಪಾಯಗಳ ಬಗ್ಗೆ ಪರಿಣಾಮಕಾರಿ ಸಂದೇಶವನ್ನು ನೀಡಿದವು. ಶಾಲಾ ಸಂಯೋಜಕಿ ಉಷಾ ನಾಯರ್ ಮತ್ತು ಮುಖ್ಯೋಪಾಧ್ಯಾಯಿನಿ ಶ್ರೀವಲ್ಲಿ ಮುಖ್ಯ ಅತಿಥಿಯನ್ನು ಸನ್ಮಾನಿಸಿದರು. ಬಳಿಕ ಮಾದಕ ದ್ರವ್ಯ ಮುಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸುವ ಪ್ರತಿಜ್ಞೆ ಕೈಗೊಂಡರು.

ಕುಂಟಿಕಾನ ಶಾಲೆ: ವಾಚನಾ ವಾರ ಸಮಾರೋಪ, ಕ್ಲಬ್‌ಗಳ ಉದ್ಘಾಟನೆ



ಬದಿಯಡ್ಕ: ಕುಂಟಿಕಾನ ಅನುದಾನಿತ ಹಿರಿಯ ಬುನಾದಿ ಶಾಲೆಯಲ್ಲಿ ವಾಚನಾ ವಾರದ ಸಮಾರೋಪ ಸಮಾರಂಭ ಮತ್ತು ವಿವಿಧ ಕ್ಲಬ್‌ಗಳ ಉದ್ಘಾಟನೆ ಗುರುವಾರ ಜರಗಿತು.

ಶಾಲಾ ಮುಖ್ಯೋಪಾಧ್ಯಾಯ ಪ್ರಶಾಂತ್ ಕುಮಾರ್ ಕೆ. ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಕುಂಟಿಕಾನ ಶಾಲೆಯ ಹಳೆ ವಿದ್ಯಾರ್ಥಿ, ಪ್ರಸಿದ್ಧ ಜಾದೂಗಾರ ಉಸ್ಮಾನ್ ಪಾಡಲಡ್ಕ ಅವರು ವಾಚನಾವಾರದ ಸಮಾರೋಪ ಸಮಾರಂಭ ಹಾಗೂ ವಿವಿಧ ಕ್ಲಬ್ ಗಳ ಉದ್ಘಾಟನೆ ನೆರವೇರಿಸಿದರು. ಈ ಸಂದರ್ಭ ವಾಚನಾ ವಾರದ ಅಂಗವಾಗಿ ಶಾಲೆಯಲ್ಲಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ನಂತರ ಉಸ್ಮಾನ್ ಪಾಡಲಡ್ಕ ಅವರು ಶಾಲಾ ವೇದಿಕೆಯಲ್ಲಿ ಜಾದೂ ಪ್ರದರ್ಶನವನ್ನು ನಡೆಸಿಕೊಟ್ಟರು. ತನ್ನ ಅದ್ಭುತ ಕೈಚಳಕದ ಮೂಲಕ ಮಕ್ಕಳನ್ನು ರಂಜಿಸಿದರು. ಜಾದೂ ಪ್ರದರ್ಶನ ಮಕ್ಕಳಿಗೆ ಮನಮುಟ್ಟುವಂತೆ ಅದ್ಭುತವಾಗಿ ಹಾಗೂ ಅತ್ಯುತ್ತಮ ರೀತಿಯಲ್ಲಿ ಮೂಡಿ ಬಂದಿತು. ಅಧ್ಯಾಪಕ ಸುದರ್ಶನ ಎ. ಸ್ವಾಗತಿಸಿ, ಶಿವಪ್ರಕಾಶ್ ವಂದಿಸಿದರು. ವಿವಿಧ ಕ್ಲಬ್‌ಗಳ ಕನ್ವೀನರ್, ಹಿರಿಯ ಅಧ್ಯಾಪಿಕೆ ಶಶಿಕಲಾ ಇದ್ದರು. ಅಧ್ಯಾಪಕ ಅನ್ವಿತ್ ಶುಭಹಾರೈಸಿದರು. ಅಧ್ಯಾಪಕ ಅಬ್ದುಲ್ ಸಲಾಂ ನಿರೂಪಿಸಿದರು.



ಕ್ಯಾಂಪ್ಕೊ ಸಾಂತ್ವನ ಯೋಜನೆಯಡಿ ಬಾಯಾರು ಕ್ಯಾಂಪ್ಕೋ ಶಾಖೆಯ ಸದಸ್ಯ ಶಂಕರನಾರಾಯಣ ಭಟ್ ನಿಡುವಜೆ ಬಾಯಾರು ಅವರ ಆಂಜಿಯೋಪ್ಲಾಸ್ಟ್ ಶಸ್ತ್ರಚಿಕಿತ್ಸೆಗೆ 50,000 ರೂ.ನೆರವು ನೀಡಲಾಯಿತು. ಕ್ಯಾಂಪ್ಕೊ ನಿರ್ದೇಶಕ ಸದಾನಂದ ಶೆಟ್ಟಿ ಕೊಮ್ಮುಂಡ, ನಿರ್ದೇಶಕಿ ಸೌಮ್ಯಾ ಪ್ರಕಾಶ್ ಮದಂಗಲ್ಲು, ಬದಿಯಡ್ಕ ವಲಯದ ಪ್ರಬಂಧಕ ಚಂದ್ರ ಎಂ., ಬಾಯಾರು ಶಾಖೆಯ ಪ್ರಬಂಧಕ ರಮೇಶ್ ವೈ., ಸಿಬ್ಬಂದಿಗಳಾದ ಪ್ರವೀಣ್‌ರಾಜ್ ಬಲ್ಲಾಳ್, ಕುಮಾರ್, ಸಜನ್, ವಿಕಾಸ್ ಜೈನ್ ಇದ್ದರು.



ಮಂಜೇಶ್ವರದ ಮೀಂಜ ಗ್ರಾಮ ಪಂಚಾಯತ್‌ನ ನೇತೃತ್ವದಲ್ಲಿ ಮೀಯಪದವು ಸರಕಾರಿ ಹೋಮಿಯೋಪತಿ ಚಿಕಿತ್ಸಾಲಯ ಹಾಗೂ ಸರಕಾರಿ ಆಯುರ್ವೇದ ಚಿಕಿತ್ಸಾಲಯ ಇವುಗಳ ಜಂಟಿ ಆಶ್ರಯದಲ್ಲಿ ಮೀಂಜ ಸಿಡಿಎಸ್ ಸಭಾಂಗಣದಲ್ಲಿ ವಿಶ್ವ ಯೋಗ ದಿನಾಚರಣೆ ನಡೆಯಿತು. ಯೋಗ ತರಬೇತುದಾರೆ ಸಜಿತಾ ವೇಣುಗೋಪಾಲ್ ಅವರು ಯೋಗ ತರಬೇತಿ ನೀಡಿದರು. ಕ್ಲಬ್‌ನ ಹಿರಿಯ ಸದಸ್ಯೆ ವೆಂಕಮ್ಮ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು. ಗ್ರಾ.ಪಂ. ಅಧ್ಯಕ್ಷ ಸಿ.ಎ.ತಾಜುದ್ದೀನ್ ಕಡಂಬಾರು, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಕೆ.ಕೃಷ್ಣ ಡಾ.ರಮ್ಯಾ ಭಾಸ್ಕರ, ಡಾ.ಶಾರಿಕಾ ಎಸ್.ಪಿಳ್ಳೆ ಭಾಗವಹಿಸಿದ್ದರು.

ಮಂಜೇಶ್ವರದ ಉದ್ಯಮಿ, ಚಿತ್ರನಟ, ರಘು ಭಟ್ ಅವರ ಚೊಚ್ಚಲ ನಿರ್ಮಾಣ

ಮಂತ್ರಾಲಯ ರಾಯರ ದರ್ಶನ ಆಲ್ಬಂ ಸಾಂಗ್ ಬಿಡುಗಡೆ

ಮಂಜೇಶ್ವರ: ಅಪರೋಕ್ಷ ಜ್ಞಾನಿಗಳಾದ, ಕಲಿಯುಗದ ಕಾಮಧೇನು, ಮಂತ್ರಾಲಯದ ಶ್ರೀ ಗುರುರಾಘವೇಂದ್ರ ಸ್ವಾಮಿಗಳ ಸನ್ನಿಧಿಯಲ್ಲಿ ಅದ್ದೂರಿ ಸಂಗೀತ ಸಂಜೆ ಕಾರ್ಯಕ್ರಮದೊಂದಿಗೆ ಮಂಜೇಶ್ವರದ ಯುವ ಉದ್ಯಮಿ, ಚಿತ್ರನಟ, ರಾಯರ ಪರಮ ಭಕ್ತ ರಘು ಭಟ್ ಮಂಜೇಶ್ವರ ಅವರ ಚೊಚ್ಚಲ ನಿರ್ಮಾಣದ ರಾಯರ ದರ್ಶನ ಆಲ್ಬಂ ಸಾಂಗ್ ಬಿಡುಗಡೆ ಸಮಾರಂಭವು ಜರಗಿತು.



ಮಂತ್ರಾಲಯ ರಾಯರ ಮಠದ ಆವರಣದಲ್ಲಿ ಆಯೋಜಿಸಲಾಗಿದ್ದ ವಿಜೃಂಭಣೆಯ ಸಂಗೀತ ಸಂಜೆ ಕಾರ್ಯಕ್ರಮದ ವೇಳೆ ರಾಯರ ಮಠ ಹಾಗೂ ಗುರು ರಾಯರು ಮತ್ತು ಪ್ರಸ್ತುತ ಪೀಠಾಧಿಪತಿಗಳ ಕುರಿತಾದ ಸಂಪೂರ್ಣ ರಾಯರ ಮಠದಲ್ಲಿ ಚಿತ್ರೀಕರಣಗೊಂಡ ರಾಯರ ದರ್ಶನ ಆಲ್ಬಂ ಸಾಂಗ್ ಬಿಡುಗಡೆಗೊಂಡಿತು. ಸಂಗೀತ ನಿರ್ದೇಶಕರಾದ ಅಜನೀಶ್ ಬಿ. ಲೋಕನಾಥ್, ಸಿ.ಆರ್.ಬಾಬಿ ಹಾಗೂ ಎಬಿಬಿಎಸ್ ಸ್ಟುಡಿಯೋ ನೇತೃತ್ವದಲ್ಲಿ ಲಕ್ಷ್ಮೀ ಗಣೇಶ ಪ್ರೊಡಕ್ಷನ್‌ನಿಂದ ತಯಾರಾದ ಆಲ್ಬಂ ಸಾಂಗ್ ಇದಾಗಿದ್ದು ರಾಯರ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿಯವರು ಬಟನ್ ಒತ್ತುವ ಮೂಲಕ ಆಲ್ಬಂ ಸಾಂಗ್‌ನ್ನು ಪ್ರಥಮ ಬಾರಿಯಾಗಿ ವೇದಿಕೆಯಲ್ಲಿರುವ ಬೃಹತ್ ಎಲ್‌ಇಡಿ ಪರದೆ ಮೇಲೆ ಲೋಕಾರ್ಪಣೆಗೊಳಿಸಿ ಅನುಗ್ರಹಿಸಿದರು.

ಸಮಾರಂಭದಲ್ಲಿ ಕಾರ್ಯಕ್ರಮದ ಆಯೋಜಕರಾದ ರಘು ಭಟ್ ಮಂಜೇಶ್ವರ, ಪತ್ನಿ ಸುಗುಣ ರಘು ಭಟ್ ಮಂಜೇಶ್ವರ, ಕನ್ನಡ ಚಿತ್ರರಂಗದ ಹಿರಿಯ ನಟರಾದ ಶ್ರೀನಾಥ್, ತಾರಾ, ಗಿರಿಜಾ ಲೋಕೇಶ್, ಮುಖ್ಯಮಂತ್ರಿ ಚಂದ್ರು, ಸುಧಾರಾಣಿ, ನೆನಪಿರಲಿ ಪ್ರೇಮ್ ಸೇರಿದಂತೆ ಹಲವಾರು ಹಿರಿತೆರೆ, ಕಿರುತೆರೆ ಕಲಾವಿದರು ಭಾಗವಹಿಸಿದ್ದರು. ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಮಂಜೇಶ್ವರದ ಅಂತಾರಾಷ್ಟ್ರೀಯ ಸ್ಯಾಕ್ಸೋಫೋನ್ ವಾದಕ ಜಯರಾಮ ಮಂಜೇಶ್ವರ ಅವರ ಸ್ಯಾಕ್ಸೋಫೋನ್ ವಾದನ, ಕರಾವಳಿಯ ಹುಲಿ ವೇಷ ಪ್ರದರ್ಶನ ಸೇರಿದಂತೆ ವಿವಿಧ ಕಲಾ ಪ್ರಕಾರಗಳು ಸಹಿತ ಹಲವಾರು ಕಲಾವಿದರು ಹಾಡು, ನೃತ್ಯಗಳ ಮೂಲಕ ಆತ್ಯಾಕರ್ಷಕವಾಗಿ ಕಲಾ ಪ್ರದರ್ಶನ ನೀಡಿದರು.

ಮೃತದೇಹಕ್ಕೆ ಅಂತಿಮ ಸಂಸ್ಕಾರದ ಘಟನೆ | ಅಶ್ವಿನಿ ಆರೋಪ

ರಾಜಕೀಯ ಲಾಭಕ್ಕೆ ಮುಸ್ಲಿಂಲೀಗ್ ಯತ್ನ

ಮಂಜೇಶ್ವರ: ಗಂಭೀರ ಅನಾರೋಗ್ಯ ಬಾಧಿಸಿ ಕಲ್ಲಿಕೋಟೆ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ನಿಧನ ಹೊಂದಿದ ಮೀಂಜ ಗ್ರಾಮ ಪಂಚಾಯತ್‌ನ ಚಿಗುರುಪಾದೆ ನಿವಾಸಿ ನಾರಾಯಣ (64) ಎಂಬವರ ಮೃತದೇಹವನ್ನು ಇಟ್ಟುಕೊಂಡು ರಾಜಕೀಯ ಲಾಭ ಪಡೆಯಲು ಮುಸ್ಲಿಂಲೀಗ್ ಪಕ್ಷ ಮತ್ತು ಮುಸ್ಲಿಂಲೀಗ್‌ನ ಜನಪ್ರತಿನಿಧಿಗಳು ನಡೆಸುತ್ತಿರುವ ಪ್ರಯತ್ನ ಅತ್ಯಂತ ಖಂಡನೀಯ ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಹೇಳಿದ್ದಾರೆ.



ಕುಟುಂಬದವರಿಂದಲೇ ಹಸ್ತಾಂತರ

ಆರ್ಥಿಕವಾಗಿ ತೀರಾ ಹಿಂದುಳಿದಿರುವ ಆ ಕುಟುಂಬಕ್ಕೆ ಅಂತ್ಯಸಂಸ್ಕಾರದ ವೆಚ್ಚವನ್ನು ಭರಿಸಲು ಸಾಧ್ಯವಿರಲಿಲ್ಲ, ಹಾಗಾಗಿಯೇ ಕುಟುಂಬದ ಸದಸ್ಯರು ಅಂತ್ಯಸಂಸ್ಕಾರದ ಜವಾಬ್ದಾರಿಯನ್ನು ಜನಪ್ರತಿನಿಧಿಗಳಿಗೆ ಒಪ್ಪಿಸಿದ್ದರು. ಅವರ ಭೌತಿಕ ಶರೀರದ ಅಂತ್ಯಸಂಸ್ಕಾರದ ವೆಚ್ಚವನ್ನು ಭರಿಸಿ ವಿಧಿ ವಿಧಾನಗಳ ನೇತೃತ್ವ ವಹಿಸಿದ್ದು ಸೇವಾ ಭಾರತಿ ಸಂಸ್ಥೆಯಾಗಿದೆ. ಸತ್ಯ ಹೀಗಿರುವಾಗ ಅಂತ್ಯಸಂಸ್ಕಾರದ ಚಿತ್ರಗಳನ್ನು ತೆಗೆದುಕೊಂಡು ಇದರ ಸಂಪೂರ್ಣ ಜವಾಬ್ದಾರಿಯನ್ನು ನಾವೇ ವಹಿಸಿಕೊಂಡಿದ್ದೇವೆ ಎಂಬಂತೆ ಮುಸ್ಲಿಂಲೀಗ್ ನಾಯಕರು ಮತ್ತು ಜನಪ್ರತಿನಿಧಿಗಳು ನೀಡಿರುವ ಹೇಳಿಕೆಗಳು ಹಾಗೂ ಪ್ರಕಟಣೆಗಳು ಸತ್ಯಕ್ಕೆ ದೂರವಾಗಿವೆ ಎಂದು ಎಂ.ಎಲ್.ಅಶ್ವಿನಿ ತಿಳಿಸಿದ್ದಾರೆ.

ಹಿಂದು ಸಮಾಜವನ್ನು ಒಡೆಯಲು ಪಿತೂರಿ

ಅನಾಥವಾದ ಅಥವಾ ಉಪೇಕ್ಷಿಸಲ್ಪಟ್ಟ ಮೃತದೇಹಗಳ ಅಂತ್ಯಸಂಸ್ಕಾರ ನಡೆಸುವುದು ಜನಪ್ರತಿನಿಧಿಗಳ ಜವಾಬ್ದಾರಿಯಾಗಿದೆ. ಪರಿಸ್ಥಿತಿ ಹೀಗಿರುವಾಗ ತಪ್ಪು ಮಾಹಿತಿಯನ್ನು ಹರಡಿ ಹಿಂದು ಸಮಾಜವನ್ನು ಒಡೆಯಲು ಮತ್ತು ಬಡ ಕುಟುಂಬದ ದಯನೀಯ ಸ್ಥಿತಿಯನ್ನು ದುರುಪಯೋಗಪಡಿಸಿ ರಾಜಕೀಯ ಲಾಭಕ್ಕಾಗಿ ಮುಸ್ಲಿಂಲೀಗ್ ಮುಖಂಡರು ಹಾಗೂ ಜಿಲ್ಲಾ ಪಂಚಾಯತ್, ಗ್ರಾ.ಪಂ. ಸಹಿತ ಕೆಲವು ಸ್ಥಳೀಯಾಡಳಿತ ಸಂಸ್ಥೆಗಳ ಜನಪ್ರತಿನಿಧಿಗಳು ಯತ್ನಿಸುತ್ತಿರುವುದು ಅತ್ಯಂತ ದುರದೃಷ್ಟಕರ ಎಂಬುದಾಗಿ ಅವರು ಉಲ್ಲೇಖಿಸಿದ್ದಾರೆ.

ನಮ್ಮ ಉಡುಪಿ

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಭಾನುವಾರ 28, ಜೂನ್ 2026

ಪರ್ಕಳ ರಾಷ್ಟ್ರೀಯ ಹೆದ್ದಾರಿಯ ಮುಗಿಯದ ಸಂಕಷ್ಟ | ರೆಡಿಮಿಕ್ಸ್ ಹಾವಳಿಯಿಂದ ಸಮಸ್ಯೆ

ಇಲ್ಲಿ ವಾಹನ ಸವಾರರ ಗೋಳು ಕೇಳುವವರೇ ಇಲ್ಲ!

ಉಡುಪಿ: ಉಡುಪಿ–ತೀರ್ಥಹಳ್ಳಿ ರಾಷ್ಟ್ರೀಯ ಹೆದ್ದಾರಿ 169 (ಎ) ವ್ಯಾಪ್ತಿಯ ಪರ್ಕಳದ ಜನರ ಮತ್ತು ವಾಹನ ಸವಾರರ ಗೋಳು ಕೇಳುವವರೇ ಇಲ್ಲದಂತಾಗಿದೆ. ಶನಿವಾರ ಕೆಳಪರ್ಕಳದ ಕೆನರಾ ಬ್ಯಾಂಕ್ ಸಮೀಪ ಅಪಾಯಕಾರಿ ತಿರುವಿನಲ್ಲಿ ಲಾರಿಯೊಂದು ನಿಯಂತ್ರಣ ತಪ್ಪಿ ಪಲ್ಟಿಯಾದ ಘಟನೆ ನಡೆದಿದ್ದು ಹೆದ್ದಾರಿಯ ದುಃಸ್ಥಿತಿಯನ್ನು ಮತ್ತೊಮ್ಮೆ ಅನಾವರಣಗೊಳಿಸಿದೆ. ಆತ್ರಾಡಿಯಿಂದ ಪೇಪರ್ ಬಾಕ್ಸ್‌ಗಳನ್ನು ತುಂಬಿಕೊಂಡು ಹುಬ್ಬಳ್ಳಿ ಕಡೆಗೆ ತೆರಳುತ್ತಿದ್ದ ಲಾರಿ ಇದಾಗಿದ್ದು, ಅಪಘಾತದ ರಭಸಕ್ಕೆ ವಾಹನ ಸಂಪೂರ್ಣ ಜಖಂಗೊಂಡು ಡೀಸೆಲ್ ರಸ್ತೆಯುದ್ದಕ್ಕೂ ಸೋರಿಕೆಯಾಗಿದೆ. ಅದೃಷ್ಟವಶಾತ್ ಚಾಲಕ ಅಪಾಯದಿಂದ ಪಾರಾಗಿದ್ದಾರೆ.

ರೆಡಿ ಮಿಕ್ಸ್ ಹಾವಳಿಯಿಂದ ಜಾರುತ್ತಿರುವ ರಸ್ತೆ

ಮಣಿಪಾಲ ಮತ್ತು ಪರ್ಕಳ ಭಾಗದಲ್ಲಿ ಸಂಚರಿಸುವ ಹೆವಿ ರೆಡಿಮಿಕ್ಸ್ (ಸಿಮೆಂಟ್–ಜಲ್ಲಿ ಮಿಶ್ರಣ) ವಾಹನಗಳಿಂದ ರಸ್ತೆಯುದ್ದಕ್ಕೂ ಜಲ್ಲಿ ಮತ್ತು ಸಿಮೆಂಟ್ ಮಿಶ್ರಣ ಚೆಲ್ಲಲ್ಪಡುತ್ತಿರುವುದು ಈ ಅಪಘಾತಕ್ಕೆ ಪ್ರಮುಖ ಕಾರಣ ಎಂದು ಸ್ಥಳೀಯರು ತೀವ್ರವಾಗಿ ಆಕ್ಷೇಪಿಸಿದ್ದಾರೆ. ರಸ್ತೆ ತಿರುವಿನಲ್ಲಿ ಹರಡಿಕೊಂಡಿರುವ ಈ ಜಲ್ಲಿಯಿಂದ ರಸ್ತೆ ಸಂಪೂರ್ಣ ಜಾರುತ್ತಿದ್ದು ಬ್ರೇಕ್ ಹಾಕಿದರೂ ವಾಹನಗಳು ಹತೋಟಿ ತಪ್ಪುತ್ತಿವೆ. ಈ ಭಾಗದಲ್ಲಿ ಹಲವು ದ್ವಿಚಕ್ರ ವಾಹನ ಸವಾರರು ಸ್ಕಿಡ್ ಆಗಿ ಬಿದ್ದು ಗಾಯ ಮಾಡಿಕೊಂಡಿದ್ದಾರೆ.

ರಸ್ತೆಯಲ್ಲೇ ಬಾಕಿಯಾಗುವ ಲಾರಿಗಳು

ಇದೇ ಕೆಳಪರ್ಕಳದ ತಿರುವಿನ ಏರು ದಿಣ್ಣೆಯಲ್ಲಿ ಕಳೆದ 4 ದಿನಗಳಿಂದ ಭಾರ ಹೊತ್ತ ಲಾರಿಯೊಂದು ಕೆಟ್ಟು ನಿಂತಿದ್ದು ಟಿಕಾಣಿ ಹೂಡಿದೆ. ಭಾರೀ ವಾಹನಗಳು ಈ ಏರುದಿಣ್ಣೆ ಏರಲಾಗದೆ ಕೆಟ್ಟು ನಿಲ್ಲುತ್ತಿರುವುದರಿಂದ ಇಡೀ ರಸ್ತೆಯಲ್ಲಿ ಕಿಲೋ ಮೀಟರ್‌ಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಇಂತಹ ದೊಡ್ಡ ವಾಹನಗಳು ಕೆಟ್ಟು ನಿಂತಾಗ ಅಥವಾ ಅಪಘಾತಕ್ಕೀಡಾದಾಗ ತಕ್ಷಣವೇ ಅವುಗಳನ್ನು ಪಕ್ಕಕ್ಕೆ ಸರಿಸಿ ರಸ್ತೆ ಸಂಚಾರ ಸುಗಮಗೊಳಿಸಲು ಜಿಲ್ಲಾಡಳಿತದ ಬಳಿ ಸೂಕ್ತ, ತುರ್ತು ಕ್ರೇನ್ ವ್ಯವಸ್ಥೆ ಇಲ್ಲದಿರುವುದು ಸಂಚಾರ ದಟ್ಟಣೆಯು ಮತ್ತಷ್ಟು ಉಲ್ಬಣಗೊಳ್ಳಲು ಕಾರಣವಾಗಿದೆ.



- ಕೆಳಪರ್ಕಳದ ಕೆನರಾ ಬ್ಯಾಂಕ್ ಸಮೀಪ ಅಪಾಯಕಾರಿ ತಿರುವಿನಲ್ಲಿ ಹೆಚ್ಚಿದ ಸಮಸ್ಯೆ
- ಹೆವಿ ರೆಡಿ ಮಿಕ್ಸ್ ವಾಹನಗಳಿಂದ ಸಂಕಷ್ಟ
- ರಸ್ತೆ ಜಾರುತ್ತಿದ್ದು ಬ್ರೇಕ್ ಹಾಕಿದರೂ ಹತೋಟಿಗೆ ಬಾರದೆ ಪಲ್ಟಿಯಾಗುತ್ತಿವೆ ವಾಹನಗಳು

ಕೋರ್ಟ್‌ನಲ್ಲಿದೆ ಹೊಸ ರಸ್ತೆ: ಹಳೆ ರಸ್ತೆ ಅಗಲೀಕರಣಕ್ಕೇನು ಅಡ್ಡಿ?

ಪರ್ಕಳದ ಈ ಹೆದ್ದಾರಿ ಕಾಮಗಾರಿ ನ್ಯಾಯಾಲಯದ ವಿವಾದದಲ್ಲಿದೆ ಎನ್ನುವುದು ನಿಜ. ಆದರೆ ಕೋರ್ಟ್ ಮೆಟ್ಟಿಲೇರಿರುವುದು ಕೇವಲ ಹೊಸ ರಸ್ತೆಯ ನಿರ್ಮಾಣ ಕಾರ್ಯ ಮಾತ್ರ. ಈಗ ಚಾಲ್ತಿಯಲ್ಲಿರುವ ಹಳೆಯ ರಸ್ತೆಯನ್ನು ಈಗಾಗಲೇ ಅಗಲಗೊಳಿಸಲಾಗಿದ್ದು, ಅದರ ದುರಸ್ತಿ ಹಾಗೂ ವ್ಯವಸ್ಥಿತ ಡಾಂಬರೀಕರಣಕ್ಕೆ ಯಾವುದೇ ರೀತಿಯ ಕಾನೂನು ತೊಡಕುಗಳಿಲ್ಲ. ಈ ಹೆದ್ದಾರಿಯು ಈಗಾಗಲೇ ಮೂರ್ನಾಲ್ಕು ಜಿಲ್ಲಾಧಿಕಾರಿಗಳನ್ನು, ಕೆಲವು ಸಂಸದರನ್ನು, ಮೂರು ಶಾಸಕರ ಅವಧಿಯನ್ನು ಕಂಡಿದ್ದರೂ ಇಂದಿಗೂ ನನೆಗುದಿಗೆ ಬಿದ್ದಿದೆ.

ತುರ್ತು ಕ್ರಮಕ್ಕೆ ಸಾರ್ವಜನಿಕರ ಆಗ್ರಹ

ಮಣಿಪಾಲ ಕೆಎಂಸಿ ಆಸ್ಪತ್ರೆಗೆ ನಿತ್ಯ ನೂರಾರು ಆ್ಯಂಬುಲೆನ್ಸ್‌ಗಳು ಇದೇ ರಸ್ತೆಯ ಮೂಲಕ ಹಾದುಹೋಗುತ್ತವೆ. ರಸ್ತೆಯ ಹದಗೆಟ್ಟ ಸ್ಥಿತಿಯಿಂದ ತುರ್ತು ರೋಗಿಗಳ ಪ್ರಾಣಕ್ಕೂ ಅಪಾಯ ಎದುರಾಗಿದೆ. ನೂತನ ಸಂಸದರು, ಶಾಸಕರು ಹಾಗೂ ಜಿಲ್ಲಾಡಳಿತ ಇನ್ನಾದರೂ ಎಚ್ಚೆತ್ತುಕೊಂಡು ರಸ್ತೆಯ ಸಮಗ್ರ ದುರಸ್ತಿ ಕಾಮಗಾರಿಯನ್ನು ಶೀಘ್ರ ಆರಂಭಿಸಬೇಕು ಹಾಗೂ ಸುಗಮ, ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಸುತ್ತ ಮುತ್ತ

ಜೂ.30: ಭಜನಾ ಹೆಜ್ಜೆ

ಕುಂದಾಪುರ: ಶ್ರೀರಾಮ ಮಂದಿರ ಬೀಜಾಡಿ–ಗೋಪಾಡಿ, ಕೋಟೇಶ್ವರ ಮತ್ತು ಶ್ರೀ ಭಗವತ್ ಭಜನಾ ಮಂದಿರ ಕೋಟತಟ್ಟು ಪಡುಕೆರೆ ಇಲ್ಲಿನ ಭಜಕರಿಂದ ಮೊದಲ ಬಾರಿಗೆ ಅಯೋಧ್ಯೆಯ ಶ್ರೀ ರಾಮ ಮಂದಿರದಲ್ಲಿ ಕುಣಿತ ಭಜನೆ 'ಭಜನಾ ಹೆಜ್ಜೆ' ಜೂ.30 ರಂದು ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬೀಳ್ಕೊಡುಗೆ ಸಮಾರಂಭ

ಕುಂದಾಪುರ: ಜಿ.ಎಸ್.ವಿ.ಎಸ್ ಅಸೋಸಿಯೇಷನ್ ಗಂಗೊಳ್ಳಿ ಮತ್ತು ಗಂಗೊಳ್ಳಿಯ ಸರಸ್ವತಿ ವಿದ್ಯಾಲಯ ಸಮೂಹ ಸಂಸ್ಥೆಗಳ ವತಿಯಿಂದ ಸರಸ್ವತಿ ವಿದ್ಯಾಲಯ ವಿದ್ಯಾಸಂಸ್ಥೆಯಲ್ಲಿ ಸುದೀರ್ಘಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಉಪನ್ಯಾಸಕ ಮತ್ತು ಸಿಬ್ಬಂದಿ ವರ್ಗದವರಿಗೆ ಬೀಳ್ಕೊಡುಗೆ ಸಮಾರಂಭ ಗಂಗೊಳ್ಳಿಯ ಗುಜ್ಜಾಡಿ ಗೋಪಾಲ ನಾಯಕ್ ರೋಟರಿ ಒಳ ಸಭಾಂಗಣದಲ್ಲಿ ನಡೆಯಿತು.

ಸರಸ್ವತಿ ವಿದ್ಯಾಲಯ ಪದವಿ ಪೂರ್ವ ಕಾಲೇಜಿನಲ್ಲಿ ಹಿಂದಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ನಾರಾಯಣ ಈ ನಾಯ್ಕ್, ವಾಣಿಜ್ಯಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಎಂ. ರಾಘವೇಂದ್ರ ಭಟ್, ಸರಸ್ವತಿ ವಿದ್ಯಾಲಯ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ಸಮಾಜ ವಿಜ್ಞಾನ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಶ್ರೀಲತಾ, ಭೌತಶಾಸ್ತ್ರ ಪ್ರಯೋಗಾಲಯದ ಸಹಾಯಕರಾಗಿ ಸೇವೆ ಸಲ್ಲಿಸಿದ ವಿಜಯ್ ಕುಮಾರ್, ಹೈಸ್ಕೂಲ್ ವಿಭಾಗದ ಕಚೇರಿ ಸಹಾಯಕರಾಗಿ ಕಾರ್ಯನಿರ್ವಹಿಸಿದ ಯಮುನಾ ಭಾಸ್ಕರ್ ಮತ್ತು ಅಟೆಂಡರ್ ಆಗಿ ಕಾರ್ಯನಿರ್ವಹಿಸಿದ ಜೀವನ್ ನಾಯಕ್ ಅವರನ್ನು ಅಭಿನಂದಿಸಿ ಬೀಳ್ಕೊಡಲಾಯಿತು.

ಜಿ.ಎಸ್.ವಿ.ಎಸ್ ಅಸೋಸಿಯೇಷನ್ ಅಧ್ಯಕ್ಷ ಡಾ.ಕಾಶೀನಾಥ ಪೈ ಅಧ್ಯಕ್ಷತೆ ವಹಿಸಿದ್ದರು.

ಜು.3: ನಿಧಿಕುಂಭ ಸ್ಥಾಪನೆ, ಮುಷ್ಟಿಕಾಣಿಕೆ ಸಮರ್ಪಣೆ

ಕುಂದಾಪುರ: ಶಿರೂರು ಕೋಟೆಮನೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಜು.3ರಂದು ಮಧ್ಯಾಹ್ನ 12.05ಕ್ಕೆ ನಿಧಿಕುಂಭ ಸ್ಥಾಪನೆ ಹಾಗೂ ಮುಷ್ಟಿಕಾಣಿಕೆ ಸಮರ್ಪಣೆ ನಡೆಯಲಿದೆ. ಬೆಳಿಗ್ಗೆ ಅರ್ಚಕರ ಸಮ್ಮುಖದಲ್ಲಿ ವಿವಿಧ ಪೂಜಾ ವಿಧಿ ವಿಧಾನಗಳು ನಡೆಯಲಿದೆ ಎಂದು ದೇವಸ್ಥಾನದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೊದಲನೇ ಪುಟದಿಂದ

ಬೆಳೆಗಾರರಿಗೆ ಸಂತಸ

ಜಿಲ್ಲೆಯಲ್ಲಿ ಬೇಸಿಗೆ ಕೊಯ್ಲಿನ ಬಳಿಕ ತೆಂಗಿನಕಾಯಿ ಉತ್ಪಾದನೆ ಹಾಗೂ ಹೊರರಾಜ್ಯಗಳಿಂದ ಸರಬರಾಜು ಗಣನೀಯವಾಗಿ ಕಡಿಮೆಯಾಗಿದೆ. ಕಾಸರಗೋಡಿಗೆ ತಮಿಳುನಾಡಿನ ಅವಿನಾಶಿ ಮತ್ತು ಪೊಳ್ಳಾಚ್ಚಿ ಪ್ರದೇಶಗಳಿಂದ ಪೂರೈಕೆಯಾಗುತ್ತಿರುವ ಪ್ರಮಾಣ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಬೆಲೆ ಏರಿಕೆಗೆ ಪುಷ್ಟಿ ಲಭಿಸಿದೆ.

ಯೋಜನೆ

ಸದ್ಯ ಕುಳಾಯಿ ಜೆಟ್ಟಿಗೆ ಸಂಪರ್ಕ ಕಲ್ಪಿಸುವ ರಸ್ತೆ ಅತೀ ಕಿರಿದಾಗಿದ್ದು, ರಾಷ್ಟ್ರೀಯ ಹೆದ್ದಾರಿಗೆ ನೇರ ಸಂಪರ್ಕ ಕಲ್ಪಿಸುವ ದ್ವಿಪಥ ರಸ್ತೆಯಾಗಿ ಮೇಲ್ದರ್ಜೆಗೇರಬೇಕಿದೆ. ಭವಿಷ್ಯದಲ್ಲಿ ನೂರಾರು ಮೀನು ಸಾಗಣೆ ಇನ್ಸುಲೇಟೆಡ್ ವಾಹನಗಳು, ಲಾರಿಗಳು, ಸಾವಿರಾರು ಕಾರ್ಮಿಕರು ಹಾಗೂ ಸ್ಥಳೀಯ ನಿವಾಸಿಗಳು ಪ್ರತಿದಿನ ಈ ಮಾರ್ಗವನ್ನೇ ಅವಲಂಬಿಸಬೇಕಾಗುತ್ತದೆ. ಈ ಭಾಗದಲ್ಲಿ ಜನವಸತಿ ದಟ್ಟವಾಗಿದ್ದು, ಶಾಲಾ ವಾಹನಗಳು ಸೇರಿದಂತೆ ಸಾರ್ವಜನಿಕರ ದೈನಂದಿನ ಸಂಚಾರಕ್ಕೂ ಇದೇ ರಸ್ತೆ ಆಧಾರವಾಗಿದೆ. ಹೀಗಾಗಿ ಬಂದರು ಚಟುವಟಿಕೆಯಿಂದ ಶಾಲಾ ಮಕ್ಕಳು ಮತ್ತು ನಾಗರಿಕರಿಗೆ ತೊಂದರೆಯಾಗದಂತೆ ಸುರಕ್ಷಿತ ಹಾಗೂ ಸುಸಜ್ಜಿತ ರಸ್ತೆ ನಿರ್ಮಾಣ ಅನಿವಾರ್ಯವಾಗಿದೆ ಎಂಬುದು ಸ್ಥಳೀಯರ ಆಗ್ರಹವಾಗಿದೆ.

ತಂಗುದಾಣ

ಬಿ.ಸಿ.ರೋಡಿನಲ್ಲಿರುವ ಚತುಷ್ಪಥ ಮೇಲ್ಸೇತುವೆಯಲ್ಲಿ ಏಕಮುಖ ವಾಹನ ಸಂಚಾರಕ್ಕೆ ಅವಕಾಶವಿರುವುದರಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ವಾಹನಗಳು ಇದೇ ರಸ್ತೆಯಲ್ಲಿ ಬರುತ್ತವೆ. ಇಲ್ಲಿ ಹೆದ್ದಾರಿಯಲ್ಲಿಯೇ ಬಸ್ಸು ನಿಲ್ದಾಣವಿರುವುದರಿಂದ ಇತರ ವಾಹನಗಳ ಸುಗಮ ಸಂಚಾರಕ್ಕೂ ಅಡ್ಡಿಯಾಗುತ್ತಿದೆ. ಪ್ರತಿನಿತ್ಯ ಇಲ್ಲಿ ಟ್ರಾಫಿಕ್ ಜಾಮ್ ತಪ್ಪಿದ್ದಲ್ಲ.

ಬಿ.ಸಿ.ರೋಡಿನಲ್ಲಿ ದೂರದ ಊರುಗಳಿಗೆ ಹೋಗುವ ಪ್ರಯಾಣಿಕರಿಗೆ ನಿಲ್ಲಲು ಲಯನ್ಸ್ ಕ್ಲಬ್ ನಿರ್ಮಿಸಿದ ಸಣ್ಣ ತಂಗುದಾಣವಿದೆ. ಈ ತಂಗುದಾಣದಲ್ಲಿ ಹೆಚ್ಚೆಂದರೆ ಆರೇಳು ಮಂದಿ ಕುಳಿತುಕೊಳ್ಳಬಹುದು. ಅದು ಕೂಡ ಸರಂಜಾಮು ಇದ್ದರೆ ಮೂರ್ನಾಲ್ಕು ಮಂದಿಯಷ್ಟೆ ಕುಳಿತುಕೊಳ್ಳಲು ಸಾಧ್ಯ. ಉಳಿದ ಪ್ರಯಾಣಿಕರಿಗೆ ಮಳೆ, ಬಿಸಿಲಿಗೆ ಪಕ್ಕದ ವಾಣಿಜ್ಯ ಸಂಕೀರ್ಣದಲ್ಲಿರುವ ಅಂಗಡಿಗಳೇ ಆಶ್ರಯ.

ಅಪಾಯಕಾರಿ ಫುಟ್‌ಪಾತ್

ರಸ್ತೆ ಪಕ್ಕ ಇರುವ ಫುಟ್‌ಪಾತ್ ಸದ್ಯಕ್ಕೆ ಇಲ್ಲಿ ಪ್ರಯಾಣಿಕರ ಆಶ್ರಯಕ್ಕೆ ಇರುವ ಸ್ಥಳ, ಫುಟ್‌ಪಾತ್‌ನ ಒಂದು ಭಾಗಕ್ಕೆ ಕಬ್ಬಿಣದ ಗಾರ್ಡ್ ಅಳವಡಿಸದೆ ಇರುವುದು ಅಪಾಯಕ್ಕೆ ಕಾರಣವಾಗಿದೆ. ಇತ್ತೀಚೆಗೆ ಮಗು ಫುಟ್‌ಪಾತ್‌ನಿಂದ ಕೆಳಗೆ ಬಿದ್ದು ತಲೆಗೆ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿತ್ತು.

ಹಳೆಯ ಬಸ್ ನಿಲ್ದಾಣವೇ ಒಳ್ಳೆಯದಿತ್ತು :

ಬಿ.ಸಿ.ರೋಡಿನಲ್ಲಿ ಹಿಂದೆ ಹಳೆಯ ಬಸ್ಸು ನಿಲ್ದಾಣದಲ್ಲಿ ಬಸ್‌ಗಳ ನಿಲುಗಡೆಗೆ ಇದ್ದ ವ್ಯವಸ್ಥೆ ಉತ್ತಮವಾಗಿತ್ತು. ನಿಲ್ದಾಣದ ಮಧ್ಯದಲ್ಲಿ ಹೆಂಚಿನ ಛಾವಣಿಯ ಪ್ರಯಾಣಿಕರ ತಂಗುದಾಣ, ಹಿಂಭಾಗದಲ್ಲಿ ಗ್ರಾಮೀಣ ಭಾಗಗಳಿಗೆ ಹೋಗುವ ಸರ್ವೀಸ್ ಬಸ್‌ಗಳಿಗೆ ಹಾಗೂ ಮುಂಭಾಗದಲ್ಲಿ ಕೆಎಸ್ಸಾರ್ಟಿಸಿ ಬಸ್‌ಗಳ ನಿಲುಗಡೆಗೆ ಅವಕಾಶವಿತ್ತು. ಬಳಿಕ ಪುರಸಭೆ ಆದಾಯದ ಉದ್ದೇಶದಿಂದ ಹಳೇ ನಿಲ್ದಾಣ ಕೆಡವಿ ವಾಣಿಜ್ಯ ಸಂಕೀರ್ಣದೊಂದಿಗೆ ಬಸ್ ನಿಲ್ದಾಣ ನಿರ್ಮಿಸಿದ ಬಳಿಕ ಅವ್ಯವಸ್ಥೆ ಆರಂಭಗೊಂಡಿದೆ.

ಬೈಂದೂರು: ಶ್ರೀ ರಾಮಕ್ಷತ್ರಿಯ ಸಮಾಜದ 'ಶ್ರೀ ಸೀತಾರಾಮಚಂದ್ರ ಕಲ್ಯಾಣೋತ್ಸವ'



ಬೈಂದೂರು: ಧರ್ಮದ ಕೇಂದ್ರವಾದ ಕುಟುಂಬ ನಿಜವಾದ ವ್ಯವಸ್ಥೆ ಮಹಾದ್ವಾರ. ಗ್ರಹಸ್ಥ ಜೀವನದಲ್ಲಿ ಧರ್ಮದ ಮೂಲಕ ಸಾಗಿದಾಗ ಸುಖ, ಶಾಂತಿ ಹಾಗೂ ನೆಮ್ಮದಿ ಶಾಶ್ವತವಾಗಿರುತ್ತದೆ. ಎಂದು ಸ್ವರ್ಣ ವಲ್ಲಿ ಮಠಾಧೀಶ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿ ಹೇಳಿದ್ದಾರೆ.

ಇಲ್ಲಿನ ಶ್ರೀ ಸೀತಾರಾಮಚಂದ್ರ ಕಲ್ಯಾಣ ಮಂಟಪದಲ್ಲಿ ಶನಿವಾರ ಶ್ರೀ ರಾಮಕ್ಷತ್ರಿಯ ಸಮಾಜದ 19ನೇ ವರ್ಷದ ಶ್ರೀ ಸೀತಾರಾಮಚಂದ್ರ ಕಲ್ಯಾಣೋತ್ಸವದ ಪ್ರಯುಕ್ತ ನಡೆದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.

ಧಾರ್ಮಿಕ, ಸಾಮಾಜಿಕ ಸೇವಾಕರ್ತ ಬಿಜೂರು ರಾಮಕೃಷ್ಣ ಶೇರೆಗಾರ ಅಧ್ಯಕ್ಷತೆ ವಹಿಸಿದ್ದರು. ವಿಶ್ವ ರಾಮಕ್ಷತ್ರಿಯ ಸಂಘದ ಅಧ್ಯಕ್ಷ ಶಶಿಧರ ನಾಯ್ಕ, ಶಿವಮೊಗ್ಗದ ಸುಬ್ಬಯ್ಯ ಇನ್‌ಸ್ಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸ್‌ನ ಪ್ರಾಂಶುಪಾಲ ಡಾ. ಶಿವಾನಂದ ನಾಯ್ಕ, ಗಂಗೊಳ್ಳಿ ರಾಮಕ್ಷತ್ರಿಯ ಸಂಘದ ಅಧ್ಯಕ್ಷ ಎಂ. ಜಿ. ರಾಜೇಶ್, ಉದ್ಯಮಿ ನಾಗರಾಜ ಕಾಮಧೇನು ಇದ್ದರು.

ಬೈಂದೂರು ರಾಮಕ್ಷತ್ರಿಯ ಸಂಘದ ಅಧ್ಯಕ್ಷ ರಾಮಕೃಷ್ಣ ಸಿ. ಸ್ವಾಗತಿಸಿ, ಆನಂದ ಮದ್ದೋಡಿ – ಗಣಪತಿ ಹೋಬಳಿ ದಾರ್ ನಿರೂಪಿಸಿ, ಸುಧಾಕರ ಪಿ. ವಂದಿಸಿದರು. ಬಳಿಕ ಸ್ವಾಮೀಜಿ ಅವರು ಭಗವದ್ಭಕ್ತರಿಗೆ ಫಲ–ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.

ಬೆಳಿಗ್ಗೆ ವಿದ್ವಾನ್ ಕಟ್ಟೆ ತಿಮ್ಮಣ್ಣ ಪರಮೇಶ್ವರ ಭಟ್ಟರ ನೇತೃತ್ವದಲ್ಲಿ ದೇವತಾ ಪ್ರಾರ್ಥನೆ ಧ್ವಜಾರೋಹಣ ನೆರವೇರಿತು. ನಂತರ ಶುಭ ಲಗ್ನ ಮುಹೂರ್ತದಲ್ಲಿ ವರನ ಕಡೆಯವರಾಗಿ ಗಂಗೊಳ್ಳಿ ಗುಜ್ಜಾಡಿಯ ವಸಂತಿ – ಕೊತ್ವಾಲ್ ಪದ್ಮನಾಭ ಶೇರುಗಾರ, ವಧುವಿನ ಕಡೆಯವರಾಗಿ ಬಿಜೂರು ಉಷಾ – ನಾಗೇಶ ನಾಯಕ್, ಶ್ರುತಿ –ರಘುವೀರ ನಾಯಕ್ ದಂಪತಿಗಳು ವಿವಾಹ ಮಹೋತ್ಸವ, ಕನ್ಯಾದಾನ ಮಾಡಿದರು.

ಎಲ್ಲ ವರ್ಗಗಳನ್ನೂ ತಲುಪಿದ ಬಿಜೆಪಿ 'ಸರ್ವ ಸ್ಪರ್ಶಿ ಸರ್ವ ವ್ಯಾಪಿ': ಕುತ್ಯಾರು



ಉಡುಪಿ: ವಿಶ್ವದ ಅತೀ ದೊಡ್ಡ ರಾಜಕೀಯ ಪಕ್ಷವೆನಿಸಿದ ಬಿಜೆಪಿ ದೇಶದ ಎಲ್ಲಾ ವರ್ಗಗಳ ಜನತೆಯನ್ನು ತಲುಪುವ ಮೂಲಕ ಇಂದು 'ಸರ್ವ ಸ್ಪರ್ಶಿ ಸರ್ವ ವ್ಯಾಪಿ'ಯಾಗಿ ಜನಸೇವೆಗೈಯುತ್ತಿದೆ. ಈ ನಿಟ್ಟಿನಲ್ಲಿ ಬಿಜೆಪಿ ಎಸ್.ಟಿ. ಮೋರ್ಚಾದ ಪದಾಧಿಕಾರಿಗಳು ಮತ್ತು ಸದಸ್ಯರು ತಮ್ಮ ಜವಾಬ್ದಾರಿಗಳನ್ನು ಅರಿತು ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಕೇಂದ್ರ ಸರಕಾರದ ವಿವಿಧ ಯೋಜನೆ ಮನೆ ಮನೆಗೆ ತಲುಪಿಸುವ ಜೊತೆಗೆ ಸದೃಢ ಪಕ್ಷ ಸಂಘಟನೆಗೆ ಒತ್ತು ನೀಡಬೇಕು ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ತಿಳಿಸಿದ್ದಾರೆ.

ಅವರು ಬಿಜೆಪಿ ಉಡುಪಿ ಜಿಲ್ಲಾ ಕಚೇರಿಯಲ್ಲಿ ಜಿಲ್ಲಾ ಎಸ್.ಟಿ. ಮೋರ್ಚಾ ಅಧ್ಯಕ್ಷ ಭುಜಂಗ ನಾಯ್ಕ್ ಅಧ್ಯಕ್ಷತೆಯಲ್ಲಿ ನೂತನ ತಂಡದ ಪದಗ್ರಹಣ ನೆರವೇರಿಸಿ, ಜಿಲ್ಲಾ ಎಸ್.ಟಿ. ಮೋರ್ಚಾದ ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ನಿಯುಕ್ತಿ ಪತ್ರ ವಿತರಿಸಿ ಮಾತನಾಡಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್ ಮಾತನಾಡಿ, ಪದಾಧಿಕಾರಿಗಳ ಜವಾಬ್ದಾರಿ , ಸಂಘಟನಾತ್ಮಕ ವಿಚಾರಗಳ ಕುರಿತು ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಎಸ್.ಟಿ. ಮೋರ್ಚಾ ಅಧ್ಯಕ್ಷ ಭುಜಂಗ ನಾಯ್ಕ್ ಮಾತನಾಡಿ, ಮೋರ್ಚಾದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ ಜಿಲ್ಲಾಧ್ಯಕ್ಷರಿಗೆ ವಂದನೆ ತಿಳಿಸಿದರು. ಎಸ್.ಟಿ. ಮೋರ್ಚಾದ ಮುಂದಿನ ಎಲ್ಲಾ ಕಾರ್ಯ ಚಟುವಟಿಕೆಗಳಿಗೆ ಸಹಕಾರ ಕೋರಿದರು.

ಜಿಲ್ಲಾ ಎಸ್.ಟಿ. ಮೋರ್ಚಾ ಪ್ರಧಾನ ಕಾರ್ಯದರ್ಶಿ ಉಮೇಶ್ ನಾಯ್ಕ್ ನೂಜಿನಬೈಲ್ ಸಹಿತ ಪದಾಧಿಕಾರಿಗಳು ಮತ್ತು ಕಾರ್ಯಕಾರಿಣಿ ಸದಸ್ಯರು ಉಪಸ್ಥಿತರಿದ್ದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಉಮೇಶ್ ಎ.ನಾಯ್ಕ್ ಚೇರ್ಕಾಡಿ ಸ್ವಾಗತಿಸಿ, ದಿನಕರ ಶೆಟ್ಟಿ ಹೆರ್ಗ ನಿರೂಪಿಸಿ, ಸುಭಾಷ್ ನಾಯ್ಕ್ ಪೆರ್ಡೂರು ವಂದಿಸಿದರು.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ 'ನಾಯಕತ್ವ ಪ್ರತಿಜ್ಞಾ ಸ್ವೀಕಾರ'



ಬ್ರಹ್ಮಾವರ: ಇಲ್ಲಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ 2026 – 27ನೇ ಶೈಕ್ಷಣಿಕ ವರ್ಷದ 'ನಾಯಕತ್ವ ಪ್ರತಿಜ್ಞಾ ಸ್ವೀಕಾರ' ಸಮಾರಂಭವು ಶಾಲಾ ಆವರಣದಲ್ಲಿ ನಡೆಯಿತು.

ರಾಷ್ಟ್ರೋತ್ಥಾನ ಸಿಬಿಎಸ್‌ಸಿ ಶಾಲೆಗಳ ಸಂಚಾಲಕ ವಸಂತ್ ಕುಮಾರ್ ಮಾತನಾಡಿ, ನಾಯಕತ್ವದ ಜವಾಬ್ದಾರಿ, ಶಿಸ್ತು, ಸೇವಾ ಮನೋಭಾವ , ಆದರ್ಶ ವ್ಯಕ್ತಿತ್ವದ ಮಹತ್ವವನ್ನು ತಿಳಿಸಿದರು.

ನಾಯಕತ್ವದ ಸಂಕೇತ ಪ್ರದಾನ

ಹಿರಿಯಡ್ಕ ಠಾಣಾ ಪೊಲೀಸ್ ಉಪ ನಿರೀಕ್ಷಕ ಪುನೀತ್ ಕುಮಾರ್ ಬಿ.ಇ., ನೂತನ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಬ್ಯಾಡ್ಜ್ ಉಪವಿತಕ, ಧ್ವಜ ಪ್ರದಾನ ಮಾಡುವ ಮೂಲಕ ನಾಯಕತ್ವದ ಸಂಕೇತವನ್ನು ಪ್ರದಾನ ಮಾಡಿದರು.

ಶಾಲೆಯ ಪ್ರಧಾನಾಚಾರ್ಯೆ ಪೂರ್ಣಿಮಾ, ನೂತನ ನಾಯಕರುಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿ, ಶಾಲೆಯ ಆದರ್ಶಗಳನ್ನು ಪಾಲಿಸುತ್ತಾ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸುವಂತೆ ಕರೆ ನೀಡಿದರು.

ಪ್ರಾಮಾಣಿಕ ಕರ್ತವ್ಯ ನಿರ್ವಹಣೆ

ನೂತನ ವಿದ್ಯಾರ್ಥಿ ಪ್ರಮುಖರಾಗಿ 9ನೇ ತರಗತಿಯ ಗುರುದತ್ತ ಹಾಗೂ ವೇದಿಕಾ ಕೋಟ ಮಾತನಾಡಿ, ಶಾಲೆಯ ಗೌರವವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಪಿಯು ಕಾಲೇಜಿನ ಪ್ರಧಾನಾಚಾರ್ಯೆ ಭಾಗ್ಯಶ್ರೀ, ಆಡಳಿತಾಧಿಕಾರಿ ಸುರೇಶ್ ಶೆಣೈ ಜಿ., ಸಂಯೋಜಕಿ ಅನಿತಾ, ನಂದಿನಿ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ನಿಹಿರಾ ಎಂ. ಶೆಟ್ಟಿ ಸ್ವಾಗತಿಸಿ, ಚುನಾವಣಾ ಪ್ರಕ್ರಿಯೆ ವರದಿಯನ್ನು ಜಗದೀಶ್ ಮಂಡಿಸಿದರು.

ಯುವಜನತೆಯು ಮಾದಕ ವಸ್ತುಗಳಿಂದ ದೂರವಿದ್ದು, ನಿರ್ಮೂಲನೆಗೆ ಪಣತೊಡಬೇಕು



ಕುಂದಾಪುರ: ಮಾದಕ ವಸ್ತುವಿನಿಂದ ಮನುಷ್ಯ ಮಾನಸಿಕ ಸ್ವಾಸ್ಥ್ಯವನ್ನು ದೈಹಿಕ ಸೀಮಿತ ಕಳೆದುಕೊಳ್ಳುತ್ತಾನೆ. ಇಡೀ ನರಮಂಡಲ ಮೇಲೆ ನಿಯಂತ್ರಣ ಕಳೆದುಕೊಳ್ಳುತ್ತಾನೆ. ಮನುಷ್ಯ ಮಾದಕ ವ್ಯಸನಿಯಾದಾಗ ಮನುಷ್ಯ ಮನುಷ್ಯನಾಗಿ ಇರುವುದಿಲ್ಲ, ಆದ್ದರಿಂದ ಯುವಜನತೆ ಮಾದಕ ವಸ್ತುಗಳಿಂದ ದೂರವಿದ್ದು, ನಿರ್ಮೂಲನೆಗೆ ಪಣತೊಡಬೇಕು ಎಂದು ಕೋಟ ಠಾಣೆಯ ಕ್ರೈಂ ಬ್ರಾಂಚ್‌ನ ಪಿಎಸ್‌ಐ ಮಹಾಂತೇಶ್ ಹೇಳಿದ್ದಾರೆ.

ಅವರು ಕುಂದಾಪುರ ಸುಣ್ಣಾರಿಯ ಎಕ್ಸಲೆಂಟ್ ಸಮೂಹ ಸಂಸ್ಥೆಯಲ್ಲಿ ನಶಾ ಮುಕ್ತ ಭಾರತ –ಕಾನೂನು ಅರಿವು ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಅಧ್ಯಕ್ಷ ಎಂ. ಮಹೇಶ್ ಹೆಗ್ಡೆ ಮಾತನಾಡಿದರು. ಎಕ್ಸಲೆಂಟ್ ಪ.ಪೂ. ಕಾಲೇಜಿನ ಪ್ರಾಂಶುಪಾಲ ನಾಗರಾಜ್ ಶೆಟ್ಟಿ, ಪ್ರೌಢಶಾಲೆ ಮುಖ್ಯಸ್ಥೆ ಸರೋಜಿನಿ ಪಿ. ಆಚಾರ್ಯ, ಸಿ.ಬಿ. ಎಸ್‌ಸಿ ಸಂಯೋಜಕಿ ವಿಶಾಲ ಶೆಟ್ಟಿ ಉಪಸ್ಥಿತರಿದ್ದರು. ಉಪನ್ಯಾಸಕಿ ಉಷಾಲತಾ ಶೆಟ್ಟಿ ಸ್ವಾಗತಿಸಿ, ಇಂಗ್ಲೀಷ್ ವಿಭಾಗದ ಮುಖ್ಯಸ್ಥ ರಸಿಕ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

> **ಪಣತೊಡಬೇಕು**
> ಮಾದಕ ವಸ್ತು ಮತ್ತು ಮಾದಕ ವ್ಯಸನಿಗಳನ್ನು ಮೊದಲು ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಕಾಣಬಹುದಾಗಿತ್ತು, ಆದರೆ ಇವತ್ತಿನ ದಿನಮಾನದಲ್ಲಿ ಗ್ರಾಮೀಣ ಪ್ರದೇಶದಲ್ಲೂ ಸುಲಭವಾಗಿ ಮಕ್ಕಳಿಗೂ ಸಿಗುವಂತ ಆಟಿಕೆಯಾಗಿ ಬಿಟ್ಟಿದೆ. ವಿದ್ಯಾರ್ಥಿಗಳು ಯುವಜನತೆ ಈ ಮಾದಕ ವಸ್ತುವಿನಿಂದ ಹಾಗೂ ಮಾದಕ ವ್ಯಸನಗಳಿಂದ ದೂರ ಇದ್ದು ಅದರ ನಿರ್ಮೂಲನೆಗೆ ಪಣತೊಡಬೇಕು.
> ● ಮಹಾಂತೇಶ್

ಬೈಲೂರು ಪಪೂ ಕಾಲೇಜಿನಲ್ಲಿ 'ಆರೋಗ್ಯ ಪೂರ್ಣ ಆಹಾರ ಪದ್ಧತಿ' ಕಾರ್ಯಾಗಾರ



ಕಾರ್ಕಳ : ಆಧುನಿಕ ಜೀವನ ಶೈಲಿಯಿಂದ – ಆಹಾರದ ವ್ಯವಸ್ಥೆಯಿಂದ ಹದಿ ಹರೆಯದ ಮಕ್ಕಳಲ್ಲಿ ಉಂಟಾಗುವ ಆರೋಗ್ಯ ಸಮಸ್ಯೆ ಬಗ್ಗೆ ಅರಿವು ಮೂಡಿಸಲು ಕಾರ್ಕಳ ಮಹಿಳಾ ಮೋರ್ಚಾದಿಂದ ಬೈಲೂರು ಪ.ಪೂ. ಕಾಲೇಜಿನಲ್ಲಿ 'ಆರೋಗ್ಯ ಪೂರ್ಣ ಆಹಾರ ಪದ್ಧತಿ'ಯ ಕಾರ್ಯಾಗಾರ ನಡೆಸಲಾಯಿತು.

ಸಮುದಾಯ ಕೇಂದ್ರದ ಆರೋಗ್ಯಾಧಿ ಕಾರಿ ತೇಜಸ್ವಿನಿ , ಹಿಂದಿನ ಸಾಂಪ್ರದಾಯಿಕ ಆಹಾರ ಪದ್ಧತಿ ಮತ್ತು ಈಗಿನ ಆಹಾರ ಪದ್ಧತಿಯ ಬಗ್ಗೆ ಮತ್ತು ಸಮತೋಲಿತ ಆಹಾರ ಸೇವನೆ ಬಗ್ಗೆ ಮಾಹಿತಿ ನೀಡಿದರು.

ಜಿಲ್ಲಾ ಮಹಿಳಾ ಮೋರ್ಚಾದ ಅಧ್ಯಕ್ಷೆ ಸಂಧ್ಯಾ ರಮೇಶ್ ಮಾತನಾಡಿ, ಕೊಬ್ಬುಯುಕ್ತವಾದ ಅತಿಯಾದ ಎಣ್ಣೆ ಪದಾರ್ಥಗಳ ಬಳಕೆಗಿಂತ ಸೊಪ್ಪು ತರಕಾರಿ, ಮೊಳಕೆ ಕಾಳುಗಳಂತಹ ಆಹಾರಗಳ ಮಿತ ಬಳಕೆಯಿಂದ ಇಂಧನ ಉಳಿತಾಯ ಮತ್ತು ಆರೋಗ್ಯ ವರ್ಧನೆ ಮಾಡಿಕೊಳ್ಳಬಹುದಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ ಪ್ರಾಂಶುಪಾಲರಾದ ಸೀತಾರಾಮ್ ಭಟ್, ತಾ.ಪಂ.ಮಾಜಿ ಉಪಾಧ್ಯಕ್ಷ ರವೀಂದ್ರ ಕುಮಾರ್ ಪ್ರಸ್ತಾವನೆಗೈದರು. ತಾ.ಪಂ.ಮಾಜಿ ಅಧ್ಯಕ್ಷರಾದ ಮಾಲಿನಿ ಜೆ.ಶೆಟ್ಟಿ ಕಾರ್ಕಳ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷರಾದ ವಿನಯ ಡಿ. ಬಂಗೇರಾ, ಜಿಲ್ಲಾ ಕಾರ್ಯದರ್ಶಿ ಶೋಭಾ ಭಾಸ್ಕರ್, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಉಷಾ ಜಯಪ್ರಕಾಶ್, ಲಕ್ಷ್ಮೀ ಮಂಜುನಾಥ್, ಕಾರ್ಯದರ್ಶಿ ಜ್ಯೋತಿ ರಮೇಶ್, ವಿನುತಾ ಆಚಾರ್ಯ ಮತ್ತಿತರರಿದ್ದರು.


ಉಪನ್ಯಾಸಕ ರತ್ನಾಕರ ಪೂಜಾರಿ ಸ್ವಾಗತಿಸಿ, ಸುಮಾ ರವಿಕಾಂತ್ ನಿರೂಪಿಸಿದರು.

ಆರೋಗ್ಯಾಧಿಕಾರಿಗೆ ಸನ್ಮಾನ

ಕಾರ್ಯಾಗಾರ ನಡೆಸಿಕೊಟ್ಟ ಆರೋಗ್ಯಾಧಿಕಾರಿ ತೇಜಸ್ವಿನಿಯವರನ್ನು ಗೌರವಿಸಲಾಯಿತು.



ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ 'ಪ್ರತಿಭೆ ನಿಮ್ಮದು, ವೇದಿಕೆ ನಮ್ಮದು' ವಿನೂತನ ಕಾರ್ಯಕ್ರಮ ಸರಣಿಯಡಿ ಸತತ 120 ನೇ ತಿಂಗಳ ಕಾರ್ಯಕ್ರಮ ಜರುಗಿತು. ಈ ಸಂದರ್ಭ ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಳಿಯ ಅರ್ಥಧಾರಿ ಎಚ್. ಶಂಕರ ನಾಗಪ್ಪ ಬಿಲ್ಲವ ಹೆಮ್ಮಾಡಿ, ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಉಪ್ಪಿನಕುದ್ರು ಸರಕಾರಿ ಪ್ರೌಢ ಶಾಲೆಯಲ್ಲಿ ಪ್ರಥಮ ಸ್ಥಾನ ಪಡೆದ ಚಂದನ್ ಅವರನ್ನು ಅಕಾಡೆಮಿ ವತಿಯಿಂದ ಸನ್ಮಾನಿಸಲಾಯಿತು. ನಿವೃತ್ತ ಅಧ್ಯಾಪಕ ಸದಾಶಿವ ಐತಾಳ್, ನಿವೃತ್ತ ಪ್ರಾಧ್ಯಾಪಕ ಎಂ. ರತ್ನಾಕರ ಪೈ, ಸುಬ್ರಹ್ಮಣ್ಯ ನಾವುಡ, ಶಿಕ್ಷಕಿ ಸೌಜನ್ಯ , ಅಕಾಡೆಮಿ ಅಧ್ಯಕ್ಷ ಭಾಸ್ಕರ್ ಕೊಗ್ಗ ಕಾಮತ್ ಮತ್ತಿತರರಿದ್ದರು.



ನಾಡಪ್ರಭು ಕೆಂಪೇಗೌಡ ಅವರ 517 ನೇ ಜಯಂತಿಯನ್ನು ಕುಂದಾಪುರದ ತಾಲೂಕು ಆಡಳಿತದ ವತಿಯಿಂದ ಕುಂದಾಪುರದ ಮಿನಿ ವಿಧಾನಸೌಧದ ಕೋರ್ಟ್ ಹಾಲ್‌ನಲ್ಲಿ ಶನಿವಾರ ಆಚರಿಸಲಾಯಿತು. ಈ ವೇಳೆ ಕೆಂಪೇಗೌಡ ಅವರ ಭಾವಚಿತ್ರಕ್ಕೆ ಪುಷ್ಪನಮನದ ಮೂಲಕ ಗೌರವ ಸಲ್ಲಿಸಲಾಯಿತು. ಈ ಸಂದರ್ಭ ಕುಂದಾಪುರ ಉಪ ತಹಶಿಲ್ದಾರ್ ಪ್ರಕಾಶ್ ಪೂಜಾರಿ ಮತ್ತಿತರರಿದ್ದರು.

ಕೋಟ ಪಂಚವರ್ಣದ 55ನೇ 'ರೈತರೆಡೆಗೆ ನಮ್ಮ ನಡಿಗೆ ಸರಣಿ' ಕಾರ್ಯಕ್ರಮ | ಶರತ್ ಕುಮಾರ್ ಶೆಟ್ಟಿ ಅಭಿಮತ

ತಳಮಟ್ಟದ ರೈತಸಮುದಾಯವನ್ನು ಗುರುತಿಸಿ ಗೌರವಿಸುತ್ತಿರುವುದು ಶ್ಲಾಘನೀಯ

ಕೋಟ: ಪಂಚವರ್ಣ ಸಂಘಟನೆಯಿಂದ ರೈತ ಪರಿಸರಸ್ನೇಹಿ ಕಾರ್ಯಕ್ರಮಗಳು ಜನಮನ್ನಣೆಗಳಿಸಿದೆ ಎಂದು ಕೋಟ ಸಹಕಾರಿ ವ್ಯವಸಾಯಕ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶರತ್ ಕುಮಾರ್ ಶೆಟ್ಟಿ ಅಭಿಪ್ರಾಯಪಟ್ಟರು.

ಶುಕ್ರವಾರ ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು, ರೈತಧ್ವನಿ ಸಂಘ ಕೋಟ, ಗೆಳೆಯರ ಬಳಗ ಕಾರ್ಕಡ,ಸ್ನೇಹಕೂಟ ಮಣೂರು, ರೋಟರಿ ಕ್ಲಬ್ ಕೋಟ ಸಾಲಿಗ್ರಾಮ ಇವರ ಸಹಯೋಗದೊಂದಿಗೆ 55ನೇ ರೈತರೆಡೆಗೆ ನಮ್ಮ ನಡಿಗೆ ಸರಣಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಡೀ ದೇಶಕ್ಕೆ ಮಾದರಿ ಕಾರ್ಯಕ್ರಮಗಳನ್ನು ಈ ಪಂಚವರ್ಣ ಸಂಘಟನೆ ನೀಡುತ್ತಿದೆ. ಇಂತಹ ಸಂಘಟನೆ ರೈತವರ ಅಥವಾ ತಳಮಟ್ಟದ ರೈತಸಮುದಾಯವನ್ನು ಗುರುತಿ ಗೌರವಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದರಲ್ಲದೆ , ಆನಂದ್ ಪೂಜಾರಿ ಕೃಷಿಕ್ಷೇತ್ರಕ್ಕೆ ಹೊಸ ಆವಿಷ್ಕಾರವನ್ನು ಧಾರೆ ಎರೆದಿದ್ದಾರೆ ಎಂದರು.

ಪ್ರಾರಂಭದಲ್ಲಿ ಪರಿಸರಸ್ನೇಹಿ ಹಸಿರು ಗಿಡವನ್ನು ನೆಟ್ಟು, ಗೋ ಪೂಜೆ ನೆರವೇರಿಸಿ ಕಾರ್ಯಕ್ರಮಕ್ಕೆ ಕೋಟತಟ್ಟು ಗ್ರಾಮಪಂಚಾಯತ್ ನಿಕಟಪೂರ್ವ ಅಧ್ಯಕ್ಷ ಸತೀಶ್ ಕುಂದರ್ ಚಾಲನೆ ನೀಡಿದರು.

ಅಧ್ಯಕ್ಷತೆಯನ್ನು ಪಂಚವರ್ಣ ಯುವಕ ಮಂಡಲದ ಅಧ್ಯಕ್ಷ ಮನೋಹರ್ ಪೂಜಾರಿ ವಹಿಸಿದ್ದರು.

ರೈತ ಪುರಸ್ಕಾರವನ್ನು ಸಕಡ್ ಫೌಂಡೇಶನ್ ಮುಖ್ಯಸ್ಥ ಕೋಟ ಶ್ರೀಕಾಂತ್ ಶೆಣೈ ನೆರವೇರಿಸಿದರು.

ಮುಖ್ಯ ಅಭ್ಯಾಗತರಾಗಿ ಕೋಟ ಸಹಕಾರಿ ವ್ಯವಸಾಯಕ ಸಂಘದ ನಿರ್ದೇಶಕ ರಂಜಿತ್ ಕುಮಾರ್, ಸಾಮಾಜಿಕ ಕಾರ್ಯಕರ್ತ ದಿನೇಶ್ ಗಾಣಿಗ, ಗೆಳೆಯರ ಬಳಗ ಕಾರ್ಕಡ ಅಧ್ಯಕ್ಷ ಕೆ.ತಾರಾನಾಥ ಹೊಳ್ಳ, ರೈತಧ್ವನಿ ಸಂಘದ ಅಧ್ಯಕ್ಷ ಎಂ.ಜಯರಾಮ ಶೆಟ್ಟಿ,ಪಂಚವರ್ಣ ಸಂಘಟನೆಯ ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ, ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ ಮೊದಲಾದವರು ಉಪಸ್ಥಿತರಿದ್ದರು.

ಮಹಿಳಾ ಮಂಡಲದ ಕಾರ್ಯಾಧ್ಯಕ್ಷೆ ಕಲಾವತಿ ಅಶೋಕ್ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಘದ ನಿಕಟಪೂರ್ವ ಅಧ್ಯಕ್ಷ ಅಜಿತ್ ಆಚಾರ್ ಸನ್ಮಾನಪತ್ರ ವಾಚಿಸಿದರು. ಕಾರ್ಯಕ್ರಮವನ್ನು ಸದಸ್ಯರಾದ ಪ್ರಭಾಕರ್ ಮಣೂರು ನಿರೂಪಿಸಿದರು. ರವೀಂದ್ರ ಕೋಟ ವಂದಿಸಿ ಸಂಯೋಜಿಸಿದರು.



ಗೌರವ

ಕಾರ್ಯಕ್ರಮದಲ್ಲಿ 55ನೇ ರೈತ ಪುರಸ್ಕಾರವನ್ನು ಕೋಟತಟ್ಟು ನಿವಾಸಿ ಗುಳ್ಳಾಡಿ ಆನಂದ್ ಪೂಜಾರಿ ಇವರನ್ನು ಕೃಷಿ ಪರಿಕರವನ್ನಿತ್ತು ಗೌರವಿಸಲಾಯಿತು.